
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

03 ಡಿಸೆಂಬರ್ 2014 ಪುಟ 20 ರೂ. 15/-



ವಿಡಂಬಾರಿ ರಾಜ್ಯೋತ್ಸವ ಪ್ರಶಸ್ತಿಗೆ ಗೌರವದ ಗರಿ




ಶಿಕ್ಷಣ ಮಾಫಿಯಾ ವಿರುದ್ಧ ಅಭಿಮನ್ಯು ಸ್ಫೋಟ!



…ಕೌನ್ಸಿಲರ್ ಲಲಿತಾ ಆತ್ಮಹತ್ಯೆ …ಜೆಪಿ ಸಿಂಹಗಳಿಗೆ ಬಲಿ!





ದಾವಣಗೆರೆ ಶಾಮನೂರರ ಸೀಟಿಗೆ ಶಿವಮೂರ್ತಿ ಕರ್ಚೀಪು!

…ಚಿತ್ತಾಪುರ …ರಪತಿಯೇ …ಲೀ ಪಿಸ್ತು!






ದಿನೇಶ್ ಬ್ಯಾಂಡು ರಾವ್

ತೀರ್ಥಹಳ್ಳಿ ನಿಜವಾಗಿಯೂ ನಡೆದಿದ್ದೇನು?



ಮೇಕೆ'ದಾಟ'ಲು ಸಾಧ್ಯವಾಗುತ್ತಿರುವುದು ಹೇ



ಡಾ.ವಾಸು ಎಚ್.ವಿ.

ಹಾಲಿ ಕರ್ನಾಟಕದ ರಾಜಕೀಯ, ಸಾಮಾಜಿಕ ವಲಯಗಳಲ್ಲಿ ಹತ್ತಾರು ಬಗೆಯ ವಿದ್ಯಮಾನಗಳು ಸಂಭವಿಸುತ್ತಿದ್ದು, ಅದರ ಮಧ್ಯೆ ಒಂದನ್ನು ಯಾರೂ ಹೆಚ್ಚಾಗಿ ಗಮನಿಸುತ್ತಿದ್ದಂತಿಲ್ಲ, ಸಾಮಾನ್ಯವಾಗಿ ಸಾಕಷ್ಟು ಸದ್ದು ಮತ್ತು ಸುದ್ದಿಗೆ ಗ್ರಾಸವಾಗುತ್ತಿದ್ದ ಕಾವೇರಿ ನೀರಿನ ವಿವಾದ ಅದು. ಸ್ವಾರಸ್ಯಕರವಾದ ಸಂಗತಿ ಏನೆಂದರೆ, ಕಾವೇರಿ ವಿವಾದದ ಅಂತಿಮ ತೀರ್ಪನ್ನು ಯಾವ ಕಾರಣಕ್ಕೂ ಒಪ್ಪುವುದಿಲ್ಲವೆಂದು ಹೇಳುತ್ತಿದ್ದ ಕರ್ನಾಟಕ ಸರ್ಕಾರವು ಈಗ 'ಅಂತಿಮ ತೀರ್ಪಿನ ಅನುಸಾರವೇ' ತಾವು ಮೇಕೆದಾಟಿನಲ್ಲಿ ಅಣೆಕಟ್ಟನ್ನು ಕಟ್ಟುವುದಾಗಿ ಹೇಳುತ್ತಿದೆ. ಇದರ ಅರ್ಥ ಏನು ಅಂತ 'ಕಾವೇರಿ ಹೋರಾಟಗಾರರು' ಸರ್ಕಾರವನ್ನು ಪ್ರಶ್ನಿಸುತ್ತಿಲ್ಲ. ಪ್ರತೀ ಹಂತದಲ್ಲೂ ಕಾವೇರಿ ನ್ಯಾಯಮಂಡಳಿಯನ್ನು ವಿರೋಧಿಸಿದ್ದ ಕಾವೇರಿ ಹೋರಾಟಗಾರರು, ಅಂತಿಮ ತೀರ್ಪಿನ ಅನುಸಾರ ಸರ್ಕಾರ ನಡೆಯಲು ಆರಂಭಿಸಿರುವ ಬಗ್ಗೆ ತಲೆಕೆಡಿಸಿಕೊಳ್ಳುತ್ತಿಲ್ಲ, ಆದರೆ ಎಲ್ಲಾ ಸಂದರ್ಭದಲ್ಲಿ ನ್ಯಾಯಮಂಡಳಿಯಿಂದ ಸದಾಕಾಲ ಲಾಭ ಪಡೆದುಕೊಂಡಿದ್ದ ತಮಿಳುನಾಡು ಸರ್ಕಾರವು ಈಗ ಕರ್ನಾಟಕದ ನಡೆಯನ್ನು ವಿರೋಧಿಸುತ್ತಿದೆ.

ಇವೆಲ್ಲದರ ಅರ್ಥವೇನು? ಕಾವೇರಿ ನ್ಯಾಯಮಂಡಳಿಯ ಅಂತಿಮ ತೀರ್ಪು ಕರ್ನಾಟಕದ ಪರವಾಗಿದೆಯೇ? ಐತೀರ್ಪು ಬಂದಾಗ ಅದನ್ನು ನಾವೆಲ್ಲರೂ ವಿರೋಧಿಸಿದ್ದು ಏಕೆ? ಅದು ವಿರೋಧಕ್ಕಾಗಿ ವಿರೋಧವೇ? ಸಮೂಹ ಸನ್ನಿಯೇ? ಕಾವೇರಿ ಹೋರಾಟಗಾರರಲ್ಲಿ ಹೆಚ್ಚಿನವರು ನ್ಯಾಯಮಂಡಳಿಯ ಅಂತಿಮ ತೀರ್ಪನ್ನು ಓದ್ಧಿಯೇ ಇರದಿದ್ದರಿಂದ ಈ ರೀತಿ ಆಗುತ್ತಿದೆಯೇ? ಇತ್ಯಾದಿ ಪ್ರಶ್ನೆಗಳನ್ನು ಈ 'ಶಾಂತಿ ಕಾಲ'ದಲ್ಲಿ ಹಾಕಿಕೊಂಡು ಉತ್ತರಿಸಿಕೊಳ್ಳಬೇಕಾಗಿದೆ. ವಾಸ್ತವದಲ್ಲಿ ಕಾವೇರಿ ವಿವಾದವು ಶಾಶ್ವತ ಪರಿಹಾರ ದೆಡೆಗೆ ಸಾಗಿದೆ. ಅದು ನಿಜವಾದ ಅರ್ಥದಲ್ಲಿ ಪರಿಹಾರವಾಗಬೇಕೆಂದರೆ, ಅಂತಿಮ ತೀರ್ಪಿನ ಚೌಕಟ್ಟಿನಡಿ ನೀರಿನ ಸದ್ಬಳಕೆ ಮತ್ತು ಪೂರ್ಣ ಬಳಕೆ ಮಾಡಿಕೊಳ್ಳಲು ಬೇಕಾದ ಯೋಜನೆಗಳನ್ನು ಎರಡೂ ಸರ್ಕಾರಗಳು ಮಾಡಿಕೊಳ್ಳಲು ಮುಂದಾಗಬೇಕು. ಇಡೀ ಕಾವೇರಿ ವಿವಾದದ ಇದುವರೆಗಿನ ಸಮಸ್ಯೆಯನ್ನು, ಅಂತಿಮ ತೀರ್ಪನ್ನು ಹಾಗೂ ಶಾಶ್ವತ ಪರಿಹಾರದ ದಾರಿ ತೆರೆದುಕೊಂಡಿದ್ದನ್ನು ಈ ರೀತಿ ಸಾರಾಂಶೀಕರಿಸಬಹುದು. 1892ರಿಂದಲೇ ಕರ್ನಾಟಕಕ್ಕೆ ಅನ್ಯಾಯವಾಗುವುದು ಆರಂಭವಾಯಿತು ಮತ್ತು ಅದು ಅಂತಿಮ ತೀರ್ಪಿನವರೆಗೂ ಮುಂದುವರೆದುಕೊಂಡು ಬಂದಿದೆ. ಆದರೆ ಅನ್ಯಾಯದ ಪ್ರಮಾಣ ಅಲ್ಲಿಂದ ಇಲ್ಲಿಯವರೆಗೆ ಕಡಿಮೆಯಾಗುತ್ತಲೇ ಬಂದಿದೆ. ಅದು ಹೆಚ್ಚಾಗಿಲ್ಲ, ಅಂತಿಮ ತೀರ್ಪಿನಲ್ಲಿ ಈ ಅನ್ಯಾಯ ಮತ್ತಷ್ಟು ಕಡಿಮೆಯಾಗಿದೆ. ಇನ್ನೂ 20-30 ಟಿಎಂಸಿ ನೀರು ಕರ್ನಾಟಕದ ಪಾಲಿಗೆ ಬಂದಿದ್ದರೆ ಅದು ಕರ್ನಾಟಕಕ್ಕೆ ಸಂಪೂರ್ಣ ನ್ಯಾಯ ಒದಗಿಸಿದಂತಾಗುತ್ತಿತ್ತು; ಆದರೆ ಇವತ್ತಿನ ಒಟ್ಟಾರೆ ಸಂದರ್ಭದಲ್ಲಿ ಇದಕ್ಕಿಂತ ಒಳ್ಳೆಯ ತೀರ್ಪನ್ನು ನಾವು ನಿರೀಕ್ಷಿಸುವುದು ಸಾಧ್ಯವಿರಲಿಲ್ಲ!

ಹಾಗಾಗಿಯೇ ಅಂತಿಮ ತೀರ್ಪನ್ನು ನಾವು ಒಪ್ಪಿಕೊಳ್ಳುವುದೇ ಸರಿಯಾಗಿದೆ. (ಒಪ್ಪಿಕೊಳ್ಳದೇ ಬೇರೆ ದಾರಿಯೂ ಇಲ್ಲ, ಏಕೆಂದರೆ, ಈಗಾಗಲೇ ಕೇಂದ್ರ ಸರ್ಕಾರವು ಅದನ್ನು ಗೆಜೆಟ್‌ನಲ್ಲಿ ಪ್ರಕಟಿಸಿಯಾಗಿದೆ. 20ನೇ ಫೆಬ್ರವರಿ 2013) ಹೌದು ಇದು ಸ್ವಲ್ಪ ವಿವರಣೆ ಕೇಳುತ್ತದೆ. ಸಾಮಾನ್ಯವಾಗಿ ಮಳೆ ಬಾರದ ಸಂದರ್ಭ ಬಿಟ್ಟು ಕನ್ನಡಿಗರು ಕಾವೇರಿ ವಿವಾದದ ಕುರಿತ ಸಂಗತಿಗಳನ್ನು ಮರೆತುಬಿಡುವುದರಿಂದ ಸ್ವಲ್ಪ ವಿವರಗಳನ್ನು ನೋಡೋಣ.

ಕೃಷ್ಣರಾಜಸಾಗರ ಜಲಾಶಯ ಕಟ್ಟಬೇಕಾದ ಸಂದರ್ಭದಲ್ಲಿ ಮಾಡಿಕೊಳ್ಳಲೇಬೇಕಾಗಿ ಬಂದ 1924ರ ಒಪ್ಪಂದಕ್ಕೂ ಮುಂಚೆಯೇ ಕರ್ನಾಟಕದ ಪಾಲಿಗೆ ಅನ್ಯಾಯ ಆರಂಭವಾಗಿತ್ತು, ಅದು 1892ರಲ್ಲಿ ಆದ ಒಪ್ಪಂದ. ಆ ಒಪ್ಪಂದದ ಹೆಸರೇ ಅದರ ತಿರುಳನ್ನೂ, ತಾರತಮ್ಯವನ್ನೂ ಸೂಚಿಸುತ್ತಿತ್ತು, 'ಮದ್ರಾಸು ಸರ್ಕಾರದ ಪೂರ್ವಾನುಮತಿಯಿಲ್ಲದೇ ಮೈಸೂರು ರಾಜ್ಯ ಯಾವುದೇ ಹೊಸ ನೀರಾವರಿ ಕಾಮಗಾರಿಗಳನ್ನು ಕೈಗೊಳ್ಳಬಾರದೆಂಬ ಮಿತಿಯನ್ನು ವಿಧಿಸುವ ನಿಯಮ'(Rules defining the limits within which no new irrigation works are to be constructed by Mysore state withour previous reference to Madras government). 1924ರ ಒಪ್ಪಂದವು ಕೃಷ್ಣರಾಜಸಾಗರವನ್ನು ನಿರ್ಮಿಸಲು ಅವಕಾಶ ಮಾಡಿಕೊಟ್ಟಿತ್ತಾದರೂ, ತಮಿಳುನಾಡಿನ ಕೆಳ ಅಣೆಕಟ್ಟೆಯಲ್ಲಿ ಸದಾ ಕಾಲ 3ರಿಂದ 7 ಅಡಿಗಳಷ್ಟು ನೀರನ್ನು ಖಾತ್ರಿ ಮಾಡಿದ ನಂತರವಷ್ಟೇ, ಇಲ್ಲಿ ನೀರಿನ ಬಳಕೆ ಮಾಡಿಕೊಳ್ಳಲು ಸಾಧ್ಯವಿತ್ತು. ಹೊಸ ಒಪ್ಪಂದದಡಿ ಕರ್ನಾಟಕವು ಅವತ್ತಿನ ಮಟ್ಟಿಗೆ ಎಷ್ಟು ನೀರಾವರಿ ಮಾಡಿಕೊಳ್ಳಲು ಶಕ್ಯವಿತ್ತೋ ಅಷ್ಟಕ್ಕೆ ಅವಕಾಶವೂ ಒದಗಿಬಂದಿತೆಂಬುದನ್ನು ಮರೆಯುವ ಹಾಗಿಲ್ಲ, ಆದರೂ, ಇದೊಂದು ತಾರತಮ್ಯದ ಒಪ್ಪಂದವೇ ಆಗಿತ್ತು.


ಎರಡೂ ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರವು ವಸಾಹತುಶಾಹಿಗಳಿಂದ ಬಿಡುಗಡೆಯಾದ ನಂತರ ಈ ಒಪ್ಪಂದವನ್ನು ಬದಲಿಸಿಕೊಳ್ಳಲಿಲ್ಲ, ವಸಾಹತುಶಾಹಿ ಗುಲಾಮಗಿರಿ ಮನಸ್ಥಿತಿ ಮುಂದುವರೆದಿದ್ದರಿಂದ ಅನ್ಯಾಯವೂ ಮುಂದುವರೆಯಿತು. ಆದರೂ 1955ರ ನಂತರ ಕಬಿನಿ ಅಣೆಕಟ್ಟು ಕಟ್ಟಿದ್ದೂ ಸೇರಿದಂತೆ ಕೆಲವು ಕ್ರಮಗಳಿಗೆ ಕರ್ನಾಟಕವು ಮುಂದಾಯಿತು. 1924ರ ಒಪ್ಪಂದದ ಅನ್ವಯ ಎಷ್ಟು ಪಾಲು ದಕ್ಕಬೇಕಿತ್ತೋ, ಅಷ್ಟನ್ನು ಸಾಧ್ಯವಾಗಿಸಿಕೊಂಡಿತು. ಅದು ಮುಗಿದ ವರ್ಷದ ನಂತರ (1974) ಕರ್ನಾಟಕವು ಹಲವು ನೀರಾವರಿ ಕಾಮಗಾರಿಗಳನ್ನು ಮಾಡಿ ತನ್ನ ಪಾಲನ್ನು ಹಿಗ್ಗಿಸಿಕೊಂಡಿತು. ತಮಿಳುನಾಡು ಸಹ ಈ ಒಟ್ಟೂ ಅವಧಿಯಲ್ಲಿ ಬಳಕೆಯನ್ನು ಹೆಚ್ಚಿಸುತ್ತಾ ಸಾಗಿತ್ತು, ಅವೆಲ್ಲದರ ಕಾರಣದಿಂದ, ಕಾವೇರಿಯಲ್ಲಿ ನೀರಿನ ಪ್ರವಾಹ ಕಡಿಮೆಯಾಗುವ ಎಲ್ಲಾ ವರ್ಷಗಳಲ್ಲೂ ಸಮಸ್ಯೆ ಭುಗಿಲೇಳಲು ಶುರುವಾಯಿತು. ಭಾವಾವೇಶದ ಪರಿಸ್ಥಿತಿ ಉಂಟಾಗುತ್ತಿತ್ತು, ಆಗ ವಿವೇಕದ ಮಾತುಗಳು ಯಾರನ್ನೂ ತಲುಪಲು ಸಾಧ್ಯವಿರಲಿಲ್ಲ. ಒಂದು ಕಡೆಯಿಂದ ಅತಿ ವಿವೇಕದ ಮಾತುಗಳು ಬಂದರೆ, ಇನ್ನೊಂದು ಕಡೆಯವರು ಅದನ್ನು ದುರ್ಬಳಕೆ ಮಾಡಿಕೊಂಡು ಬಿಡಬಹುದೆಂಬ ಆತಂಕವೂ ಇದ್ದಿತ್ತು.

ಅದೇನೇ ಇದ್ದರೂ ಅಂತಿಮವಾಗಿ ಕಾವೇರಿ ನ್ಯಾಯಮಂಡಳಿಯು ಸ್ಥಾಪನೆಯಾಯಿತು (2ನೇ ಜೂನ್ 1990). ಅದರ ಮಧ್ಯಂತರ ಆದೇಶದ (1991) ಪ್ರಕಾರ ಕರ್ನಾಟಕವು 205 ಟಿಎಂಸಿ ನೀರನ್ನು ವಾರ-ವಾರಕ್ಕೆ ಇಷ್ಟು ಎಂಬ ಲೆಕ್ಕದಲ್ಲಿ ತಮಿಳುನಾಡಿಗೆ ಬಿಡಬೇಕಿತ್ತು; ಮತ್ತು ಇಷ್ಟನ್ನು ಬಿಟ್ಟ ನಂತರ ತನ್ನ ಪಾಲನ್ನು ಹೇಗೆ ಬೇಕಾದರೂ ಬಳಸಿಕೊಳ್ಳುವ ಸ್ವಾತಂತ್ರ್ಯವೂ ಇರಲಿಲ್ಲ, ಕಾವೇರಿ ಕೊಳ್ಳದಲ್ಲಿ 11 ಲಕ್ಷ 20 ಸಾವಿರ ಎಕರೆಗಿಂತ ಹೆಚ್ಚು ಪ್ರದೇಶವನ್ನು ನೀರಾವರಿಗೆ ಒಳಪಡಿಸಬಾರದು ಎಂಬ ಸ್ಪಷ್ಟ ಸೂಚನೆ ಅದರಲ್ಲಿತ್ತು, ಮಳೆ ಕಡಿಮೆಯಾಗಿ ಕೊರತೆ ಉಂಟಾದಾಗ ಏನು ಮಾಡಬೇಕೆಂಬುದರ ಕುರಿತು ಸೂಕ್ತವಾದ ಸೂತ್ರವನ್ನೂ ಮಂಡಳಿ ಸೂಚಿಸಿರಲಿಲ್ಲ,

ಕರ್ನಾಟಕಕ್ಕಾದ ಚಾರಿತ್ರಿಕ ಅನ್ಯಾಯದ ಸ್ಮೃತಿ ಮತ್ತು ಈ ಕೊರತೆಗಳ ಕಾರಣದಿಂದ ಹಾಗೂ ಪಟ್ಟಭದ್ರ ಹಿತಾಸಕ್ತಿಗಳ ಕಾರಣದಿಂದ ಉತ್ಪ್ರೇಕ್ಷೆ, ಸುಳ್ಳು ವದಂತಿಗಳು, ಸುಳ್ಳುಗಳು ಎಲ್ಲವೂ ಸೇರಿಕೊಂಡು ಪರಿಸ್ಥಿತಿ ಕಗ್ಗಂಟಾಯಿತು. ಎಲ್ಲದರ ಫಲವಾಗಿ ಕಾವೇರಿ ವಿವಾದಕ್ಕೆ ಶಾಶ್ವತ ಪರಿಹಾರವೆಂಬುದು ಮರೀಚಿಕೆಯೆಂದು ಭಾಸವಾಗ ತೊಡಗಿತು. ಹಾಗಾಗಿ ಅಂತಿಮ ತೀರ್ಪು ಬಂದಾಗಲೂ, ಅದನ್ನು ವಿವೇಕದಿಂದ ಪರಿಶೀಲಿಸುವ ಗೋಜಿಗೆ ಹೋಗಲಿಲ್ಲ,

ವಾಸ್ತವದಲ್ಲಿ ತನ್ನೆಲ್ಲಾ ಕೊರತೆಗಳ ನಡುವೆ ಕಾವೇರಿ ನ್ಯಾಯಾಧಿಕರಣದ ಅಂತಿಮ ತೀರ್ಪು (5ನೇ ಫೆಬ್ರವರಿ 2007) ಶಾಶ್ವತ ಪರಿಹಾರಕ್ಕೆ ತಳಹದಿಯನ್ನು ಹಾಕಿಕೊಟ್ಟಿದೆ. ಒಂದು, ತಾನು ಮುಂಚಿನಿಂದಲೂ - ಶತಮಾನಗಳಿಂದಲೂ - ನೀರಿನ ಬಳಕೆ ಮಾಡಿಕೊಳ್ಳುತ್ತಿರುವುದರಿಂದ ತನಗೆ ಹೆಚ್ಚಿನ ಪಾಲು (prescriptive right and the right of prior use) ದಕ್ಕಬೇಕೆನ್ನುವ ತಮಿಳುನಾಡಿನ ವಾದವನ್ನು ನ್ಯಾಯಾಧಿಕರಣ ಮಾನ್ಯ ಮಾಡಿಲ್ಲ, 1924ರ ಒಪ್ಪಂದವನ್ನು ನ್ಯಾಯಾಧಿಕರಣವು ಮಾನ್ಯ ಮಾಡಿದ್ದರೂ, 50 ವರ್ಷಗಳ ನಂತರ (1974) ಅದನ್ನು ಪುನರ್‌ಪರಿಶೀಲನೆಗೊಳಪಡಿಸಬಹುದು ಎಂದು ಹೇಳಿದೆ. ಎರಡು, ಸಾಮಾನ್ಯ ವರ್ಷಗಳಲ್ಲಿ 192 ಟಿಎಂಸಿಯಷ್ಟು ನೀರನ್ನು ತಮಿಳುನಾಡಿಗೆ ಬಿಟ್ಟ ನಂತರ ಕರ್ನಾಟಕವು ತನ್ನ ಪಾಲಿಗೆ ಬರುವ ಉಳಿದೆಲ್ಲಾ ನೀರನ್ನು ಹೇಗೆ ಬೇಕಾದರೂ ಬಳಸಿಕೊಳ್ಳುವ ಹಕ್ಕನ್ನು ಹೊಂದಿದೆ ಎಂದು ಅಂತಿಮ ತೀರ್ಪಿನಲ್ಲಿ ಹೇಳಲಾಗಿದೆ. ಅದೇ ರೀತಿ ತಮಿಳುನಾಡು ಕರ್ನಾಟಕದಿಂದ ಪಡೆದುಕೊಳ್ಳುವ 192 ಟಿಎಂಸಿ (ಅಥವಾ ಮಳೆ ಬಹಳ ಹೆಚ್ಚಾದ ಕಾಲದಲ್ಲಿ ಬರಬಹುದಾದ ಇನ್ನೂ ಹೆಚ್ಚಿನ ನೀರು) ಮತ್ತು ತನ್ನದೇ ಜಲಾನಯದ ಪ್ರದೇಶಗಳಿಂದ ಸಿಗಬಹುದಾದ ಹೆಚ್ಚಿನ ನೀರನ್ನು ಹೇಗೆ ಬೇಕಾದರೂ ಬಳಸಿಕೊಳ್ಳಬಹುದು. ಮೂರು, ಈ ಅಂತಿಮ ತೀರ್ಪಿನ ಆಚೆ ಕರ್ನಾಟಕ ಮತ್ತು ತಮಿಳುನಾಡು (ಹಾಗೂ ಕೇರಳ ಮತ್ತು ಪಾಂಡಿಚೇರಿ) ರಾಜ್ಯಗಳು ಪರಸ್ಪರ ಒಪ್ಪಿಗೆಯ ಮೇರೆಗೆ ಮಾಡಿಕೊಳ್ಳಬಹುದಾದ ಇನ್ನಾವುದೇ ಬದಲಾವಣೆಗಳಿಗೆ ಅಡ್ಡಿಯಿಲ್ಲ.

ಆದರೆ ಅಂತಿಮ ತೀರ್ಪಿನಲ್ಲಿರುವ 2 ಮುಖ್ಯ ಸಮಸ್ಯೆಗಳು ಶಾಶ್ವತ ಪರಿಹಾರಕ್ಕೆ ಅಡ್ಡಿಯಾಗಿವೆ. ಒಂದು, ಕರ್ನಾಟಕವು ಕನಿಷ್ಠ 192 ಟಿಎಂಸಿಗಳನ್ನು ಬಿಡಲೇಬೇಕೆಂದು ಹೇಳಿರುವುದು. ಈ ವಿಚಾರದಲ್ಲಿ ಕಾವೇರಿ ನ್ಯಾಯಾಧಿಕರಣವು ಯಾವುದೇ ಆಧಾರವಿಲ್ಲದೆ ಸುಖಾಸುಮ್ಮನೆ ಒಂದು ಅಂಕಿಯನ್ನು ಹೇಳಿಲ್ಲ ಎಂಬುದನ್ನು ನಾವು ಗಮನಿಸಬೇಕು. ಮೊದಲು ಯಾವ ಮಾನದಂಡಗಳ ಆಧಾರದ ಮೇಲೆ ನೀರಿನ ಹಂಚಿಕೆಯಾಗಬೇಕು ಎಂಬುದನ್ನು ವಿವರವಾಗಿ ವಿಶ್ಲೇಷಿಸಲಾಗಿದೆ. ನಂತರ ಎರಡೂ ರಾಜ್ಯಗಳ ಬಳಕೆ ಮತ್ತು ಅಗತ್ಯಗಳ ಆಧಾರದ ಮೇಲೆ ಸರಾಸರಿ 50 ವರ್ಷಗಳಲ್ಲಿ ಲಭ್ಯವಾಗುವ ನೀರಿನ ಪ್ರಮಾಣವನ್ನು ಗಮನದಲ್ಲಿಟ್ಟುಕೊಂಡು ಹಂಚಿಕೆ ಮಾಡಲಾಗಿದೆ. ಕರ್ನಾಟಕದ ತಕರಾರು ಮಾನದಂಡಗಳ ಕುರಿತಾಗಿಯೂ ಮತ್ತು ಅಂತಿಮ ಹಂಚಿಕೆಯ ಕುರಿತಾಗಿಯೂ ಇದೆ. ವಿವರಗಳು ಈ ಲೇಖನದ ಗಾತ್ರವನ್ನು ಹಿಗ್ಗಿಸುತ್ತವೆಯಾದ್ದರಿಂದ ಅವನ್ನು ಇಲ್ಲಿ ಚರ್ಚಿಸಲು ಹೋಗಿಲ್ಲ, ಆದರೆ ಹಲವು ರೀತಿಯಲ್ಲಿ ಕರ್ನಾಟಕಕ್ಕೆ ಒಂದು ಮಟ್ಟದ ಅನ್ಯಾಯವಂತೂ ಆಗಿದೆ. ವಿವಿಧ ಮಾನದಂಡಗಳ ಆಧಾರದ ಮೇಲೆ (ಕೇರಳದ ಪಾಲಿನಲ್ಲಿ ಬಳಕೆಯಾಗದೇ ಉಳಿದುಕೊಂಡಿರುವ ನೀರು, ಪರಿಸರ ಸಮತೋಲನಕ್ಕೆ ಬಿಡಬೇಕಾದ ನೀರು, ತಮಿಳುನಾಡಿನ ಅಂತರ್ಜಲದ ಪ್ರಮಾಣ ಇತ್ಯಾದಿ) ಲೆಕ್ಕಾಚಾರ ಹಾಕಿದರೆ ಇನ್ನೂ 25ರಿಂದ 50 ಟಿಎಂಸಿ ಕರ್ನಾಟಕದ ಪಾಲಿಗೆ ದಕ್ಕಬಹುದು. ಆದರೆ ಒಮ್ಮೆ ನ್ಯಾಯಾಧಿಕರಣವು ಇಂತಿಷ್ಟು ನೀರು ಎಂದು ನಿಗದಿಪಡಿಸಿದ ಮೇಲೆ, ಅದಕ್ಕೂ ಹಿಂದಕ್ಕೆ ಹೋಗಬೇಕೆಂದರೆ ಉಭಯ ಪಕ್ಷಗಳ ನಡುವೆ ಒಂದೋ ಅಗಾಧವಾದ ಮೈತ್ರಿ ಇರಬೇಕು ಇಲ್ಲವೇ, ಶಾಶ್ವತ ಪರಿಹಾರವನ್ನು



ಕಂಡುಕೊಳ್ಳಲೇಬೇಕಾದ ಅನಿವಾರ್ಯತೆ ಉಂಟಾಗಬೇಕು.

ಅಂತಿಮ ತೀರ್ಪಿನಲ್ಲಿರುವ ಎರಡನೆಯ ಸಮಸ್ಯೆಯೆಂದರೆ, ಸರಿಯಾದ ಸಂಕಷ್ಟ ಸೂತ್ರವನ್ನು ನ್ಯಾಯಾಧಿಕರಣ ರೂಪಿಸದೇ ಇರುವುದು. ನ್ಯಾಯಾಧಿಕರಣವು ರಚನೆಯಾದ ಮೇಲೆ ತಾನು ಬಗೆಹರಿಸಬೇಕಾದ 50 ಅಂಶಗಳ ಪಟ್ಟಿ ಮಾಡಿದೆ. ಅದರಲ್ಲಿ ಸಂಕಷ್ಟ ಸೂತ್ರದ ಸ್ಥಾನ 50ನೆಯದ್ದು. ವಾಸ್ತವದಲ್ಲಿ ಈ ವಿವಾದದ ಇಂದಿನ ಪ್ರಮುಖ ಸಮಸ್ಯೆಯೇ ಸಂಕಷ್ಟದ (ಮಳೆ ಕಡಿಮೆ ಬಿದ್ದ) ಸಂದರ್ಭದಲ್ಲಿ ನೀರಿನ ಹಂಚಿಕೆಯದ್ದಾಗಿದೆ. ಸಂಕಷ್ಟ ಬಂದಾಗ ಶೇಕಡಾವಾರು ಪ್ರಮಾಣದಲ್ಲಿ ನೀರಿನ ಹಂಚಿಕೆಯನ್ನು ಕಡಿಮೆ ಮಾಡಿಕೊಳ್ಳಬೇಕು ಎಂದಷ್ಟೇ ಹೇಳಲಾಗಿದೆ. ಇದು ಮೇಲ್ನೋಟಕ್ಕೆ ಸರಿಯಿದೆ ಅನ್ನಿಸಿದರೂ, ಕೆಲವು ವಾಸ್ತವದ ತೊಡಕುಗಳು ಇವೆ. ಇಡೀ ವರ್ಷ ಬೀಳುವ ನೀರನ್ನು ಒಂದು ಕಡೆ ಸಂಗ್ರಹಿಸಿ, ಅದರಲ್ಲಿ ನಮ್ಮ ನಮ್ಮ ಶೇಕಡಾವಾರು ಪಾಲು ಇಷ್ಟು ಎಂದು ಹಂಚಿಕೊಳ್ಳುವುದಾಗಿದ್ದರೆ ಈ ಸೂತ್ರವನ್ನು ಸುಲಭದಲ್ಲಿ ಅನ್ವಯಿಸಬಹುದಾಗಿತ್ತು. ಆದರೆ, ಮಳೆ ಒಂದೇ ಸಾರಿಗೆ ಬರುವುದಿಲ್ಲವಲ್ಲ!

ಕಾವೇರಿಯ ವಿಚಾರದಲ್ಲಿ ಇನ್ನೂ ವಿಶೇಷವಾದ ಸಮಸ್ಯೆಯೂ ಒಂದಿದೆ. ಅದೇನೆಂದರೆ, ಕರ್ನಾಟಕಕ್ಕೆ ಹೆಚ್ಚು ಮಳೆ ತರುವ ನೈರುತ್ಯ ಮಾರುತಗಳು ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ಬರುತ್ತವೆ. ತಮಿಳುನಾಡಿಗೆ ಹೆಚ್ಚು ಮಳೆ ತರುವ ಈಶಾನ್ಯ ಮಾರುತಗಳು ಅಕ್ಟೋಬರ್‌ನಿಂದ ಜನವರಿವರೆಗೆ ಸುರಿಯುತ್ತವೆ. ಹೀಗಾಗಿ ಮಳೆಗಾಲದ ಆರಂಭದಲ್ಲೇ ಸಂಕಷ್ಟ ಎದುರಾದಾಗ ಕರ್ನಾಟಕವು ಬೆಳೆ ನಷ್ಟವನ್ನೂ ಮಾಡಿಕೊಂಡಿರುತ್ತದೆ; ಅಣೆಕಟ್ಟೆಯಲ್ಲೂ ನೀರಿನ ಸಂಗ್ರಹ ಕಡಿಮೆ ಇರುತ್ತದೆ. ಹೀಗಾದಾಗ, ಅಕ್ಟೋಬರ್‌ನಿಂದ ಹೆಚ್ಚು ನೀರು ಬೇಡುವ ಸಾಂಬಾ ಬೆಳೆಗೆ ನೀರು ದಕ್ಕದೇ ಹೋಗಿಬಿಡಬಹುದೆಂಬ ಆತಂಕದಲ್ಲಿ ತಮಿಳುನಾಡು ಈಗಲೇ ನೀರು ಬಿಟ್ಟುಬಿಡಿ ಎಂದು ಕೇಳಲಾರಂಭಿಸುತ್ತದೆ. ಆದರೆ ನಾವೇ ಕಷ್ಟದಲ್ಲಿದ್ದೇವೆ; ನಿಮ್ಮ ಅಣೆಕಟ್ಟುಗಳಲ್ಲೂ ಒಂದಷ್ಟು ನೀರು ಇದೆ; ನಿಮಗೆ ಹೇಗೂ ಈಶಾನ್ಯ ಮಾರುತಗಳಿಂದ ಅಕ್ಟೋಬರ್‌ನ ನಂತರ ಮಳೆ ಬರುತ್ತದೆ ಎಂದು ಕರ್ನಾಟಕ ಹೇಳುತ್ತದೆ. ಕರ್ನಾಟಕಕ್ಕೆ ಈ ಸಾರಿ ಬಾರದ ಮಳೆಯು ತಮಿಳುನಾಡಿಗೆ ಬರುತ್ತ... ಹೇಗೆ ಹೇಳುವುದು? 2012ರಲ್ಲಿ ಎದುರಾ... ಇದೇ ಆಗಿತ್ತು.

ಇರಲಿ, ಈ ಸಮಸ್ಯೆಗಳನ್ನು ಹೊರತುಪಡಿಸಿದ... ಮುಖ್ಯ ಸಂಗತಿಯನ್ನು ನಾವು ಗಮನಿಸಬೇಕು... ತೀರ್ಪಿನಲ್ಲಿ ಇರುವ ಅವಕಾಶವನ್ನು ... ಬಳಸಿಕೊಂಡರೆ, ಈಗಿನ ನೀರಾವರಿ ಪ್ರದೇಶಗಳ... ಸಮರ್ಪಕವಾಗಿ ಹೆಚ್ಚಿನ ನೀರನ್ನು ಕೊಡುವುದ... ಇದುವರೆಗೆ ನೀರಾವರಿಯ ಮುಖವನ್ನೂ ಕ... ಒಣ ಪ್ರದೇಶಗಳಿಗೂ ನೀರು ಕೊಡಲು ಸಾ... ಹೇಗೆಂದರೆ, ತಮಿಳುನಾಡಿಗೆ 192 ಟಿ.ಎಂ.ಸಿ... ಬಿಟ್ಟ ಮೇಲೆ ನಮ್ಮ ಪಾಲಿನ ನೀರನ್ನು ನಾ... ಬೇಕಾದರೂ ಬಳಸಿಕೊಳ್ಳಬಹುದು. ಇದ... ಮೇಕೆದಾಟಿನ ಅಣೆಕಟ್ಟೆಯ ವಿಚಾರದಲ್ಲಿ ಕಾನೂ... ಟಿ.ಬಿ.ಜಯಚಂದ್ರ ಹಾಗೂ ಮುಖ್ಯ... ಸಿದ್ದರಾಮಯ್ಯನವರು ಹೇಳುತ್ತಿರುವುದು. ಇದ... ಕರ್ನಾಟಕವು ಮುಕ್ತ ಮನಸ್ಸಿನಿಂದ ಸ್ವಾಗತಿಸಬೇಕು... ತೀರ್ಪು ಜಾರಿಗೆ ಬಂದಾಗಿದೆ. ಇನ್ನು ಅದ... ತಕರಾರು ಎತ್ತುವುದರಿಂದ ಏನೂ ಪ್ರಯೋಜನವಿ... ಶಾಶ್ವತ ಪರಿಹಾರವೂ ಸಿಗುವುದಿಲ್ಲ. ಒಂ... ತಮಿಳುನಾಡು ಕ್ಯಾತೆ ತೆಗೆದರೆ ಅದನ್ನು ಜಗಳ... (ಇಷ್ಟು ವರ್ಷ ಕರ್ನಾಟಕಕ್ಕೆ ಸಿಕ್ಕಿದ್ದ ಪಟ್ಟಿ... ಬಿಂಬಿಸುತ್ತಾ, ಕಾನೂನುಪ್ರಕಾರ ಏನು ಮಾ... ಅದನ್ನು ಮಾಡುತ್ತಾ ಹೋಗಬೇಕು.

ಏನು ಮಾಡಬೇಕು? ಮೊದಲನೆಯದಾ... ನಿರ್ವಹಣೆಯಲ್ಲಿ ದಕ್ಷತೆಯನ್ನು ಸಾಧಿಸುವುದಾದ... ದೊಡ್ಡ ಮತ್ತು ಸಣ್ಣ ಕಾಲುವೆಗಳಲ್ಲಿ ನೀ... ಆಗುತ್ತಿರುವ ನಷ್ಟವನ್ನು ತಪ್ಪಿಸಿದರೆ, ... ಒದಗಿಸಲಾಗುತ್ತಿರುವ ನೀರಿನ ಶೇ.4... ಪಡೆಯಬಹುದು. ವಿಶ್ವಸಂಸ್ಥೆಯ ಅಭಿವೃದ್ಧಿ ಕಾ... (ಯುಎನ್‌ಡಿಪಿ)ದ ವರದಿಯ ಪ್ರಕಾರ ... ದಕ್ಷತೆಯಿಂದ ತಮಿಳುನಾಡಿನಲ್ಲಿ 88 ಟಿಎಂ... ಕರ್ನಾಟಕದಲ್ಲಿ 30 ಟಿಎಂಸಿ ನೀರನ್ನು ಉಳಿಸ...

ಸಾಮಾನ್ಯ ವರ್ಷಗಳಲ್ಲಿ ಸಮುದ್ರಕ್ಕೆ ... ಪೋಲಾಗುತ್ತಿರುವ ನೀರು 1972ರಲ್ಲಿ 10... ಎಂದು ಕೇಂದ್ರ ಸರ್ಕಾರ ನೇಮಿಸಿದ್ದ ... ಸತ್ಯಶೋಧನಾ ಸಮಿತಿ ಹೇಳಿತ್ತು, ಈಗ ಈ ... ಎಷ್ಟಿದೆ ಎಂದು ನೋಡಿ, ಅದರ ಸದ್ಬಳಕೆ... ಮಾಡಿಕೊಳ್ಳಬೇಕು. ಕಾವೇರಿ ಪ್ರದೇಶದಲ್ಲಿ ಒ... ಟಿಎಂಸಿ (ತಮಿಳುನಾಡು 150, ಕರ್ನಾಟಕ 5... ಅಂತರ್ಜಲ ಲಭ್ಯವಿದೆಯೆಂಬುದು ಅಂದಾಜ... ಸರಿಯಾದ ಬಳಕೆ ಹಾಗೂ ಅಂತರ್ಜಲ ಮರು... ವ್ಯವಸ್ಥೆಯಿಂದ ಮತ್ತಷ್ಟು ನೀರು ಲಭ್ಯವಾಗು...

ಕೃಷಿಗೆ ಬಳಸುವ ನೀರಿನಲ್ಲಿ ಅ... ತಡೆಯುವುದರಿಂದ ಹಲವು ರೀತಿಯ ಅನುಕ... ಇಂದು ಎಲ್ಲಾ ರೈತರಿಗೆ ಅಭ್ಯಾಸವಾಗಿರುವ ... ಅವೈಜ್ಞಾನಿಕವೂ, ಸ್ವಲ್ಪಮಟ್ಟಿಗೆ ಬೇಜವಾಬ್ದಾರಿ... ಆಗಿದೆ. ಈ ನಿಟ್ಟಿನಲ್ಲಿ ದೊಡ್ಡ ಮಟ್ಟದ ... ಕ್ರಮಗಳಿಗೆ ಮುಂದಾಗಬೇಕಾದ ಅಗತ್ಯವಿದೆ.

ಮೇಲೆ ಹೇಳಲಾದ ಎಲ್ಲಾ ಅಂಶಗಳಿಗಿಂತ ವ... ಕೆಲವು ಸಂಗತಿಗಳಿವೆ. ಕೃಷಿಯೆಂಬ ಸಾ... ಚಟುವಟಿಕೆಗೆ ಇಂದಿನ ರೀತಿಯಲ್ಲೇ ನೀರು ಪ... ಹೋಗಲು ಸಾಧ್ಯವೇ? ದೊಡ್ಡ ದೊಡ್ಡ ಅಣೆ... ಮಾಡಿದ, ಮಾಡುತ್ತಿರುವ ಅನಾಹುತಗಳು 100... ಅನುಭವದಲ್ಲಿ ಹೊಸ ಪಾಠಗಳನ್ನು ಕಲಿಸುತ್ತಿವೆ. ... ಕರ್ನಾಟಕದ ಕನಿಷ್ಠ 3 ದೊಡ್ಡ ಅಣೆಕಟ್ಟುಗಳಲ್ಲಿ ... ಹೂಳು ತುಂಬಿದ್ದು ಅದರಿಂದ ಆಗುತ್ತಿರುವ ... ಕೇವಲ ಟಿಎಂಸಿಗಳಲ್ಲಿ ಮಾತ್ರ ಅಳೆಯಲಾಗದು... ಸರ್ಕಾರವು ಮೇಕೆದಾಟಿನಲ್ಲಿ ಕಟ್ಟಲು ಹೊ... ಅಣೆಕಟ್ಟೆಯ ಸಂದರ್ಭದಲ್ಲೂ ... ಗಮನದಲ್ಲಿಟ್ಟುಕೊಳ್ಳಬೇಕು. ಕೇವಲ ದೊಡ್ಡ ಅಣೆ... ಮಾತ್ರವಲ್ಲದೇ, ಮೇಲೆ ಹೇಳಲಾದ ಎಲ್ಲಾ ... ಆಧಾರದ ಮೇಲೆ ಕೃಷಿಯ ಹಾಗೂ ನೀರಿನ ... ಸೂಕ್ತ ಪರಿವರ್ತನೆಗೆ ಮುಂದಾಗಬೇಕು.

ನಿರಂತರ ನೀರಾವರಿಯಿಂದ ಉಂಟಾಗು... ಮತ್ತು ಕ್ಷಾರದಿಂದಲೂ ಮುಕ್ತಗೊಳ್ಳಲು ಬಳ... ನೀರಾವರಿ ಮತ್ತು ಕೃಷಿ ವಿಧಾನಗಳ ಕುರಿತ... ಮನಸ್ಸಿನ ಚಿಂತನೆ ಹಾಗೂ ಪ್ರಯೋ... ಅನಿವಾರ್ಯವಾಗಿದೆ. ಹನಿ ನೀರಾವರಿಯಿಂದ... ಕೃಷಿ ವಿಧಾನಗಳಿಂದ, ಕೆರೆ-ಕುಂಟೆಗಳ ಅಭಿವ... ಪಡೆಯಬಹುದಾದ ಹೆಚ್ಚುವರಿ ನೀರು ಮತ್ತು ಬ... ಅಭಿವೃದ್ಧಿಗಳು ಮಾತ್ರ ಶಾಶ್ವತ ಪರಿಹಾರಕ್ಕೆ ... ಕೊಂಡೊಯ್ಯಬಲ್ಲವು. ಅತ್ಯಂತ ಸಮೃದ್ಧವೆಂದು ಭ... ಮಂಡ್ಯ ಜಿಲ್ಲೆಯೊಂದರಲ್ಲೇ ಶೇ.49ರಷ್ಟು ಬ... ಬೇಸಾಯವಿದೆ ಎಂಬ ಸತ್ಯ ಇದನ್ನು ಅನಿವಾರ್ಯಗೊಳಿಸುತ್ತದೆ!


ಸಿ.ಟಿ.ರವಿಗೆ ಉತ್ತರ ಮತ್ತು ಓದುಗರಿಗೆ ವರದಿ


ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com



ಕಳೆದ ವಾರ ಸಿ.ಟಿ.ರವಿಯ ನೇತೃತ್ವದಲ್ಲಿ ಮಲೆನಾಡಿನ ಬಿಜೆಪಿ ಶಾಸಕರು ನನ್ನ ವಿರುದ್ಧ ರಾಜ್ಯಪಾಲರಿಗೆ ಒಂದು ದೂರನ್ನು ಸಲ್ಲಿಸಿದರು. ಆ ದೂರಿನಲ್ಲಿ "ಗೌರಿ ಲಂಕೇಶ್ ನಕ್ಸಲರೊಂದಿಗೆ ಸಂಪರ್ಕ ಹೊಂದಿದ್ದಾರೆ. ಅವರು ನಕ್ಸಲರಿಗೆ ಪ್ರಚೋದನೆ ಮತ್ತು ನೆರವು ನೀಡುವ ಅಪಾಯವಿದೆ. ಕಾಡಿನಲ್ಲಿ ನಡೆಯಲಾಗದಂತಹ ಸ್ಥಿತಿಯಲ್ಲಿರುವ ವಯೋವೃದ್ಧರನ್ನು ಮತ್ತು ಅನಾರೋಗ್ಯ ಪೀಡಿತರನ್ನು ಸರ್ಕಾರ ರೂಪಿಸಿರುವ 'ಶರಣಾಗತಿ ಪ್ಯಾಕೇಜ್' ಅಡಿ ಹೊರತಂದು ಅವರಿಗೆ ರಾಜಮಾರ್ಗ ಕಲ್ಪಿಸಲು ಯತ್ನಿಸುತ್ತಿದ್ದಾರೆ. ಆದ್ದರಿಂದ ಅವರನ್ನು ನಕ್ಸಲ್ ಶರಣಾಗತಿ ಸಲಹಾ ಸಮಿತಿಯ ಸದಸ್ಯೆಯಾಗಿ ನೇಮಿಸಿರುವುದು ಸರಿಯಲ್ಲ. ಅವರನ್ನು ಆ ಸಮಿತಿಯಿಂದ ಕೈ ಬಿಡಬೇಕು" ಎಂದು ರವಿ ಮತ್ತು ಇತರರು ವಜುಭಾಯಿ ವಾಲಾ ಅವರಲ್ಲಿ ಮನವಿ ಮಾಡಿಕೊಂಡಿದ್ದಾರೆ.





ರವಿ ಮತ್ತು ಆತನ ಸಂಗಡಿಗರ ದೂರಿನ ಸಾರಾಂಶದ ಬಗ್ಗೆ ಕೇಳಿ ನನಗೆ ನಗು ಬಂತು. ಯಾಕೆಂದರೆ ಇವರೆಲ್ಲರಿಗೆ ಈ ಪ್ಯಾಕೇಜಿನ ಬಗ್ಗೆಯಾಗಲಿ, ಈಗ ಮುಖ್ಯವಾಹಿನಿಗೆ ಬರಲು ಸಿದ್ಧರಾಗಿರುವ ನೂರ್ ಝುಲ್ಫೀಕರ್ ಅಲಿಯಾಸ್ ನೂರ್ ಶ್ರೀಧರ್ ಮತ್ತು ಸಿರಿಮನೆ ನಾಗರಾಜ್ ಅವರು ಕೊಟ್ಟಿರುವ ರಾಜಕೀಯ ಹೇಳಿಕೆಗಳ ಬಗ್ಗೆಯಾಗಲಿ, ಪ್ರಜಾತಾಂತ್ರಿಕ ಹೋರಾಟಗಳ ಬಗ್ಗೆಯಾಗಲಿ ಕಿಂಚಿತ್ತೂ ಜ್ಞಾನ ಇರುವಂತಿಲ್ಲ. (ಜ್ಞಾನ ಇದ್ದಿದ್ದರೆ ಅವರ‍್ಯಾರೂ ಬಿಜೆಪಿ ತರಹದ ಕೋಮುವಾದಿ, ಜಾತಿವಾದಿ ಪಕ್ಷದಲ್ಲಿ ಇರುತ್ತಿರಲಿಲ್ಲ ಎಂಬುದು ಬೇರೆ ಮಾತು, ಬಿಡಿ!)

ಬರೀ ಕರ್ನಾಟಕದಲ್ಲಿ ಮಾತ್ರವಲ್ಲ, ದೇಶದಾದ್ಯಂತ ಜಾರಿಯಲ್ಲಿರುವ ಈ ನಕ್ಸಲ್ ಪ್ಯಾಕೇಜು ಇರುವುದೇ ಸಶಸ್ತ್ರ ಹೋರಾಟವನ್ನು ಬಿಟ್ಟಿರುವವರಿಗೆಂದು. ಸ್ವಾತಂತ್ರ್ಯ ಹೋರಾಟಗಾರ ದೊರೆಸ್ವಾಮಿ, ಹಿರಿಯ ವಕೀಲರಾದ ಎ.ಕೆ.ಸುಬ್ಬಯ್ಯ ಮತ್ತು ನಾನು ನಕ್ಸಲ್ ಶರಣಾಗತಿ ಸಲಹಾ ಸಮಿತಿಗೆ ಸದಸ್ಯರಾಗಿರುವುದೂ ಸಶಸ್ತ್ರ ಹೋರಾಟವನ್ನು ತ್ಯಜಿಸಿ, ಮುಖ್ಯವಾಹಿನಿಗೆ ಬಂದು ಪ್ರಜಾತಾಂತ್ರಿಕ ಹೋರಾಟವನ್ನು ನಡೆಸುವವರ ಸಲುವಾಗಿ. ಇದರಲ್ಲಿ ರವಿ ಮತ್ತು ಆತನ ಬಿಜೆಪಿ ಸಂಗಡಿಗರಿಗೆ ಕಂಡುಬಂದಿರುವ ತಪ್ಪೇನು?

ಅಂದಹಾಗೆ ನೂರ್ ಝುಲ್ಫೀಕರ್ ಮತ್ತು ಸಿರಿಮನೆ ನಾಗರಾಜ್ ಅವರುಗಳು ವಯೋವೃದ್ಧರೂ ಅಲ್ಲ, ಅನಾರೋಗ್ಯ ಪೀಡಿತರೂ ಅಲ್ಲ, ಸಶಸ್ತ್ರ ಹೋರಾಟ ನಡೆಸಲಾಗದೆ ಹೊರಗೆ ಬರುತ್ತಿರುವವರೂ ಅಲ್ಲ. ಬದಲಾಗಿ ಮಾವೋವಾದಿ ಪಕ್ಷದ ಸಶಸ್ತ್ರ ಹೋರಾಟ ಮಾರ್ಗದ ಬಗ್ಗೆ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳನ್ನು ಹೊಂದಿರುವುದರಿಂದ ಮತ್ತು ಸಶಸ್ತ್ರ ಹೋರಾಟದ ಬದಲಾಗಿ ಪ್ರಜಾತಾಂತ್ರಿಕ ಹೋರಾಟದ ಮೂಲಕ ಶೋಷಿತ ಮತ್ತು ದಮನಿತ ಸಮುದಾಯಗಳನ್ನು ಸಂಘಟಿಸಬೇಕೆಂಬ ಇರಾದೆಯನ್ನು ಹೊಂದಿರುವುದರಿಂದ ಅವರಿಬ್ಬರು ಮುಖ್ಯವಾಹಿನಿಗೆ ಬರಲು ಇಚ್ಛಿಸುತ್ತಿದ್ದಾರೆ. ಪ್ರಜಾಪ್ರಭುತ್ವ ದೇಶದಲ್ಲಿ ಪ್ರಜಾತಾಂತ್ರಿಕ ಮಾರ್ಗದಲ್ಲಿ ನಡೆಯಲು ಇಚ್ಛಿಸುವವರನ್ನು ಹೊರಗೆ ತರುವುದರಲ್ಲಿ ತಪ್ಪೇನಿದೆ? ಅಂದಹಾಗೆ ಇದೇ ತರಹದ ಪ್ಯಾಕೇಜು ಬಿಜೆಪಿ ಆಳುತ್ತಿರುವ ಛತ್ತೀಸಗಢದಲ್ಲೂ ಇದ್ದು ಇತ್ತೀಚೆಗೆ ಹಲವು ನಕ್ಸಲರು ಶರಣಾಗಿದ್ದಾರೆ. ಇದೆಲ್ಲ ರವಿ ಮತ್ತು ಗ್ಯಾಂಗಿಗೆ ಗೊತ್ತಿಲ್ಲ ಅಥವಾ ಗೊತ್ತಿದ್ದರೂ ಅವರಿಗೆ ಬೇಕಿಲ್ಲ, ಯಾಕೆಂದರೆ ನಮ್ಮ ಸಂವಿಧಾನದ ಮೂಲ ಆಶಯಗಳಾದ ಸಮಾನತೆ, ಸಹಬಾಳ್ವೆ ಮತ್ತು ಸಹಿಷ್ಣುತೆ ಬಗೆಯೇ ಚಡ್ಡಿಗಳಿಗೆ ನಂಬಿಕೆ ಇಲ್ಲ, ನಿಷ್ಠೆಯಂತೂ ಇಲ್ಲವೇ ಇಲ್ಲ.

ಇಷ್ಟಾಗಿಯೂ ರವಿ ಗಮನಕ್ಕೆ ಒಂದು ಅಂಶವನ್ನು ತರಲು ಇಚ್ಛಿಸುತ್ತೇನೆ. ಅದೇನೆಂದರೆ ಹೇಗೆ ರವಿ ನನ್ನ ವಿರುದ್ಧ ದೂರು ಸಲ್ಲಿಸಿದ್ದಾರೋ ಹಾಗೆಯೇ ನಕ್ಸಲರೂ ಈ ಪ್ಯಾಕೇಜನ್ನು ವಿರೋಧಿಸಿದ್ದಾರಲ್ಲದೆ ಆ ಸಮಿತಿಯಲ್ಲಿ ದೊರೆಸ್ವಾಮಿ ಮತ್ತು ನಾನು ಯಾಕೆ ಸದಸ್ಯರಾಗಿದ್ದೇವೆ ಎಂದ್ದು ಇತ್ತೀಚೆಗೆ ಒಂದು ಪತ್ರಿಕಾ ಹೇಳಿಕೆಯಲ್ಲಿ ಪ್ರಶ್ನಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಬಿಜೆಪಿ ಸದಸ್ಯರಿಗೂ ಮತ್ತು ನಕ್ಸಲರಿಗೂ ಒಂದೆರಡು ಮಾತುಗಳನ್ನು ಹೇಳಬೇಕಿದೆ. ಮೊದಲನೆಯದಾಗಿ ರವಿ ಮತ್ತಾತನ ಸಂಗಡಿಗರು ಆರಾಧಿಸುವ ನರೇಂದ್ರ ಮೋದಿಯೇ ತನ್ನ ಆಗಸ್ಟ್ 15ರ ಭಾಷಣದಲ್ಲಿ 'ನಕ್ಸಲ್ ಚಳವಳಿ ಕಾನೂನು-ಸುವ್ಯವಸ್ಥೆಯ ಸಮಸ್ಯೆ ಅಲ್ಲ' ಎಂದಿರುವುದನ್ನು ನೆನಪಿಸಲು ಇಚ್ಛಿಸುತ್ತೇನೆ. ಮಾತ್ರವಲ್ಲ, ಬೇರೆ ರಾಜಕೀಯ ಪಕ್ಷಗಳೂ ಮತ್ತು ಹೋರಾಟಗಾರರೂ ಒಪ್ಪುವಂತೆ ನಕ್ಸಲ್ ಚಳವಳಿ ಆರ್ಥಿಕ ಮಾತು ಸಾಮಾಜಿಕ ಅಸಮಾನತೆಯ ವಿರುದ್ಧ ರೂಪಗೊಂಡಿರುವ ಚಳವಳಿ. ನಮ್ಮ ದೇಶದಲ್ಲಿರುವ ಅಸಮಾನತೆಗಳನ್ನು ಇಲ್ಲವಾಗಿಸಲು ನಕ್ಸಲರು ಆಯ್ಕೆ ಮಾಡಿಕೊಂಡಿರುವ ಸಶಸ್ತ್ರ ಹೋರಾಟ ಮಾರ್ಗದ ಬಗ್ಗೆ ಭಿನ್ನಾಭಿಪ್ರಾಯಗಳನ್ನು ಹೊಂದಿರುವವರೂ ನಕ್ಸಲರ ಸೈದ್ಧಾಂತಿಕ ನಿಲುವನ್ನು ಒಪ್ಪಿಕೊಳ್ಳುತ್ತಾರೆ.

ಎರಡನೆಯದಾಗಿ, ಭಾರತಕ್ಕೆ ಸ್ವಾತಂತ್ರ ಬಂದು ಆರು ದಶಕಗಳೇ ಕಳೆದಿದ್ದರೂ ಇಲ್ಲಿ ಅಸಮಾನತೆ ನಾಶವಾಗುವ ಬದಲು ಹೆಚ್ಚಾಗುತ್ತಿರುವುದರಿಂದ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಶೋಷಣೆಗೆ ಒಳಗಾಗುತ್ತಿರುವ ಜನಸಾಮಾನ್ಯರ ರಾಜಕೀಯ ಪ್ರತಿಕ್ರಿಯೆಯೇ ನಕ್ಸಲ್ ಚಳವಳಿ ಎಂದರೂ ತಪ್ಪಾಗಲಾರದು. ಯಾಕೆಂದರೆ ಈ ಚಳವಳಿಯಲ್ಲಿ ಇವತ್ತಿಗೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗಿರುವವರು ಈ ವಲಯಗಳಿಂದ ಬಂದಿರುವವರೇ. ಇದನ್ನು ರವಿ ಮೊದಲು ಅರ್ಥಮಾಡಿಕೊಳ್ಳಬೇಕಿದೆ.

ಇನ್ನು ಮಾವೋವಾದಿಗಳೂ ಹಲವು ವಾಸ್ತವಗಳನ್ನು ಅರಿತುಕೊಳ್ಳಬೇಕಿದೆ. ನಮ್ಮ ದೇಶದಲ್ಲಿ ನಕ್ಸಲ್ ಹೋರಾಟ ಶುರುವಾಗಿ ನಾಲ್ಕು ದಶಕಗಳು ಕಳೆದಿವೆ. ಆದರೂ ಅವರ ಹೋರಾಟ ಯಾಕೆ ಈಗಲೂ ಅರಕ್ಕೇರದ, ಮೂರಕ್ಕಿಳಿಯದ ಸ್ಥಿತಿಯಲ್ಲಿ ಇದೆ? ಯಾಕೆ ಈ ನಲವತ್ತು ವರ್ಷಗಳ ಅವಧಿಯಲ್ಲಿ ದೇಶದಾದ್ಯಂತ ಹಿಂಸೆ ಮತ್ತು ಪ್ರತಿಹಿಂಸೆಯಲ್ಲಿ ರಕ್ತಪಾತವಾಗಿದೆಯೇ ಹೊರತು ಸೈದ್ಧಾಂತಿಕವಾಗಿ ಹೆಚ್ಚು ಫಲದಾಯಕವಾಗಿಲ್ಲ? ಬರುಬರುತ್ತಾ ಪ್ರಭುತ್ವ ದಮನಕಾರಿ ಆಗಿರುವುದರಿಂದ ಅದನ್ನು ಎದುರಿಸಲು ಸಶಸ್ತ್ರ ಹೋರಾಟದ ಬದಲು ಬೇರೆ ಮಾರ್ಗಗಳಿಲ್ಲವೇ? ಇಂತಹ ಎಲ್ಲ ಪ್ರಶ್ನೆಗಳ ಬಗ್ಗೆ ಮಾವೋವಾದಿಗಳು ಆತ್ಮವಿಮರ್ಶೆ ಮಾಡಿಕೊಳ್ಳಬೇಕಿದೆ.

ಮೇಲಿನ ಮಾತುಗಳು ಎಡ ಮತ್ತು ಬಲಪಂಥೀಯ ಪಕ್ಷಗಳಿಗೆ ಅನ್ವಯಿಸುವಂತಹವು. ಆದರೆ ಇಲ್ಲಿ ನಾಗರಿಕ ಸಮಾಜದ ಪಾತ್ರವೂ ಮುಖ್ಯವಾಗುತ್ತದೆ. ನಕ್ಸಲರೆಂದರೆ ಭಯೋತ್ಪಾದಕರು, ದೇಶದ್ರೋಹಿಗಳು ಎಂದೆಲ್ಲ ಸಾರಾಸಗಟಾಗಿ ತಿರಸ್ಕರಿಸುವ ನಾಗರಿಕ ಸಮಾಜವೂ ಹಲವು ಪ್ರಶ್ನೆಗಳನ್ನು ಮೆಲುಕು ಹಾಕಬೇಕಿದೆ. ನಕ್ಸಲ್ ಹೋರಾಟಕ್ಕೆ ಧುಮುಕಿದರೆ ಪ್ರಭುತ್ವದ ಕೈಯಲ್ಲಿ ಸಾವು ಖಚಿತ ಎಂದು ಗೊತ್ತಿದ್ದರೂ ಯಾಕೆ ಪ್ರಾಣದ ಹಂಗನ್ನೂ ತೊರೆದು ಸಾವಿರಾರು ಸಂಖ್ಯೆಯಲ್ಲಿ ಜನ ಅದರತ್ತ ಆಕರ್ಷಿತರಾಗುತ್ತಾರೆ? ಯಾಕೆ ಹೆತ್ತವರನ್ನು ಮತ್ತು ಹತ್ತಿರದ ಸಂಬಂಧಿಗಳನ್ನೂ ತೊರೆದು ಸಮಾಜದ ಉದ್ಧಾರಕ್ಕಾಗಿ ನಕ್ಸಲರಾಗುತ್ತಾರೆ? ತನ್ನ ಎಂತೆಂತಹ ಲೋಪಗಳನ್ನು ಮುಚ್ಚಿಕೊಳ್ಳಲು ಪ್ರಭುತ್ವ ನಕ್ಸಲರನ್ನು 'ದೇಶದ ನಂಬರ್ ಒನ್ ವೈರಿ' ಎಂದು ಯಾಕೆ ಬಿಂಬಿಸುತ್ತದೆ ಎಂಬ ಪ್ರಶ್ನೆಗಳ ಬಗ್ಗೆಯೂ ನಾಗರಿಕರು ಚಿಂತಿಸಬೇಕಿದೆ. ಆಗ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆ ಇನ್ನಷ್ಟು ಅರ್ಥಪೂರ್ಣವಾಗುತ್ತದೆ.

ನಕ್ಸಲ್ ಹೋರಾಟ ಪ್ರಾರಂಭವಾದಾಗಿನಿಂದ ನಮ್ಮ ದೇಶದ ವಿವಿಧ ಕಡೆ -ಅದರಲ್ಲೂ ಆಂಧ್ರ ಮತ್ತು ಬಿಹಾರ ರಾಜ್ಯಗಳಲ್ಲಿ - ರಕ್ತದ ಹೊಳೆಯೇ ಹರಿದಿದೆ. ಸಾವಿರಾರು ಸಂಖ್ಯೆಯಲ್ಲಿ ದಲಿತರು, ಗಿರಿಜನರು, ಆದಿವಾಸಿಗಳು, ಯುವಕ ಯುವತಿಯರು ಮಾತ್ರವಲ್ಲ ಬಡಪಾಯಿ ಪೊಲೀಸರೂ ಈ ಹಿಂಸೆ-ಪ್ರತಿಹಿಂಸೆಯಲ್ಲಿ ಪ್ರಾಣ ಕಳೆದುಕೊಂಡಿದ್ದಾರೆ. ಕಳೆದ ಹತ್ತು ವರ್ಷಗಳಿಂದ ಕರ್ನಾಟಕದಲ್ಲೂ ಹಲವಾರು ಸಾವುನೋವುಗಳು ಸಂಭವಿಸಿವೆ: ಇಲ್ಲಿಯತನಕ ಪೊಲೀಸರು 14 ಜನ ನಕ್ಸಲರನ್ನು ಎನ್‌ಕೌಂಟರ್‌ಗಳಲ್ಲಿ ಕೊಂದಿದ್ದಾರೆ. ನಕ್ಸಲರೂ ಇಬ್ಬರು ಪೊಲೀಸು ಮಾಹಿತಿದಾರರನ್ನು ಕೊಲೆ ಮಾಡಿದ್ದಾರೆ. ಪೊಲೀಸರು ನಾಲ್ವರಿಗೆ ನಕ್ಸಲ್ ಬೆಂಬಲಿಗರೆಂದು ಹಣೆಪಟ್ಟಿ ಕಟ್ಟಿ ನಿರ್ದಾಕ್ಷಿಣ್ಯವಾಗಿ ಕೊಂದುಹಾಕಿದ್ದಾರೆ. ಪಾವಗಡದಲ್ಲಿ ಆಂಧ್ರದ ನಕ್ಸಲರು ಏಳು ಜನ ಕರ್ನಾಟಕದ ಪೊಲೀಸರನ್ನು ಕೊಂದಿದ್ದರು. ಇವಲ್ಲದೆ ಕೋಂಬಿಗ್ ಆಪರೇಷನ್ನಿನಲ್ಲಿ ಪೊಲೀಸರೇ ಇಬ್ಬರು ಪೊಲೀಸರನ್ನು ಕೊಂದರು. ಅಂದರೆ ನಮ್ಮ ರಾಜ್ಯದಲ್ಲೇ ಒಟ್ಟು 29 ಜನ ಸಾವಿಗೀಡಾಗಿದ್ದಾರೆ.

ರವಿ ತರಹದ ಬಲಪಂಥೀಯರ ಕಣ್ಣಿಗೆ ನಾನು ಮತ್ತು ನಮ್ಮ ತಂಡ ನಕ್ಸಲ್ ಚಳವಳಿಯನ್ನು ಬೆಂಬಲಿಸುವಂತೆ ಕಾಣಿಸುತ್ತದೆ. ಆದರೆ ಮೊದಲಿನಿಂದಲೂ ನಮ್ಮ ತಂಡದ ನಿಲುವು



ಸಿರಿಮನೆ ನಾಗರಾಜ್

ಸ್ಪಷ್ಟವಾಗಿದೆ. ಅದೇನೆಂದರೆ: ಹಿಂಸೆ ಮತ್ತು ಪ್ರತಿಹಿಂಸೆ ಮುಂದುವರೆದರೆ ಎರಡೂ ಕಡೆ ರಕ್ತ ಹರಿಯುತ್ತದೆಯೇ ಹೊರತು ಯಾವ ಸಮುದಾಯವಾಗಲಿ, ಸಮಾಜವಾಗಲಿ ಉದ್ಧಾರವಾಗುವುದಿಲ್ಲ. ನಕ್ಸಲರನ್ನು ಕೊಲ್ಲುವ ಮೂಲಕ ನಕ್ಸಲ್ ಚಳವಳಿಯನ್ನು ದಮನ ಮಾಡಲಾಗುವುದಿಲ್ಲ, ಬದಲಾಗಿ ಅವರು ಎತ್ತುವ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ನಿವಾರಿಸುವ ಮೂಲಕ ಅವರ ಚಳವಳಿಯನ್ನೇ ಅಪ್ರಸ್ತುತಗೊಳಿಸಬೇಕು.

ಈ ಸ್ಪಷ್ಟ ನಿಲುವಿನಿಂದಾಗಿಯೇ ನಮ್ಮ ಶಾಂತಿಗಾಗಿ ನಾಗರಿಕರ ವೇದಿಕೆಯು 2004ರಲ್ಲೇ ಸರ್ಕಾರ ಮತ್ತು ಪೊಲೀಸರ ನಡುವೆ ಮಾತುಕತೆಗಳನ್ನು ಸಾಧ್ಯವಾಗಿಸಲು ಯತ್ನಿಸಿತ್ತು, ಆದರೆ ಆಗ ಧರಂಸಿಂಗ್ ಅವರ ಸರ್ಕಾರ ಮತ್ತು ನಕ್ಸಲರು ಕೂಡ ನಮ್ಮ ವೇದಿಕೆಯ ಪ್ರಯತ್ನಕ್ಕೆ ಸರಿಯಾಗಿ ಸ್ಪಂದಿಸದಿದ್ದ ಕಾರಣಕ್ಕೆ ನಮ್ಮ ಪ್ರಯತ್ನಗಳು ವಿಫಲವಾಗಿದ್ದವು. ಅದಾದ ನಂತರ ಬಿಜೆಪಿ ಬೆಂಬಲಿತ ಕುಮಾರಸ್ವಾಮಿ ಅವರ ಸರ್ಕಾರ ಮತ್ತು ಆನಂತರ ಯಡ್ಡಿ-ಸದಾನಂದ ಗೌಡ-ಜಗದೀಶ್ ಶೆಟ್ಟರ್ ಎಂಬ ಬಲಪಂಥೀಯರ ಸರ್ಕಾರ ಅಧಿಕಾರದಲ್ಲಿದ್ದಿದ್ದರಿಂದ ನಮ್ಮ ವೇದಿಕೆ ಅಂತಹ ಯಾವ ಪ್ರಯತ್ನಕ್ಕೂ ಮುಂದಾಗಿರಲಿಲ್ಲ.


2013ರಲ್ಲಿ ಸಿದ್ದರಾಮಯ್ಯನವರ ಸರ್ಕಾರ ಅಧಿಕಾರಕ್ಕೆ ಬಂದನಂತರ ಸಿದ್ದರಾಮಯ್ಯ ಮತ್ತು ಗೃಹ ಸಚಿವ ಕೆ.ಜೆ.ಜಾರ್ಜ್ ಅವರು ನಕ್ಸಲರು ಮುಖ್ಯವಾಹಿನಿಗೆ ಬರಬೇಕೆಂದು ಕರೆ ಕೊಟ್ಟರು. ಆಗ ನಮ್ಮ ವೇದಿಕೆಯು ಸರ್ಕಾರ ಮತ್ತು ನಕ್ಸಲ್ ಹೋರಾಟಗಾರರಿಗೆ ಒಂದು ಜಂಟಿ ಮನವಿ ಮಾಡಿತು. ಆ ಮನವಿಯಲ್ಲಿ ಸರ್ಕಾರ ಹೋರಾಟದಲ್ಲಿ ತೊಡಗಿರುವ ನಕ್ಸಲರನ್ನು ಮಾತುಕತೆಗೆ ಕರೆಯಬೇಕೆಂದೂ, ನಕ್ಸಲರೂ ಸಶಸ್ತ್ರ ಹೋರಾಟವನ್ನು ಬಿಟ್ಟು ಪ್ರಜಾತಾಂತ್ರಿಕ ಚೌಕಟ್ಟಿನಲ್ಲಿ ಹೋರಾಟ ಮಾಡಬೇಕೆಂದೂ ಕೇಳಿದ್ದೆವು.

ಈ ನಾಡಿನಲ್ಲಿ ಸಮಾನತೆ, ಶಾಂತಿ ಮತ್ತು ನೆಮ್ಮದಿಗಳು ನೆಲೆಯೂರಬೇಕೆಂಬ ನಮ್ಮ ಆಶಯದ ಮನವಿಗೆ ಒಂದೆಡೆ ಸಿದ್ದರಾಮಯ್ಯನವರ ಸರ್ಕಾರ, ಇನ್ನೊಂದೆಡೆ ನಕ್ಸಲರ ಒಂದು ಗುಂಪಿನ ನಾಯಕರಾದ ನೂರ್ ಝುಲ್ಫಿಕರ್ ಮತ್ತು ಸಿರಿಮನೆ ನಾಗರಾಜ್-ಸೂಕ್ತ ರೀತಿಯಲ್ಲಿ ಸ್ಪಂದಿಸಿದ್ದರಿಂದ ಈಗ ಅವರಿಬ್ಬರನ್ನು ಮುಖ್ಯವಾಹಿನಿಗೆ ಕರೆತರುವ ಪ್ರಯತ್ನಗಳು ಮುಂದೆ ಸಾಗಿವೆ.

ಈ ನಿಟ್ಟಿನಲ್ಲಿ ಈಗಾಗಲೇ ಸಿದ್ದರಾಮಯ್ಯ ಮತ್ತು ಜಾರ್ಜ್ ಅವರೊಂದಿಗಲ್ಲದೆ, ಮುಖ್ಯ ಕಾರ್ಯದರ್ಶಿ ಕೌಶಿಕ್ ಮುಖರ್ಜಿ, ಗೃಹ ಕಾರ್ಯದರ್ಶಿ ಪಟ್ನಾನಾಯಕ್ ಹಾಗು ಹಿರಿಯ ಪೊಲೀಸ್ ಅಧಿಕಾರಿಗಳ ಜೊತೆ ಹಲವು ಬಾರಿ ಚರ್ಚೆಗಳು ನಡೆದಿವೆ. ನೂರ್ ಮತ್ತು ಸಿರಿಮನೆ ಅವರ ವಿರುದ್ಧ ದಾಖಲಾಗಿರುವ ಕೇಸುಗಳ ಕುರಿತು ಉಡುಪಿ ಮತ್ತು ಚಿಕ್ಕಮಗಳೂರು ಜಿಲ್ಲೆಗಳಿಂದ ರಾಜ್ಯ ಸರ್ಕಾರಕ್ಕೆ ವರದಿಗಳು ಬಂದಿವೆ. ಈಗ ಉಳಿದಿರುವುದು ಇನ್ನೊಂದು ಸುತ್ತಿನ ಮಾತುಕತೆ ಮಾತ್ರ.

ಅದು ಮುಂದಿನ ವಾರ ಜರುಗುವ ಸಾಧ್ಯತೆಗಳಿವೆ. ಅದಾದ ನಂತರ ನೂರ್ ಝುಲ್ಫೀಕರ್ ಮತ್ತು ಸಿರಿಮನೆ ನಾಗರಾಜ್ ಮುಖ್ಯವಾಹಿನಿಗೆ ಆಗಮಿಸಲಿದ್ದಾರೆ. ಒಂದಂತೂ ಸ್ಪಷ್ಟ. ಸಿದ್ದರಾಮಯ್ಯನವರ ಸರ್ಕಾರದ ದಿಟ್ಟ ನಿರ್ಧಾರದಿಂದ ಮತ್ತು ನೂರ್ ಝುಲ್ಫಿಕರ್ ಅವರ ತಂಡದ ಬದಲಾದ ಸೈದ್ಧಾಂತಿಕ ನಿಲುವಿನಿಂದ ಕರ್ನಾಟದಲ್ಲಿ ಇನ್ನು ಮುಂದೆ ಹೊಸ ಗಾಳಿಯಂತೂ ಬೀಸಲಿದೆ.

ನನ್ನ ವಿರುದ್ಧ ರವಿ ಮತ್ತು ಸಂಗಡಿಗರು ದೂರು ಕೊಟ್ಟಿದ್ದರಿಂದ ಮತ್ತು ಪತ್ರಿಕೆಯ ಓದುಗರು ವೇದಿಕೆಯ ಪ್ರಯತ್ನಗಳು ಯಾವ ಹಂತದಲ್ಲಿವೆ ಎಂದು ಕೇಳುತ್ತಿದ್ದರಿಂದ, ಇಷ್ಟನ್ನೆಲ್ಲ ಇಲ್ಲಿ ದಾಖಲಿಸುವ ಮೂಲಕ ರವಿಗೆ ಉತ್ತರವನ್ನೂ ಮತ್ತು ಓದುಗರಿಗೆ ವರದಿಯನ್ನೂ ಸಲ್ಲಿಸುತ್ತಿದ್ದೇನೆ.



ತೀರ್ಥಹಳ್ಳಿಯಲ್ಲಿ ನಡೆದದ್ದೇನು?



ಗೆಳೆಯರ ಮಗಳೊಬ್ಬಳು ಗೋವಾದಿಂದ ಫೋನು ಮಾಡಿ "ತೀರ್ಥಹಳ್ಳಿಯಲ್ಲಿ ನಂದಿತಾ ಎಂಬ ಹೆಣ್ಣು ಮಗಳನ್ನು ರೇಪ್ ಮಾಡಿ ವಿಷ ಕುಡಿಸಿ ಕೊಲೆಗೈದ ಬಗ್ಗೆ ಟಿ.ವಿಯಲ್ಲಿ ಪ್ರಸಾರವಾಗುತ್ತಿದೆ. ಆಕೆಯ ತಂದೆ ಟಿ.ವಿಯಲ್ಲಿ ಮಾತನಾಡುತ್ತಿದ್ದಾರೆ. ಆತನ ಮಾತುಗಳನ್ನು ಗಮನಿಸಿದರೆ ಮಗಳನ್ನು ಕಳೆದುಕೊಂಡು ದುಃಖದಲ್ಲಿರುವ ತಂದೆಯಂತೆ ಕಾಣುತ್ತಿಲ್ಲ" ಎಂದಳು.

ಆ ಮುಗ್ಧ ಹೆಣ್ಣು ಮಗಳ ಮಾತನ್ನು ಮನಸ್ಸಿನ ಮೂಲೆಯಲ್ಲಿಟ್ಟುಕೊಂಡು ತೀರ್ಥಹಳ್ಳಿ ಪ್ರಕರಣವನ್ನು ಗ್ರಹಿಸುತ್ತಾ ಹೋದಂತೆ ನಂದಿತಾ ತಂದೆ ಕೃಷ್ಣಮೂರ್ತಿ ಪೂಜಾರಿಯ ಮಾತುಗಳು ಪೊಲೀಸರನ್ನಷ್ಟೇ ಅಲ್ಲ ಪತ್ರಕರ್ತರನ್ನೂ ದಿಕ್ಕುತಪ್ಪಿಸಿ ರೀಮುಗಟ್ಟಲೆ ಬರೆಯುವಂತೆ ಮಾಡಿವೆ ಎಂಬುದು ಅರ್ಥವಾಗುತ್ತದೆ.

ಮೊದಲನೆಯದಾಗಿ ಕೃಷ್ಣಮೂರ್ತಿ ಕೊಟ್ಟ ದೂರಿನಲ್ಲಿಯೇ ಸುಳ್ಳು ದಾಖಲಾಗಿರುವುದರಿಂದ ಸಿಐಡಿ ಪೊಲೀಸರು ಸುಮಾರು 15 ದಿನ ತೀರ್ಥಹಳ್ಳಿಯಲ್ಲಿ ತಿಪ್ಪರಲಾಗ ಹೊಡೆಯುವಂತಾಯಿತು. ಯಾವಾಗ ದೂರಿನಲ್ಲಿರುವ ಸುಳ್ಳುಗಳು ಅನಾವರಣವಾಗತೊಡಗಿದವೋ ಆಗ ಕೃಷ್ಣಮೂರ್ತಿ ಪೂಜಾರಿ ಈ ಪೊಲೀಸರಿಂದ ತನಗೆ ನ್ಯಾಯ ಸಿಗಲಾರದೆಂದು ಉಲ್ಟಾ ಹೊಡೆಯತೊಡಗಿದರು. ಈತನ ದೂರಿನ ಪ್ರಕಾರ "ಬಸ್‌ಸ್ಟ್ಯಾಂಡಿನ ಜನನಿಬಿಡ ಜಾಗದಲ್ಲಿರುವ, ಕಿಮ್ಮನೆ ರತಾಕರ ತೀರ್ಥಹಳ್ಳಿಗೆ ಬಂದಾಗ ಟೀ ಕುಡಿಯುವ ದ್ವಾರಕಾ ಹೋಟೆಲ್ ಮುಂದೆ ಕೆಂಪು ಓಮ್ನಿ ಕಾರಿನಲ್ಲಿ ಬಂದ ಮೂರು ಜನರು ನಂದಿತಾಳನ್ನು ಬಲವಂತವಾಗಿ ವಾಹನದಲ್ಲಿ ಕೂರಿಸಿಕೊಂಡು ಹೋದರು". ಆದರೆ ಬಸ್ಟಾಂಡ್ ಸಿ.ಸಿ. ಕ್ಯಾಮರಾದಲ್ಲಿ ದಾಖಲಾಗಿರುವಂತೆ ಆಕೆಯನ್ನು ಯಾರೂ ಕೆಂಪು ಓಮ್ನಿ ಕಾರಿನಲ್ಲಿ ಬಲವಂತವಾಗಿ ಕೂರಿಸಿಕೊಂಡು ಹೋಗಿಲ್ಲ, ಬದಲಾಗಿ ಆಕೆ ಬಸ್ಸಿನಲ್ಲಿ ಹೋಗಿದ್ದಾಳೆ.

ಅಲ್ಲಿಗೆ ಕಾರೊಳಗಿದ್ದವರು ಕೊಲೆ ಮಾಡುವುದಾಗಿ ಬೆದರಿಸಿದ್ದು, ಆಕೆಯ ಎದೆಮುಟ್ಟಿ ಎಳೆದಾಡಿದ್ದು, ತಮ್ಮಲ್ಲಿದ್ದ ಬಾಟಲಿಯಿಂದ ಏನನ್ನೋ ಕುಡಿಸಿದ್ದು, ಅವರೆಲ್ಲಾ ಉರ್ದು ಮಾತನಾಡಿದ್ದು... ಎಲ್ಲಾ ಸುಳ್ಳಾಗಿ ಹೋಗಿದೆ. ಇನ್ನ ರೇಪಂತೂ ನಡೆದೇ ಇಲ್ಲ ಎಂಬುದು ಮಣಿಪಾಲದ ವೈದ್ಯರ ಸರ್ಟಿಫಿಕೇಟ್‌ನಿಂದಲೇ ದೃಢಪಟ್ಟಿದೆ.

ಹೀಗೆ ದೂರಿನ ಸುಳ್ಳುಗಳೆಲ್ಲಾ ಅನಾವರಣಗೊಳ್ಳುತ್ತ ಹೋದಂತೆ ಮತ್ತೊಂದು ಅಂಶವೂ ಸ್ಪಷ್ಟವಾಗುತ್ತಾ ಹೋಯಿತು. ಅದೇನೆಂದರೆ, ನಂದಿತ ಮನೆಯಲ್ಲೇ ವಿಷ ಕುಡಿದಿದ್ದು. ಆಕೆಯ ಮೇಲೆ ಅತ್ಯಾಚಾರ ಮತ್ತು ಕೊಲೆ ನಡೆದಿಲ್ಲ, ಬದಲಾಗಿ ಅದೊಂದು ಆತ್ಮಹತ್ಯೆ ಎಂಬ ಅಂಶ ದಟ್ಟವಾಗುತ್ತಾ ಹೋಯಿತು. ಆಕೆಯ ಸಾವಿಗೆ ಕಾರಣಗಳು ಆಕೆಯ ತಂದೆಗೇ ಸುತ್ತಿಕೊಳ್ಳುವಂತೆ ಕಂಡಿದ್ದರಿಂದ ಕೃಷ್ಣಮೂರ್ತಿ ತೀರ್ಥಹಳ್ಳಿಯಿಂದ ಹೊರನಡೆದು ಬೆಂಗಳೂರವರೆಗೂ ಹೋಗಿ ದೂರು ಹೇಳಿ ಬಂದರು. ಆದರೇನಂತೆ, ಕೃಷ್ಣಮೂರ್ತಿ ಪೂಜಾರಿ ಕೊಟ್ಟಿದ್ದ ಸುಳ್ಳಿನ ದೂರಿನಿಂದಾದ ಅನಾಹುತಗಳು ಎದೆ ನಡುಗಿಸುವಂತೆ ನಡೆದುಹೋಗಿವೆ. ಬಾಳೆಹೊನ್ನೂರು, ಕೊಪ್ಪ, ನರಸಿಂಹರಾಜಪುರದ ಕಡೆ ಕಾಡುದಾರಿಯಲ್ಲಿ ನಡೆದು ಶಾಲೆಗೆ ಬರುವ ಹೆಣ್ಣುಮಕ್ಕಳು ಕೂಡ ಹೆದರಿ ಬೆಚ್ಚಿದ್ದಾರೆ. ಈ ಕಾರಣಕ್ಕೇ ಈ ಪ್ರಾಂತ್ಯದಲ್ಲಿ ಯಶಸ್ವೀ ಬಂದ್‌ಗಳು ನಡೆದಿದ್ದು.

ವಿಪರ್ಯಾಸವೇನೆಂದರೆ, ಈಗ ಬಯಲಾಗಿರುವ ಸತ್ಯದ ಸಂಗತಿಗಳು ಯಾರಿಗೂ ಬೇಕಾಗಿಲ್ಲ, ಬಿಜೆಪಿಗಳಂತೂ ತಮ್ಮ ಕಾರಾಸ್ಥಾನದ ಅಜೆಂಡಾದಂತೆ ಮಲೆನಾಡನ್ನು ಪ್ರಕ್ಷುಬ್ಧಗೊಳಿಸಿ, ಮುಸ್ಲಿಂ ದ್ವೇಷವನ್ನ ಎಲ್ಲೆಡೆ ಹರಡಿ, ಅದರ ಪರಿಣಾಮದ ಲೆಕ್ಕಾಚಾರದಲ್ಲಿದ್ದಾರೆಯೇ ವಿನಃ ಇನ್ನಾವ ಅನಾಹುತಗಳ ಜವಾಬ್ದಾರಿಯೂ ಅವರಿಗೆ ಬೇಕಾಗಿಲ್ಲ.

ಸುಳ್ಳು ದೂರೊಂದರಲ್ಲಿ ಸತ್ಯ ಹುಡುಕುವುದು ಹೇಗೆ? ಅದರ ಪರಿಣಾಮವಾಗಿಯೇ ಸಿಐಡಿ ಪೊಲೀಸರು ತೀರ್ಥಹಳ್ಳಿಯಲ್ಲಿ ಬೀಡುಬಿಟ್ಟು ಒಂದೂವರೆ ಸಾವಿರ ಜನರನ್ನು ವಿಚಾರಣೆ ಮಾಡಿದ್ದಾರೆ. ಕೆಂಪು ಕಾರಿನ ಒಡೆಯರೆಲ್ಲಾ ವಿಚಾರಣೆಗೊಳಗಾಗಿದ್ದಾರೆ. ಅನುಮಾನಕ್ಕೆ ತುತ್ತಾದ ಮುಸ್ಲಿಂ ಹುಡುಗರೆಲ್ಲಾ ವಿಚಾರಣೆ ಎದುರಿಸಿದ್ದಾರೆ.

ಹೀಗೊಬ್ಬ ಅಧಿಕಾರಿಯ ಕರಾಮತ್ತು

ತೀರ್ಥಹಳ್ಳಿ ಘಟನೆಗೆ ಸಂಬಂಧಿಸಿದಂತೆ ಇತರೆ ಅಧಿಕಾರಿಗಳನ್ನಲ್ಲದೆ ಈ ಹಿಂದೆ ಇಲ್ಲಿ ಕೆಲಸ ನಿರ್ವಹಿಸಿ ಬೇರೆ ಜಿಲ್ಲೆಗೆ ಹೋದ ಅಧಿಕಾರಿಗಳನ್ನೂ ಕರೆಸಲಾಗಿತ್ತು, ಆ ಪೈಕಿ ಈ ಹಿಂದೆ ಶಿವಮೊಗ್ಗ ಎಸ್ಪಿಯಾಗಿದ್ದವನೊಬ್ಬನನ್ನೂ ಸರ್ಕಾರ ನಿಯೋಜಿಸಿತ್ತು.


ಆದರೆ ಆತ 'ಅತ್ಯಾಚಾರ' ಪ್ರಕರಣವನ್ನು ತನಿಖೆ ಮಾಡುವ ಬದಲಾಗಿ ಜಾಲಿ ಟ್ರಿಪ್‌ಗೆ ಬಂದಂತೆ ಬಂದುಹೋದ. ತನ್ನ ಸ್ಥಳೀಯ ಆಪ್ತ ಗೆಳೆಯರನ್ನು ಮೊದಲೇ ಸಂಪರ್ಕಿಸಿದ್ದ ಆತ ಮುಂಚಿತವಾಗಿ ನಿಗದಿ ಮಾಡಿಕೊಂಡಿದ್ದ ಜಾಗದಲ್ಲಿ ಗುಟ್ಟಾಗಿ ಸಂದಿಸಿದನಲ್ಲದೆ ಹೋಂಸ್ಟೇ ಮಾಡಿದಷ್ಟೇ ಖುಷಿಯಾಗಿ ಹೋದ.

ಈತ ಶಿವಮೊಗ್ಗೆಯ ಎಸ್ಪಿ ಆಗಿದ್ದಾಗ ತನ್ನ ಮನೆಯಲ್ಲೇ ಕಳ್ಳನಾಟ ಸಂಗ್ರಹಿಸಿ ಸಿಕ್ಕಿಬಿದ್ದಿದ್ದ. ಆದ್ದರಿಂದ ನಂದಿತಾ ಸಾವಿನ ಪ್ರಕರಣಕ್ಕಿಂತ ಬೆಲೆಬಾಳುವ ಮರನೋಡಿಕೊಂಡು ಆತ ಹೋದ ಎಂಬ ಜೋಕು ಈಗ ತೀರ್ಥಹಳ್ಳಿಯಲ್ಲಿ ಹರಿದಾಡುತ್ತಿದೆ.









ಸಾರಿ ಹೇಳುತ್ತಿದೆ. ತನ್ನ ಮಗಳು ಇಂಗ್ಲಿಷ್ ಮೀಡಿಯ ಓದಬೇಕು. ಆ ಹಾಳು ಕನ್ನಡ ಮೀಡಿಯಂನಲ್ಲಿ ಹುಡ ಜಾಸ್ತಿಯಿದ್ದಾರೆ. ಅದೇ ಇಂಗ್ಲಿಷ್ ಮೀಡಿಯಂನಲ್ಲಿ ಹ ಯರೂ ಸಮಸಂಖ್ಯೆಯಲ್ಲಿದ್ದಾರೆ. ಅಲ್ಲೇ ಓದಲೆಂ ಅಪ್ಪನ ಮಹದಾಸೆ. ಆದರೆ ನಂದಿತಾ ಇಂಗ್ಲಿಷ್‌ನಲ್ಲಿ ಅನುಭವಿಸಿ ಅವಳಿಗೆ ಪಾಠಗಳೇ ಅರ್ಥವ ಮಿಡ್‌ಟರ್ಮ್ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿ ಮೆಚ್ಚುಗೆ ಮಾತುಗಳಿಗೆ ತುತ್ತಾಗಿದ್ದಾರೆ. ಕಳಪೆ ಮ ತೆಗೆದವರು ಮೂದಲಿಕೆಗೆ ಗುರಿಯಾಗಿದ್ದಾರೆ. ಈ ನಂದಿತಾ ಕೂಡ ಒಬ್ಬಳು. ಅವಳ ಆತ್ಮಹತ್ಯೆಗೆ ಕಾರಣವಾಗಿರಬಹುದು.


ಅಕ್ಟೋಬರ್ 29ರಂದು ಬಸ್ಸನ್ನೇರಿ ಹೊರಟ ನ ಎರಡೂವರೆ ಕಿ.ಮೀ ದೂರದ ಭಾರತೀಪುರದ ಸ ಇಳಿದು ಗುಡ್ಡ ಹತ್ತಿದಳು. ತುಸು ಹೊತ್ತಾದ ಕೂಗಿದಳು. ಕೆಳಗಿದ್ದ ಕಮಲಮ್ಮ ಓಗೊಂಡು ಆಕೆ ಕರೆದು ತಂದೆಗೆ ಒಪ್ಪಿಸಿದ್ದಾಳೆ. ನಂದಿತಾ ಕೂಗಿದ ಎಷ್ಟು ತಪಾಸಣೆಗೊಳಪಟ್ಟಿದೆ ಎಂದರೆ, ಎಂ ಗಾರ್ಡುಗಳಿಗೂ ಆ ಜಾಗದ ಇಂಚಿಂಚು ಗೊತ್ತಿಲ್ಲವ ಅಷ್ಟು ತಪಾಸಣೆಗೊಂಡಿರುವ ಈ ಜಾಗಕ್ಕೆ ಎಲ್ಲಾ ತನಿಖೆಗಳೂ ಬಂದು ಜಾಮಾಗಿವೆ. ಎಂಪಿಎಂ ಗಾರ್ಡುಗಳಲ್ಯಾರಾದರೂ ಆಕೆಗೆ ಕಂಡರೆ? ಅದಕ್ಕಾಗಿ ಕೂಗಿದಳೆ? ಈ ಪ್ರಶ್ನೆಗಳು ಪೊಲೀಸರ ತಲೆ ತಿನ್ನತೊ ದೂರುದಾರರ ಗುಮಾನಿಗೆ ತುತ್ತಾದ ಇಮ್ರಾನ್, ಅ ಮುಜೀಬ್ ತೀವ್ರ ತಪಾಸಣೆಗೆ ತುತ್ತಾಗಿದ್ದಾರೆ. ಯಾರಾ ಒಬ್ಬರು ಸುಳ್ಳು ಹೇಳಿದರೆ ಇನ್ನೊಂದು ಸತ್ಯ ಸಂಗತಿ ಸರಿ ಮಾಡಬಹುದು. ಆದರೆ ನಂದಿತಾ ಮನೆಯ ಹಿಡಿದು ಬಿಜೆಪಿ ಮುಖಂಡರೆಲ್ಲಾ ಕತೆ ಹೆಣೆದರೆ ಒಂದೆಡೆ ಕೃಷ್ಣಮೂರ್ತಿ ಸುಳ್ಳು ದೂರು ಕೊಟ್ಟರೆ ಪೊ ಸರಿಯಾದ ಕ್ರಮದಲ್ಲಿ ತಮ್ಮ ಕರ್ತವ್ಯ ನಿರ್ವ ಸಬ್‌ಇನ್ಸ್‌ಸ್ಪೆಕ್ಟರ್ ಎಚ್ಚರಿಕೆ ವಹಿಸಿದ್ದರೆ ಅನಾಹುತಗಳನ್ನು ತಪ್ಪಿಸಬಹುದಿತ್ತು. ಉದಾಹ ಡೆತ್‌ನೋಟನ್ನು ನಂದಿತಾ ಮನೆಯಿಂದ ತರಿಸು ಬದಲು ಅದನ್ನು ತಂದೆ-ತಾಯಿ ಎದುರೇ ಅವರಿಬ್ಬರಿಗು ಸಾಂತ್ವನ ಹೇಳಿ, ತಮ್ಮ ಕರ್ತವ್ಯ ವ ಬಹುದಿತ್ತು. ಅಷ್ಟೇ ಅಲ್ಲ, ಇಂತಹ ಘಟನೆಗ ಕಾಯುತ್ತ ಕುಳಿತಿರುವ ಬಿಜೆಪಿ ಮಂದಿಯ ಹುನ್ನಾ ಪೊಲೀಸರನ್ನು ಎಚ್ಚರಿಸಬೇಕಿತ್ತು.

ಈ ಪ್ರಕರಣದಲ್ಲಿ ವೈದ್ಯರೂ ತಮ್ಮ ಕರ್ತ ಜವಾಬ್ದಾರಿಯಿಂದ ನಿರ್ವಹಿಸಿದಂತೆ ಕಾಣುವುದಿಲ್ಲ ಪದೇಪದೇ ವಾಂತಿ ಮಾಡಿದಾಗ, ಆಕೆಯ ಹೊಟ್ಟೆ ವಾಷ್ ಮಾಡಿಸಬೇಕಿತ್ತು. ಅದೂ ವಿಷ ಕುಡಿ ಎಂದು ತಿಳಿದಾಗ ಎಚ್ಚರಿಕೆಯಿಂದ ತಮ್ಮ ಕ ಮಾಡಬೇಕಿತ್ತು, ತೀರ್ಥಹಳ್ಳಿ ಬಿಡುವಾಗ 60-40 ನಂದಿತಾಳ ಬಿ.ಪಿ. ಶಿವಮೊಗ್ಗ ಮೆಗ್ಗಾನ್‌ಗೆ ಬರುವ 80-60 ಆಗಿದೆ. ಇದಕ್ಕೆ ಕಾರಣಗಳು ವೈದ್ಯರ ತಿನ್ನಬೇಕಿತ್ತು, ಅವರೂ ಕೂಡ ಪೊಲೀಸರಂತೆ ಬೇಜವ ಮರೆದಿದ್ದರಿಂದ ಚೆಡ್ಡಿಗಳು ಈ ಎಲ್ಲಾ ಅನಾಹುತ

ನಿರಪರಾಧಿಗಳೂ ಈ ಜನ್ಮ ಸಾಕು ಎಂಬಷ್ಟರಮಟ್ಟಿಗೆ ವಿಚಾರಣೆಗೆ ತುತ್ತಾಗಿದ್ದಾರೆ. ಕೆಲವು ವಿಚಾರಣೆಗಳಂತೂ ಬೆಕ್ಕನ್ನು ಸಿಂಹ ಎಂದು ಒಪ್ಪಿಕೊ ಎಂದು ಚಚ್ಚಿ ಒಪ್ಪಿಸಿದಂತೆ ಕಾಣುತ್ತದೆ.

ಆತ್ಮಹತ್ಯೆ ಮಾಡಿಕೊಳ್ಳುವವರು ನಿಜವನ್ನೇ ಹೇಳಿ ಸಾಯುತ್ತಾರೆಂಬ ಗ್ಯಾರಂಟಿ ಇದೆಯೇ? ನಂದಿತಾ ಬರೆದ ಡೆತ್‌ನೋಟಿನಲ್ಲಿ "ನಾನು ಪಾಪಿ ಕ್ಷಮಿಸು ಅಪ್ಪಾ" ಎಂದು ದಾಖಲಿಸಬೇಕಾದರೆ ತಂದೆಯಾದವನು ಅವಳು ಚೆನ್ನಾಗಿ ಓದಲೆಂದು ಹಾಕಿದ ಒತ್ತಡವೂ ಕಾರಣ ಎಂಬುದನ್ನು

ಸಂತೋಷ್ ಹೆಗ್ಡೆ ಸಂಶಯ



ನಮ್ಮ ಮಾಜಿ ಲೋಕಾಯುಕ್ತ ಜಸ್ಟಿಸ್ ಸಂತೋಷ್ ಹೆಗ್ಡೆಯವರು ನಂದಿತಾ ಪ್ರಕರಣವನ್ನು ಸಿಬಿಐಗೆ ವಹಿಸುವುದು ಸೂಕ್ತ ಎಂಬ ತೀರ್ಪು ಕೊಟ್ಟಿದ್ದಾರೆ. ಏಕೆಂದರೆ ಅವರ ಪ್ರಕಾರ ಈಗ ತನಿಖೆ ನಡೆಸುತ್ತಿರುವ ಸಿಐಡಿ ಸಂಸ್ಥೆಯಿಂದ ಪ್ರಕರಣದ ಸತ್ಯಾಂಶ ಹೊರಬರುವುದು ಅನುಮಾನ.

ಮಾನ್ಯ ಸಂತೋಷ್ ಹೆಗ್ಡೆಯವರು ಲೋಕಾಯುಕ್ತರಾಗಿ ಗಣಿ ಹಗರಣದ ತನಿಖೆ ನಡೆಸಿದವರು. ಆ ಕಾರಣಕ್ಕೆ ರಾಜ್ಯದ ಜನರಲ್ಲಿ ಅವರ ಬಗ್ಗೆ ಅಪಾರ ಅಭಿಮಾನವಿದೆ. ಆದರೆ ಅವರು ಸಿಐಡಿ ಬಗ್ಗೆ ಇಂತಗ ಹೇಳಿಕೆಯನ್ನು ನೀಡಬಾರದಿತ್ತು.

ಹಾಲಿ ಸಿಐಡಿ ತನಿಖೆಯಲ್ಲಿ ದಕ್ಷತೆ ಮೆರೆದ ಹಲವು ಅಧಿಕಾರಿಗಳಿದ್ದಾರೆ. ಗಣಿ ಕಳ್ಳರಾದ ರೆಡ್ಡಿ-ರಾಮುಲು ಕೋಟಿ ರೂಪಾಯಿಗಳ ಆಮಿಷವೊಡ್ಡಿದರೂ ಕೇರ್ ಮಾಡದೆ, ಅವರ ಮೇಲೆ ಐದಾರು ಕೇಸ್ ಜಡಿದ ಅಧಿಕಾರಿಗಳೂ ಸದರಿ ತನಿಖಾ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಇದೇ ಸಿಐಡಿ ಸಂಸ್ಥೆ ಈ ಹಿಂದೆ ರೇವಣ್ಣಸಿದ್ದಯ್ಯನವರ ನೇತೃತ್ವದಲ್ಲಿ ನಾಗಮಂಗಲದ ವಕೀಲ ಮತ್ತು ಪತ್ರಿಕೆಯ ವರದಿಗಾರ ಗಂಗಾಧರ ಮೂರ್ತಿಯ ಕೊಲೆ ಕೇಸಿನಲ್ಲಿ ಅಂದಿನ ಶಾಸಕ ಶಿವರಾಮೇಗೌಡನನ್ನೇ ಬಂಧಿಸುವ ಮೂಲಕ ಹೆಸರು ಗಳಿಸಿತ್ತು, ದಕ್ಷ ಅಧಿಕಾರಿಗಳಾದ ವಿ.ವಿ.ಭಾಸ್ಕರ್, ಸಿ.ದಿನಕರ್ ಇವರೆಲ್ಲಾ ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸಿದ ಸಂಸ್ಥೆ ಸಿಐಡಿ.

ಇಂತಹ ಸಂಸ್ಥೆಯ ಬಗ್ಗೆ ಮಾಜಿ ಲೋಕಾಯುಕ್ತರು ಅನುಮಾನ ವ್ಯಕ್ತಮಾಡಿರುವುದು ಸರಿಯಲ್ಲ, ಸಂತೋಷ್ ಹೆಗ್ಡೆಯವರ ದನಿಗೂ ತೀರ್ಥಹಳ್ಳಿಯ ಬಿಜೆಪಿ ರಾಜಕಾರಣಿಗಳ ಧ್ವನಿಗೂ ಅಂತಹ ವ್ಯತ್ಯಾಸ ಕಾಣುತ್ತಿಲ್ಲ, ನಿಜಕ್ಕೂ ಇದೊಂದು ವಿಪರ್ಯಾಸ!

ಚೆಡ್ಡಿಗಳಿಂದಾಗಿ ಕೋಟಿಗಟ್ಟಲೆ ನಷ

ತೀರ್ಥಹಳ್ಳಿಯಲ್ಲಿ ಅಮಾಯಕ ನಂದಿತಾಳ ಮೇಲೆ 'ಸಾಮೂಹಿಕ ಅತ್ಯಾಚಾರ'ವೆಸಗಿದ ಚೆಡ್ಡಿಗಳಿಂದಾಗಿ ಆಕೆ ಮತ್ತಾಕೆಯ ಕುಟುಂಬಕ್ಕೆ ಅನ್ಯಾಯವಾಗಿಲ್ಲ, ರಾಜ್ಯ ಬೊಕ್ಕಸಕ್ಕೆ ನಷ್ಟವಾಗಿದೆ.

ಬಿಜೆಪಿಗಳ ಚಿತಾವಣೆಯನ್ನು ತಡೆಯಲು ಸರ್ಕಾರ ತೀರ್ಥಹಳ್ಳಿಯಲ್ಲಿ ಸಾವಿರಾರು ಪೊಲೀಸರನ್ನು ನಿಯೋ ಇಲ್ಲಿ ಹಿರಿಯ ಅಧಿಕಾರಿಗಳಲ್ಲದೆ ನೂರಾರು ಪೇದೆಗಳೂ ಹಲವಾರು ದಿನಗಳ ಕಾಲ ಮೊಕ್ಕಾಂ ಹೂಡುವಂ ಜೊತೆಗೆ ಹತ್ತಾರು ಅಧಿಕಾರಿಗಳೂ ಬರಬೇಕಾಯಿತು.

ಅಧಿಕಾರಿಗಳ ಮತ್ತು ಪೊಲೀಸರ ಖರ್ಚುವೆಚ್ಚ ಪ್ರಯಾಣ ಭತ್ಯೆ ಊಟ-ತಿಂಡಿ ಉರಿದ ಪೆಟ್ರೋಲ್-ಡಿ ಖರ್ಚಿನ ಲೆಕ್ಕ ಹಾಕಿದರೆ ಅದೇ ಬರೋಬ್ಬರಿ ನಾಲ್ಕು ಕೋಟಿಯಷ್ಟಾಗುತ್ತದೆ.

ಇದು ಈ ನಾಡಿನ ಚೆಡ್ಡಿಗಳ ಪಡೆ ಮಾಡುವ ವಿವಿಧ ತರಹದ ಅನಾಹುತಗಳಿಗೆ ಒಂದು ಸಾಕ್ಷಿಯಾಗಿದೆ

ವಿಚಾರಣೆಯಲ್ಲಿ ನಡೆದ ಪ್ರಹಸನಗಳು

ತೀರ್ಥಹಳ್ಳಿ ಜನಕ್ಕೆ ಸಿಐಡಿ ತನಿಖೆ ಎಂದರೇನೆಂದೇ ಗೊತ್ತಿರಲಿಲ್ಲ. ...ದ್ದರಿಂದ ಪೊಲೀಸರ ವಿಚಾರಣೆ ವೈಖರಿಗೆ ಅವರೆಲ್ಲ ಎಷ್ಟು ...ಲುಕಿದ್ದಾರೆಂದರೆ ಅದೇ ಒಂದು ಕತೆಯಾಗುತ್ತದೆ.

ಒಂದೂವರೆ ಸಾವಿರ ಜನರ ಹೇಳಿಕೆ ನಡುವೆ, ಪ್ರಮುಖ ...ಕ್ಷಿ ಎಂದು ಪರಿಗಣಿಸಿದ ಹಲವರನ್ನು ಪೊಲೀಸರು ...ಷೇಷವೇ ವಿಚಾರಿಸಿದ್ದಾರೆ. ಆ ಪೈಕಿ ಕಮಲಮ್ಮ ಪ್ರಮುಖರು. ...ಂದಿತಾಳನ್ನು ಗುಡ್ಡದಿಂದ ಕರೆತಂದು ಆಕೆಯನ್ನು ತಂದಿಗೆ ...ಪ್ಪಿಸಿದ್ದು ಇದೇ ಕಮಲಮ್ಮ. ಈ ಕಾರಣಕ್ಕೇ ಕಮಲಮ್ಮ ...ಚಾರಣೆಗೆಂದು ಬಂದ ಹತ್ತಾರು ಪೊಲೀಸರ ಪ್ರಶ್ನೆಗಳಿಗೆ ...ರಿಯಾದರು. ಕಡೆಗೆ ಸಿಐಡಿ ಪೊಲೀಸರು ಹೋಗುವ ...ಹೊತ್ತಿಗೆ ಆಕೆ ಸೈರಣೆ ಹಾಳಾಗಿತ್ತು. ಆಕೆಯ ವಿಚಾರಣೆ ...ಡೆದದ್ದು ಹೀಗೆ:



ಕಮಲಮ್ಮ

ಅಧಿಕಾರಿ: ಏನಮ್ಮ, ನಂದಿತಾಳು ಕೂಗಿದಾಗ ನೀನು ...ಹೋಗಿ ಕರಕೊಂಡು ಬಂದ್ಯಾ?

ಕಮಲಮ್ಮ: ಅದನ್ನು ಎಷ್ಟು ಸಾರಿ ಹೇಳುವುದು? ...ಬಂದವರೆಲ್ಲ ಕೇಳುವುದೆ. ಮತ್ತೆ ಕೇಳಿದ್ದನ್ನೇ ಕೇಳುವುದು. ...ಬೇರೆ ಯಂತ ಕೇಳುವುದಿಲ್ಲ. ನನ್ನ ಬಳಿ ಮೊದಲೇ ...ಳಿಕೊಂಡು ಅದನ್ನ ಟೇಪ್ ಮಾಡಿಕೊಂಡು ಹೋಗಿ ನಿಮ್ಮ ಮೇಲಿನವರಿಗೆ ...ಕೇಳಿದ್ದರೆ ನನ್ನ ಕೆಲಸ ಹಾಳಾಗುವುದು ತಪ್ಪುತ್ತಿತ್ತಲ್ಲ? ನನಗೆ ಕೆಲಸವುಂಟು. ...ಕೂಲಿ ಮಾಡದಿದ್ದರೆ ನಮ್ಮ ಜೀವನ ಸಾಗುವುದಿಲ್ಲ. ಕಲ್ಯಾಣಮಂಟಪಕ್ಕೆ ...ಹೋಗಿ ಕೆಲಸ ಮಾಡುವಾಗ ನಿಮ್ಮ ಪೊಲೀಸರು ಬಂದು 'ಬಾರಮ್ಮ' ...ಅಂತ ಕರಿತರಲ್ಲಾ? ಜನ ಏನು ತಿಳಿದುಕೊಳ್ತಾರೆ ಗೊತ್ತುಂಟ? ಇನ್ನು ಮುಂದೆ ...ಯಾರಿಗೂ ಸಹಾಯ ಮಾಡಬಾರದು ಅಂತ ತೀರ್ಮಾನ ಮಾಡಿದ್ದೇನೆ. ...ಸಿಪಿ ಬಂದುಂಟು ಕರಿತರೆ ಬನ್ನಿ' ಅಂತ ಕರಿತಾರೆ. ಎಎಸಿಪಿ, ಡಿಎಸ್ಪಿ... ...ನಿಗೆ ಎಷ್ಟು ಜನವುಂಟು? ಅವರೆಲ್ಲಾ ಬಂದು ಕೇಳಿದ್ದನ್ನೆ ಕೇಳುವುದು. ...ಮಗೆ ಬ್ಯಾಡಿತ್ತು ಇದು. ಇನ್ನ ಮುಂದೆ ಯಾರಾದರೂ ರಸ್ತೆಯಲ್ಲಿ ಒದ್ದಾಡಿ ...ಯುತ್ತಾಯಿರಲಿ. ನಾವು ತಿರುಗಿ ನೋಡುವುದಿಲ್ಲ.

ಅಧಿಕಾರಿ: ನಾವು ತನಿಖೆ ಮಾಡಬೇಕಲ್ಲಮ್ಮಾ.

ಕಮಲಮ್ಮ: ಯಂತ ತನಿಖೆ? ಕೇಳಿದ್ದನ್ನೆ ಕೇಳುವುದು ತನಿಖೆಯಾ? ನಿಮ್ಮಲ್ಲಿ ಒಂದು ಟೇಪು ರಿಕಾರ್ಡ್ ಇಲ್ವವ? ಅದನ್ನ ತಂದು ರೆಕಾರ್ಡ್ ಮಾಡಿಕೊಂಡು ಹೋದರಾಯ್ತಲ್ಲ? ನಾವು ಎಲ್ಲರಿಗೂ ಹೇಳುವ ಕಷ್ಟ ತಪ್ಪದೆ...

ಎಂದು ಕಮಲಮ್ಮ ಸಿಟ್ಟು ಮಾಡಿಕೊಂಡಳು. ಅವಳ ಉತ್ತರಗಳನ್ನು ಕೇಳಿದ ಅಧಿಕಾರಿಗಳು ನಗು ತಡೆದುಕೊಂಡು ಮುಂದಿನ ಸಾಕ್ಷ್ಯ ಹುಡುಕುತ್ತ ಹೊರಟರು.

ಇನ್ನೊಂದು ಪ್ರಕರಣ ಆಸ್ಪತ್ರೆಯಲ್ಲಿ ನಡೆಯಿತು. ನಂದಿತಾ ಆಸ್ಪತ್ರೆಯಲ್ಲಿದ್ದಾಗ ಅಲ್ಲೊಬ್ಬ ವಿಶೇಷವಾಗಿ ನಂದಿತಾಳನ್ನು ಗಮನಿಸಿದ್ದನ್ನು ಅಲ್ಲಿನ ಸಿಸಿ ಕ್ಯಾಮರಾ ಸೆರೆ ಹಿಡಿದಿತ್ತು. ಆತ ಯಾರು ಎಂದು ತಲೆ ಕೆಡಿಸಿಕೊಂಡ ಪೊಲೀಸರು, ಕಡೆಗೂ ಅವನನ್ನು ಪತ್ತೆ ಹಚ್ಚಿ ಕರೆದುಕೊಂಡು ಬಂದು ವಿಚಾರಣೆಗೊಳಪಡಿಸಿದರು.

ಸಣ್ಣಪುಟ್ಟ ಕಬ್ಬಿಣದ ಕೆಲಸ ಮಾಡುವ ಕುಶಲಕರ್ಮಿಯಾದ ಆತನನ್ನು ತಮ್ಮ ಮುಂದೆ ಕೂಡಿಸಿಕೊಂಡ ಪೊಲೀಸರು "ನೀನು ಮಂಗಳವಾರ ಆಸ್ಪತ್ರೆಯಲ್ಲಿ ಬಹಳ ಹೊತ್ತಿನವರೆಗೂ ಇದ್ದು ಬಂದವರನ್ನೆಲ್ಲಾ ಸೂಕ್ಷ್ಮವಾಗಿ ಗಮನಿಸುತ್ತಿದ್ದೆ. ನಿಜ ಹೇಳು... ಈ ಕೇಸಿಗೂ ನಿನಗೂ ಏನು ಸಂಬಂಧ?" ಎಂದು ದಬಾಯಿಸಿದರು.

ಆತ ಕೊಟ್ಟ ಉತ್ತರ ಹೀಗಿತ್ತು:

"ಸಂಬಂಧ ಯಂತ ಇಲ್ಲಾ ಮಾರಾಯ್ರು. ಆ ದಿನ ನನಗೆ ರಜೆ ಇತ್ತು. ಆಸ್ಪತ್ರೆಯಲ್ಲಿ ಒಬ್ಬ ನರ್ಸ್ ಚಂದವುಂಟು. ಅವರನ್ನು ನೋಡಿಕೊಂಡು ಕೂರ್‍ತನೆ" ಎಂದು ಆರಾಮವಾಗಿ ಹೇಳಿದ.

ಕೂಡಲೇ ಸಿಟ್ಟಾದ ಪೊಲೀಸರು "ನರ್ಸ್ ನೋಡಕ್ಕೆ ಬರ್ತಿನಿ ಅಂತ ಪೊಲೀಸರ ಎದುರಿಗೇ, ಹೇಳ್ತಿಯಲ್ಲ. ಎಷ್ಟೋ ಧೈರ್ಯ ನಿನಗೆ? ಏನು ಕುಡಿದಿದ್ದಿಯಾ?" ಎಂದರು.

"ಪೊಲೀಸರು ಕರೆದಿದ್ದಾರೆ ಎಂದಮೇಲೆ ನಮಗೆ ಟೆನ್‌ಶನ್ ಆಗುವುದಿಲ್ಲವಾ? ಅದಕ್ಕೆ ಸ್ವಲ್ಪ ಹಾಕಿಕೊಂಡು ಬಂದದ್ದು. ನಾನು ಜಾಸ್ತಿ ಕುಡಿಯುವುದಿಲ್ಲ. ನೈಂಟಿ, ಸಿಕ್ಸ್‌ಟಿ ಇಷ್ಟರಲ್ಲೇ ದಿನ ಮಾಡುವುದು" ಎಂದು ಉತ್ತರಿಸುತ್ತ ಆ ವ್ಯಕ್ತಿ ಎಸ್ಪಿ ಪಕ್ಕದಲ್ಲೇ ಕೂರಲು ಹೋದ.

"ಹೇಯ್, ಅವರು ಎಸ್ಪಿ ಸಾಹೇಬ್ರು, ಈ ಕಡೆ ಬಾರೊ" ಎಂದು ಪೊಲೀಸರು ಗದರಿದರು.

"ಅವರು ಎಸ್ಪಿಯವರು ಎಂದು ಮೊದಲೆ ಹೇಳುವುದು ಬೇಡವಾ? ನನಗೆಂತ ಗೊತ್ತು? ಅದಕ್ಕೆ ಕೂರಲು ಹೋದದ್ದು" ಎಂದು ಹೇಳಿದ. ಅಷ್ಟರಲ್ಲಿ ಪೊಲೀಸರಿಗೆ ಇವನನ್ನು ಬಿಟ್ಟೋಡಿಸುವುದು ಒಳ್ಳೆಯದೆನಿಸಿ ಹಾಗೇ ಮಾಡಿದರು.

ತೀರ್ಥಹಳ್ಳಿಯಲ್ಲಿ ಇನ್ನೊಂದು ತಮಾಷೆ ನಡೆಯಿತು. ನಂದಿತಾಳ ಸಾವಿನ ಬಗ್ಗೆ ಮನಸೊ ಇಚ್ಛೆ ಬರೆದ ಸ್ಥಳೀಯ ಪತ್ರಕರ್ತನೊಬ್ಬ ನಂದಿತಾ ಶವವನ್ನು ಹೊರುವಾಗ "ಗೋವಿಂದಾ ಗೋವಿಂದಾ" ಎಂದು ಗಂಟಲು ಬಳಸಿ ಕಿರುಚಿದ್ದ. ಪರಿಣಾಮವಾಗಿ ಆತನ ಧ್ವನಿಪೆಟ್ಟಿಗೆ ಒಡೆದು ಹೋಗಿ ಮಾತನಾಡುವುದೇ ಕಷ್ಟವಾಯಿತು. ಆಗ ಆತ "ನನ್ನೊಡನೆ ಮಾತನಾಡಬೇಕಿದ್ದವರು ಎಸ್ಸೆಮ್ಮೆಸ್ ಮಾಡಿ ಅಥವಾ ವ್ಯಾಟ್ಸಾಪ್‌ಗೆ ಕಳುಹಿಸಿಕೊಡಿ" ಎಂಬ ಸಂದೇಶವನ್ನು ತನ್ನ ಮಿತ್ರರಿಗೆ ಕಳುಹಿಸಿದ್ದ!

ಕೆಲ ವರ್ಷಗಳ ಹಿಂದೆ ನಡೆಯಬೇಕಿದ್ದ ರೇಪು ಮತ್ತು ಬೇರಾವುದೋ ಸಾವನ್ನು ಸೇರಿಸಿ ಬರೆದು ರಗಳೆ ಮಾಡಿದ್ದ ಪತ್ರಕರ್ತನೊಬ್ಬನ ಕಿಡಿಗೇಡಿ ಅನಾಹುತವನ್ನ ವರದಿ ಮಾಡಲು ಈ ವರದಿಗಾರ ಸ್ಥಳೀಯ ಪೊಲೀಸ್ ಠಾಣೆಗೆ ಹೋಗಿದ್ದಾಗ ಅಲ್ಲೊಬ್ಬ ವ್ಯಕ್ತಿ ವಕ್ಕರಿಸಿದ್ದ. ಮಾಜಿ ಪ್ರಧಾನಿ ರಾಜೀವ್ ಗಾಂಧಿ ತನ್ನ ತಮ್ಮನನ್ನು ಮಾತ್ರವಲ್ಲ ತಾಯಿಯನ್ನೂ ಕೊಂದು ಪ್ರಧಾನಿಯಾಗಿದ್ದಾನೆಂದು ದೂರಿದ್ದ ವ್ಯಕ್ತಿ ಆತ.

ಈ ವರದಿಗಾರ ಲಂಕೇಶ್ ಪತ್ರಿಕೆಯವನೆಂದು ಗೊತ್ತಾಗಿದ್ದೇ ತಡ ಅರ್ಧಗಂಟೆ ಕೊರೆದಿದ್ದ. ಅಷ್ಟೇ ಅಲ್ಲ, ರಾಜೀವ್ ಗಾಂಧಿಯ ಬಗ್ಗೆ ಆತ ನೀಡಿದ್ದ ದೂರಿನ ಬಗ್ಗೆ ವರದಿ ಮಾಡಿದರೆ "ಮುಂದೊಮ್ಮೆ ನಾನು ಅಧಿಕಾರಕ್ಕೆ ಬಂದಾಗ ನಿನ್ನನ್ನು ಕೈಬಿಡಲ್ಲ" ಎಂದು ಭರವಸೆ ನೀಡಿದ್ದ. ಅದನ್ನು ಕೇಳಿ ಸುಸ್ತಾದ ನಾನು ಇನ್ಸ್‌ಪೆಕ್ಟರ್ ಕಡೆ ನೋಡಿದೆ. "ಇಡೀ ತೀರ್ಥಹಳ್ಳಿಯ ಅರ್ಧ ಭಾಗ ಇವನ ತರಹ ಮಾತಾಡುತ್ತೆ, ನಾವು ಹ್ಯಂಗೆ ಡ್ಯೂಟಿ ಮಾಡಬೇಕು, ನೀವೇ ಹೇಳಿ" ಎಂದ ಇನ್ಸ್‌ಪೆಕ್ಟರ್ ಅಸಹಾಯಕನಂತೆ ನನ್ನತ್ತ ನೋಡಿದ್ದು ನೆನಪಾಯಿತು.



ನಂದಿತಾಳ ತಂದೆ-ತಾಯಿ

...ಧ್ರುವೀಕರಿಸಿ ಕಿಮ್ಮನೆ ರತ್ನಾಕರ್ ಪ್ರಭಾವದಿಂದ ಇವರೆಲ್ಲಾ ...ಗೆ ವರ್ತಿಸಿದ್ದಾರೆಂದು ಪ್ರಚಾರ ಮಾಡಿದರು. ಇನ್ನ ...ಣಿಪಾಲದ ವೈದ್ಯರು ಆಕೆಯ ಮೇಲೆ ಯಾವುದೇ ...ರ್ಷನ್ನ ನಡೆದಿಲ್ಲ ಎಂದು ಕೊಟ್ಟ ವರದಿಯೂ ...ಧ್ಯಮದಲ್ಲಿ ಹೆಚ್ಚು ಪ್ರಚಾರಗೊಳ್ಳಲಿಲ್ಲ. ಪಬ್ಲಿಕ್ ...ಮಲ್ಲಿ ಕುಳಿತ ರಂಗನಾಥ್ ಕೂಡ "ನೋಡ್ತಾಯಿರಿ, ...ವನ್ನ ವೈದ್ಯರು ಹಾರ್ಟ್ ಅಟ್ಯಾಕ್ ಅಂತ ರಿಪೋರ್ಟು ...ತ್ತೆ" ಎಂದು ಬಿಟ್ಟ. ಸಂಬಂಧಪಟ್ಟ ವೈದ್ಯರ್‍ಯಾರಾದರೂ ... ವೃತ್ತಿಯ ಘನತೆ ಕಾರಣಕ್ಕೆ ಒಂದು ನೋಟಿಸ್ ...ವುದು ಒಳ್ಳೆಯದು. ಏಕೆಂದರೆ ಕೃತ್ಯದ ಆಪಾದನೆಗೊಳ ...ವರ ಅಭಿಪ್ರಾಯವನ್ನಾಗಲಿ, ಗೋಳನ್ನಾಗಲಿ, ತೋರುವ/ ...ಸುವ ಒಂದು ನೈತಿಕ ಜವಾಬ್ದಾರಿಯ ಕೆಲಸಕ್ಕೆ ...ಜಲಿಯಿಟ್ಟ ಮಾಧ್ಯಮಗಳು ಇವತ್ತು ನಮ್ಮ ನಡುವೆ ... ಅಪಾಯಕಾರಿಯಾಗಿ ವರ್ತಿಸುತ್ತಿವೆ.

...ಂದಿತಾ 'ರೇಪ'ನ್ನು ದಿನಗಟ್ಟಳೆ ತೋರಿದ ಟಿ.ವಿಗಳ, ...ಗಟ್ಟಲೆ ಬರೆದ ಪತ್ರಿಕೆಗಳ ಬಾಯಿಗಳನ್ನು ಮಣಿಪಾಲ್ ... ಒಂದು ಸಾಲಿನ 'ಅತ್ಯಾಚಾರ ನಡೆದಿಲ್ಲ' ಎಂಬ ...ರ್ಟ್ ಮುಚ್ಚಿಸಿತು. ಆದರೆ ಅದರಿಂದ ಚೆಡ್ಡಿಗಳ ...ನ್ನು ಮುಚ್ಚಿಸಲಾಗಿಲ್ಲ, ಏಕೆಂದರೆ ಅವರು ಯಾವುದೇ ...ನ್ನೂ ನೂರು ಬಾರಿ ಹೇಳುವವರೆಗೂ ತಮ್ಮ ಬಾಯಿ ... ಮಾಡುವುದಿಲ್ಲ, ತಾವು ಹೇಳಿದ ಸುಳ್ಳುಗಳನ್ನೇ ...ಮತ್ತೆ ಹೇಳುತ್ತಿರುತ್ತಾರೆ. ಇಲ್ಲಿನ ಬಿಜೆಪಿ ಮುಖಂಡನಿಗೆ ...ಈ ಸಾವೇ ಮರುಜೀವ ಕೊಟ್ಟಂತಾಗಿದೆ. ಏಕೆಂದರೆ, ... ರತ್ನಾಕರ್ ಗೋವಿಂದೇಗೌಡರ ನಂತರ ಶಿಕ್ಷಣ ...ಸಿನಲ್ಲಿ ಶುದ್ಧ ಹಸ್ತದ ಮಂತ್ರಿಯೆಂಬ ಗೌರವಕ್ಕೆ ...ತಾಗಿ ಜನಪ್ರಿಯತೆ ಗಳಿಸಿದ್ದಾರೆ. ಇದು ಭ್ರಷ್ಟ ...ರಿಗೆ ಸಹಿಸಲಾರದ ಸಂಗತಿಯಾಗಿದೆ. ಇಲ್ಲಿಯತನಕ ...ಗೆ ಕಳಂಕ ತರುವ ಯಾವುದೇ ಕೃತ್ಯ ಕ್ಷೇತ್ರದಲ್ಲಿ ...ದೆ ಇದ್ದಿದ್ದರಿಂದ ಅವರು ನಿರಾಶರಾಗಿದ್ದರು. ಆದರೆ ...ಸಿಕ ನಂದಿತಾಳ ಮೇಲೆ 'ಅತ್ಯಾಚಾರ' ಎಸಗಿದ ...ಗೆ ಆಕೆಯ ಶವ ಸಿಕ್ಕಿದ್ದೇ ತಡ ಹಸಿದ ನಾಯಿಗಳಿಗೆ ...ಸಿದ ಸಿಕ್ಕಂತಾಯಿತು.

ನಂದಿತಾಳ ಮನೆಗೆ ಹೋಗಿ ಭಾಷಣ ಬಿಗಿದ ಬಿಜೆಪಿಗಳು ಕೊಪ್ಪ, ಶೃಂಗೇರಿ, ಬೈಂದೂರು, ಕಾರ್ಕಳ ಇತ್ಯಾದಿ ಕಡೆ ಇರುವ ಭಜರಂಗಿ ರೆಜಿಮೆಂಟಗಳಿಗೆ ಫೋನ್ ಮಾಡಿ ಅಲ್ಲಿಂದ ಜನರನ್ನು ಕರೆಸಿಕೊಂಡರು. ಪರಿಣಾಮವಾಗಿ ತೀರ್ಥಹಳ್ಳಿ ಈವರೆಗೆ ಕಂಡರಿಯದಷ್ಟು ಜನ ಸೇರಿಸಿದರು. ಅವರೆಲ್ಲ ಸೇರಿ ಮುಸ್ಲಿಮರ ಅಂಗಡಿಗಳಿಗೆ ಕಲ್ಲು ಬೀರಿ, ದರ್ಗಾಗಳಿಗೆ ಬೆಂಕಿ ಹಚ್ಚಿದರು. ನಂದಿತಾ ಶವಸಂಸ್ಕಾರದಲ್ಲಿ ಕಿಮ್ಮನೆ ಭಾಗವಹಿಸದಿದ್ದರೆ ತೀರ್ಥಹಳ್ಳಿಗೆ ಬೆಂಕಿ ಹಚ್ಚಿ, ಆ ಮುಖಾಂತರ ನಾಡಿಗೆ ಬೆಂಕಿ ಹಚ್ಚುವ ಸಂಚನ್ನೂ ಬಿಜೆಪಿಗಳು ಹೆಣೆದಿದ್ದರು.

ಆದರೆ ಚೆಡ್ಡಿಗಳ ಅವಾಂತರವನ್ನು ಚೆನ್ನಾಗಿ ಅರಿತಿರುವ ಸರ್ಕಾರ ಇವರಿಂದಾಗುವ ಅನಾಹುತವನ್ನು ತಡೆಯಲು ಸಜ್ಜುಗೊಂಡಿತು. ಹಾವೇರಿ ಜಿಲ್ಲೆಯ ಎಸ್ಪಿ ಅವರನ್ನು ಶಿವಮೊಗ್ಗಕ್ಕೆ ನಿಯೋಜಿಸಿ, ಶಿವಮೊಗ್ಗದ ಎಸ್ಪಿ ತೀರ್ಥಹಳ್ಳಿಯಲ್ಲೇ ಕರ್ತವ್ಯ ನಿರ್ವಹಿಸುವಂತೆ ಮಾಡಿತು. ಇದು ಕೂಡ ಇತಿಹಾಸದಲ್ಲಿ ಮೊದಲ ಬಾರಿಗೆ ನಡೆದ ಘಟನೆ. ಒಕ್ಕಲಿಗರ ಕ್ಷೇತ್ರವಾದ ತೀರ್ಥಹಳ್ಳಿಯನ್ನು ತಹಬಂದಿಗೆ ತರಲು ಅದೇ ಜನಾಂಗದವರಾದ ಎಡಿಜಿಪಿ ಕಿಶೋರ್ ಚಂದ್ರ ಬಂದು ಕಾನೂನು ಸುವ್ಯವಸ್ಥೆಯನ್ನು ಕೈಗೆತ್ತಿಕೊಂಡರು. ಜಿಲ್ಲೆಯ ಉಸ್ತುವಾರಿಯನ್ನು ವಹಿಸಿಕೊಂಡ ಎಡಿಜಿಪಿ ಅಮರಪಾಂಡೆ (ಆಂತರಿಕ ಭದ್ರತಾ ಪಡೆಯ) ಪ್ರಾಥಮಿಕ ಸ್ಟೇಜಿನ ಎಲ್ಲ ಸ್ಥಿತಿಗಳನ್ನು ನೋಡಿ ಡೆತ್‌ನೋಟ್ ಪರಿಶೀಲಿಸಿದರು. ಪೂರ್ವವಲಯದ ಐಜಿ ಪರಶಿವಮೂರ್ತಿ ಕೂಡ ಬಂದು ಮೊಕ್ಕಾಂ ಹೂಡಿದರು. ದಕ್ಷ ಅಧಿಕಾರಿ ಕೌಶಲೇಂದ್ರ ಇಡೀ ಘಟನೆಯನ್ನು ವಿಕೋಪಕ್ಕೆ ಹೋಗದಂತೆ ನಿಭಾಯಿಸಿದರು. ಅಷ್ಟರಲ್ಲಿ ಸರಕಾರ ಘಟನೆಯ ತನಿಖೆಯನ್ನು ಸಿಐಡಿಗೆ ವಹಿಸಿತು. ಐಜಿಪಿ ಪ್ರಣಬ್ ಮೊಹಂತಿ, ಡಾ. ಡಿ.ಸಿ. ರಾಜಪ್ಪ, ರವೀಂದ್ರ ಗಡಾಧಿ, ಡಿಎಸ್ಪಿ ಸಿದ್ದೇಶ್ವರ, ಇನ್ಸ್‌ಪೆಕ್ಟರ್‌ಗಳಾದ ಐಯಣ್ಣ ರೆಡ್ಡಿ, ಬಾಲರಾಜ್, ಶಶಿಧರ್, ಸೋಮೇಂದ್ರ ಮುಖರ್ಜಿ ಸೇರಿದಂತೆ 30 ಅಧಿಕಾರಿಗಳಿದ್ದ ತನಿಖಾ ತಂಡ, 15 ದಿನಗಳಲ್ಲಿ 1500 ಜನರನ್ನು ವಿಚಾರಣೆಗೆ ಒಳಪಡಿಸಿತು. ಏನೇ ಮಾಡಿದರೂ ಪ್ರಕರಣದ ಜಾಡು ಆನಂದಗಿರಿ ಗುಡ್ಡಕ್ಕೆ ಬಂದು ನಿಲ್ಲುತ್ತಿದೆ. ನಂದಿತಾ ಡೆತ್‌ನೋಟಿನ ಮನಸ್ಥಿತಿಯನ್ನು ಮನಶಾಸ್ತ್ರಜ್ಞರೆ ಅಧ್ಯಯನ ಮಾಡಿ ಈ ಲೋಕ ಬಿಡುವ ಮುನ್ನ ಆಕೆ ಹೇಳಿರಬಹುದಾದ ಸತ್ಯಾಸತ್ಯತೆಯನ್ನ ನಿಖರಗೊಳಿಸಬೇಕಿದೆ. ಆದರೆ ಚೆಡ್ಡಿಗಳ ತಲೆಯಲ್ಲಿ ಅವರು ವಿರೋಧಿಸುವ ಧರ್ಮದ ಯಾರಾದರೂ ಅರೆಸ್ಟಾಗಬೇಕಿರುವುದರಿಂದ ತಮ್ಮ ಕಜ್ಜಿಯ ತಿಮಿರನ್ನು ಇನ್ನು ತುರಿಸುತ್ತಲೇ ಇದ್ದಾರೆ.

ಚೆಡ್ಡಿಗಳು ತೀರ್ಥಹಳ್ಳಿಯಂತಹ ಪ್ರಜ್ಞಾವಂತರ ನಾಡಿಗೆ ಬೆಂಕಿ ಹಚ್ಚಲು ಹವಣಿಸಿದ್ದರು. ಹೇಗಾದರೂ ಮಾಡಿ ಗಲಭೆ ಹತ್ತಿಕ್ಕಲು ಸರಕಾರ ಕೈಗೊಂಡ ಮುಂಜಾಗ್ರತಾ ಕ್ರಮದ ಫಲವಾಗಿ, ಕೆಎಸ್‌ಆರ್‌ಪಿಯ 20 ತುಕಡಿ ಬಂದು ಜಮೆಯಾಯಿತು. ಇದು ಕೂಡ ಜಿಲ್ಲೆ ತನ್ನ ಇತಿಹಾಸದಲ್ಲಿ ಹಿಂದೆಂದೂ ಕಂಡರಿಯದ ಜಮಾವಣೆ. ಹಿಂದೂ-ಮುಸ್ಲಿಂ ಗಲಭೆಗೂ ಇಷ್ಟು ರಿಸರ್ವ್ ಪೊಲೀಸ್ ಜಮಾವಣೆಗೊಂಡ ಉದಾಹರಣೆಯಿಲ್ಲ.

ಕುವೆಂಪು, ಗೋಪಾಲಗೌಡರು, ಅನಂತಮೂರ್ತಿ, ಹಾ.ಮಾ.ನಾ ಇಂತಹ ಜೀವಗಳ ಜೀವಸೆಲೆಯಾಗಿದ್ದ ತೀರ್ಥಹಳ್ಳಿಯಿಂದ ಕೊಳ್ಳಿ ದೆವ್ವಗಳನ್ನು ಓಡಿಸದಿದ್ದರೆ ಯಾರಿಗೂ ಉಳಿಗಾಲವಿಲ್ಲ.

● ವರದಿಗಾರ

ಪ್ರತ್ಯಕ್ಷದರ್ಶಿ ಪತ್ರಕರ್ತರು!!

ಜೆ.ರಾಜಶೇಖರ್ ಅವರ ಲೇಖನ 'ಸಚಿವರ ಆಣೆ ಪ್ರಮಾಣ: ಕಾನೂನಿನ ಆಳ್ವಿಕೆ' (ನವೆಂಬರ್ 11, 2014ರ ಸಂಚಿಕೆ) ತೀರ್ಥಹಳ್ಳಿಯಲ್ಲಿ ನಡೆದ ವಿದ್ಯಾರ್ಥಿನಿಯ ದುರ್ಮರಣವನ್ನು ನೆಪವಾಗಿರಿಸಿಕೊಂಡು ಸಂಘಪರಿವಾರ ನಡೆಸಿದ ಕೋಮು ರಾಜಕಾರಣದ ವಾಸ್ತವಕ್ಕೆ ಹಿಡಿದ ಕೈಗನ್ನಡಿಯಾಗಿತ್ತು.

ವಿದ್ಯಾರ್ಥಿನಿ ಸಾವು: ತೀರ್ಥಹಳ್ಳಿಯಲ್ಲಿ ಗಲಾಟೆ

ಪ್ರಜಾವಾಣಿ ವಾರ್ತೆ



2/11/2014


ಇಂದಿನ ಪತ್ರಕರ್ತರಿಗೆ ಹೋಲಿಸಿದರೆ ಹಿಂದಿನ ಬಹುತೇಕ ಪತ್ರಕರ್ತರು ದಡ್ಡರು. ಘಟನೆಗಳನ್ನು, ಅದರಲ್ಲೂ ಶಾಂತಿ ಸುವ್ಯವಸ್ಥೆಗೆ ಭಂಗ ತರಬಹುದಾದ ಸೂಕ್ಷ್ಮ ಘಟನೆಗಳನ್ನು ವರದಿ ಮಾಡುವಾಗ, 'ಹೇಳಲಾಗಿದೆ', 'ಆರೋಪಿಸಲಾಗಿದೆ', 'ವರದಿಯಾಗಿದೆ' ಎಂದೆಲ್ಲ ಅವರು ನಮೂದಿಸುತ್ತಿದ್ದರು. ಆದರೆ ಇಂದಿನ ಕೆಲ ಪತ್ರಕರ್ತರು ತುಂಬಾ ಬುದ್ಧಿವಂತರು. ಎಷ್ಟರಮಟ್ಟಿಗೆ ಎಂದರೆ, ಅವರು ಸರ್ವಾಂತರ್ಯಾಮಿಗಳಾಗಿದ್ದು ಅತೀಂದ್ರಿಯಶಕ್ತಿಯಿಂದಲೋ ಏನೋ ಏಕಕಾಲಕ್ಕೆ ಅನೇಕ ಕಡೆಗಳಲ್ಲಿ ನಡೆಯುವ ಘಟನೆಗಳನ್ನೂ ಕಣ್ಣಾರೆ ನೋಡಿ ವರದಿ ಮಾಡುತ್ತಿರುತ್ತಾರೆ! ಹಾಗಾಗಿ ಅವರಿಗೆ 'ಅಂತೆ' ಎಂದು ಹೇಳುವ ಅಗತ್ಯವೇ ಇರುವುದಿಲ್ಲ.

ಉದಾಹರಣೆಗೆ ನಮ್ಮ ಪ್ರಜಾವಾಣಿ ಪತ್ರಿಕೆಯಲ್ಲಿ ನವೆಂಬರ್ 2 ರಂದು ತೀರ್ಥಹಳ್ಳಿ ಘಟನೆಗೆ ಸಂಬಂಧಿಸಿದಂತೆ ಬಂದ ವರದಿಯನ್ನು ಗಮನಿಸಿ (ಇದೊಂದೇ ಅಲ್ಲ, ಇಂತಹ ನೂರಾರು ಉದಾಹರಣೆಗಳನ್ನು ಕೊಡಬಹುದು). 'ಅಕ್ಟೋಬರ್ 29 ರಂದು ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದ ವಿದ್ಯಾರ್ಥಿನಿ ನಂದಿತಾ (12)ಳನ್ನು ನಾಲ್ಕು ಮಂದಿ ಯುವಕರ ಗುಂಪು ಕಾರಿನಲ್ಲಿ ಅಪಹರಿಸಿತ್ತು, ತದನಂತರ ಪಟ್ಟಣದ ತುಂಗಾ ಕಾಲೇಜು ಬಳಿಯ ಬೆಟ್ಟದಲ್ಲಿ ವಿದ್ಯಾರ್ಥಿನಿಯನ್ನು ಬಿಟ್ಟುಹೋಗಿತ್ತು..' ಎಂದು ಆ ವರದಿ ಹೇಳುತ್ತದೆ! ಅಲ್ಲಿ ನಿಜವಾಗಿ ನಡೆದದ್ದು ಏನು ಎನ್ನುವುದನ್ನು ತಿಳಿಯಲು ಸಿಐಡಿ ತಂಡ ಯಾಕಾದರೂ ಹಗಲುರಾತ್ರಿ ಎನ್ನದೆ ಹರಸಾಹಸ ನಡೆಸುತ್ತಿದೆಯೋ ತಿಳಿಯದು. ಅಲ್ಲಿನ ಘಟನೆಗಳಿಗೆ ಸದರಿ ಪತ್ರಿಕಾ ವರದಿಗಾರರೇ ಪ್ರತ್ಯಕ್ಷ ಸಾಕ್ಷಿಯಾಗಿರುವಾಗ ಆತನಲ್ಲಿ ಕೇಳಿದರೆ ಸತ್ಯ ಎಂದೋ ಬಯಲುಗೊಂಡು ಆರೋಪಿಗಳೆಲ್ಲ ಈಗಾಗಲೆ ಕಂಬಿಯ ಹಿಂದೆ ಇರುತ್ತಿದ್ದರಲ್ಲವೇ?

ಸದರಿ ಪತ್ರಿಕೆಯ ಸಂಪಾದಕರು ವೇದಿಕೆ ಸಿಕ್ಕಾಗಲೆಲ್ಲ 'ಜವಾಬ್ದಾರಿಯುತ ಪತ್ರಿಕೋದ್ಯಮ' ಹೇಗಿರಬೇಕು ಎಂದು ಕಲಿಸಿಕೊಡುತ್ತಲೇ ಇರುತ್ತಾರೆ. ಆದರೆ ಅವರ ಪತ್ರಿಕೆ ಈ ಕರೆಯನ್ನು ಒಂದಿನಿತೂ ಪಾಲಿಸದಿರುವ ವಿಪರ್ಯಾಸದ ಬಗ್ಗೆ ಏನು ಹೇಳೋಣ?

- ಶ್ರೀನಿವಾಸ ಕಾರ್ಕಳ, ಮಂಗಳೂರು

ಚಿತ್ತಾಪುರ ಕಂಬಳೇಶ್ವರ ಮಠದಲ್ಲಿ ಸ್ವಾಮಿಯ ಗುದುಮುರುಗಿ


ಸೋಮಶೇಖರ ಸ್ವಾಮಿ ಕಂಬಳೇಶ್ವರ ಮಠ

ಒಂದು ಕಾಲದಲ್ಲಿ ಮಠಗಳು ಮಠಾಧಿಪತಿಗಳು ಸಮಾಜಮುಖಿಯಾಗಿ ತಮ್ಮನ್ನು ತಾವು ಸಮರ್ಪಿಸಿಕೊಂಡು ಬೆಳಕಾಗುತ್ತಿದ್ದರು. ಹಳ್ಳಿಗೆ ಏಕರಾತ್ರಿ ಪಟ್ಟಣಕ್ಕೆ ಪಂಚರಾತ್ರಿ ಎಂದು ತಿರುಗಾಡಿಕೊಂಡು ಬದುಕಿಬಾಳಿ ಹೋದವರ ನಾಡಿನಲ್ಲಿ ಈಗ ಕೆಂಭೂತಗಳು ಕುಣಿ ಕುಣಿದಾಡುತ್ತಿವೆ. ಯಾವಾಗ ಈ ನಾಡಿನಲ್ಲಿ ಶಿವಯೋಗಿ ಮಂದಿರ ಎಂಬ ಸ್ವಾಮೀಜಿಗಳ ಉತ್ಪಾದನೆಯ ಟ್ರೇಡಿಂಗ್ ಕಂಪನಿ ಆರಂಭವಾಯಿತೋ ಅಂದಿನಿಂದ ಜಾತಿ ಜಂಗಮರೆ ಮಠಗಳಿಗೆ ಪೀಠಾಧಿಪತಿಯಾಗಬೇಕೆಂಬ ಅಲಿಖಿತ ನಿಯಮವೇ ಜಾರಿಗೆ ಬಂತು. ಇದಕ್ಕೂ ಪೂರ್ವದಲ್ಲಿ ಬಸವಾದಿ ಶರಣರ ಆಶಯದಂತೆ ಬಹುತೇಕ ಮಠಗಳಿಗೆ ಯೋಗ್ಯ ವ್ಯಕ್ತಿಯನ್ನು (ಆತ ಹುಟ್ಟಿದ ಜಾತಿಯನ್ನು ಪರಿಗಣಿಸದೆ) ಹುಡುಕಾಡಿ ನೇಮಿಸುತ್ತಿದ್ದರು. ಆದರೆ ಶಿವಯೋಗಿ ಮಂದಿರದ ವ್ಯಾಪಾರಿ ಕೇಂದ್ರದಲ್ಲಿ ಹುಟ್ಟುತ್ತಿರುವ ಇಂದಿನ ಬಹುತೇಕ ಮಠಾಧೀಶರು ಧರ್ಮವನ್ನು ವ್ಯಾಪಾರವನ್ನಾಗಿ, ಭಕ್ತರನ್ನು ಗ್ರಾಹಕರನ್ನಾಗಿಯೆ ಗಮನದಲ್ಲಿಟ್ಟುಕೊಂಡು ತಮ್ಮ ಐಸತ್ತಿಗೆ ತಕ್ಕಷ್ಟನ್ನು ಗೆಬರಿಕೊಳ್ಳುತ್ತಿದ್ದಾರೆ. ತಮಾಷೆಯ ಸಂಗತಿಯೆಂದರೆ ಲಿಂಗಾಯತರ ವಿರಕ್ತ ಮಠಗಳಿಗೆ ಹಾಗೂ ಗುರು ಪರಂಪರೆಯನ್ನು ಸಾರುವ ಮಠಗಳಿಗೆ ನೇಮಕವಾಗುವವರಿಬ್ಬರೂ ಮೂಲತಃ ಜಂಗಮರಾಗಿರುತ್ತಾರೆ.


ಜಂಗಮ ಎಂಬ ತತ್ವದ ಮೂಲ ಪರಿಕಲ್ಪನೆಯನ್ನು ಲಿಂಗಾಯತ ಸಮಾಜ ಸಂಪೂರ್ಣ ಮರೆತಿರುವುದರಿಂದ ಈಗ ಜಂಗಮ ಎಂಬುದು ಒಂದು ಜಾತಿಯಾಗಿದೆ. ಹೀಗಾಗಿ ಆ ಜಾತಿಯಲ್ಲಿ ಹುಟ್ಟಿದರೆ ಸಾಕು ಆತ ಹೀನಕೃತ್ಯಗಳನ್ನು ಮಾಡಿದರೂ ಅದನ್ನು ಹೊಟ್ಟೆಯಲ್ಲಿ ಹಾಕಿಕೊಳ್ಳಬೇಕೆಂದು ದೊ(ದ)ಡ್ಡ ಗುಣ ರಾಜ್ಯದ ಲಿಂಗಾಯತರದ್ದು. ಇದರಿಂದಾಗಿ ಇಂದಿನ ಬಹುತೇಕ ಮಠಗಳಲ್ಲಿ ಮಠಾಧೀಶರ ಹಾಸಿಗೆಯ ಗುದುಮುರುಗಿಗಳು ಗೊತ್ತಾಗಿದ್ದರೂ ಯಾರೂ ತುಟಿ ಎರಡು ಮಾಡುವುದಿಲ್ಲ. ನೋಡಿದವರ ಪಾಪ. ಆಡಿದವರ ಬಾಯಿಯಲ್ಲಿ ಎಂದೆನ್ನುವಂತೆ ಗಪ್‌ಚುಪ್ ಕುಳಿತಿರುತ್ತಾರೆ. ಯಾವಾಗ ಅವರ ಹೂರಣಗಿ ಹೆಚ್ಚಾಗುತ್ತದೋ ಆಗ ಮಾತ್ರ ಲಿಂಗಾಯತರು ಮಠದ ವಿರುದ್ಧ ತಿರುಗಿ ಬೀಳುತ್ತಾರೆ.

ಇಂಥ ಸ್ಥಿತಿಯಲ್ಲಿ ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲೂಕಿನ ಕಂಬಳೇಶ್ವರ ಮಠದ ವಿರುದ್ಧ ಸದ್ದು ಹೊಡೆದು ನಿಂತಿದ್ದಾರೆ. ರವೀಂದ್ರ ಸಜ್ಜನಶೆಟ್ಟಿಯೆಂಬ ಪ್ರಗತಿಪರ ಚಿಂತಕ ಮುಂದೆ ನಿಂತು ಸ್ವಾಮಿಯ ವಿರುದ್ಧ ಸಾಮಾಜಿಕ ಪ್ರತಿಭಟನೆಗೆ ಮುಂದಾಗದೆ ಹೋಗಿದ್ದರೆ ಸೋಮಶೇಖರನ ಬಾರಾಬಾನಗಡಿ ಕಾಲದ ಕತ್ತಲೆಯಲ್ಲಿ ಕರಗಿಹೋಗುತ್ತಿತ್ತು. ಮಠದ ಮಂಚದಲ್ಲಿ ಮೈಚೆಲ್ಲಿ ನಲುಗಿ ಹೋದವರ ನಿಟ್ಟುಸಿರುಗಳಲ್ಲಿ (ಕೇವಲ ಹನ್ನೊಂದು ವರ್ಷದ ಬಾಲೆ) ಭಾಗ್ಯಶ್ರೀಯ ಭಾಗ್ಯವೂ ಸೇರಿಹೋಗುತ್ತಿತ್ತು. ಹಾಗೆ ನೋಡಿದರೆ ಚಿತ್ತಾಪುರದ ಈ ಮಠವನ್ನು ಮಠ ಎಂದು ಕರೆಯುವುದಕ್ಕೂ ಹೇಸಿಗೆಯಾಗುತ್ತದೆ.

ಮೇಲ್ನೋಟಕ್ಕೆ ಮಠವೆಂದು ಕಂಡುಬಂದರೂ ಅಲ್ಲಿ ಸ್ವಾಮಿಯ ಅಣ್ಣ ಶಿವನಂದಯ್ಯ ಹಾಗೂ ತಮ್ಮ ರುದ್ರಯ್ಯನ ರುದ್ರ ನರ್ತನವೇ ನಡೆದಿರುತ್ತದೆ. ಈ ಸಹೋದರರು ಮದುವೆಯಾಗಿ ಮಕ್ಕಳುಮರಿಗಳೊಂದಿಗೆ ಇದೆ ಮಠದಲ್ಲಿ ಒಕ್ಕರಿಸಿಕೊಂಡಿವೆ. ಈ ಇಬ್ಬರು ಸಹೋದರರ ಮದುವೆಯಾಗಿಯೂ ನಡೆಸಿರುವ ಪಲ್ಲಂಗ ಪುರಾಣಗಳ ಸಂಪುಟಗಳೇ ಇವೆ ಎಂದು ಜನ ನಿಡುಸುಯ್ಯುತ್ತಾರೆ. ಇವರ ತಂದೆ ಗುರುಲಿಂಗಯ್ಯ ಸ್ವಾಮಿಯ ಕಥೆಗಳೂ ಪೌರಾಣಿಕ ಕತೆಯ ಯಯಾತಿಯನ್ನು ನೆನಪಿಸುತ್ತವೆ. ದ.ಕನ್ನಡ ಜಿಲ್ಲೆಯ ಶಿರ್ಸಿಯಿಂದ ಇಲ್ಲಿಗೆ ನರ್ಸ್ ಕೆಲಸ ಮಾಡಲು ಬಂದಿದ್ದ ಸುಶೀಲಾಬಾಯಿ ನಾಯಕಳು ಗುರುಲಿಂಗಯ್ಯನ ತೋಳತೆಕ್ಕೆಯಲ್ಲಿ ಕರಗಿಹೋದ ಸಂಗತಿಗಳು ಜನರ ನಾಲಿಗೆಯ ಮೇಲೆ ನಲಿ ನಲಿದಾಡುತ್ತವೆ.

ಇಂತಪ್ಪ ಚಾರಿತ್ರಿಕ ಇತಿಹಾಸಗಳುಳ್ಳ ಮೂಲಗಳಿಂದ ಸೋಮಶೇಖರಯ್ಯ ಕಂಬಳೇಶ್ವರ ಮಠಕ್ಕೆ ಪೀಠಾಧಿಪತಿಯಾಗಿ ಬಂದಾಗ ಏನೇನು ನಡೆಯಬೇಕೋ ಅವೆಲ್ಲ ಕಂಬಳೇಶ್ವರ ಮಠದಲ್ಲಿ ಯಥೋಚಿತವಾಗಿ ನೆರವೇರಿವೆ. ಸದರಿ ಪುಣ್ಯಾತ್ಮ ಕಂಬಳೇಶ್ವರ ಪೀಠಕ್ಕೆ ವಕ್ಕರಿಸಿದಂದಿನಿಂದ ಇಂದಿನವರೆಗೂ ಒಂದಾನೊಂದು ಹೇಳಿಕೊಳ್ಳುವಂಥ ಧಾರ್ಮಿಕ ಕಾರ್ಯಕ್ರಮಗಳು ಜರುಗಿಲ್ಲ. ಮಠದಲ್ಲಿಯೆ ಕಟಿಂಗ್ ಮಶೀನ್, ಹಿಟ್ಟಿನ ಗಿರಣಿ, ಫೈನಾನ್ಸ್ ಎಲ್ಲವೂ ನೋಡಿದರೆ ಇದೊಂದು ಮಠ ಅನ್ನೋದಕ್ಕಿಂತ ವ್ಯಾಪಾರಿ ಕೇಂದ್ರವೆಂದು ಯಾರಾದರೂ ಹೇಳಬಹುದು. ಸದಾ ತೆರೆದುಕೊಂಡು ಭಕ್ತರ ಬರವೆಗೆ ಪ್ರಾಣ ಜೀವಾಳವಯ್ಯ ಎಂದು ಕರೆಯಬೇಕಾದ ಮಠ ಸದಾ ಬಳಿಗಳ ಸದ್ದಿನಿಂದ ಗಿಜಿಗುಡುತ್ತಿರುತ್ತದೆ. ಚಿತ್ತಾಪುರದ ಬಹುತೇಕ ಲಿಂಗಾಯತರು ಮಠಕ್ಕೆ ಹೋಗದೆ ತಮ್ಮ ಅಸಹಕಾರವನ್ನು ಸೂಚಿಸಿದ್ದಾರೆ. ಆದರೂ ಕಾವಿಯನ್ನು ಕಂಡರೆ ಹೆದರುವ, ಜಂಗಮನಿಗೆ ನಾವು ಏನೂ ಅನ್ನಬಾರದು ಎಂಬ ಹೆದರಿಕೆಯಿಂದ ಎಲ್ಲಾ ಕಣ್ಣಾರೆ ನೋಡಿಯೂ ಗಪ್‌ಚುಪ್ ಕುಳಿತಿದ್ದಾರೆ.


ಲಿಂಗಾಯತರ ಮೂಲ ದೌರ್ಬಲ್ಯವನ್ನು ಸರಿಯಾಗಿ ಗುರುತಿಸಿಕೊಂಡಿರುವ ಮಠದೊಳಗಿನ ಅಯ್ಯಪ್ಪಗಳು ತಮ್ಮ ಐಸತ್ತಿಗೆ ತಕ್ಕಂತೆ ಸೋಮಶೇಖರನನ್ನು ಎದುರಿಟ್ಟುಕೊಂಡು ಆಸ್ತಿ ಮಾಡುತ್ತಿದ್ದಾರೆ. ಮಠದ ಅಕ್ಕಪಕ್ಕದ ಜಾಗಗಳು ಗುಳುಂ ಆಗುತ್ತಿವೆ. ನಾಗಣ್ಣ ಮಾಸ್ತರ್ ಬುಳ್ಳಾ ಅವರ ಹೊಲವೂ ಇವರ ಬಾರಿ ಮುಳ್ಳಿನ ಕಣ್ಣಿಗೆ ಸಿಕ್ಕು ಪೇಚಾಡುತ್ತಿದೆ. ಕಂಬಳೇಶ್ವರ ಸಹಕಾರಿ ಸಂಘ ಮುಳುಗಿ ಕಾಲವಾಗಿದೆ. ಇದರಿಂದ ಸಹಜವಾಗಿ ನೂರು ಎಕರೆಗೂ ಮಿಕ್ಕಿ ಹೊಲಗಳು ಮೂಲ ಆಸ್ತಿಯಾಗಿ ಮಾರ್ಪಟ್ಟಿವೆ. ಚಿತ್ತಾಪುರದ ಮುಖ್ಯ ರಸ್ತೆಗಳಲ್ಲಿ ಮೂರ್‍ನಾಲ್ಕು ಮಳಿಗೆಗಳೂ ಇವೆ. ಇವೆಲ್ಲ ಕಂಬಳೇಶ್ವರ ಮಠದ ಆಶೀರ್ವಾದ ಫಲವೆನ್ನದೆ ವಿಧಿಯಿಲ್ಲ.


ಅತ್ಯಾಚಾ... ಒಳಗಾಗಿರು... ಹುಡುಗಿ... ಅಜ್ಜಿ ಮಹದೇ...

ಅಕ್ಟೋಬರ್ 28 ರಂದು ಭಾಗ್ಯಶ್ರೀಯ ಘ... ಅಚಾನಕ್ ಆಗಿ ನಡೆದುದೇನಲ್ಲ. ಅದರಲ್ಲಿ ಇ... ವಿಶೇಷವೇನೂ ಇಲ್ಲ. ಸಹಜವಾಗಿ ಇವೆಲ್ಲ ... ಮಾಮೂಲಿ. ಆದರೆ ಸದರಿ ಹುಡುಗಿ ಕೇವಲ ... ವರ್ಷಗಳ ಬಾಲೆಯಾಗಿದ್ದರಿಂದ ಇವು ಊರತುಂಬ ರೆಕ್ಕೆ... ಕಟ್ಟಿಕೊಂಡು ಓಡಾಡಿದವು. ಕೊನೆಗೂ ಬೇಸತ್ತ ರವೀ... ಸಜ್ಜನಶೆಟ್ಟಿ ಹಾಗೂ ಪ್ರಜ್ಞಾವಂತ ನಾಗರಿಕರು ಕೈಚೋ... ಚೈಲ್ಡ್ ಲೈನ್ ಎಂಬ ಸರಕಾರದ ಸಹಾಯವಾಣಿಗೆ ದೂ... ನೀಡಿದ್ದಾರೆ. ಇದರಿಂದ ಸಿ.ಡಿ.ಪಿ.ಓ. ಆರ್.ಪಿ. ತು... ಎಂಬ ಅಧಿಕಾರಿಣಿ ತನಿಖೆಗೆಂದು ಮಠಕ್ಕೆ ಹೋ... ಸ್ವಾಮಿ ಸಿ.ಡಿ.ಪಿ.ಓ. ಅವರಿಗೇ ಗದರಿಸಿ ಮಾತಾಡಿದ... 'ಹುಡುಗಿಯ ತಂದೆತಾಯಿಗಳಾಗಲಿ, ಹುಡುಗಿಯಾ... ಕಂಪ್ಲೇಟ್ ಕೊಡದೆ ತಾವು ಹೇಗೆ ನನ್ನನ್ನು ತನಿ... ಮಾಡುತ್ತೀರಿ?' ಎಂದು ಪ್ರಶ್ನಿಸಿದ್ದಾನೆ. ಮಠದೊಳ... ಬೆಕ್ಕು ಇಲಿಯ ಕಂಡು ಪುಟನೆಗೆದಂತಾಯಿತ್ತು ಎಂದೆನ್ನುವ...


ರವಿಂದ್ರ ಸಜ್ಜನಶೆಟ್ಟಿ ನೇತೃತ್ವದಲ್ಲಿ ಪ್ರತಿಭಟನೆ

ದಾವಣಗೆರೆ: ಶಾಮನೂರು ಮಂತ್ರಿ ಸೀಟಿಗೆ ಶಿವಮೂರ್ತಿ ಕರ್ಚೀಫು



ಇದನ್ನು ಶಾಮನೂರ ಶಿವಶಂಕರಪ್ಪನವರ ಮುಸ್ಸಂಜೆ ಕಥಾ ಪ್ರಸಂಗ ಎನ್ನಬೇಕೊ ಅಥವಾ ಮಾಯಕೊಂಡದ ಶಾಸಕ ಶಿವಮೂರ್ತಿ ನಾಯ್ಕನ ಅಧಿಕ ಪ್ರಸಂಗ ಎನ್ನಬೇಕೊ, ಗೊತ್ತಾಗುತ್ತಿಲ್ಲ; ಒಟ್ಟಿನಲ್ಲಿ ದಾವಣಗೆರೆಯ ರಾಜಕಾರಣದಲ್ಲಿ ಈ ಪ್ರಸಂಗ ಒಂದು ಪುಟ್ಟ ಸಂಚಲನ ಹುಟ್ಟುಹಾಕಿರೋದು ಮಾತ್ರ ದಿಟ. ಸಿದ್ದು ಸಂಪುಟದಲ್ಲಿ ತೋಟಗಾರಿಕೆ ಮಂತ್ರಿಯಾದ ದಿನದಿಂದಲೂ ಶಿವಶಂಕರಪ್ಪನವರ ಕಾರ್ಯ ವೈಖರಿಯಲ್ಲಿ 'ಅಧಿಕಾರ ವೈರಾಗ್ಯ'ವೇ ಎದ್ದು ಕಾಣುತ್ತಿದೆ. ಇದಕ್ಕೆ ಅವರ ವಯೋವೃದ್ಧತೆಯೂ ಕಾರಣವಿದ್ದಿರಬಹುದು. ಅಸಲಿಗೆ ಚುನಾವಣೆ ಸಮಯದಲ್ಲಿ ಮನೆಮನೆಗೆ ಹೋಗಿ ಮತ ಕೇಳಲಾಗದಷ್ಟು ಕೃಶರಾಗಿದ್ದ ಶಿವಶಂಕರಪ್ಪನವರನ್ನು ಗೆಲ್ಲಿಸಿದ್ದೇ ಅವರ ಹಳೆಯ ವರ್ಚಸ್ಸು ಮತ್ತು ಮಗ ಎಸ್.ಎಸ್. ಮಲ್ಲಿಕಾರ್ಜುನ್‌ರ ಹುಮ್ಮಸ್ಸು. ಒಂದು ಹಂತದಲ್ಲಿ ಮುಖ್ಯಮಂತ್ರಿ ಹುದ್ದೆ ಇಲ್ಲವೇ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಗಾದಿಗೆ ಕಣ್ಣಿಟ್ಟಿದ್ದ ಈ 'ಕೆಪಿಸಿಸಿ ಕುಬೇರ'ನಿಗೆ ತೀರಾ ಭ್ರಮನಿರಸನ ಮಾಡಬಾರದೆನ್ನುವ ಕಾರಣಕ್ಕೆ ಮಂತ್ರಿ ಸ್ಥಾನವನ್ನು ಹೈಕಮಾಂಡ್ ದಯಪಾಲಿಸಿತ್ತು. ಆದರೆ ನಿರ್ದಾಕ್ಷಿಣ್ಯವಾಗಿ ಜಾರುತ್ತಿರುವ ವಯಸ್ಸು ಮಂತ್ರಿಗಿರಿಯನ್ನು ಬಹಳ ದಿವಸ ಉಳಿಸುವಂತೆ ಕಾಣುತ್ತಿಲ್ಲ. ಹೊಸಬರಿಗೆ ಅವಕಾಶ ನೀಡಲು ಅನುವಾಗುವಂತೆ ಅದಕ್ಷ ಮಂತ್ರಿಗಳಿಗೆ ಗೇಟ್‌ಪಾಸ್ ಕೊಟ್ಟು ಸಚಿವ ಸಂಪುಟ ವಿಸ್ತರಣೆ ಮಾಡಬೇಕೆನ್ನುವ ಕೂಗು ಕೈ ಪಾಳಯದಲ್ಲಿ ಜೋರಾಗುತ್ತಿರುವ ಬೆನ್ನಲ್ಲೇ ಶಾಮನೂರರ ಕುರ್ಚಿ ಅಲ್ಲಾಡಲು ಶುರು ಮಾಡಿದೆ. 'ಅದಕ್ಷರ ಪಟ್ಟಿ'ಯಲ್ಲಿ ಶಾಮನೂರರ ಹೆಸರೇ ಮೊದಲ ಸ್ಥಾನದಲ್ಲಿದೆ ಎನ್ನುವ ಗುಲ್ಲು ಎದ್ದಿದ್ದೇ ತಡ ಮಾಯಕೊಂಡದ ಶಾಸಕ ಶಿವಮೂರ್ತಿ ನಾಯ್ಕ, ಶಿವಶಂಕರಪ್ಪನ ಮಂತ್ರಿ ಕುರ್ಚಿಗೆ ಕರ್ಚೀಫು ಹಾಕಿ ಸೀಟ್ ರಿಸರ್ವ್ ಮಾಡಿಕೊಳ್ಳುವ ಹುನ್ನಾರದಲ್ಲಿದ್ದಾನೆ. ತನ್ನ ಖಾಸಗಿ ಶಾಲೆಗಳ ಏಳ್ಗೆಗಾಗಿ ಸರ್ಕಾರಿ ಶಾಲೆಗಳಿಗೇ ಕಂಟಕವಾದ ಶಿವಮೂರ್ತಿ ನಾಯ್ಕ ತಾನೇ ಮುಂದಿನ ಶಿಕ್ಷಣ ಮಂತ್ರಿ ಅಂತ ಒದರಾಡುತ್ತಿರೋದನ್ನು ನೋಡಿ ದಾವಣಗೆರೆಯ ಜನ ಮುಸಿಮುಸಿ ನಗಾಡುತ್ತಿದ್ದಾರೆ.

ಕಳೆಗುಂದಿದ ಶಾಮನೂರು

ಶಾಮನೂರು ಧಣಿಯ ರಾಜಕೀಯ ವರ್ಚಸ್ಸು ಇಳಿಮುಖವಾಗುತ್ತಿದೆಯಾ? 2013ರ ವಿಧಾನಸಭಾ ಚುನಾವಣೆಯ ಪೂರ್ವದಿಂದಲೂ ಇಂಥದೊಂದು ಪ್ರಶ್ನೆ ಕಾಡುತ್ತಲೇ ಇತ್ತು. ಒಂದುಕಡೆ, 80 ದಾಟಿದ ಶಿವಶಂಕರಪ್ಪರನ್ನು ವಯೋಸಹಜ ಅಸಹಾಯಕತೆ ಬಾಧಿಸುತ್ತಿದ್ದರೆ ಮತ್ತೊಂದೆಡೆ ಧರ್ಮಪತ್ನಿ ಪಾರ್ವತಮ್ಮನ ಅಗಲಿಕೆ ಅವರನ್ನು ಹೈರಾಣಾಗಿಸಿದೆ. ದಾವಣಗೆರೆ ಮೇಲಿನ ಅಧಿಪತ್ಯವನ್ನು ಮತ್ತೊಬ್ಬರ ಮಡಿಲಿಗೆ ಹಾಕಲಿಕ್ಕೆ ಇಷ್ಟವಿಲ್ಲದ ಶಾಮನೂರು ತಮ್ಮ ಮಕ್ಕಳ, ಮುಖ್ಯವಾಗಿ ಎಸ್.ಎಸ್. ಮಲ್ಲಿಕಾರ್ಜುನ್‌ಗೆ ಭದ್ರ ನೆಲೆ ಒದಗಿಸಿಕೊಡಬೇಕೆಂಬ ಕಾರಣಕ್ಕೆ ರಾಜಕಾರಣದಲ್ಲಿ ಸಕ್ರಿಯವಾಗಿ ಇರುವವರಂತೆ ಕಷ್ಟಪಟ್ಟು ನಟಿಸುತ್ತಿದ್ದಾರೆ. ಇಷ್ಟು ದಿನ ಜಿಲ್ಲಾ ಕಾಂಗ್ರೆಸ್ ಪಾಲಿಗೆ ಅದ್ವಿತೀಯ ನಾಯಕನಂತೆ ಮೆರೆದಾಡಿದ್ದ ಶಿವಶಂಕರಪ್ಪಗೆ ಮೊದಲ ಆಘಾತ ಎದುರಾದದ್ದೇ 2013ರ ಎಲೆಕ್ಷನ್‌ಗೆ ಟಿಕೆಟ್ ಗಿಟ್ಟಿಸುವ ವಿಚಾರದಲ್ಲಿ. ದಾವಣಗೆರೆ ದಕ್ಷಿಣ ಕ್ಷೇತ್ರದಿಂದ ಕಣಕ್ಕಿಳಿಯಲು ಶಿವಶಂಕರಪ್ಪ ಟಿಕೆಟ್ ಕೇಳುವ ಸಮಯಕ್ಕೆ ಸರಿಯಾಗಿ ಮುಸ್ಲಿಂ ಲೀಡರ್ ಸೈಯದ್ ಸೈಫುಲ್ಲಾ ಭರ್ಜರಿಯಾಗಿಯೇ ಪೈಪೋಟಿ ಕೊಟ್ಟಿದ್ದ. ಅಂತಿಮವಾಗಿ ಟಿಕೆಟ್ ಶಾಮನೂರಿಗೆ ಸಿಕ್ಕಿತಾದರೂ, ಒಂದು ಕಾಲಕ್ಕೆ ಯಾರ್‍ಯಾರನ್ನು ಯಾವ್ಯಾವ ಕ್ಷೇತ್ರದಿಂದ ಕಣಕ್ಕಿಳಿಸಬೇಕೆಂದು ಫರ್ಮಾನು ಹೊರಡಿಸುತ್ತಿದ್ದ ದಾವಣಗೆರೆ ಧಣಿ ಸ್ವತಃ ತನಗೇ ಟಿಕೆಟ್ ಪಡೆದುಕೊಳ್ಳಲು ಹೈಕಮಾಂಡ್ ಮುಂದೆ ಸರ್ಕಸ್ ಮಾಡಬೇಕಾಗಿ ಬಂದಿತ್ತು. ಟಿಕೆಟ್ ವಂಚಿತ ಸೈಫುಲ್ಲಾ ಕೈ ಪಾರ್ಟಿಗೆ ಗುಡ್‌ಬೈ ಹೇಳಿ ಜೆಡಿಎಸ್ ಸೇರಿದನಾದರು ಅದರಿಂದ ಶಿವಶಂಕರಪ್ಪನವರಿಗೆ ಹೇಳಿಕೊಳ್ಳುವಂತ ಲುಕ್ಸಾನೇನು ಆಗಲಿಲ್ಲ.


ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೇರುವುದು ಖಾತ್ರಿಯಾಗುತ್ತಿದ್ದಂತೆ 'ವೀರಶೈವ' ಟ್ರಂಪ್‌ಕಾರ್ಡ್ ಹಿಡಿದು ಮುಖ್ಯಮಂತ್ರಿ ಗಾದಿಗೆ ಶಾಮನೂರು ಪ್ರಯತ್ನಿಸಿದರಾದರು ಕಡೆಗೆ ಮಂತ್ರಿ ಸ್ಥಾನ ಸಿಕ್ಕಿದ್ದೇ ಪುಣ್ಯ ಎನ್ನುವಂತಾಯಿತು. ತಾನು ಕೇಳಿದ ಮೆಡಿಕಲ್ ಎಜುಕೇಶನ್, ಬೃಹತ್ ಕೈಗಾರಿಕೆ, ಉನ್ನತ ಶಿಕ್ಷಣದಂತಹ ಪ್ರಭಾವಿ ಖಾತೆಗೆ ಬದಲಾಗಿ ತೋಟಗಾರಿಕೆಯಂತಹ ಖಾತೆಗೆ ಕುಸಿಯುವಷ್ಟು ಶಿವಶಂಕರಪ್ಪನವರ ವರ್ಚಸ್ಸು ಇಳಿದುಹೋಗಿತ್ತು. ತನ್ನದೇ ಗರಡಿಯಲ್ಲಿ ಬೆಳೆದು ರಾಜಕೀಯ ಪಟ್ಟು ಕಲಿತ ಎಚ್. ಆಂಜನೇಯ ಅವರ ಸಮಾಜ ಕಲ್ಯಾಣ ಖಾತೆಯಷ್ಟೂ ಸರಿತೂಕವಿಲ್ಲದ ಇಲಾಖೆಯನ್ನು ಹೆಗಲಿಗೇರಿಸಿದ್ದು ಅವರನ್ನು ವಿಚಲಿತರನ್ನಾಗಿಸಿತ್ತಾದರೂ ಮಗನ ರಾಜಕೀಯ ಭವಿಷ್ಯದ ಕಾರಣಕ್ಕಾಗಿ ನಾಮಕಾವಸ್ಥೆಗೆ ಮಂತ್ರಿಗಿರಿಯನ್ನು ಒಪ್ಪಿಕೊಂಡಿದ್ದರು.

ಇನ್ನು ಪಾರ್ಲಿಮೆಂಟ್ ಚುನಾವಣೆ ಟಿಕೆಟ್ ವಿಚಾರದಲ್ಲೂ ಶಾಮನೂರು ಫ್ಯಾಮಿಲಿಗೆ ಮತ್ತೊಂದು ಸಂಕಷ್ಟ ಎದುರಾಗಿತ್ತು. ಮಗ ಎಸ್.ಎಸ್.ಮಲ್ಲಿಕಾರ್ಜುನ್‌ರನ್ನು ನಿಲ್ಲಿಸಿ ಕಳೆದೆರಡು ಲೋಕಸಭಾ ಸೋಲುಗಳಿಗೆ ಮುಯ್ಯಿ ತೀರಿಸಿಕೊಳ್ಳಬೇಕೆಂದು ಶಿವಶಂಕರಪ್ಪನವರು ಯೋಜನೆ ಹಾಕಿಕೊಂಡಿದ್ದರೆ ಮಹಿಮಾ ಪಟೇಲ ಟಿಕೆಟಿಗೆ ಅಡ್ಡಗಾಲು ಹಾಕಿ ಕೂತು ಬಿಟ್ಟಿದ್ದ; ಆಗಲೂ ಟಿಕೆಟ್ ಎಸ್.ಎಸ್.ಮಲ್ಲಿಕಾರ್ಜುನ್‌ಗೇ ದಕ್ಕಿದರೂ ಇದರಿಂದ ಸಿಟ್ಟಿಗೆದ್ದು ಜೆಡಿಎಸ್ ಅಭ್ಯರ್ಥಿಯಾಗಿ ಕಣಕ್ಕಿಳಿದ ಮಹಿಮಾ ಪಟೇಲ್‌ನಿಂದಾಗಿ ಗೆಲುವಿನ ಹೊಸ್ತಿಲಿನಲ್ಲಿ ಮಲ್ಲಿಕಾರ್ಜುನ್ ಸೋತು ಮಕಾಡೆ ಮಲಗಬೇಕಾಯಿತು.

ಹಾಗಂತ ದಾವಣಗೆರೆ ಧಣಿ ಸಂಪೂರ್ಣ ವೈರಾಗಿಯ... ದ್ದಾರೆಂದೇನೂ ಅಲ್ಲ. ತಮ್ಮ ಕುಟುಂಬದ ರಾಜಕೀ... ಅಸ್ತಿತ್ವಕ್ಕಾಗಿ ಈ ಇಳಿವಯಸ್ಸಿನಲ್ಲೂ ರಾಜಕೀಯ ಪಟ್ಟುಗಳ... ಹೊಸೆಯುತ್ತಲೇ ಇದ್ದಾರೆ. ರಾಜ್ಯ ರಾಜಕಾರಣದಲ್ಲಿ ತಾ... ಕಂಪ್ಲೀಟಾಗಿ ಸೈಡ್‌ವಿಂಗ್ ಆಗಿಬಿಡುವ ಅಪಾ... ಎದುರಾದಾಗ 'ಅಖಿಲ ಭಾರತ ವೀರಶೈವ ಮಹಾಸ... ಅಧ್ಯಕ್ಷನಾಗುವ ಮೂಲಕ ರಾಜ್ಯದ ಪ್ರಬಲ ಜಾತಿಯ... ತನ್ನ ರಕ್ಷಣೆಗೆ ಗುರಾಣಿಯನ್ನಾಗಿ ಮಾಡಿಕೊಂಡಿದ್ದರು. ಆ... ಅದು ಕೂಡಾ ವರ್ಕೌಟ್ ಆಗಲಿಲ್ಲ. ಅದಾಗಲೇ ಲಿಂಗಾ... ಸಮುದಾಯದ ಪ್ರಭಾವಿ ನಾಯಕನಾಗಿ ಠಳಾಯಿಸಿ... ಯಡ್ಡಿಯನ್ನು ಆಕ್ರಮಿಸಿ ಬರಲು ಅವರಿಗೆ ಸಾಧ್ಯವಿರಲಿ... ಹಾಗಾಗಿ ಶಿವಶಂಕರಪ್ಪ ನಿರೀಕ್ಷಿಸಿದಷ್ಟು ಬೆಂಬಲವನ್ನು ಅ... ತಂದುಕೊಡಲಿಲ್ಲ. ಈಗಲೂ ಸಹ ಶಿವಶಂಕರಪ್ಪರ... ಸಂಪುಟದಿಂದ ಕೈಬಿಟ್ಟರೆ ಲಿಂಗಾಯತ ಸಮುದಾ... ಬೀದಿಗಿಳಿದು ಪ್ರತಿಭಟಿಸುತ್ತದೆ ಎನ್ನುವ ಹೇಳಿಕೆಗಳ... ವೀರಶೈವ ಮಹಾಸಭಾ ವೇದಿಕೆಯವರಿಂದ ಹೇಳಿಸಲಾ... ತ್ತಿದೆಯಾದರೂ ಅವೊಂಥರಾ ಪೇಪರ್ ಹುಲಿ... ಆರ್ಭಟದಂತಾಗಿವೆ.

ನಾಯ್ಕನ ಹಗಲುಗನಸು

ಇತ್ತ ಶಿವಶಂಕರಪ್ಪರನ್ನು ಸಂಪುಟದಿಂ... ಕೈಬಿಡುತ್ತಾರೆನ್ನುವ ಗಾಳಿ ಸುದ್ದಿ ಎದ್ದಿದ್ದೇ ತ... ಮಾಯಕೊಂಡದ ಶಾಸಕ ಕಮ್ ಮಾಜಿ ಮಂ... ಶಿವಮೂರ್ತಿ ನಾಯ್ಕ ಮಂತ್ರಿಯಾಗುವ ಕನವರಿ... ಬಿದ್ದಿದ್ದಾನೆ. ಹಾಗೇನಾದರು ಶಿವಶಂಕರಪ್ಪ ಮಂತ್ರಿ ಸ... ಕಳೆದುಕೊಂಡಿದ್ದೇ ಆದಲ್ಲಿ ಅದು ಜಿಲ್ಲೆಯ ಮತ್ತೊ... ಶಾಸಕನಿಗೇ ದಕ್ಕಬೇಕು ಎನ್ನುವ ಲೆಕ್ಕಾಚಾರ ಆತನ... ಹೇಗೂ ಹಿಂದೆ ಮಂತ್ರಿಯಾದ ಅನುಭವ ಇರುವ ತನ... ಅದು ಸಿಗುತ್ತದೆಂಬ ತಿರುಕನ ಕನಸಿಗೆ ಬಿದ್ದಿರು... ಶಿವಮೂರ್ತಿ ನಾಯ್ಕ, ಅತ್ತ ರೈತ ನಾಯಕನೂ ಅಲ್... ಪಕ್ಕಾ ಕೃಷಿಕನೂ ಅಲ್ಲದ ಶೋಕೇಸ್ ಮುಖದ ತೇಜ... ಪಾಟೀಲನಂಥಾ ಪೇಲವ ವ್ಯಕ್ತಿಯನ್ನು ಬೆನ್ನಿಗಿಟ್ಟುಕೊಂ... ಕ್ಷೇತ್ರದ ತುಂಬೆಲ್ಲಾ ತಿರುಗಾಡುತ್ತಿದ್ದಾನೆ. ಗೆದ್ದು ಒಂದೂ...



ಚಿತ್ರಾಪುರದ ಕಂಬಳೇಶ್ವರ ಮಠ

...ನ್ನು ನೋಡುತ್ತಲೇ ಒಮ್ಮಿಂದೊಮ್ಮೆ ಹೌಹಾರಿದ ...ಯ ನಡಾವಳಿಗಳನ್ನು ಕಂಡು ಸಿ.ಡಿ.ಪಿ.ಓ. ಸಹಜವಾಗಿ ...ಷ್ಟು ಕುತೂಹಲದಿಂದ ಭಾಗ್ಯಶ್ರೀಯನ್ನು ನಾಲ್ಕೆಂಟು ...ಟೆಗಳ ಕಾಲ ಸಂದರ್ಶಿಸಿದ್ದಾರೆ. ಆಗ ಮಾತ್ರ ಸತ್ಯ ...ರಬಿದ್ದಿದೆ. ಹುಡುಗಿಯ ತಂದೆ ಸುಭಾಷ, ತಾಯಿ ...ಮತಿ ಮತ್ತು ಅಜ್ಜಿ ಮಹಾದೇವಿಯವರನ್ನು ಎಷ್ಟು ...ಯಾಗಿ ಕೇಳಿದರೂ 'ನಮ್ಮ ಹುಡುಗಿಗೆ ಏನೂ ಆಗಿಲ್ಲ' ...ದು ಕೈ ಜಾಡಿಸುತ್ತಿದ್ದಾರೆ. ಅಷ್ಟೇ ಅಲ್ಲ, ನಮ್ಮ ...ಮ್ಮಗಳಿಗೆ ಹೀಗೆಲ್ಲ ಆಗಿದೆ ಎಂದು ಸುದ್ದಿ ಹಬ್ಬಿಸಿದವರ ...ದ್ಧ ಕೆಂಡಾಮಂಡಲವಾಗುತ್ತಿದ್ದಾಳೆ. ಸ್ವಾಮೀಜಿ ...ಥವರಲ್ಲ ಎಂದು ಸಮಜಾಯಿಸಿ ನೀಡುತ್ತಿದ್ದಾಳಾದರೂ ... ಇಲ್ಲದೆ ಹೊಗೆ ಆಡಲು ಸಾಧ್ಯವಿಲ್ಲವೆಂಬುದು ...ನ ಜನರ ಒಕ್ಕೊರಲಿನ ತೀರ್ಮಾನವಾಗಿದೆ.

...ಇಷ್ಟೆಲ್ಲ ರಾದ್ಧಾಂತಗಳು ನಡೆದಾಗ ಸಹಜವಾಗಿ ಇಲ್ಲಿನ ...ಐ. ಶಂಕರಗೌಡ ಮುತುವರ್ಜಿವಹಿಸಿ ಸತ್ಯದ ಪರವಾಗಿ ...ು ಯಾವುದೆ ಒತ್ತಡಗಳಿಗೆ ಒಳಗಾಗದೆ ಮಠದ ...ಯ ಮೇಲೆ ಎಫ್.ಐ.ಆರ್.ನ್ನು ನವೆಂಬರ್ 15 ...ಲಿಸಿ, 17 ರಂದು ಬಂಧಿಸಿ ನ್ಯಾಯಾಂಗಬಂಧನಕ್ಕೆ ...ಪಡಿಸಿದ್ದಾರೆ. ಭಾಗ್ಯಶ್ರೀಯನ್ನು ತಮ್ಮ ವಶಕ್ಕೆ ...ಮಕೊಂಡು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದೆ. ...ಮೂ ಸೋಮಶೇಖರ ಸ್ವಾಮಿ ಹಾಗೂ ಆತನ ಇಬ್ಬರು ...ೋದರರು ತಮ್ಮ ಹಿಂದಿನ ರಾಗವನ್ನೆ ಗುಣುಗುಣಿಸು ...ತ್ತಾರೆ. 'ನಮ್ಮ ಊರಿನ ಲಿಂಗಾಯತರನ್ನು ಹೊರತು ...ಿ ಕೇಳಿ. ಅವರೆಲ್ಲ ನಮ್ಮ ಬಗೆಗೆ ಒಳ್ಳೆಯ ಭಾವನೆ ...ಟ್ಟುಕೊಂಡಿದ್ದಾರೆ. ಲಿಂಗಾಯತರಿಗೆ ನಮ್ಮನ್ನು ಕಂಡರೆ ...ಟ್ಟೆ ಉರಿ' ಎಂದು ನಂಜು ಕಕ್ಕುತ್ತಿದ್ದಾರೆ. ಇಂಥ ...ರ್ಭದಲ್ಲಿ ಗಟ್ಟಿ ದನಿಯಲ್ಲಿ ಮಾತಾಡಬೇಕಾದ ತಾಲೂಕು ...ಶೈವ ಮಹಾಸಭಾದ ಅಧ್ಯಕ್ಷ ಶಿವರಾಯ ಪಾಟೀಲ ...ರೊಮ್ಮೆ ಇದೇ ಸ್ವಾಮಿಯ ಅಪ್ಪ ತಮ್ಮ ಅಡತಿಯಲ್ಲಿ ಕೆಲಸ ಮಾಡಿದ್ದಾನೆ ಎಂಬ ಕಾರಣಕ್ಕೆ, ಬೆಲ್ಲಹೊಡೆದ ಕಲ್ಲಿನಂತೆ ಕುಳಿತುಕೊಂಡಿದ್ದಾನೆ.


ಮಠದ ಫಲಾಪೇಕ್ಷೆವಾಗಿಲ್ಲದಿದ್ದರೂ ಮಠದ ಸ್ವಾಮಿಗೆ ಎದುರು ಹೋಗುವುದು ಬೇಡ ಎಂದು ತಪ್ಪು ತಿಳಿದುಕೊಂಡ ಕೆಲ ರಾಜಕಾರಣಿಗಳು ಇದನ್ನು ಇಲ್ಲಿಯೆ ಕೌದಿ ಹೊಚ್ಚಿ ಮಲಗಿಸಲು ಸಜ್ಜಾಗುತ್ತಿದ್ದಾರೆ. ಜಿಲ್ಲೆಯ ಮಠಾಧಿಪತಿಗಳು ತಮ್ಮ ಪಲ್ಲಂಗ ಪುರಾಣಗಳು ಒಂದಲ್ಲ ಒಂದು ದಿನ ಹೀಗೆ ಬಯಲಾಗಬಾರದೆಂದು ಮುಂಜಾಗ್ರತೆಯಿಂದ ಸೋಮಶೇಖರ ಸ್ವಾಮಿಗೆ ಸಪೋರ್ಟ್ ಮಾಡುವಂತೆ "ನಮ್ಮ ಲಿಂಗಾಯತ ಮಠದ ಮಾನಮರ್ಯಾದೆ ಹೀಗೆ ಹರಾಜಾದರೆ ಎಷ್ಟು ಸರಿ?" ಎಂದೆಲ್ಲ ಭಾವನಾತ್ಮಕವಾಗಿ ಭಕ್ತರನ್ನು ಬ್ಲಾಕ್‌ಮೇಲ್ ಮಾಡುತ್ತಿದ್ದಾರೆ.

ಆದರೆ ಮಠದೊಳಗಣ ಬಾವುಗ ತಮ್ಮ ಹವಾನಿಯಂತ್ರಿತ ಕೋಣೆಯಲ್ಲಿ ಚಕ್ಕಂದವಾಡಿದ ಸಂಗತಿಗಳು ಬೇಕಾದಷ್ಟಿದ್ದರೂ ಇದೊಂದೆ ಏಕೆ ಬಯಲಾಗಬೇಕು? ವಿಧಿ ವಿಜ್ಞಾನ ಪ್ರಯೋಗಾಲಯದಲ್ಲಿಯೂ ಸೈ ತನ್ನನ್ನು ಪರೀಕ್ಷೆಗೆ ಒಳಪಡಿಸಿ ಎಂದು ಭಂಡತನದಿಂದ ಬೀಗುತ್ತ ಪೊಲೀಸ್ ಅತಿಥಿಯಾಗಿದ್ದಾನೆ.

ಕಡಕೋಳದ ಮಡಿವಾಳಪ್ಪನೆಂಬ ಕ್ರಾಂತಿಕಾರಿ ಬಂಡಾಯಗಾರ ಕವಿ ಇಂಥ ಕೆಂಭೂತಗಳನ್ನು ನೋಡಿಯೆ ಅಂದು ಖತಿಗೊಂಡು ತನ್ನೊಂದು ಪದ್ಯದಲ್ಲಿ 'ಮಾನಗೇಡಿ ಮಂದಿ ಹುಟ್ಟಿ ಮತ್ತ್ಯಾ ಕೆಡಿಸ್ಯಾರೋ. ಉಡಾಳ ಮಂದಿ ಊರೋಳ ಸೇರಿ ಹಿಡಿಸದಾದರೋ ಯಪ್ಪಾ ಗಪ್ ಹೊಡೆಯೋ ಅಪ್ಪಗಳು ಹೆಚ್ಚಾದರು' ಎಂದು ಹಾಡಿದ್ದಾರೆ.

ಯಾವುದೇ ಒತ್ತಡಗಳಿಗೆ ಒಳಗಾಗದೆ ಸೋಮಶೇಖರ ಸ್ವಾಮಿಯ ಪ್ರಕರಣ ತನಿಖೆ ನಡೆದರೆ ಮಠವಲ್ಲ, ಮನೆಯೊಳಗೂ ಈತನನ್ನು ಯಾರೂ ಇಟ್ಟುಕೊಳ್ಳುವುದಿಲ್ಲ. ಕಾವಿ ಕಂಡರೆ ಡೈ ಹೊಡೆಯುವ ಚಟದ ಲಿಂಗಾಯತರಿಗೆ ಇಷ್ಟೆಲ್ಲ ರಾದ್ಧಾಂತವಾಗಿರುವಾಗಿರುವಾಗಲೂ ದೊಡ್ಡೋರ ಮಾತು ನಾವೇಕೆ ಆಡಬೇಕು ಎಂದು ತುಟಿ ಹೊಲಿದುಕೊಂಡು ಕುಳಿತರೆ ಮಠಗಳಲ್ಲೆಲ್ಲ ಕಾಮಕೇಳಿಗೆ ಅನಧಿಕೃತವಾದ ಪರವಾನಗಿ ನೀಡಿದಂತೆ ಆಗುತ್ತದೆ. ಬಸವಣ್ಣನವರನ್ನು ಇಂಬಿಟ್ಟುಕೊಂಡು ಹೊರಟ ಸಮಾಜ ಇಂಥ ಅವಿವೇಕ ಕೆಲಸಗಳಿಗೆ ಪ್ರತಿಭಟಿಸದೆ ಹೋದರೆ ಅಣ್ಣನನ್ನು ಕ್ಷಣಕ್ಷಣಕ್ಕೂ ಲಿಂಗೈಕ್ಯ ಮಾಡುವುದರಲ್ಲಿ ಯಾವುದೇ ಅನುಮಾನವಿಲ್ಲ.

● ವಿಶ್ವಾರಾಧ್ಯ ಸತ್ಯಂಪೇಟೆ




...ದಿಂದ ಸ್ವಂತ ಕ್ಷೇತ್ರದ ಜನರಿಗೆ ಮುಖ ತೋರಿಸದೆ ...ತ್ತೆಯಾಗಿದ್ದ ನಾಯ್ಕ ಜಿಲ್ಲಾ ರಾಜಕಾರಣದಲ್ಲಿ ಈ ...ಸಕ್ರಿಯನಾಗಿರುವುದರ ಹಿಂದಿನ ಅಸಲಿಯತ್ತೇ ಇದು. ...ಈಗಾಗಲೆ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ...ಪತ್ತುಕೊಂಡದ್ದಲ್ಲದೆ ತನಗೆ ಎಜುಕೇಶನ್ ಖಾತೆ ...ಬೇಕೆನ್ನುವ ಆತುರಗೇಡಿ ಮನವಿ ಸಲ್ಲಿಸಿದ ವರ್ತಮಾನ ...ಣಗೆರೆ ಕೈಪಾಳೆಯದಲ್ಲಿ ಅಪಹಾಸ್ಯದ ವಸ್ತುವಾಗಿದೆ. ...ಮೂರ್ತಿನಾಯ್ಕನ ಖಾಸಗಿ ಶಾಲೆಗಳ ಡೊನೇಶನ್ ...ದಂಧೆಗೋಸ್ಕರ ಮಾಯಕೊಂಡ ಕ್ಷೇತ್ರದ ಸರಕಾರಿ ...ಗಳೆ ಮುಚ್ಚುವ ಭೀತಿಯಲ್ಲಿವೆ. ಅಂತದ್ದರಲ್ಲಿ ಈತ ... ಮಂತ್ರಿಯಾದರೆ ಇಡೀ ರಾಜ್ಯದ ಸರ್ಕಾರಿ ಶಾಲೆಗಳ ... ಕೇಳುವುದೇ ಬೇಡ!

...ದರೆ ಶಿವಮೂರ್ತಿ ನಾಯ್ಕನ ಕನಸು ಅಷ್ಟು ಸುಲಭಕ್ಕೆ ...ಗುವಂತದ್ದಲ್ಲ. ಎಷ್ಟೇ ಶಿಥಿಲಗೊಂಡಿದ್ದರೂ ...ನೂರು ಫ್ಯಾಮಿಲಿಯ ಪೊಳಿಟಿಕ್ಸ್ ಆ ಮಟ್ಟದ ...ಕ್ಕೆ ಇನ್ನೂ ಬಂದಿಲ್ಲ. ಒಂದೊಮ್ಮೆ ಶಿವಶಂಕರಪ್ಪ ...ಜಿಹಾದರೂ ಆ ಜಾಗಕ್ಕೆ ತಮ್ಮ ಮಗ ...ಕಾರ್ಜುನ್‌ರನ್ನು ಕೂರಿಸಿ ಎದ್ದು ಬರುತ್ತಾರೆಯೇ ... ಶಿವಮೂರ್ತಿ ನಾಯ್ಕನಂತಹ ದಗಲುಬಾಜಿಗೆ ... ಕೊಡುವುದಿಲ್ಲ. ಮೊದಮೊದಲು ಈ ಶಿವಮೂರ್ತಿ ... ಶಾಮನೂರು ಗರಡಿಯಲ್ಲೇ ಪಳಗಿದನಾದರು ಈಗ ... ಸಲುಗೆ ಹೇಳಿಕೊಳ್ಳುವಂತ ಬಾಂಧವ್ಯವಿಲ್ಲ. ...ಹೀಗಿದ್ದರೆ 2013ರ ಚುನಾವಣೆಗೂ ಮುನ್ನ ದಾವಣಗೆರೆ ಜಿಲ್ಲೆಯ ಎಂಟು ವಿಧಾನ ಸಭಾಕ್ಷೇತ್ರಗಳ ಸ್ಪರ್ಧೆಗಾಗಿ ಶಾಮನೂರು ಮನೆಯಿಂದ ಹೈಕಮಾಂಡ್‌ಗೆ ತಲುಪಿದ ಪಟ್ಟಿಯಲ್ಲಿ ಈತನ ಹೆಸರೇ ಇರಲಿಲ್ಲ. ಆದರೂ ಧಣಿಯ ವರ್ಚಸ್ಸು ಮೀರಿ ಟಿಕೆಟು ತಂದಿದ್ದ. ಆಮೇಲಿನ ಅವನ ಗೆಲುವು ಕೂಡಾ ಅಷ್ಟು ಸಲೀಸದ್ದಾಗಿರಲಿಲ್ಲ. ಏಕೆಂದರೆ ಈ ಭಾಗದಲ್ಲಿ ಸಾಧು ಲಿಂಗಾಯತ ಮತಗಳೇ ನಿರ್ಣಾಯಕ. ಹಾಗಾಗಿ ಸಿರಿಗೆರೆ ಮಠ ಹೊರಡಿಸುವ ಫರ್ಮಾನೇ ಬಹುತೇಕ ಚುನಾವಣಾ ಫಲಿತಾಂಶವಾಗಿ ಹೊರಬೀಳುತ್ತೆ. ಅಂತಹ ಸಿರಿಗೆರೆ ಮಠದ ಜೊತೆಯೇ ಈ ನಾಯ್ಕ ವೈರತ್ವ ಕಟ್ಟಿಕೊಂಡಿದ್ದ. ಬಂಗಾರಪ್ಪ ಸಿ.ಎಂ. ಆಗಿದ್ದಾಗ ಸಿರಿಗೆರೆಯಲ್ಲಾದ ರಾದ್ಧಾಂತಕ್ಕೆ, ಬಂಗಾರಪ್ಪನ ಕಾರಿಗೆ ಬೆಂಕಿ ಹಚ್ಚುವುದಕ್ಕೆ ಇದೇ ಶಿವಮೂರ್ತಿ ನಾಯ್ಕ ಕಾರಣ ಎನ್ನುವ ಕಹಿಸತ್ಯವನ್ನು ಮಠ ಇನ್ನೂ ಮರೆತಿಲ್ಲ. ಶಾಮನೂರು ಫ್ಯಾಮಿಲಿಯ ಸಖ್ಯ ಇಲ್ಲದೆಯೂ, ಸಿರಿಗೆರೆ ಮಠದ ಫರ್ಮಾನಿನ ಹೊರತಾಗಿಯೂ ಶಿವಮೂರ್ತಿ ನಾಯ್ಕ ಮಾಯಕೊಂಡದಿಂದ ಗೆದ್ದಿದ್ದಾನೆಂದರೆ ಅದಕ್ಕೆ ಆಗಿನ ಬಿಜೆಪಿ ವಿರೋಧಿ ಅಲೆ ಕಾರಣವಾಗಿತ್ತೇ ವಿನಾಃ ಈತನ ವೈಯಕ್ತಿಕ ವರ್ಚಸ್ಸಲ್ಲ.

ಅಂತಹ ಶಿವಮೂರ್ತಿ ಇದೀಗ ಏಕಾಏಕಿ ಶಿವಶಂಕರಪ್ಪನ ಆಸನಕ್ಕೇ ಅಂಡು ಊರಲು ಹೋಗುತ್ತಾನೆಂದರೆ ದಾವಣಗೆರೆ ಧಣಿ ಸುಮ್ಮನಿರುತ್ತಾರಾ? ಒಂದೊಮ್ಮೆ ತಮ್ಮ ಮಗ ಮಲ್ಲಿಕಾರ್ಜುನ್‌ಗೆ ಮಂತ್ರಿ ಸ್ಥಾನ ಕೊಡಲಿಲ್ಲವೆಂದರೂ ಜಿಲ್ಲೆಯ ಎಂಟು ವಿಧಾನಸಭಾ ಕ್ಷೇತ್ರಗಳ ಪೈಕಿ ನಾಲ್ಕು ಕ್ಷೇತ್ರಗಳಲ್ಲಿ ಲಿಂಗಾಯತರ ಶಾಸಕರಿದ್ದಾರೆ ಅವರಿಗೆ ಕೊಡಿ ಅಂತ ಪಟ್ಟು ಹಿಡಿಯಬಹುದು. ಚನ್ನಗಿರಿಯ ವಡ್ನಾಳು ರಾಜಣ್ಣ, ಹೊನ್ನಾಳಿಯ ಶಾಂತನಗೌಡ ಎರಡೆರಡು ಬಾರಿ ಶಾಸಕರಾದಂತವರು. ಅಸಲಿಗೆ ದಾವಣಗೆರೆ ಉತ್ತರ ಕ್ಷೇತ್ರದಿಂದ ಹಾಲಿ ಶಾಸಕನಾಗಿರುವ ಮತ್ತು ಎಸ್.ಎಂ. ಕೃಷ್ಣ ಸರ್ಕಾರದಲ್ಲಿ ಯುವಜನ ಕ್ರೀಡಾ ಸಚಿವನಾಗಿ ಅನುಭವವಿರುವ ಶಾಮನೂರು ಕುಡಿ ಎಸ್.ಎಸ್. ಮಲ್ಲಿಕಾರ್ಜುನ ಇರುವಾಗ ಉಳಿದೆಲ್ಲ ಆಯ್ಕೆಗಳಿಗೇ ಅರ್ಥವೇ ಇಲ್ಲಬಿಡಿ. ಅಂತದ್ದರಲ್ಲಿ ಶಿವಮೂರ್ತಿ ನಾಯ್ಕ ಶಿಕ್ಷಣ ಮಂತ್ರಿಯಾಗುವ ಇರಾದೆ ಇಟ್ಟುಕೊಂಡು ಓಡಾಡುತ್ತಿದ್ದಾನೆಂದರೆ ಅವನ ಆತ್ಮವಿಶ್ವಾಸವನ್ನು ಮೆಚ್ಚಲೇಬೇಕು!

● ಟಿ.ಎನ್.ಷಣ್ಮುಖ

ವಿಡಂಬಾರಿಗೆ ರಾಜ್ಯೋತ್ಸವ ಪ್ರಶಸ್ತಿ ಪ್ರಶಸ್ತಿಗೇ ಗೌರವದ ಗರಿ!!



ಲಾಬಿ ಸಂಸ್ಕೃತಿಯ ಸರ್ಕಾರಿ ವ್ಯವಸ್ಥೆಯಲ್ಲಿ ಪ್ರಶಸ್ತಿ-ಸನ್ಮಾನಗಳು ಪಾವಿತ್ರ್ಯವನ್ನೇ ಕಳಕೊಂಡು ಅದ್ಯಾವುದೋ ಕಾಲವಾಗಿ ಹೋಗಿದೆ. ಆದರೂ ಆಗೊಮ್ಮೆ-ಈಗೊಮ್ಮೆ ಅರ್ಹರಿಗೆ ಸರ್ಕಾರಿ ಪ್ರಶಸ್ತಿ ಘೋಷಣೆಯಾಗಿ ಪವಾಡ ಆಗುವುದೂ ಇದೆ! ಜೋಲಿಬಾಜಿ ಮಾಡದ ಯೋಗ್ಯರಿಗೆ ಅಚಾನಕ್ ಪ್ರಶಸ್ತಿ ಸಿಕ್ಕಾಗ ಆ ಪ್ರಶಸ್ತಿಗೇ ಗೌರವ ಬಂದುಬಿಡುತ್ತದೆ. ಅಂಥದೊಂದು "ಅದ್ಭುತ" ಈ ಬಾರಿಯ ರಾಜ್ಯೋತ್ಸವ ಪ್ರಶಸ್ತಿ ವಿತರಣೆಯಲ್ಲಾಗಿದೆ. ಉತ್ತರ ಕನ್ನಡದ ಹೊನ್ನಾವರದ ವಿಡಂಬಾರಿ ಎಂಬ ಚುಟುಕು ಕವಿಯ ಬವಣೆಯ ಬದುಕು-ಬರಹಕ್ಕೆ ಗೌರವ ಸಂದಿದೆ. ತನ್ಮೂಲಕ ನಿಜಕ್ಕೂ ಅರ್ಹ-ಯೋಗ್ಯನಿಗೆ ಪ್ರಶಸ್ತಿ ದೊರೆತಿದೆ ಎಂಬ ಮೆಚ್ಚುಗೆಯ ಭಾವನೆ ಸಾರ್ವತ್ರಿಕವಾಗಿ ಮೂಡಿದೆ.

ವಿಡಂಬಾರಿ ಎಂದೂ ಪ್ರಶಸ್ತಿ-ಪುರಸ್ಕಾರಕ್ಕೆ ಹಾತೊರೆದವರಲ್ಲ; ಪ್ರಶಸ್ತಿ ಬೇಕೆಂದು ಅರ್ಜಿ ಹಾಕುವುದಕ್ಕೂ ಹೇಸುವ-ಹಿಂಜರಿಯುವ 76 ರ ಹಿರಿಯ ಜೀವವದು. ಸಮಾಜದ ಅಂಕು-ಡೊಂಕು, ಧರ್ಮ-ದೇವರು, ಮೌಢ್ಯ-ಮಸಲತ್ತು ಕುಟುಕುತ್ತ ಚುಟುಕು ಬರೆಯುತ್ತ ತನ್ನ ಪಾಡಿಗೆ ತಾನು ಬದುಕಿದವರು ವಿಡಂಬಾರಿ. ಒಪ್ಪತ್ತು ಗಂಜಿಗೆ ತತ್ವಾರ ಪಟ್ಟರೂ ಇವರ ವೈಚಾರಿಕ ಬುದ್ಧಿಗೆ ಬರ ಬಂದಿದ್ದೇ ಇಲ್ಲ. ಯಾರನ್ನೂ ಯಾವಾಗಲೂ ನೋಯಿಸದ ಅವಮಾನಿಸದ ವಿಡಂಬಾರಿ ತನಗೆ ಆತ್ಮಾಭಿಮಾನ ಎಷ್ಟು ಮುಖ್ಯನೋ ಅಷ್ಟೇ ಮುಖ್ಯ ಇತರರಿಗೂ ಎಂದು ಬಗೆದಾತ. ಅಮಾಯಕರ ಹಾದಿತಪ್ಪಿಸಿ ಹೈರಾಣಾಗಿಸುವ ಧರ್ಮದೇವರ ಮಣೆಸುತ್ತಲೇ ಬಂದಿರುವ ವಿಡಂಬಾರಿಯ ಜೀವ-ಜೀವನವೆಂದರೆ ಅಗ್ನಿಯಲ್ಲಿ ಅರಳಿದ ಕುಸುಮದಂತೆ!

ದುರ್ಬಲ ಘಾತುಕನಾದ ದೇವ (ಇದ್ದರೆ)ನಿಗೆ ಧಿಕ್ಕಾರ ಹಾಕುತ್ತಲೇ ಕೆಚ್ಚಿನಿಂದ ಬದುಕು ಕಟ್ಟಿಕೊಂಡ ವಿಡಂಬಾರಿಯ ಮೂಲ ಹೆಸರು ವಿಷ್ಣು ಗಣಪಿ ಭಂಡಾರಿ. "ಗಣಪಿ" ಎಂದರೆ ತಂದೆಯಲ್ಲ; ತಾಯಿ!! ಅಂದರೆ ಈ ವಿಷ್ಣು ದೇವರಿಗೆ ಬಸವಿ ಬಿಟ್ಟ ಗಣಪಿಯ ಮಗ; ತಂದೆಯಿಲ್ಲದ ಸೂಳೆಯ ಮಗ. ಇದನ್ನಾತ ತನ್ನ ಆತ್ಮಕಥೆ "ಅಂಚೆ ಪೇದೆಯ ಆತ್ಮ ಕಥನ"ದಲ್ಲಿ ಯಾವ ಮುಚ್ಚು-ಮರೆಯಿಲ್ಲದೆ ಹೇಳಿಕೊಂಡಿದ್ದಾರೆ. ಮೇಲ್ವರ್ಗದವರು ದೇವರು-ಧರ್ಮದ ಹೆಸರಲ್ಲಿ ಮಾಡುವ ಮೋಸ-ವಂಚನೆ-ಸ್ವಾಹಾ-ಹಾದರಕ್ಕೆ ತಲ ಸಮುದಾಯದ ಮುಗ್ಧ ಹೆಣ್ಣೊಂದು ದೇವದಾಸಿಯಾಗಿ ಅಪ್ಪನಿಲ್ಲದ ಮಕ್ಕಳನ್ನು ಹೆತ್ತ ದಾರುಣ ವಾಸ್ತವ ವೃತ್ತಾಂತ ವಿಡಂಬಾರಿ ಕಣ್ಣಿಗೆ ಕಟ್ಟುವಂತೆ ಬಿಚ್ಚಿಟ್ಟಿದ್ದಾರೆ ತಮ್ಮ ಆತ್ಮಕಥೆಯಲ್ಲಿ. ಹಾಗಿದ್ದರೆ ಈ ಮಕ್ಕಳ ಅಪ್ಪ ಯಾರು? ದಗಲುಬಾಜಿ ದೇವರಾ?

"ನೋಡು, ನಿನ್ನ ಹಿರಿಯ ಮಗಳ ಮೇಲೆ ನಮ್ಮ ದೇವರಿಗೆ ಮನಸ್ಸಾಗಿದೆ... ಹಾಗಾಗಿ ನಾಳೆಯೇ ಅವಳನ್ನು ದೇವರ ಹೆಸರಲ್ಲಿ ಬಿಡು... ಇಲ್ಲದಿದ್ರೆ ನಿನ್ನ ವಂಶವೇ ನಾಶವಾಗಿ ಹೋಗ್ತದೆ...!" ಎಂದು ಅರ್ಚಕನೊಬ್ಬ ದೇವಸ್ಥಾನದ ಮೂರ್ತಿಯ ಮುಂದೆ ನನ್ನ ತಾಯಿಯ ತಂದೆ (ಅಜ್ಜ)ಗೆ ಹೇಳುತ್ತಾನೆ. ಆಗ ನನ್ನ ಮುಗ್ಧ ಅಜ್ಜ ವೆಂಕಪ್ಪ ಭಂಡಾರಿ "ಹೌದ್ರಾ ಒಡೆಯಾ.., ಆಗ್ಲಿ ಒಡ್ಯಾ..." ಎಂದ್ಹೇಳುತ್ತಾನೆ. "ಅಲ್ಲಿಗೆ ನನ್ನಮ್ಮ ದೇವರ ಹೆಸರಲ್ಲಿ ಸೂಳೆಯಾಗ್ತಾಳೆ..." ಎಂದು ನೋವು ತುಂಬಿದ ಆಕ್ರೋಶದ ಧ್ವನಿಯಲ್ಲಿ ವಿಡಂಬಾರಿ ಹೇಳುವಾಗ ಉಳ್ಳವರ ತೆವಲಿನ ಪರಂಪರೆ ತಂತಾನೆ ಅನಾವರಣ ಆಗುತ್ತದೆ. ಅಷ್ಟಕ್ಕೇ ನಿಲ್ಲುವುದಿಲ್ಲ. ವಿಡಂಬಾರಿಯ ಬಾಲ್ಯದ ನೋವಿನ ಹಾಡು-ಪಾಡು. ಆತನ ಚೆಂದದ ಸೋದರಿಯನ್ನು ಸಂಬಂಧಿ ದೇಶಾಂತರಕೆಗೆ ಮಾರಲಾಗುತ್ತದೆ. ಆ ಮುಗಳ ನೆನಪಲ್ಲೇ ತಾಯಿ ಹುಚ್ಚಿಯಾಗಿ ಊರೂರು ಅಲೆದು ಜೀವ ಬಿಡುತ್ತಾಳೆ.

ಮಗ ವಿಷ್ಣು ಯಾರ್‍ಯಾರದೋ ಮನೆಯಂಗಳ- ದನದ ಕೊಟ್ಟಿಗೆಯ ಪಾಲಾಗುತ್ತಾನೆ; ಮಲ ತಾಯಿಯ ಹಿಂಸೆಗೀಡಾಗುತ್ತಾನೆ. ಹೊಟ್ಟೆ ಹೊರೆಯಲು ಕೂಲಿ-ನಾಲಿ ಮಾಡುತ್ತಾನೆ. ಹಾಗೋ-ಹೀಗೋ ಮೂರನೆ ಈಯತ್ತೆವರೆಗೆ ಓದುತ್ತಾನೆ. ಮುಂದಾತನಿಗೊಂದು ಸರ್ಕಾರಿ ಚಾಕರಿಗೆ ಈ ವಿದ್ಯಾಭ್ಯಾಸವೇ ಮೆರಿಟ್ ಆಗ್ತದೆ. ಅಂಚೆ ಇಲಾಖೆಯಲ್ಲಿ ಪ್ಯಾಕರ್ ಆಗುತ್ತಾನೆ. ನಂತರ ಅಂಚೆಯಣ್ಣನಾಗಿ ಭಡ್ತಿ ಪಡೆಯುತ್ತಾನೆ-ಆದರೂ ಸಂಬಳದಲ್ಲಿ ಹೊಟ್ಟೆ ತುಂಬುವುದಿಲ್ಲ, ಹಾಗಂತ ಕುಟುಂಬ ನಿರ್ವಹಣೆಗೆ ಸಾಲ ಮಾಡುವುದಿಲ್ಲ; ಉಪವಾಸ-ವನವಾಸ ಕಳೆಯುತ್ತಾನೆ. ವಿಷ್ಣು ಭಂಡಾರಿಗೆ ಉತ್ತರ ಕನ್ನಡದ ಖ್ಯಾತ ಚುಟುಕು ಕವಿ ದಿನಕರ ದೇಸಾಯಿರು ಸ್ಫೂರ್ತಿಯಾಗುತ್ತಾರೆ. ಚುಟುಕು ಬರೆಯಲು ಶುರು ಹಚ್ಚಿಕೊಳ್ಳುವ ವಿಷ್ಣು ವಿಡಂಬಾರಿ ಆಗಿದ್ದೇ ಒಂದು ಸ್ವಾರಸ್ಯಕರ ಕತೆ.

ಎಪ್ಪತ್ತರ ದಶಕವದು. ಹುಬ್ಬಳ್ಳಿಯಿಂದ ಹೊರಬರುತ್ತಿದ್ದ "ವಿಶಾಲ ಕರ್ನಾಟಕ" ಎಂಬ ಪತ್ರಿಕೆಗೆ ವಿಷ್ಣು ಜಿ. ಭಂಡಾರಿ ನಿರಂತರವಾಗಿ ಚುಟುಕು ಕಳಿಸುತ್ತಾರೆ. ಆ ಹೊತ್ತಲ್ಲಿ ವಿಷ್ಣುವಿನ ಅಂಚೆ ಇಲಾಖೆಯ ನೌಕರರು ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸುತ್ತಾರೆ. ಸರ್ಕಾರದ ಶೋಷಣೆ ಖಂಡಿಸಿ ವಿಷ್ಣು ಚುಟುಕು ಬರೆದು ವಿಶಾಲ ಕರ್ನಾಟಕಕ್ಕೆ ಕಳಿಸುತ್ತಾರೆ. ಇದನ್ನು ನೋಡಿದ ಸಂಪಾದಕ ಬಂಕಾಪುರ ಹೌಹಾರುತ್ತಾರೆ. ಈ ಹುಡುಗ ಇದ್ದ ನೌಕರಿಯೂ ಕಳಕೊಳ್ಳುತ್ತಾನೆ ಈತನ ಹೆಸರಲ್ಲೇ ಚುಟುಕು ಪ್ರಕಟವಾದರೆ ಎಂದು ತೀರ್ಮಾನಕ್ಕೆ ಬರ್‍ತಾರೆ. ಆಗವರು ವಿಷ್ಣು ಜಿ. ಭಂಡಾರಿಗೆ "ವಿಡಂಬಾರಿ" ಎಂದು ನಾಮಕರಣ ಮಾಡುತ್ತಾರೆ. ಅದೇ ವಿಡಂಬಾರಿ ಪ್ರಾಮಾಣಿಕವಾಗಿ ಕನ್ನಡ ತಾಯಿಯ ತೇರನ್ನು ಕೆಲವು ಅಂಗುಲವಾದರೂ ಎಳೆದು ಅರ್ಹತೆಯಿಂದ ಇವತ್ತು ರಾಜ್ಯೋತ್ಸವ ಪ್ರಶಸ್ತಿ ಪಡೆದಿದ್ದಾರೆ!!

ಎಳವೆಯಲ್ಲೇ ಈ ಸಮಾಜದ ಢೋಂಗಿ ಬದುಕನ್ನು ನಾಟಕವಾಗಿಸಿ ಬರೆದು, ತಂಡ ಕಟ್ಟಿ ನಾಟಕ ಆಡಿಸಿದ ವಿಡಂಬಾರಿ ನಾಲ್ಕೈದು ಚುಟುಕು ಸಂಕಲನ ಹೊರತಂದಿದ್ದಾರೆ. ಆತ್ಮಕಥನ ಬರೆದಿದ್ದಾರೆ. ಸರಿಸುಮಾರು ಎರಡೂವರೆ ಸಾವಿರ ಚುಟುಕುಗಳ ಸಂಗ್ರಹ ಅಚ್ಚಿನ ಮನೆಯಲ್ಲಿದೆ. ಅಂಚೆ ಪೇದೆ ನೌಕರಿಯಿಂದ ನಿವೃತ್ತಿಯಾದ ನಂತರ ವಿಡಂಬಾರಿ ವೈಚಾರಿಕತೆ ಸಮಾಜದಲ್ಲಿ ಬಿತ್ತುವ ಕೈಂಕರ್ಯ ಆರಂಭಿಸಿದ್ದರು. ಉತ್ತರ ಕನ್ನಡದಲ್ಲಿ ಚಿಂತನ ಪುಸ್ತಕ ಮಳಿಗೆಯ ಉಸ್ತುವಾರಿ ವಹಿಸಿಕೊಂಡಿದ್ದರು. ಪುಸ್ತಕ ಸಂಸ್ಕೃತಿ ಬೆಳೆಸಲು ಆತ ಹಗಲಿರುಳು ಬೆವರಿಳಿಸಿದ್ದಾರೆ, ಬಸ್ ನಿಲ್ದಾಣದಲ್ಲಿ ಪ್ರತಿ ಬಸ್ ಏರಿ ಚಿಂತನದ ಪುಸ್ತಕ ಮಾರಾಟ ಮಾಡಿದ್ದಾರೆ. ಹೊರನೋಟಕ್ಕೆ ವಿಡಂಬಾರಿ ಎಷ್ಟು ಮೃದು-ಮಧುರ ಮನುಷ್ಯನೋ ಅಷ್ಟೇ ಕಠೋರ ವಾಸ್ತವದ ವಿಡಂಬನಾತ್ಮಕ ಚುಟುಕುಗಳ ಸ್ಕಡ್-ಮಿಸೈಲ್ ಆತ ಹಾರಿಸಿದ್ದಾರೆ.

ವಿಡಂಬಾರಿಯ ಬದುಕಲ್ಲಿ ನೋವೇ-ನೋವು! ದೇವದಾಸಿ ಎಂಬ ಬರ್ಬರ ಪದ್ಧತಿ ಆತನ ಬಾಲ್ಯ ನುಂಗಿ ಹಾಕಿದರೆ, ಹರೆಯದಲ್ಲಿ ಬಡತನ ಬಡಿದು ಹಾಕಿತು. ಆದರೂ ಆತ ಧೃತಿಗೆಡಲಿಲ್ಲ. ಮುದಿ ಕಾಲದಲ್ಲಿ ದುರಂತಗಳು ಬೆನ್ನಟ್ಟಿದ್ದವು. ಇದ್ದ ಒಬ್ಬನೇ ಮಗ ನಡು ಬದುಕಲ್ಲೇ ಸಾವಿಗೀಡಾದ. ಮಗಳ ಮನೆಗೆ ಅನಾರೋಗ್ಯಪೀಡಿತ ಹೆಂಡತಿಯೊಂದಿಗೆ ಆತ "ವಲಸೆ" ಹೋಗಬೇಕಾಗುತ್ತದೆ. ಅಲ್ಲಿ ಬರುವ ಸಂಬಳದಲ್ಲಿ ಹೆಚ್ಚು ಹಣ ಹೆಂಡತಿಯ ಕಾಯಿಲೆಯ ಮದ್ದಿಗೇ ವ್ಯಯವಾಗುತ್ತದೆ. "ಅಜ್ಜಾ" ಎಂದು ಸದಾ ಪ್ರೀತಿಯಿಂದ ಅಪ್ಪಿಕೊಳ್ಳುತ್ತಿದ್ದ ಮೊಮ್ಮಗ... ಇದ್ದಕ್ಕಿದ್ದಂತೆಯೇ ಕೈಯಾರೆ ಜೀವ ತೆಗೆದುಕೊಳ್ಳುತ್ತಾನೆ. ಆಗ ಅಕ್ಷರಶಃ ನಲುಗಿಹೋಗುತ್ತಾರೆ ವಿಡಂಬಾರಿ. ಈಚೆಗೆ ಹೆಂಡತಿಯೂ ತೀರಿಕೊಂಡಿದ್ದಾರೆ. ಮಗಳು-ಅಳಿಯ-ಸಾಹಿತ್ಯದ ಮಿತ್ರರು ಮತ್ತು ಪುಸ್ತಕ-ಚುಟುಕುಗಳೇ ಈಗ ಈ ಒಂಟಿ ಜೀವಕ್ಕೆ ಆಸರೆ.

ಎತ್ತಿಂದೆತ್ತ ನೋಡಿದರೂ ವಿಡಂಬಾರಿ ಬರೀ ಕವಿಯಷ್ಟೇ ಅಲ್ಲ, ತಣ್ಣನೆಯ ಕರ್ಮಯೋಗಿ. ತನ್ನ ಸೀಮಿತ ಪರಿಧಿಯಲ್ಲಿ ಕನ್ನಡ ತಾಯಿಯ ಸೇವೆ ಮಾಡಿದ, ಕಂದಾಚಾರದ ವಿರುದ್ಧ ಸಿಡಿದೆದ್ದು ದೇವರು-ಧರ್ಮ ಧಿಕ್ಕರಿಸಿ ಮರ್ಯಾದೆಯಾಗಿ ಬಾಳಿದ ಧೀರ. ಚಿದ್ದಿಗೆ ಬಿದ್ದು ರಾಜ್ಯೋತ್ಸವ ಪ್ರಶಸ್ತಿ ಪಡೆಯಲು ಪರಾಕ್ರಮ ಮಾಡುವ ನಾಲಾಯಕರ ನಡುವೆ ವಿಡಂಬಾರಿಗೆ ಪ್ರಶಸ್ತಿ ಬಂದಿರುವುದು ಆ ಪ್ರಶಸ್ತಿಯ ಮೌಲ್ಯ ಹೆಚ್ಚಿಸಿದೆ! ಬರೆದಂತೆಯೇ ಬದುಕಿದ ಜೀವಪರ-ಸಾಹಿತ್ಯ ಪರಬುದ್ಧತೆಯ ವಿಡಂಬಾರಿ ಇಡೀ ನಾಡಿಗೇ ಆದ್ಯವಾಗಬೇಕು ಪರಿಚಯ ಆಗಬೇಕಿತ್ತು, ಈಗಲಾದರೂ ಆ ಕೆಲಸ ಆಗಿರುವುದು ಸಮಾಧಾನದ ಸಂಗತಿ!


● ನವುಮ



ದಿನೇಶ್ ಗುಂಡೂರಾವ್

ಊಟದ ಮಂತ್ರಿಗೆ ಭೂ ಕಂಟಕ ದಿನೇಶ್ 'ಲ್ಯಾಂಡು'ರಾವ್!!

ಅನ್ನಭಾಗ್ಯ ಇಲಾಖೆಯ ದಿನೇಶ್ ಗುಂಡೂರಾವ್‌ಗೆ ಮಂತ್ರಿಭಾಗ್ಯವೇ ಕೈ ತಪ್ಪುವ ಲಕ್ಷಣಗಳು ದಟ್ಟವಾಗಿವೆ. ಅಪ್ಪ ಮಾಡಿದ ಪಾಪಕ್ಕೆ ಮಗ ಕತ್ತು ಕೊಡಬೇಕಾದ ಇಕ್ಕಟ್ಟಿಗೆ ಸಿಲುಕಿರುವ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ದಿನೇಶ್‌ಗೆ ಇನ್ನೈದು ವಾರಗಳಲ್ಲಿ ಸಲ್ಲಿಕೆಯಾಗಲಿರುವ ಜಿಲ್ಲಾಧಿಕಾರಿಗಳ ವರದಿಯೇ ಕಂಟಕವಾಗಲಿದೆ. ದೇವನಹಳ್ಳಿ ಬಳಿ ಇರುವ ಜಾಲ-2 ಹೋಬಳಿಯ ನವರತ್ನ ಅಗ್ರಹಾರದಲ್ಲಿ ಗುಂಡೂರಾವ್ ಕುಟುಂಬ 10.09 ಎಕರೆ ಜಮೀನನ್ನು ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿರುವುದು ನಿಜವೆಂದು ಈಗಾಗಲೇ ಬೆಂಗಳೂರು ಉತ್ತರ ತಾಲ್ಲೂಕಿನ ತಹಸೀಲ್ದಾರ್ ಬಾಳಪ್ಪ ಹಂದಿಗುಂದಾ ಮಧ್ಯಂತರ ವರದಿ ಸಲ್ಲಿಸಿದ್ದಾರೆ. ಅಲ್ಲಿಗೆ ಸ್ವಸ್ಥ ಮತ್ತು ಸ್ವಚ್ಛ ರಾಜಕಾರಣಿಯಾಗುವ ಎಲ್ಲಾ ಸಾಧ್ಯತೆಗಳಿದ್ದ ದಿನೇಶ್ ಕಳಂಕ ಹೊತ್ತು ಮಾಜಿಯಾಗುವುದು ಖಚಿತ. ಮಧ್ಯಂತರ ವರದಿ ಆಧರಿಸಿ ಭೂ ಕಬಳಿಕೆಯ ಕುರಿತು ಸಮಗ್ರ ತನಿಖೆ ನಡೆಸಿ ವರದಿ




ಮಹೇಶ್ ಗುಂಡೂರಾವ್

ನೀಡುವಂತೆ ಲೋಕಾಯುಕ್ತ ವೈ.ಭಾಸ್ಕರ್‌ರಾವ್ ಬೆಂಗಳೂರು ಜಿಲ್ಲಾಧಿಕಾರಿಗೆ ಸೂಚನೆ ನೀಡಿದ್ದಾರೆ. ವರದಿ ಸಲ್ಲಿಕೆಯ ನಂತರ ಸರ್ಕಾರಕ್ಕಾಗುವ ಮುಜುಗರವನ್ನು ತಪ್ಪಿಸಿಕೊಳ್ಳುವ ಸಲುವಾಗಿ ದಿನೇಶ್ ಗುಂಡೂರಾವ್‌ರಿಂದ ತಾವಾಗಿ ರಾಜೀನಾಮೆ ಪಡೆಯುವುದು ಲೇಸೆನ್ನುವ ಕಾನೂನು ಸಲಹೆಗಳು ಈಗಾಗಲೇ ಕೈ ಪಾಳಯದಲ್ಲಿ ಹರಿದಾಡುತ್ತಿವೆ. ಅಸಲಿಗೆ ಸರಿಯಾದ ಸಮಗ್ರ ತನಿಖೆ ಆದದ್ದೇ ಆದಲ್ಲಿ ಕೇವಲ 10.09 ಎಕರೆ ಭೂ ಒತ್ತುವರಿ ಮಾತ್ರವಲ್ಲ, ಅವರ ಕುಟುಂಬ ನವರತ್ನ ಅಗ್ರಹಾರದಲ್ಲಿ ಹೊಂದಿರುವ ಸುಮಾರು 90 ಎಕರೆಗೂ ಹೆಚ್ಚು ಜಮೀನೆಲ್ಲಾ ಅಕ್ರಮ ಸಂಪತ್ತು ಎಂಬುದು ಸಾಬೀತಾಗುತ್ತದೆ.

ನಾನು ಮುಗ್ಧ.. ಮುಗ್ಧ... ಮುಗ್ಧಾ!

ಇದು ಇಂದು ನಿನ್ನೆಯ ವಿವಾದವಲ್ಲ. 2007ರಲ್ಲಿ ಎ.ಟಿ. ರಾಮಸ್ವಾಮಿ ನೇತೃತ್ವದ ಜಂಟಿ ಸದನ ಸಮಿತಿ ಸಲ್ಲಿಸಿದ ವರದಿಯಲ್ಲೇ ದಿನೇಶ್ ಗುಂಡೂರಾವ್ ಕುಟುಂಬ ಭೂ ಒತ್ತುವರಿಯಲ್ಲಿ ಭಾಗಿಯಾಗಿರುವುದು ಉಲ್ಲೇಖವಾಗಿತ್ತು. ಕೆಂಪೇಗೌಡ ಅಂತಾರಾಷ್ಟ್ರೀಯ ನಿಲ್ದಾಣಕ್ಕೆ ಅಂಟಿಕೊಂಡಂತಿರುವ ಜಾಲ-2 ಹೋಬಳಿಯ ನವರತ್ನ



ದಿನೇಶ್‌ಗೆ ಕುತ್ತು ತಂದಿರುವ ಅಗ್ರಹಾರದ ಸ್ವತ್ತು


ಅಗ್ರಹಾರದ ಸರ್ವೇ ನಂಬರ್ 3 ಮತ್ತು 13ರಲ್ಲಿ ಒಟ್ಟು 170 ಎಕರೆ ಗೋಮಾಳದ ಜಮೀನಿದೆ. ಆ ಜಮೀನಿನಲ್ಲಿ ಸುಮಾರು 56 ಎಕರೆ ಜಮೀನಿನ ಒಡೆತನವನ್ನು ಗುಂಡೂರಾವ್ ಫ್ಯಾಮಿಲಿ ಹೊಂದಿರುವುದೇ ಅನುಮಾನಕ್ಕೆ ಎಡೆಮಾಡಿಕೊಟ್ಟಿತ್ತು. ರಾಮಸ್ವಾಮಿ ವರದಿ ಸಲ್ಲಿಕೆಯಾದ ನಂತರ ಸರ್ಕಾರಿ ದಾಖಲೆಗಳನ್ನು ಕೆದಕುತ್ತಾ ಹೋದಾಗ ಒಂದೇ ವಿಳಾಸ ಆದರೆ ವಿಭಿನ್ನ ಹೆಸರು ನೀಡಿ ಬೋಗಸ್ ಹೆಸರಿನಲ್ಲಿ ಒಟ್ಟು 64.32 ಎಕರೆಯನ್ನು ಗುಂಡೂರಾವ್ ಫ್ಯಾಮಿಲಿ ತನ್ನದಾಗಿಸಿಕೊಂಡಿರೋದು ಬಯಲಿಗೆ ಬಂದಿತ್ತು.

ಗುಂಡೂರಾವ್ ಸಹೋದರರಾದ ಮಹೇಶ್, ದಿನೇಶ್ ಹಾಗೂ ರಾಜೇಶ್‌ರ ಹೆಸರಲ್ಲಿ ಸರ್ವೇ ನಂಬರ್ 3ರಲ್ಲಿ 10.20 ಎಕರೆ ಹಾಗೂ ಸರ್ವೇ ನಂಬರ್ 13ರಲ್ಲಿ 6.15 ಎಕರೆ ಜಮೀನಿದೆ. ಮಾಜಿ ಮುಖ್ಯಮಂತ್ರಿ ಆರ್. ಗುಂಡೂರಾವ್ ಪತ್ನಿ ವರಲಕ್ಷ್ಮಿ ಹೆಸರಲ್ಲಿ ಸರ್ವೇ ನಂಬರ್ 13ರಲ್ಲಿ ಒಂದು ಕಡೆ 15.4 ಎಕರೆ ಹಾಗೂ ಮತ್ತೊಂದು ಕಡೆ 15.35 ಎಕರೆ ಜಮೀನಿದೆ. ವಿಚಿತ್ರವೆಂದರೆ ಒಂದರ ದಾಖಲೆಯಲ್ಲಿ ವರಲಕ್ಷ್ಮಿ ಗುಂಡೂರಾವ್ ಬಿನ್ ಲೇಟ್ ಆರ್. ಗುಂಡೂರಾವ್, ಆರ್.ಟಿ.ನಗರ, ಬೆಂಗಳೂರು ಎನ್ನುವ ವಿಳಾಸ ನೀಡಲಾಗಿದ್ದರೆ ಮತ್ತೊಂದು ಜಮೀನಿನ ದಾಖಲೆಯಲ್ಲಿ ವರಲಕ್ಷ್ಮಿ ಗುಂಡೂರಾವ್ ಬಿನ್ ರವಿಶಂಕರ್ ಸರ್‌ನಾಯಕ್, ಚಂದ್ರಹಾಸ ಅಪಾರ್ಟ್‌ಮೆಂಟ್, 13ನೇ ಕ್ರಾಸ್, ಸದಾಶಿವ ನಗರದ ವಿಳಾಸವನ್ನು ನೀಡಲಾಗಿದೆ. ಹೀಗೆ ಗುಂಡೂರಾವ್ ಫ್ಯಾಮಿಲಿಗೆ 'ಬಿನ್' ರೂಪದಲ್ಲಿ ಬಂದು ಸೇರಿಕೊಳ್ಳುವ ಸರ್‌ನಾಯಕ್ ಹೆಸರಲ್ಲೇ ಪ್ರತ್ಯೇಕವಾಗಿ 34.42 ಎಕರೆ ಜಮೀನು ಬಿಕರಿಯಾಗಿದೆ. ರವಿಶಂಕರ್ ಚೂಡಾಮಣಿ ಸರ್‌ನಾಯಕ್ ಹೆಸರಿನಲ್ಲಿ ಒಂದೇ ಸರ್ವೇ ನಂಬರ್‌ನ ಬೇರೆ ಬೇರೆ ಕಡೆ ರಿಜಿಸ್ಟರ್ ಆಗಿರುವ ದಾಖಲೆಯ ವಿಳಾಸವು, ವರಲಕ್ಷ್ಮಿ ಗುಂಡೂರಾವ್ ಬಿನ್ ಗುಂಡೂರಾವ್‌ಗೆ ನೀಡಲಾದ ವಿಳಾಸವೇ ಆಗಿದೆ. ಅಲ್ಲಿಗೆ ಗುಂಡೂರಾವ್ ಕುಟುಂಬದ ನೇರ ವಾರಸ್ದಾರಿಕೆಯಲ್ಲದ ಸರ್‌ನಾಯಕ್ ಹೆಸರಿನ ಜಮೀನು ಒಡೆತನಕ್ಕೂ ಗುಂಡೂರಾವ್ ಕುಟುಂಬದ ಯಜಮಾನಿಕೆ ಇರುವ ಅನುಮಾನ ಖಾತ್ರಿಯಾಗುತ್ತದೆ. ಅಷ್ಟೇ ಅಲ್ಲ, ದಿನೇಶ್ ಗುಂಡೂರಾವ್‌ರ ಚಿಕ್ಕಮ್ಮ ಜಮುನಾ ಕೂಡಾ ಇದೇ ಸರ್ವೇ ನಂಬರ್‌ಗಳಲ್ಲಿ ಒಟ್ಟು 17.22 ಎಕರೆ ಜಮೀನಿನ ಒಡತಿಯಾಗಿದ್ದಾರೆ. ಅಂದರೆ 170 ಎಕರೆ ಗೋಮಾಳದ ಜಮೀನಿನಲ್ಲಿ ಗುಂಡೂರಾವ್ ಫ್ಯಾಮಿಲಿಯೇ 98.74 ಎಕರೆ ಅಧಿಪತ್ಯ ಹೊಂದಿದೆ ಅಂದಂಗಾಯ್ತು!


ದಾಖಲೆಗಳು ಸ್ಪಷ್ಟವಾಗಿ ಕುಟುಂಬದ ಭೂ ಒಡೆತನವನ್ನು ಸಾರಿ ಹೇಳುತ್ತಿದ್ದರೂ ದಿನೇಶ್ ಗುಂಡೂರಾವ್ ತಾನು ಸಾಚಾ ಎಂದು ಸಾಬೀತುಪಡಿಸಿಕೊಳ್ಳುವ ಪ್ರಯತ್ನವನ್ನು ಮಾತ್ರ ಬಿಟ್ಟಿಲ್ಲ. ವಿಪರ್ಯಾಸವೆಂದರೆ, ಆ ಪ್ರಾಮಾಣಿಕತೆಯ ಬಿರುಸಿನಲ್ಲಿ ಅಪಾಯಗಳನ್ನು ಒಂದೊಂದಾಗಿ ಮೈಮೇಲೆ ಎಳೆದುಕೊಳ್ಳುತ್ತಲೇ ಬರುತ್ತಿದ್ದಾರೆ. ಸಮಾಜ ಪರಿವರ್ತನಾ ಸಮುದಾ[ಯದ] ಎಸ್.ಆರ್.ಹಿರೇಮಠ್ ಲೋಕಾಯುಕ್ತ ಕೋ[...] ಮೆಟ್ಟಿಲೇರಿ ಪ್ರಕರಣಕ್ಕೆ ಜೀವ ತುಂಬುವ ಹೊತ್ತಿಗೆ ಸ[...] ದಿನೇಶ್ ಗುಂಡೂರಾವ್ ವಿದೇಶ ಪ್ರವಾಸದ [...] ಜೋರ್ಡಾನ್‌ನಲ್ಲಿದ್ದರು. ಅಲ್ಲಿಂದಲೇ ಟ್ವೀಟಿಸಿದ [...] ಮಂತ್ರಿಗಳು ಇದರಲ್ಲಿ 'ತಮ್ಮ ಕುಟುಂಬದ [...] ಇಲ್ಲವೇ ಇಲ್ಲ, 1983ರಲ್ಲೇ ತಮ್ಮ ತಂದೆ ಖರೀ[...] ಜಮೀನು ಅದಾಗಿತ್ತು, ಅವುಗಳಿಗೆ ಸರ್ಕಾರವೇ [...] ಪೋಡಿ ಖಾತೆ ಮಾಡಿಕೊಟ್ಟಿಲ್ಲ' ಎಂದು ಬಿ[...] ಅಷ್ಟೇ ಆಗಿದ್ದಿದ್ದರೆ ಪರವಾಗಿಲ್ಲ, 2007ರಲ್ಲಿ [...] ರಾಮಸ್ವಾಮಿ ಆಯೋಗ ವರದಿ ಸಲ್ಲಿಸಿದಾಗ [...] ಕುಟುಂಬ ಕಿಂಚಿತ್ತೂ ಭೂಮಿ ಒತ್ತುವರಿ ಮಾಡಿಕೊ[...] ಆರೋಪ ಮಾಡಿದ ರಾಮಸ್ವಾಮಿ ಜಂಟಿ ಸದನ ಸಮಿ[ತಿ] ಮೇಲೆಯೇ ಮಾನನಷ್ಟ ಮೊಕದ್ದಮೆ ಹೂಡುತ್ತೇನೆ ಎ[...] ಕೂಗಾಡಿದ್ದ ದಿನೇಶ್ ಅದೇ ಜೋರ್ಡಾನ್‌ನಿಂದ ಟ್ವೀ[...] ಮತ್ತೊಂದು ಸಂದೇಶದಲ್ಲಿ 'ನಾವು ಆ ಜಮೀನನ್ನು ವ[...] ಕಾರ್ಯಕ್ಕೇನು ಬಳಸಿಕೊಂಡಿಲ್ಲ, ಒತ್ತುವರಿಯಾಗಿದ್ದರೆ [...] ವಾಪಾಸ್ ಪಡೆಯಲಿ' ಎಂದಿದ್ದರು. ಅಲ್ಲಿಗೆ ಭೂ ಒ[ತ್ತುವರಿ] ಮಾಡಿಕೊಂಡಿರುವುದನ್ನು ಅವರೇ ಒಪ್ಪಿಕೊಂಡಂತಾ[...]

ಗೋಮಾಳದ ಮಂಜೂರೇ ಅಕ್ರಮ[...]

ಜೋರ್ಡಾನ್‌ನಿಂದ ಬಂದಿಳಿಯುತ್ತಲೇ ನೇ[...] ಪತ್ರಿಕಾಗೋಷ್ಠಿ ಕರೆದ ದಿನೇಶ್ ಗುಂಡೂರಾವ್ ಮತ್ತೆ[...]



ಆಸ್ತಿ ಮುಚ್ಚಿಟ್ಟ 2004ರ ಅಫಿಡವಿಟ್



2008ರ ಅಫಿಡವಿಟ್‌ನಲ್ಲಿ ಆಸ್ತಿ ಘೋಷಣೆ[...]


ಯಡವಟ್ಟನ್ನು ಮೈಮೇಲೆ ಎಳೆದುಕೊಂಡಿದ್ದರು. ಮಂ[...] ಕೈ ತಪ್ಪುತ್ತದೆನ್ನುವ ಆತಂಕದಲ್ಲೊ, ಏನಿಲ್ಲವೆಂ[ದರೂ] 500-600 ಕೋಟಿ ಬೆಲೆಬಾಳುವ ಆಸ್ತಿಯೇ ಕೈ[...] ಹೋಗುತ್ತದೆಂಬ ಕೋಪದಲ್ಲೊ ಪ್ರಕರಣವನ್ನು ಬಯಲ[...] ಎಸ್.ಆರ್. ಹಿರೇಮಠ್ ಮೇಲೆ ರೇಗಾಡಿದ್ದರು. [...] ಕುಟುಂಬದ ಮೇಲೆ ಆರೋಪ ಮಾಡಿರುವ ರಾಮ[ಸ್ವಾಮಿ] ವರದಿಯೇ ಲೋಪಪೂರಿತವಾದದ್ದು, ಅರ್ಧ[...] ಸುಳ್ಳಿನಿಂದ ಕೂಡಿರುವಂತದ್ದು ಎಂದು ಹರಿಹಾಯ್[...] ಹಾಗೆ ರೇಗಾಡುವ ಭರಾಟೆಯಲ್ಲಿ ವಿವಾದಿತ ಜಮೀ[...] ಮತ್ತೊಂದು ಸೂಕ್ಷ್ಮವನ್ನೂ ಅವರು ಬಿಟ್ಟುಕೊಟ್ಟ[...] ಆ ಜಮೀನನ್ನು 1983ರಲ್ಲೇ ತಮ್ಮ ತಂದೆ [...] ಮುಖ್ಯಮಂತ್ರಿ ದಿವಂಗತ ಆರ್. ಗುಂಡೂ[ರಾವ್] ಖರೀದಿಸಿದ್ದರು ಮತ್ತು 1993ರಲ್ಲಿ ಅವರು ತೀರಿ[...] ನಂತರ 1995-96ರ ಸಾಲಿನಲ್ಲಿ ಪಿತ್ರಾರ್ಜಿತ [...] ವಿಲೇವಾರಿ ಭಾಗವಾಗಿ ಅದು ತನಗೂ ಹ[...] ಸಹೋದರರಿಗೂ ಬಂದಿತ್ತೆನ್ನುವುದು ಅವರ [...] ಪತ್ರಿಕಾಗೋಷ್ಠಿಯ ಹೊರಳಾಟವಾಗಿತ್ತು. ಅವ[...] ಸಂಕಷ್ಟದಿಂದ ಪಾರು ಮಾಡಬೇಕಿದ್ದ ಆ ಸ್ಪಷ್ಟೀಕರಣ ಅ[...] ಎರಡು ದೊಡ್ಡ ಇಕ್ಕಟ್ಟಿನಲ್ಲಿ ಸಿಕ್ಕಿಸಿದೆ.

ಮೊದಲನೆಯದು, ಅವರೇ ಹೇಳುವಂತೆ ನ[ವರತ್ನ] ಅಗ್ರಹಾರದ ಒಟ್ಟು 170 ಎಕರೆ ಗೋಮಾಳದ ಜಮೀ[...] ಅಂದಿನ ಜಿಲ್ಲಾಧಿಕಾರಿ ಒಟ್ಟು ಆರು ಜನರಿಗೆ ಮ[...] ಮಾಡಿದ್ದರಂತೆ. ಆದರೆ ನಿಯಮದ ಪ್ರಕಾರ ಗೋಮ[ಾಳ] ಜಮೀನನ್ನು ಒಬ್ಬ ವ್ಯಕ್ತಿಗೆ ಹೆಚ್ಚೆಂದರೆ ಮೂರರಿಂದ [...] ಎಕರೆ ಅಷ್ಟೇ ಮಂಜೂರು ಮಾಡಬೇಕು. ದಿ[ನೇಶ್] ಗುಂಡೂರಾವ್ ಹೇಳುವ ಪ್ರಕಾರ ಆರು ಜನರಿಗೆ [...] ಎಕರೆ ಎಂದರೆ ಏನಿಲ್ಲವೆಂದರು ಒಬ್ಬೊಬ್ಬರಿಗೆ 28 [...] ಮಂಜೂರು ಮಾಡಿರೋದೆ ಅಕ್ರಮ. ಮತ್ತೊಂದು [...] ಎಂದರೆ ಆ ಆರು ಜನರಲ್ಲಿ ಟಿ. ನಾಗರಾಜು ಎಂಬ[...] 70 ಎಕರೆ ಗೋಮಾಳ ಜಮೀನನ್ನು ಡಿಸಿ ಮಂ[ಜೂರು] ಮಾಡಿದ್ದರು ಮತ್ತು ಆ ವ್ಯಕ್ತಿಯಿಂದಲೇ ತಮ್ಮ [...] 56 ಎಕರೆ ಜಮೀನನ್ನು ಖರೀದಿಸಿದ್ದಾಗಿ ದಿನೇಶ್ [...] ಸ್ವಂತ ಮಾತಿನಲ್ಲಿ ದಾಖಲಿಸುತ್ತಾರೆ. ಕಾನೂನು [...] ಗೋಮಾಳದ ಜಾಗದಲ್ಲಿ 70 ಎಕರೆಯನ್ನು [...] ವ್ಯಕ್ತಿಗೆ ಮಂಜೂರು ಮಾಡಿರೋದು, ಆ ವ್ಯಕ್ತಿ[...]

ಕುರಿ ಕಾಯಲು ತೋಳ ಕಾವಲಿಗೆ!

2007ರಲ್ಲೇ ಬೆಂಗಳೂರಿನ ಸುತ್ತಮುತ್ತ ಸುಮಾರು 49,000 ಎಕರೆ ಸರ್ಕಾರಿ ಜಮೀನು ಒತ್ತುವರಿ ಆಗಿರುವ ಬಗ್ಗೆ ಎ.ಟಿ.ರಾಮಸ್ವಾಮಿ ಆಯೋಗ ವರದಿ ಸಲ್ಲಿಸಿದ್ದರೂ ಸತತ ಏಳು ವರ್ಷಗಳ ಕಾಲ ಈ ಕುರಿತು ಕ್ರಮ ಕೈಗೊಳ್ಳುವ ಕೆಲಸವನ್ನು ಸರ್ಕಾರಗಳು ಮಾಡಲೇ ಇಲ್ಲ. ಕೊನೆಗೆ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ದೊರೆಸ್ವಾಮಿ ನೇತೃತ್ವದಲ್ಲಿ ಅಹೋರಾತ್ರಿ 39 ದಿನಗಳ ಪ್ರತಿಭಟನೆಯ ನಂತರ ಸಿದ್ದು ಸರ್ಕಾರ, ವರದಿ ಅನುಷ್ಠಾನದ ದಿಟ್ಟ ನಿರ್ಧಾರಕ್ಕೆ ಬಂದಿದೆ. ಕೇವಲ ಭೂಕಂಟಕರಲ್ಲದೆ ಅವರಿಗೆ ನೆರವು ನೀಡಿದ ಭ್ರಷ್ಟ ಅಧಿಕಾರಿಗಳಿಗೂ ಒಂದು ಗತಿ ಕಾಣಿಸುವ ಭರವಸೆಯ ಮಾತನ್ನಾಡಿದ್ದ ಸಿದ್ದರಾಮಯ್ಯ ತಮ್ಮ ಮೊದಲ ಹೆಜ್ಜೆಯಲ್ಲೇ ಎಡವಿದಂತೆ ಕಂಡುಬರುತ್ತಿದೆ. ಈ ಮೊದಲೇ ಅವರು ಹೇಳಿದಂತೆ ಪ್ರಕರಣದ ಶೀಘ್ರ ಇತ್ಯರ್ಥಕ್ಕಾಗಿ ಇಬ್ಬರು ವಿಶೇಷ ಜಿಲ್ಲಾಧಿಕಾರಿಗಳನ್ನಾಗಿ ನೀಲಾ ಮಂಜುನಾಥ್ ಮತ್ತು ಮೀರ್ ಅನೀಸ್ ಅಹಮದ್‌ರನ್ನೇನೊ ನೇಮಕ ಮಾಡಿದ್ದಾರೆ; ಆದರೆ ಹೀಗೆ ನೇಮಕವಾದ ಮೀರ್ ಅನೀಸ್ ಅಹಮದ್ ಹಿನ್ನೆಲೆ ತನಿಖೆಯ ಪ್ರಾಮಾಣಿಕತೆಗೆ ತಕ್ಕುನಾದುದಲ್ಲ. ಯಾಕೆಂದರೆ 2011ನೇ ಸಾಲಿನ ಐಪಿಆರ್ (ಸ್ಥಿರಾಸ್ತಿ ಆದಾಯ ಮೂಲ) ಘೋಷಿಸಿಕೊಳ್ಳದ ದೇಶದ 49 ಐಎಎಸ್ ಅಧಿಕಾರಿಗಳಲ್ಲಿ ಈ ಅನೀಸ್ ಕೂಡಾ ಒಬ್ಬರು. ಇವತ್ತಿಗೂ ಅವರು ತಮ್ಮ ಆಸ್ತಿ ಮೂಲವನ್ನು ಸರ್ಕಾರಕ್ಕೆ ಸಲ್ಲಿಸಿಲ್ಲ. ತನ್ನ ಆಸ್ತಿಯನ್ನೇ ಹೀಗೆ ಗುಟ್ಟಾಗಿಟ್ಟುಕೊಳ್ಳುವ ವ್ಯಕ್ತಿ ಅದಿನ್ನೇಗೆ ಭ್ರಷ್ಟರ ಆಸ್ತಿಯನ್ನು ಬಯಲಿಗೆಳೆದಾನು? ಸ್ವತಃ ಸಿದ್ದರಾಮಯ್ಯನವರೆ, ಜುಲೈ 8, 2014ರಂದು ವಿಧಾನಸಭೆಯಲ್ಲಿ ಅಧಿಕಾರಿಗಳ ಮೇಲಿನ ಕ್ರಮದ ಕುರಿತು ಉತ್ತರಿಸುತ್ತಿರುವಾಗ 'ಅನೀಸ್ ಅಹಮದ್ 2013ರ ಆಸ್ತಿ ಘೋಷಣೆ ಮಾಡಿಕೊಂಡಿಲ್ಲ. ಅವರಿಗೆ ಶೀಘ್ರವೇ ನೋಟಿಸ್ ನೀಡಲಾಗುವುದೆಂದು ಸದನಕ್ಕೆ ಉತ್ತರ ಕೊಟ್ಟಿದ್ದರು. ಈಗ ಅದೇ ಅನೀಸ್‌ನನ್ನು ವಿಶೇಷ ಜಿಲ್ಲಾಧಿಕಾರಿಯನ್ನಾಗಿ ತಂದು ಕೂರಿಸುವುದು ತನಿಖೆಯ ನಿಷ್ಪತೆ ಮೇಲೆಯೇ ಅನುಮಾನ ಮೂಡುವಂತೆ ಮಾಡಿದೆ.

ಕೇವಲ ಆಸ್ತಿ ಘೋಷಣೆ ಮಾತ್ರವಲ್ಲದೆ ಕರ್ನಾಟಕ ಮೇಲ್ಮನವಿ ಪ್ರಾಧಿಕಾರದ ರಿಜಿಸ್ಟ್ರಾರ್ ಆಗಿದ್ದಾಗ ಅನೇಕ ಭೂ ದಾಖಲೆಗಳನ್ನು ತಿರುಚಿದ ಮತ್ತು ನಾಶ ಪಡಿಸಿದ ಆರೋಪಗಳೂ ಈತನ ಮೇಲಿವೆ. ವಕ್ಫ್ ಬೋರ್ಡ್‌ನಲ್ಲಿ ದೀರ್ಘಕಾಲ ವಕ್ಕರಿಸಿದ್ದ ಈತ ವಕ್ಫ್ ಆಸ್ತಿ ಕಬಳಿಕೆ ಹಗರಣದಲ್ಲೂ ಕೈಯಾಡಿಸಿರುವ ಕುರಿತು ಗುಮಾನಿಗಳು ಹರಿದಾಡುತ್ತಿವೆ. ಇಂತಿಪ್ಪ ಅನೀಸ್ ಅಹಮದ್‌ನಿಂದ ಭ್ರಷ್ಟರ ಬೇಟೆ ಸಾಧ್ಯವಾದೀತೆ? ಈ ಪ್ರಶ್ನೆಗೆ ಸ್ವತಃ ಸಿದ್ದರಾಮಯ್ಯನವೇ ಉತ್ತರಿಸಬೇಕು...



. ಗುಂಡೂರಾವ್ 1983ರಲ್ಲಿ ಖರೀದಿ ಮಾಡಿದ್ದು, ...ಆ ಖರೀದಿ ನಡೆದ 1983ರಲ್ಲೇ ಗುಂಡೂರಾವ್ ...ರಾಜ್ಯದ 12ನೇ ಮುಖ್ಯಮಂತ್ರಿಯಾಗಿ ...ಕಾರದಲ್ಲಿದ್ದುದು ಕಾಕತಾಳೀಯ ಅಂತನ್ನಿಸದು. ಅಲ್ಲಿಗೆ, ...ಮಾಳದ ಮಂಜೂರಾತಿಯಲ್ಲೆ ಗುಂಡೂರಾವ್ ...ಂಬದ ಅಕ್ರಮದ ವಾಸನೆ ಬಡಿಯುತ್ತದೆ.

...ನ್ನೂ ಮುಂದುವರೆದು, ತಮ್ಮ ಜಮೀನಿಗೆ ಈಗಲೂ ...ದಿ ಖಾತೆ, ಗಡಿಯೇ ನಿಗದಿಯಾಗಿಲ್ಲ ಅದನ್ನು ...ಕೊಡುವಂತೆ 2008ರಲ್ಲೇ ಸರ್ಕಾರಕ್ಕೆ ಪತ್ರ ಬರೆದಿದ್ದೆ ...ಬದಾಗಿ ತಮ್ಮನ್ನು ಪಾರು ಮಾಡಿಕೊಳ್ಳುವ ಯತ್ನವನ್ನೂ ...ಮಾಡುತ್ತಾರೆ. ಮುಖ್ಯಮಂತ್ರಿ ಹುದ್ದೆಯಲ್ಲಿರುವಂತಹ ...ಬ್ಬರು ಪೋಡಿ ಖಾತೆಯಿಲ್ಲದ, ನೆಟ್ಟಗೆ ಗಡಿಯೂ ...ಲ್ಲದ, ಜಮೀನಿನ ಮೂಲ ವಾರಸುದಾರಿಕೆಯ ...ಯೂ ಇಲ್ಲದ, ಯಾವ ಜಮೀನು ಏನು ಉದ್ದೇಶಕ್ಕಾಗಿ ...ಮೂರಾಗಿತ್ತು ಎನ್ನುವುದನ್ನೂ ಲೆಕ್ಕಿಸದೆ ಐವತ್ತಾರು ...ಭೂಮಿ ಖರೀದಿ ಮಾಡುತ್ತಾರೆ ಎಂದರೆ ಯಾರಾದರು ...ಕ್ಕೆ ಸಾಧ್ಯವೇ?

ಸುಳ್ಳು ಅಫಿಡವಿಟ್

...ನ್ನು ಅವತ್ತಿನ ಪತ್ರಿಕಾಗೋಷ್ಠಿಯಲ್ಲಿ ದಿನೇಶ್ ...ರಾವ್ ಮಾಡಿಕೊಂಡ ಮತ್ತೊಂದು ಯಡವಟ್ಟೆಂದರೆ ...ಮೀನು 1995-96ರಲ್ಲಿ ತಮ್ಮ ಹೆಸರಿಗೆ ಬಂತು ...ದಾಗಿ ಹೇಳಿದ್ದು. ಆ ಹೇಳಿಕೆಯಲ್ಲಿ ಕಿಂಚಿತ್ತೂ ...ಷವಿಲ್ಲದಿರಬಹುದು, ಆದರೆ ತನಗೇ ಗೊತ್ತಿಲ್ಲದೆ ಸುಳ್ಳು ...ವಿಟ್ ಸಲ್ಲಿಸಿದ ಖೆಡ್ಡಾಕ್ಕೆ ದಿನೇಶ್ ಮಕಾಡೆ ...ಚಿಕೊಂಡಿದ್ದಾರೆ!

...004ರ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ...ವಣಾ ಆಯೋಗಕ್ಕೆ ಆಸ್ತಿ ಘೋಷಿಸಿಕೊಳ್ಳುವಾಗ ...ಯಾವುದೇ ರೀತಿಯ ಕೃಷಿ ಜಮೀನು ಇಲ್ಲ' ...ದೇ ಅಫಿಡವಿಟ್ ಸಲ್ಲಿಸಿದ್ದಾರೆ. 1995-96ರಲ್ಲೇ ...ಹೆಸರಿಗೆ ಅವರ ತಂದೆ ಖರೀದಿಸಿಟ್ಟಿದ್ದ ಜಮೀನು ...ದ್ದೇ ಆಗಿದ್ದಲ್ಲಿ ಅಫಿಡವಿಟ್‌ನಲ್ಲಿ ಅದನ್ನು ತೋರಿಸದೆ ...ಟ್ಟಿದ್ದು ಏಕೆ? ಅದು ಘೋಷಣೆಗೆ ಯೋಗ್ಯವಾದ ...ನಲ್ಲ (ಅಕ್ರಮ ಮೂಲದ) ಎನ್ನುವ ಕಾಳಜಿ(!) ದಿನೇಶ್ ...ರಾವ್‌ಗೆ ಇಲ್ಲದೆ ಅಫಿಡವಿಟ್‌ನಲ್ಲಿ ಇಂತಹ ...ಟ್ಟು ಆಗಲು ಸಾಧ್ಯವೇ ಇಲ್ಲ.

...ದರೆ 2007ರಲ್ಲಿ ಎ.ಟಿ ರಾಮಸ್ವಾಮಿ ಜಂಟಿ ಸದನ ...ತನ್ನ ವರದಿಯಲ್ಲಿ ದಿನೇಶ್ ಗುಂಡೂರಾವ್ ...ಬ ದೇವನಹಳ್ಳಿ ಆಸುಪಾಸಿನಲ್ಲಿ ಅಕ್ರಮ ಆಸ್ತಿ ...ದಿದ್ ಕುರಿತು ಉಲ್ಲೇಖಿಸಿದ ತರುವಾಯ 2008ರ ...ವಣೆ ಸಂದರ್ಭದಲ್ಲಿ ಅಫಿಡವಿಟ್ ಸಲ್ಲಿಸುವಾಗ ತನಗೆ ...ಅಗ್ರಹಾರದ ಸರ್ವೇ ನಂಬರ್ 3, 12 ಮತ್ತು ...ಒಟ್ಟು 18 ಎಕರೆ 33 ಗುಂಟೆ 'ಕೃಷಿ' ಜಮೀನಿರು ...ಗಿ ತೋರಿಸಿಕೊಳ್ಳುತ್ತಾರೆ. ಅಲ್ಲಿಗೆ 2004ರಲ್ಲಿ ದಿನೇಶ್ ...ರಾವ್ ಚುನಾವಣಾ ಆಯೋಗಕ್ಕೆ ಸಲ್ಲಿಸಿದ್ದು ಶುದ್ಧ ...ಅಫಿಡವಿಟ್ ಎನ್ನುವುದು ಸಾಬೀತಾದಂತಾಯ್ತು. ...ಹಾಗೆ, ರಾಮಸ್ವಾಮಿ ವರದಿ ಸಲ್ಲಿಕೆಯ ನಂತರ 2011ರ ...ಮೊಹೆಯಲ್ಲೇ ದಿನೇಶ್ ಗುಂಡೂರಾವ್ ಕುಟುಂಬ ...ವರಿ ಮಾಡಿಕೊಂಡ 10.09 ಎಕರೆಯನ್ನು ...ಗೊಳಿಸುವಂತೆ ನೋಟಿಸ್ ನೀಡಲಾಗಿತ್ತು, ಆದರೆ ...ರಾವ್ ಫ್ಯಾಮಿಲಿ ತನ್ನ ಪ್ರಭಾವ ಬಳಸಿಕೊಂಡು ...ವರೆಗೂ ಅದಕ್ಕೆ ಆಸ್ಪದ ನೀಡಿರಲಿಲ್ಲ.

...ಷ್ಟು ದಿನ ಇಂತಹದ್ದೊಂದು ಅಕ್ರಮ ಭೂ ...ನ್ನು ಗುಪ್ತವಾಗಿ ಸಲಹಿಕೊಂಡು ಬಂದಿದ್ದೇ ದಿನೇಶ್ ...ರಾವ್‌ರ ಪರಮ ಪ್ರಮಾದ. ಅಂತದ್ದರಲ್ಲಿ ಖುದ್ದು ...ಬಾಳಪ್ಪಾ ಹಂದಿಗುಂದರೇ ತಮ್ಮ ನವೆಂಬರ್ ...ವರದಿಯಲ್ಲಿ (ಇದಕ್ಕೂ ಮುನ್ನ ಅಕ್ಟೋಬರ್ 8ರಂದೇ ...ದೇ ಇನ್ನೊಂದು ವರದಿಯನ್ನೂ ಸಲ್ಲಿಸಿದ್ದರು) ದಿನೇಶ್ ...ರಾವ್ ಸರ್ವೇ ನಂಬರ್ 3ರಲ್ಲಿ 5 ಎಕರೆ ಹಾಗೂ ...ನಂಬರ್ 13 ರಲ್ಲಿ 5.09 ಎಕರೆ ಅಕ್ರಮ ...ನ ಮಾಡಿಕೊಂಡಿರುವುದಾಗಿ ಉಲ್ಲೇಖಿಸಿದ ನಂತರವೂ ...ಸಮರ್ಥಿಸಿಕೊಳ್ಳುವ ಹಾಗೂ ಬಚಾಯಿಸಿಕೊಳ್ಳುವ ...ಮಾಡುತ್ತಿರೋದು ದಿನೇಶ್‌ಗೆ ಭಾರೀ ದುಬಾರಿ ...ಕ್ಕೆ ತಂದಿಡಲಿದೆ.

● ಗಿರೀಶ್ ತಾಳಿಕಟ್ಟೆ

ಕೌನ್ಸಿಲರ್ ಲಲಿತಾ ಆತ್ಮಹತ್ಯೆ ಬಿಜೆಪಿ ಪುರುಷ ಸಿಂಹರಿಗೆ ಬಲಿ!



'ಕಾಂಗ್ರೆಸ್ ಪಾರ್ಟಿಯಲ್ಲಿ ಮಹಿಳೆಯರಿಗೆ ಬೆಲೆಯೇ ಇಲ್ಲ. ಪುರುಷ ನಾಯಕರನ್ನು ತೃಪ್ತಿ ಪಡಿಸದೆ ಹೋದರೆ ಅಲ್ಲಿ ಯಾವ ಮಹಿಳೆಗೂ ಸ್ಥಾನಮಾನವಿಲ್ಲ' ಎಂದು ಪಕ್ಕಾ ಲೇಡಿ ಮುತಾಲಿಕ್ ಶೈಲಿಯಲ್ಲೇ ಬಾಯಿ ಹರಿದುಕೊಂಡ, ಕೂಗುಮಾರಿ ತೇಜಸ್ವಿನಿಗೆ ಗಿರಿನಗರದ ಬಿಜೆಪಿ ಕೌನ್ಸಿಲರ್ ಲಲಿತಾ ಸಾವಿಗಿಂತ ಉತ್ತರ ಬೇಕಿಲ್ಲವೇನೊ!

ನವೆಂಬರ್ 20ರ ಸಂಜೆಯೇ ಸಾಗರ್ ಅಪೋಲೋ ಆಸ್ಪತ್ರೆಯಲ್ಲಿ ಲಲಿತಾ ಕಣ್ಣುಮುಚ್ಚಿಯಾಗಿತ್ತು. ಗಿರಿನಗರದ ಬಿಜೆಪಿ ಕೌನ್ಸಿಲರ್ ಲಲಿತಾ ಬಸವನಗುಡಿ ಶಾಸಕ ರವಿಸುಬ್ರಹ್ಮಣ್ಯರ ಖಾಸಾ ಅಣ್ಣ ಚಂದ್ರಶೇಖರ್‌ರ ನೆಚ್ಚಿನ ಶಿಷ್ಯೆ, ಸಂಸದ ಅನಂತ್‌ಕುಮಾರ್‌ರ ವಿನಮ್ರ ಸೇವಕಿ ಮತ್ತು ಬಿಜೆಪಿ ಮಹಿಳಾ ಮೋರ್ಛಾದ ನಗಣ್ಯ ನಾಯಕಿ. ಎಚ್.ಎಸ್. ಲಲಿತಾ ಸಾವು ಆತ್ಮಹತ್ಯೆ ಎಂಬ ಬಗ್ಗೆ ಯಾರಿಗೂ ಅನುಮಾನವಿಲ್ಲ. ನವೆಂಬರ್ 18 ರಂದು ಬೇಕಾಬಿಟ್ಟಿ ನಿದ್ರೆ ಮಾತ್ರೆ ಸೇವಿಸಿ ಪ್ರಜ್ಞಾಹೀನರಾಗಿ ಬಿದ್ದಿದ್ದ ಗಿರಿನಗರದ ಬಿಜೆಪಿ ಕೌನ್ಸಿಲರ್ ಎಚ್.ಎಸ್. ಲಲಿತಾರನ್ನು ಪತಿ ವಿಜಯ್‌ಕುಮಾರ್ ಆಸ್ಪತ್ರೆಗೆ ಕರೆತರುವ ಹೊತ್ತಿಗೆ ಕಾಲ ಮಿಂಚಿತ್ತು.

ಇನ್ನೂ ಹೇಳಬೇಕೆಂದರೆ ಲಲಿತಾ ಆತ್ಮಹತ್ಯೆಗೆ ಯತ್ನಿಸಿದರೆಂಬ ಈ ರೀತಿ ಸುದ್ದಿ ಹಬ್ಬಿದ್ದು ಇದೇ ಮೊದಲಲ್ಲ. ಇಲ್ಲಿಗೆ ತಿಂಗಳ ಹಿಂದೆ; ಅದಕ್ಕೂ ಎರಡು ತಿಂಗಳ ಹಿಂದೆ ಲಲಿತಾ ಆತ್ಮಹತ್ಯೆಯ ಸುದ್ದಿ ಕೇಳಿಕೇಳಿಯೇ ಬಸವನಗುಡಿ ಬಿಜೆಪಿ ಮಹಿಳೆಯರಿಗದು ಅಭ್ಯಾಸವಾಗಿ ಹೋಗಿತ್ತು. ವಿಷ ಕುಡಿದರಂತೆ, ನೇಣಿಗೆ ಯತ್ನಿಸಿದರಂತೆ, ಮಲಗಿದವರು ಎದ್ದೇ ಇಲ್ಲವಂತೆ, ಆಸ್ಪತ್ರೆಗೆ ಸೇರಿಸಿದ್ದಾರಂತೆ, ನಿದ್ರೆ ಮಾತ್ರೆಯಂತೆ, ಪ್ರತಿನಿತ್ಯ ಮನೆಯಲ್ಲೇ ಕೂತು ಕುಡಿಯುತ್ತಾರಂತೆ, ಆದ ಅಪಮಾನಕ್ಕೆ ಯಾರಿಗೂ ಮುಖ ತೋರಿಸುತ್ತಿಲ್ಲವಂತೆ.....!

ಕಳೆದ ಏಪ್ರಿಲ್ 22ರಂದು ಗಾಂಧಿನಗರದ ಸುಖಸಾಗರ್ ಮಾಲ್‌ನ ಅಶೋಕಾ ಅಪ್ಪೇರಲ್ಸ್ ಬಟ್ಟೆ ಅಂಗಡಿಯಲ್ಲಿ ಸಿಕ್ಕಿಬಿದ್ದು ಜೈಲಿಗೂ ಹೋಗಿ ಬಂದ ಲಲಿತಾ ಪಾಲಿಗದು ದೊಡ್ಡ ಅವಮಾನವೇ ಸರಿ. ಓರ್ವ ಬಿಬಿಎಂಪಿ ಸದಸ್ಯೆಯಾಗಿ ಅದರಲ್ಲೂ ಪಾಲಿಕೆಯಲ್ಲಿ ಅಧಿಕಾರಸ್ಥ ಪಕ್ಷದವಳಾಗಿ ಸೀರೆ ಕದ್ದು ಸಿಕ್ಕಿ ಬೀಳಬೇಕಾದ ದಾರಿದ್ರ್ಯವಾಗಲಿ ದುರ್ಗತಿಯಾಗಲಿ ಆಕೆಗಿರಲಿಲ್ಲ. ಹೀಗಾಗಿ ಅದನ್ನು 'ಕ್ಲೆಪ್ಟೋಮೇನಿಯಾ' ಎಂಬ ಮನೋವ್ಯಾಧಿಯನ್ನು ತಲೆಗೆ ಕಟ್ಟಲಾಯಿತು. ಈ ಮನೋವ್ಯಾಧಿ ಇದ್ದವರಿಗೆ ಏನನ್ನಾದರೂ ಕದಿಯಲೇಬೇಕೆಂಬ ವ್ಯಸನವಿರುತ್ತದೆಯಂತೆ. ಹೀಗಾಗಿ ಪಾಲಿಕೆ ಸದಸ್ಯೆಯಾಗಿ ಲಲಿತಾ ಸೀರೆ ಕದ್ದದ್ದನ್ನು ಪೊಲೀಸರು ಕ್ಲೆಪ್ಟೋಮೇನಿಯಾ ಹಣೆಪಟ್ಟಿಗೆ ಹೊರಿಸಲೇಬೇಕಿತ್ತು.

ಆದರೆ ವಾಸ್ತವವೇ ಬೇರೆಯಿತ್ತು. ಬಿಜೆಪಿಯಲ್ಲಿ ಮಹಿಳೆಯರ ಗುಲಾಮಗಿರಿ ಪದ್ಧತಿ ಅದರ ನರನಾಡಿಗಳಲ್ಲೇ ರಕ್ತವಾಗಿತ್ತೇನೋ ಎಂಬಂತೆ ಈ ಲಲಿತಾ ಬದುಕೇ ಎಲ್ಲವನ್ನೂ ಸಾರುವಂತಿತ್ತು. ಸದ್ಯ ಲಲಿತಾರಿಗೆ ಪತಿಯಾಗಿರುವಾತ ಬಿಬಿಎಂಪಿಯ ಎಲೆಕ್ಟ್ರಿಕಲ್ ಕಂಟ್ರಾಕ್ಟರ್ ವಿಜಯ್‌ಕುಮಾರ್. ಲಲಿತಾರ ಪರಮಾಪ್ತರೇ ಹೇಳುವಂತೆ ವಿಜಯ್‌ಕುಮಾರ್ ಆಕೆಗೆ ಮೂರನೇ ಪತಿ! ಆ ಮಟ್ಟಿಗೆ ಲಲಿತಾ ಧೈರ್ಯವಂತೆ, ಬಂಧಮುಕ್ತೆ!

ಪ್ರಾರಂಭದಲ್ಲಿ ತ್ಯಾಗರಾಜನಗರದಲ್ಲಿ ಬಾಡಿಗೆ ಮನೆ ಹಿಡಿದು ಸೀರೆ ವ್ಯಾಪಾರ ಮಾಡಿಕೊಂಡಿದ್ದ ಲಲಿತಾ ಲೋಕಲ್ ಬಿಜೆಪಿ ನಾಯಕರ ಸಂಪರ್ಕಕ್ಕೆ ಬಂದದ್ದು 2001ರಲ್ಲಿ. ಮೂಲತಃ ಮೈಸೂರಿನ ಬ್ರಾಹ್ಮಣ ಕುಟುಂಬದ ಲಲಿತಾ ಬಿಜೆಪಿಗೆ ಕಾಲಿಟ್ಟಿದ್ದೇ ತಡ ಕೈಹಿಡಿದಿದ್ದ ಪುರುಷರು ದೂರಾದರು. ಸುಬ್ಬಾ ರೆಡ್ಡಿ ಬಸವನಗುಡಿಗೆ ಶಾಸಕರಾಗಿದ್ದ ಕಾಲವದು. ತದನಂತರ ರವಿಸುಬ್ರಹ್ಮಣ್ಯರಿಗೆ ಬಿಜೆಪಿ ಟಿಕೆಟ್ ಒಲಿದು ಗೆದ್ದು ಶಾಸಕರೂ ಅವರ ಅಣ್ಣ ಚಂದ್ರಶೇಖರ್ ಅನಭಿಷಕ್ತ ಎಮ್ಮೆಲ್ಲೆಯಾದರು. ಲಲಿತಾ ಪಾಲಿಗೆ ಶಾಸಕರ ಅಣ್ಣನೇ ನಾಯಕ, ಗಾಯಕ, ಮಾರ್ಗದರ್ಶಕ!

ಕಳೆದ ಪಾಲಿಕೆ ಚುನಾವಣೆ ಹೊತ್ತಿಗೆ ಗಿರಿನಗರ ವಾರ್ಡ್ ಕಾರಣವೇ ಇಲ್ಲದೆ ಮಹಿಳಾ ಮೀಸಲಾದಾಗ ಬಿಜೆಪಿಯ ಬಹುತೇಕರು ಲೆಕ್ಕ ಹಾಕಿದ್ದು ಸಂಸದ ಅನಂತ್‌ಕುಮಾರ್ ತಮ್ಮ ನಿಯತ್ತಿನ ಸೇವಕಿ ನಾಗರತ್ನರಿಗಾಗಿ ಈ ತಂತ್ರ ರೂಪಿಸಿರಬೇಕು ಎಂದು. ಅದಮ್ಯ ಚೇತನಕ್ಕಾಗಿ ತನ್ನ ಬದುಕನ್ನೇ ಮುಡುಪಿಟ್ಟ ನಾಗರತ್ನ ಬಿಜೆಪಿಯ ನಿಷ್ಠಾವಂತ ಕಾರ್ಯಕರ್ತೆ ಕೂಡ. ಶ್ಯಾಮಲಾ ಎಂಬ ಮತ್ತೊಬ್ಬ ಬಿಜೆಪಿ ನಿಷ್ಠೆ ವಕೀಲೆ ಸರೋಜಾ, ಕಂಟ್ರಾಕ್ಟರ್ ವೆಂಕಿಯ ಪತ್ನಿ ಮುಂತಾದ ಪಕ್ಷ ನಿಷ್ಠ ಮಹಿಳೆಯರೆಲ್ಲ ಗಿರಿನಗರ ವಾರ್ಡಿಗಾಗಿ ಹೆಣಗಾಡುತ್ತಿದ್ದರೆ ಶಾಸಕರ ಅಣ್ಣನ ಲೆಕ್ಕಾಚಾರವೇ ಬೇರೆಯಿತ್ತು.

ಅದು ಲಲಿತಾ ಎಂಬ ರಬ್ಬರ್ ಸ್ಟಾಂಪನ್ನು ಪಾಲಿಕೆ ಸದಸ್ಯೆಯಾಗಿಸುವುದು ಮತ್ತು ಆಕೆಯ ಹೆಸರಲ್ಲಿ ತಾನು ವಾರ್ಡನ್ನು ಆಳುವುದು!

ಇದಕ್ಕೊಂದು ಸಂಗಾತಿ ವೆಂಕಟೇಶರನ್ನು ಗುರಾಣಿಯಂತೆ ಬಳಸಲಾಯಿತು. ಅಂದರೆ ಸಂಗಾತಿ ವೆಂಕಟೇಶ್‌ಗೆ ವಿದ್ಯಾಪೀಠ ವಾರ್ಡಿನ ಬಿಜೆಪಿ ಟಿಕೆಟ್ ಬೇಕು ಅಂದರೆ ಆತ ಪಕ್ಕದ ಗಿರಿನಗರ ವಾರ್ಡಿನ ಬಿಜೆಪಿ ಅಭ್ಯರ್ಥಿಯನ್ನೂ ಗೆಲ್ಲಿಸಿಕೊಳ್ಳಬೇಕು!

ಸಂಗಾತಿಯನ್ನು ಜೊತೆ ಮಾಡಿಯೇ ಲಲಿತಾ ನಾಮಪತ್ರ ಸಲ್ಲಿಸುವಂತೆ ನೋಡಿಕೊಂಡರು. ಲಲಿತಾ ಹೆಸರಿಗಷ್ಟೇ ಬಿಜೆಪಿ ಅಭ್ಯರ್ಥಿ, ಪ್ರಚಾರ, ಖರ್ಚು, ಹಣಕಾಸು ಎಲ್ಲವನ್ನೂ ಸಂಗಾತಿ ವೆಂಕಟೇಶ್ ನಿಭಾಯಿಸಬೇಕು ಅಥವಾ ಆ ರೀತಿ ನಟಿಸಬೇಕು. ಅಂತೂ ಪುರುಷ ಪುಂಗವರ ಕಾರ್ಯತಂತ್ರವೇ ನಡೆಯಿತು. ನಯಾಪೈಸೆ ಖರ್ಚಿಲ್ಲದೆ, ಯಾವುದೇ ಶ್ರಮವಿಲ್ಲದೆ ಯಾರದೋ ಮರ್ಜಿಗಾಗಿ ಲಲಿತಾ ಗೆದ್ದರು. ಪಾಲಿಕೆ ಸದಸ್ಯೆಯೂ ಆದರು. ಆದರೆ ಪಾಲಿಕೆಯ ಉತ್ಪತ್ತಿ, ಆಮದನಿ, ಕಾಂಟ್ರಾಕ್ಟು ಎಲ್ಲವೂ ಅನಭಿಷಕ್ತ ದೊರೆಗಳ ಪಾಲಾಗಿತ್ತು. ಏಕೆಂದರೆ ಲಲಿತಾರನ್ನು ಆ ಹುದ್ದೆಗೆ ತಂದಿದ್ದೇ ರಬ್ಬರ್ ಸ್ಟಾಂಪ್ ಮಾಡಿಕೊಳ್ಳುವುದಕ್ಕಾಗಿ!

ಪಾಲಿಕೆ ಸದಸ್ಯೆಯಾಗಿದ್ದಕ್ಕೆ ತಿಂಗಳ ಸಂಬಳ ಬಿಟ್ಟರೆ ಮಿಕ್ಕೆಲ್ಲವೂ ಬಿಜೆಪಿ ದೊರೆಗಳ ಪಾಲಾಯಿತು. ಹೇಗೂ ಪಾಲಿಕೆ ಸದಸ್ಯೆ ತಾನೆ. ಯಾರೇನು ಮಾಡಿಯಾರು ಎಂದೇ ಲಲಿತಾ ಸೀರೆ ಕಳುವಿಗೆ ನಿಂತಳು. ಒಂದಲ್ಲ ಒಂದು ದಿನ ಸಿಕ್ಕಿಬೀಳಲೇ ಬೇಕಲ್ಲ, ಸುಖಸಾಗರ್ ಮಾಲ್‌ನಲ್ಲಿ ಸೀಸಿ ಟೀವಿ ಕ್ಯಾಮೆರಾಕ್ಕೆ ಸಿಕ್ಕಿಬಿದ್ದು ಜೈಲು ಪಾಲಾಗಬೇಕಾಯಿತು. ಭ್ರಷ್ಟಾಚಾರ, ಕಳ್ಳಬಿಲ್ಲು, ಲಂಚವಾದರೆ ಹೇಗೋ ದಬಾಯಿಸಿಕೊಂಡಿರಬಹುದು. ಆದರೆ ರೆಡ್‌ಹ್ಯಾಂಡ್ ಸಿಕ್ಕಿಬಿದ್ದದ್ದು ಸೀರೆ ಕದ್ದು. ಹೊರ ಪ್ರಪಂಚಕ್ಕೆ ಮುಖವನ್ನೇ ತೋರಿಸಲಾಗದಂಥ ದುರ್ಗತಿ. ಇತ್ತ ಪಾಲಿಕೆಯ ಆದಾಯವೂ ಇಲ್ಲ ಅಧಿಕಾರವನ್ನೂ ಚಲಾಯಿಸುವಂತಿಲ್ಲ. ಇನ್ಯಾವ ಪುರುಷಾರ್ಥಕ್ಕೆ ತಾನು ಕೌನ್ಸಿಲರ್ ಆಗಿರಬೇಕೆಂದು ಕೊರಗಿ ಕೊರಗಿಯೇ ಹಾಸಿಗೆ ಹಿಡಿದ ಲಲಿತಾರನ್ನು ಪತಿಯೂ ತಾತ್ಸಾರ ಮಾಡಿದ. ಬಿಜೆಪಿ ದೊರೆಗಳೂ ಕೈ ಒರೆಸಿ ಎಸೆದರು.

ಇದೇ ಚಿಂತೆಗೆ ಬಿದ್ದು ಕುಡಿತ ಶುರುವಿಟ್ಟ ಲಲಿತಾರನ್ನು ಏಕಾಂಗಿತನ ಆವರಿಸಿತ್ತು. ಪದೇಪದೇ ನಿದ್ರೆ ಮಾತ್ರೆ ಸೇವಿಸಿ ಆತ್ಮಹತ್ಯೆಗೆ ಯತ್ನಿಸುತ್ತಲೇ ಇದ್ದರು. ಅಂತಿಮವಾಗಿ ನವೆಂಬರ್ 18ಕ್ಕೆ ಅದರಲ್ಲಿ ಯಶಸ್ವಿಯೂ ಆಗಿಬಿಟ್ಟರು. ಬೇಕಿದ್ದದ್ದು ಮುಕ್ತಿ ತಾನೆ? ಅದು ಸಿಕ್ಕಿತ್ತು. ಅದೂ ಸಾವಿನ ಮೂಲಕ?

ಮುಗ್ಧೆಯೊಬ್ಬಳನ್ನು ರಬ್ಬರ್ ಸ್ಟಾಂಪ್ ಮಾಡಿಕೊಂಡು ಪಾಲಿಕೆ ಲೂಟಿಗೆ ನಿಂತವರು ಯಾರು? ಮಹಿಳಾ ಕೌನ್ಸಿಲರ್ ಓರ್ವಳಿಗೆ ಸೀರೆ ಕದ್ದು ಬದುಕಬೇಕಾದ ದುರ್ಗತಿ ತಂದವರು ಯಾರು? ಯಾರ ಲಾಭಕ್ಕಾಗಿ ಮುಗ್ಧ ಮಹಿಳೆಯೊಬ್ಬಳು ಬಲಿಯಾದಳು?

ಕಾಂಗ್ರೆಸ್ ಮಹಿಳೆಯರನ್ನು ಶೋಷಣೆ ಮಾಡಿರಬಹುದು. ಹಾಗಂತ ಬಿಜೆಪಿ ತಾನೇ ಏನು? ಅಲ್ಲಿ ಮಾನ ಹಾಳಾಗಲಿ ಪ್ರಾಣಕ್ಕಾದರೂ ಬೆಲೆ ಬೇಡವೆ? ರಘುಪತಿ ಭಟ್ಟನ ಪತ್ನಿಗೂ ಗಿರಿನಗರದ ಹತಭಾಗ್ಯ ಲಲಿತಾಗೂ ಏನು ವ್ಯತ್ಯಾಸ ಬಂತು? ಹರಕು ಬಾಯಿ ತೇಜಸ್ವಿನಿಯ ಬುದ್ಧಿಗೆ ಯಾವ ಲದ್ದಿ ಮೆತ್ತಿದೆಯೋ....! ●

ಕಾನ್ವೆಂಟ್ ಮಾಫಿಯಾ ವಿರುದ್ಧ ಅಭಿಮನ್ಯು ಎಂಬ ವಿಶಿಷ್ಟ ಚಿತ್ರ


ಅಭಿಮನ್ಯು ಆಗಿ ಅರ್ಜುನ್


ಸಿದ್ದಗಂಗೆ ಸ್ವಾಮಿಗಳ ಆಶೀರ್ವಾದ

"ಸಮುದ್ರಕ್ಕೆ ಕೊಳಚೆ ನೀರು ಬಂದು ಸೇರಿದರೆ ಇಡೀ ಸಮುದ್ರವೇ ಕೊಳಚೆಯಾಗುತ್ತದೆ. ನೀರು ಯಾವಾಗಲೂ ಶುದ್ಧವಾಗಿರಬೇಕು. ಅಂದರೆ ಖಾಸಗಿ ಮತ್ತು ಸರ್ಕಾರಿ ಶಾಲೆಗಳ ಸಂಸ್ಕೃತಿಯೇ ವಿಭಿನ್ನ. ಒಮ್ಮೆ ಬಡ ಮಕ್ಕಳನ್ನೆಲ್ಲ ನಮ್ಮ ಶಾಲೆಗಳಿಗೆ ಸೇರಿಸಿಕೊಳ್ಳಲು ಶುರು ಮಾಡಿದೆವೆಂದರೆ ಅದರ ಮರುದಿನವೇ ಉಳಿದ ಪೋಷಕರು ಬಂದು ತಮ್ಮ ಮಕ್ಕಳ ವರ್ಗಾವಣೆ ಪತ್ರ ಕೇಳುವ ಅಪಾಯವಿದೆ...!"

ಯುಪಿಎ ಸರ್ಕಾರ ಶಿಕ್ಷಣ ಹಕ್ಕು ಶಾಸನವನ್ನು ಅಂದರೆ ಆರ್‌ಟಿಇ ಕಾಯ್ದೆ ಜಾರಿಗೆ ತಂದಿದ್ದರ ವಿರುದ್ಧ ಕುಸುಮಾ ಅರ್ಥಾತ್ ಖಾಸಗಿ ಶಾಲೆಗಳ ಮಾಲೀಕರ ಸಂಘದ ಅಧ್ಯಕ್ಷ ಜಿ.ಎಸ್. ಶರ್ಮಾ ನೀಡಿದ ಹೇಳಿಕೆಯಿದು. ಕರ್ನಾಟಕದ ಪ್ರಜ್ಞಾವಂತರೆಲ್ಲ ಒಕ್ಕೊರಲಿನಿಂದ ಈ ಹೇಳಿಕೆಯನ್ನು ಖಂಡಿಸಿರಬಹುದು. ಕಾನ್ವೆಂಟ್ ಮಾಫಿಯಾ ಅಂದರೆ ಖಾಸಗಿ ಶಾಲೆಗಳ ಲಾಬಿ ಮತ್ತು ಅದರ ಕಬಂಧ ಬಾಹುಗಳು ಅವುಗಳ ಕರಾಳ ಧನದಾಹ ಕ್ರೌರ್ಯ ಎಲ್ಲವನ್ನೂ ಕುಸುಮಾದ ಅಧ್ಯಕ್ಷ ಜಿ.ಎಸ್. ಶರ್ಮಾನ ಈ ಹೇಳಿಕೆಯೇ ಪ್ರತಿಧ್ವನಿಸಿದಂತಿತ್ತು. ಆದರೆ ಇದರ ವಿಷವರ್ತುಲಕ್ಕೆ ಸಿಲುಕಿ ನಲುಗುವ ಬಡಬಗ್ಗರು, ಜನಸಾಮಾನ್ಯರ ಅಸಹಾಯಕತೆಯನ್ನೇ ಕಥಾವಸ್ತುವಾಗಿಸುವ ಮೂಲಕ ಈ ಪಿಡುಗಿಗೆ ಪೆಟ್ಟು ಕೊಟ್ಟಿರುವುದು ಇತ್ತೀಚೆಗಷ್ಟೇ ತೆರೆಕಂಡ 'ಅಭಿಮನ್ಯು' ಎಂಬ ಅರ್ಜುನ್ ಸರ್ಜಾ ಚಿತ್ರ.

ಈ ಶುಕ್ರವಾರಕ್ಕೆ 'ಅಭಿಮನ್ಯು' ತೆರೆಕಂಡು ಮೂರನೇ ವಾರ. ಅರ್ಜುನ್ ಸರ್ಜಾ ನಿರ್ದೇಶಿಸಿ, ನಿರ್ಮಿಸಿದ ಈ ಚಿತ್ರದ ಅದ್ದೂರಿತನ, ತಾಂತ್ರಿಕತೆ, 20 ಕೋಟಿಯಷ್ಟು ಬಂಡವಾಳ ಹಾಕಿ ಕನ್ನಡದಲ್ಲಿ ಇಂಥಾದ್ದೊಂದು ಚಿತ್ರ ನಿರ್ಮಿಸಿದ ಸರ್ಜಾರ ಧೈರ್ಯದ ಕುರಿತಂತೆ ಬಹುತೇಕ ಪತ್ರಿಕೆಗಳೆಲ್ಲ ಪುಟಗಟ್ಟಲೆ ಬರೆದಿವೆ ನಿಜ. ಸಮಾನ ಶಿಕ್ಷಣದ ಬಗ್ಗೆ ಸಾಮಾಜಿಕ ಸಂದೇಶವುಳ್ಳ ಕತೆ ಮಾಡುವ ಮೂಲಕ ಅರ್ಜುನ್ ಸರ್ಜಾ ತಮ್ಮ ಕಳಕಳಿಯನ್ನು ಮೆರೆದಿದ್ದಾರೆಂದೇ ಮಾಧ್ಯಮಗಳು ದೇಶಾವರಿಯ ಮೆಚ್ಚುಗೆಯನ್ನೂ ತೋರುತ್ತಿವೆ.

ಬಿಎಸ್‌ಪಿ ಕರೆ

ಆದರೆ ದಲಿತ ಸಮೂಹದಲ್ಲಿ, ಆಹಿಂದ ಜನಮಾನಸದಲ್ಲಿ ಅಭಿಮನ್ಯು ಬೇರೆಯದೇ ಪರಿಣಾಮವೊಂದಕ್ಕೆ ಕಾರಣವಾಗುತ್ತಿದೆ. ತಿಳಿದೋ ತಿಳಿಯದೆಯೋ ಸರ್ಜಾ ಕರ್ನಾಟಕದ ದಲಿತರು, ಕೆಳಜಾತಿಗಳು ಮತ್ತು ಬಡಬಗ್ಗರನ್ನು ಸದ್ದಿಲ್ಲದೆ ಸುಲಿಯುತ್ತಿರುವ ಬಲಾಢ್ಯ ಜಾಲವೊಂದರ ಬುಡಕ್ಕೆ ಕೊಳ್ಳಿಯಿಟ್ಟಿದ್ದಾರೆ. ತನ್ಮೂಲಕ ನಾಡಿನ ಕೋಟ್ಯಾಂತರ ಜನಸಾಮಾನ್ಯರ ಮೂಕ ಆಕ್ರೋಶವೊಂದಕ್ಕೆ ದನಿಯಾಗುತ್ತಿದ್ದಾರೆ. ಬಹುಶಃ ಈ ಕಾರಣಕ್ಕೆ ಇರಬೇಕು ಬಹುಜನ ಸಮಾಜ ಪಕ್ಷದ ವಿದ್ಯಾರ್ಥಿ ಘಟಕವಾದ ಬಿವಿಎಸ್ ಅಂದರೆ ಬಹುಜನ ವಿದ್ಯಾರ್ಥಿ ಸಂಘ ಈ ಚಿತ್ರದ ಬಗ್ಗೆ ವಿಶೇಷ ಆಸಕ್ತಿ ವಹಿಸಿದೆ. ಮೈಸೂರಿನಲ್ಲಿ ಬಿಎಸ್‌ಪಿ ಬೆಂಬಲಿಗ ದಲಿತ ವಿದ್ಯಾರ್ಥಿಗಳೆಲ್ಲ ಗುಂಪುಗುಂಪಾಗಿ ಈ ಚಿತ್ರವನ್ನು ವೀಕ್ಷಿಸುತ್ತಿರುವುದು, ಬಿಎಸ್‌ಪಿಯ ರಾಜ್ಯ ಪದಾಧಿಕಾರಿಗಳು ಈ ಚಿತ್ರದ ಬಗ್ಗೆ ವಿಶೇಷ ಚರ್ಚೆಯನ್ನೇ ಹಮ್ಮಿಕೊಂಡಿದ್ದು ಮತ್ತು ಬಹುಜನ ವಿದ್ಯಾರ್ಥಿ ಸಂಘದ ರಾಜ್ಯ ಸಂಚಾಲಕ ಪ್ರೊ. ಹರಿರಾಮ್ ರಾಜ್ಯಾದ್ಯಂತ ಬಿವಿಎಸ್ ಕಾರ್ಯಕರ್ತರೆಲ್ಲ ಈ ಚಿತ್ರವನ್ನು ವೀಕ್ಷಿಸಿ ಚರ್ಚಿಸುವಂತೆ ಕರೆ ನೀಡಿರುವುದು ಅದರ ಕತೆಯಲ್ಲಿನ ಕ್ರಾಂತಿಕಾರಿ ಸಾಧ್ಯತೆಯೊಂದಕ್ಕೆ ಕಾರ್ಣದಂತಿದೆ. ಅಂಬೇಡ್ಕರ್ ಹೋರಾಟದ ಕುರಿತು ನಾಯಕ ಅರ್ಜುನ್ ಜೊತೆ ಬಡಬಗ್ಗರು ಹಾಡುವ ಗೀತೆ. ವಿದ್ಯೆಯ ಮಹತ್ವದ ಬಗ್ಗೆ ಖುದ್ದು ಅರ್ಜುನ್ ಸರ್ಜಾರೇ ಬರೆದಿರುವ ರೋಚಕ ಸಂಭಾಷಣೆಗಳು, ಖಾಸಗಿ ಶಾಲೆಗಳ ಮಾಫಿಯಾ ಸೃಷ್ಟಿಸುವ ಭಯಾನಕ ವೃತ್ತಾಂತ, ಅದರ ವಿರುದ್ಧ ಏಕಾಂಗಿಯಾಗಿ ಸೆಣಸುವ ಹೀರೋ ಮತ್ತು ಕಾನ್ವೆಂಟುಗಳ ಭ್ರಮೆಗೆ ಬಿದ್ದು ದುರಂತಕ್ಕೊಳಗಾದ ಜನಸಾಮಾನ್ಯರ ಕತೆಗಳೆಲ್ಲವೂ ಕನ್ನಡ ಚಿತ್ರಂಗದ ಮಟ್ಟಿಗೆ ಹೊಸ ಆಯಾಮವೊಂದನ್ನು ತೆರೆದಿಡುತ್ತವೆ. ತಮಿಳು, ತೆಲುಗಿಗೆ ಹೋಲಿಸಿದರೆ ಕನ್ನಡದಲ್ಲಿ ಸಾಮಾಜಿಕ ಪಿಡುಗುಗಳ ಕುರಿತಂತೆ ಬಂದ ಚಿತ್ರಗಳು ಕಮ್ಮಿಯೇ. ಹಾಗೊಮ್ಮೆ ಬಂದರೂ ಆ ಮಟ್ಟದ ಯಶಸ್ಸು ಕಾಣುವುದೂ ಕಷ್ಟವೆ. ವರನಟ ರಾಜ್‌ರ 'ಜೀವನ ಚೈತ್ರ' ಆ ಕಾಲಕ್ಕೆ ರಾಜ್ಯದ ಮೂಲೆಮೂಲೆಗಳಲ್ಲೂ ಸಾರಾಯಿ ವಿರೋಧಿ ಹೋರಾಟಗಳನ್ನು ಹುಟ್ಟು ಹಾಕಿದ್ದು ಬಿಟ್ಟರೆ ಜನಮನ್ನಣೆ ಸಿಗಲಿಲ್ಲ, ತದನಂತರ ಪುನೀತ್ 'ಗಣಿ ಲೂಟಿ'ಯ ವಿರುದ್ಧ 'ಪೃಥ್ವಿ' ಎಂಬ ಚಿತ್ರದಲ್ಲಿ ನಟಿಸಿದ್ದೂ ದೊಡ್ಡ ಮಟ್ಟದ ಹಿಟ್ಟೇನಲ್ಲ, ತೀರ ಇತ್ತೀಚಿನ ಇಂಗಳೆ ಮಾರ್ಗ, ಭಾರತ್ ಸ್ಟೋರ್; ಇತ್ಯಾದಿ ಚಿತ್ರಗಳು ಕೇವಲ ಕಲಾತ್ಮಕ ಚಿತ್ರಗಳ ಪಟ್ಟಿಗಷ್ಟೇ ಸೇರ್ಪಡೆಗೊಂಡವು.

ಕಾನ್ವೆಂಟ್ ಮಾಫಿಯಾ

ಆದರೆ ಅರ್ಜುನ್ ಸರ್ಜಾರ ಅಭಿಮನ್ಯು ಹಾಗಲ್ಲ, ಬರೋಬ್ಬರಿ 20 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಲಂಡನ್, ಸಿಂಗಾಪೂರ್, ಮಲೇಷಿಯಾ, ಥೈಲ್ಯಾಂಡ್ ಇತ್ಯಾದಿ ದೇಶಗಳಲ್ಲಿ ಶೂಟಿಂಗ್ ಮಾಡಿ ಬರಪೂರ ಮಸಾಲೆ ಬೆರೆಸಿ ಕಮರ್ಷಿಯಲ್ ಚಿತ್ರವೊಂದಕ್ಕೆ ಬೇಕಾದ ಎಲ್ಲಾ ಸಂಗತಿಗಳನ್ನೂ ಅಳವಡಿಸಿಯೂ ಸಾಮಾಜಿಕ ಪಿಡುಗೊಂದನ್ನು ಬಯಲಿಗೆಳೆಯುತ್ತದೆ. ಅಷ್ಟೇ ಅಲ್ಲ, ಅದರ ವಿರುದ್ಧ ಜನರನ್ನು ರೊಚ್ಚಿಗೇಳಿಸುವಷ್ಟು ಪರಿಣಾಮಕಾರಿಯಾಗಿದೆ ಮತ್ತು ಈ ನಿಟ್ಟಿನಲ್ಲಿ ವಿದ್ಯಾರ್ಥಿ ಸಮೂಹವನ್ನು ಬೀದಿಗಿಳಿಸುವಷ್ಟು ಪ್ರಚೋದನಕಾರಿಯಾಗಿದೆ.


ಕತೆಯ ವೈಶಿಷ್ಟ್ಯವೆಂದರೆ ಅದು ಐಷಾರಾಮೀ ಕಾನ್ವೆಂಟಿನಲ್ಲಿ ತಮ್ಮ ಮಗುವನ್ನು ಓದಿಸಬೇಕೆಂಬ ಬಡಬಡಗಿಯೊಬ್ಬನ ಬವಣೆಯದ್ದು. ಸರ್ಕಾರಿ ಶಾಲೆಗಳ ದುರವಸ್ಥೆ, ಶಿಕ್ಷಣ ಇಲಾಖೆಯ ಭ್ರಷ್ಟಾಚಾರ, ಅಲ್ಲಿಗೆ ಜಮೆಯಾಗುವ ಬಡಮಕ್ಕಳ ಪಜೀತಿ ಎಲ್ಲವನ್ನೂ ತನ್ನದೇ ಅನುಭವಗಳ ಮೂಲಕ ಅರಿತುಕೊಂಡಿದ್ದ ಈ ಬಡ ಬಡಗಿಗೆ ತನ್ನ ಮಗಳಿಗೆ ಆ ಊರಿನ ಪ್ರತಿಷ್ಠಿತ ಖಾಸಗಿ ಶಾಲೆಯಲ್ಲಿ ಸೀಟು ಸಿಕ್ಕ ಸಂಗತಿಯೇ ಹಬ್ಬವಾಗುತ್ತದೆ. ತನ್ನ ತಂದೆ, ತಾತ, ಪೂರ್ವ ತಲೆಮಾರುಗಳ್ಯಾರಿಗೂ ನಿಲುಕದ ಐಷಾರಾಮಿ ಕಾನ್ವೆಂಟಿನ ಪ್ರವೇಶ ತನ್ನ ಮಗುವಿಗೆ ಸಿಕ್ಕಿದ್ದು ಆತನಲ್ಲಿ ಕನಸುಗಳ ಪ್ರವಾಹವನ್ನೇ ಸೃಷ್ಟಿಸುತ್ತದೆ. ಆದರೆ ವಾಸ್ತವವೇ ಬೇರೆ. ಮಗುವಿನ ಜೊತೆ ಶಾಲೆಯ ಮಾಲೀಕನನ್ನು ಕಾಣಲು ಹೋದ ಆತನಿಗೆ ಒಂದು ಲಕ್ಷದ 20 ಸಾವಿರ ರೂಪಾಯಿ ಕಟ್ಟಿದರಷ್ಟೇ ಪ್ರವೇಶ ಎಂಬ ಮಾತು ಕೇಳಿದ್ದೇ ಜಂಘಾಬಲವೇ ಉಡುಗಿದಂತಾಗುತ್ತದೆ.

ಅಲ್ಲಿಂದಾಚೆಗೆ ಬೇರೆಯದೇ ಒಂದು ವಿಷವರ್ತುಲಕ್ಕೆ ಸಿಲುಕುವ ಆತನಿಗೆ ಅದರ ಒಂದೊಂದೇ ಕರಾಳಮುಖದ ದರ್ಶನವಾಗುತ್ತದೆ. ತನ್ನ ಕಷ್ಟಕ್ಕೆ ಕೈಹಿಡಿಯುತ್ತಾನೆಂದು ಯಾರನ್ನು ನಂಬಿದ್ದನೋ ಆತನಿಂದ ಆಘಾತಕಾರಿ ಸುದ್ದಿಯೊಂದು ಬರುತ್ತದೆ. ಅದು ಹಾಕಿದ್ದ ಚೀಟಿ ದುಡ್ಡಿನ ಸಮೇತ ಚೀಟಿ ನಡೆಸುವಾತನೇ ಪರಾರಿಯಾದ್ದರಿಂದ ಈ ಪರಿಸ್ಥಿತಿಯಲ್ಲಿ ನಿನಗೆ ಸಹಾಯ ಮಾಡಲಾಗದ್ದಕ್ಕೆ ಕ್ಷಮಿಸು

ಎಂಬ ಗೆಳೆಯನ ಮಾತು. ತದನಂತರ ಇನ್ನಾರ
ಸಾಲ ಕೇಳುತ್ತಾನೆ. ಆತ ಕೊಡುವುದು ಪುಡಿಕ
ಹಾಗೂಹೀಗೂ 20 ಸಾವಿರ ಹೊಂಚಿಕೊಂಡು ಶಾ
ಕಟ್ಟಿ ಒಂದು ವಾರದ ಕಾಲಾವಕಾಶ ಕೇಳಿ ಶಾಲ
ಮಾಲೀಕನನ್ನು ಅಂಗಲಾಚುತ್ತಾನೆ. ಕೊಟ್ಟ ಒಂದು ವಾ
ದುಡ್ಡು ಹುಟ್ಟದೇ ಹೋದಾಗ ಶಾಲೆಯ ಧಣಿಗಳು
ಪುಟ್ಟಮಗುವನ್ನು ಕ್ಲಾಸಿನಿಂದ ಹೊರಹಾಕಿರುತ್ತಾರೆ. ವಿಧಿ
ಲ್ಲದೆ 30 ಸಾವಿರಕ್ಕೆ ತನ್ನ ಒಂದು ಕಿಡ್ನಿಯನ್ನೇ ಮಾರು
ಅದನ್ನು ತಂದು ಶಾಲೆಗೆ ಕಟ್ಟುವ ಹೊತ್ತಿಗೆ ಮಾಲಿ
ಲೆಕ್ಕವೇ ಬೇರೆಯಾಗಿರುತ್ತದೆ. ಬಿಲ್ಡಿಂಗ್ ಫಂಡು, ಕಂಪ್ಯೂ
ಫಂಡು, ಸಾರಿಗೆ ಫೀಜು, ಸಮವಸ್ತ್ರದ ಫೀಜು, ಅ
ಇದೂ ಎಂದೆಲ್ಲ ಲೆಕ್ಕ ಹಾಕಿ 90 ಸಾವಿರ ಕಟ್ಟಿದರೆ
ಮಗುವಿಗೆ ಪ್ರವೇಶ ಎನ್ನುತ್ತಾನೆ ಶಾಲಾ ಧಣಿ.


ಬಡವನ ಆತ್ಮಹತ್ಯೆ


ನೀವು ಬಿಲ್ಡಿಂಗ್ ಕಟ್ಟಲು ನಾನು ಏಕೆ ದ
ಕೊಡಬೇಕು ಎನ್ನುವ ಬಡವನಿಗೆ ಧಣಿ ವಾಚಾಮಗೋ
ಹೀಯಾಳಿಸುತ್ತಾನೆ. ಮಗುವಿನ ಎದುರೇ ತಂದೆತಾಯಿ
ಅಪಮಾನಕ್ಕೊಳಗಾಗುತ್ತಾರೆ. ಮಗುವೂ ಇದರಿ
ಖಿನ್ನತೆಗೀಡಾಗುತ್ತದೆ. ಏನೆಲ್ಲಾ ಹರಸಾಹಸ ಮಾಡಿಯ
ದುಡ್ಡು ಹುಟ್ಟದೇ ಹೋದಾಗ ದಿಕ್ಕೇ ತೋಚದಂ
ಮಗುವಿನ ಸಮೇತವೇ ತಂದೆತಾಯಿ ನೇಣಿಗೆ ಶರಣಾಗು
ಈ ದುರಂತವನ್ನು ಕಣ್ಣಾರೆ ಕಂಡ ನಾಯಕ ಖಾಸಗಿ ಶಾಲೆ
ಕ್ರೌರ್ಯದ ವಿರುದ್ಧ ರೊಚ್ಚಿಗೇಳುತ್ತಾನೆ. ಬಡಮಕ್ಕಳಿಗೆ ಉ


ಕಾನ್ವೆಂಟ್ ಮಾಫಿಯಾ ಜೆ.ಎಸ್. ಶರ್ಮಾ

ವಾಗಿ ಕರಾಟೆ ಹೇಳಿಕೊಡುವ, ವೃತ್ತಿಯಲ್ಲಿ ಕಂಪ್ಯೂ
ಇಂಜಿನಿಯರ್ ಆಗಿರುವ ಹೀರೋ ಕೂಡ ಓರ್ವ ಅನಾ

ಅಲ್ಲಿಗೆ ಹೀರೋ ಖಾಸಗಿ ಶಾಲೆಗಳ ಮಾಫಿ
ಮತ್ತು ಸರ್ಕಾರಿ ಶಾಲೆಗಳ ದುರ್ಗತಿ ಕುರಿತಂತೆ ತನ್ನ
ಶೈಲಿಯಲ್ಲಿ ಹೋರಾಟಕ್ಕಿಳಿಯುತ್ತಾನೆ. ಶಾ
ಹೋಗಲಾಗದೆ, ಫೀಜು ಕಟ್ಟಲಾಗದೆ ಓದನ್ನು ಅರ್ಧ
ಕೈಬಿಟ್ಟು ಪಟಾಕಿ ಫ್ಯಾಕ್ಟರಿಗಳಲ್ಲಿ ಬಾಲ ಕಾರ್ಮಿಕ
ಮುಗಿದು ಹೋಗುವ ದೇಶದ ಅಸಂಖ್ಯಾತ ಮ
ದುರ್ಗತಿಗೂ ಖಾಸಗಿ ಶಾಲೆಗಳ ಕ್ರೌರ್ಯಕ್ಕೂ ಇರುವ ಸಂಬ
ವನ್ನು ಪತ್ರಿಕಾಗೋಷ್ಠಿ ಕರೆದು ನಾಯಕ ಬಯಲಿಗೆಳೆಯು
ನಾಯಕನ ಈ ಹೋರಾಟಕ್ಕೆ ನಾಡಿನಾದ್ಯಂತ ಜನಸಾಮಾ
ಬೆಂಬಲ ವ್ಯಕ್ತವಾಗುತ್ತದೆ. ವಿದ್ಯಾರ್ಥಿಗಳು ಬೀದಿಗಿಳಿಯು
ದೇಶದ ಎಲ್ಲಾ ಖಾಸಗಿ ಶಾಲೆಗಳನ್ನು ಬ್ಯಾಂಕುಗ
ರಾಷ್ಟ್ರೀಕರಿಸಿದ ಹಾಗೆಯೇ ಸರ್ಕಾರ ರಾಷ್ಟ್ರೀಕರಿಸಬೇಕ


ಅರ್ಜುನ್ ಜೊತೆ ಅಭಿಮನ್ಯು ಚಿತ್ರದ ನಟಿಯರು


ಅಭಿಮನ್ಯು ಚಿತ್ರದ ಒಂದು ಫೈಟಿಂಗ್ ಸನ್ನಿವೇಶ

ಣದ ಒತ್ತಾಯಕ್ಕೆ ಸಿಗುವ ಜನಬೆಂಬಲವನ್ನು ಕಂಡೇ ರಾಜಕಾರಣಿಗಳು ಇದಕ್ಕೆ ದನಿಗೂಡಿಸುತ್ತಾರೆ.

ಸಹಜವಾಗೇ ಇದು ಖಾಸಗಿ ಶಾಲಾ ಧಣಿಗಳ ಸಿಡಿಯುತ್ತದೆ. ಎಲ್ಲಿ ತಮ್ಮ ದುಡ್ಡಿನ ಮೂಲಕ್ಕೇ ಗುತ್ತೋ ಎಂದು ಭೀತಿಗೆ ಬಿದ್ದ ಕಾನ್ವೆಂಟ್ ಧಣಿಗಳೆಲ್ಲ ಗಿ ಶಾಲಾ ಮಾಲೀಕರ ಸಂಘದ ಮೂಲಕ ಕಾರ್ಯತಂತ್ರ ಯುತ್ತಾರೆ. ನಾಯಕನನ್ನು ಹೇಗಾದರೂ ಮಾಡಿ ಬಡಿಯಲು ಶಾಲಾ ಧಣಿಗಳೆಲ್ಲ ಸೇರಿ ಭೂಗತ ಯೊಬ್ಬನ ಮೊರೆ ಹೋಗುತ್ತಾರೆ. ಆತ ನಾಯಕನ ರಾಟ ಮಾಧ್ಯಮಗಳಲ್ಲಿ ಸುದ್ದಿಯಾಗದ ಹಾಗೆ ಜನರ ವನ್ನು ಬೇರೆಡೆ ಸೆಳೆಯಲು ಸರಣಿ ಬಾಂಬ್ ಸ್ಫೋಟ ತ್ತಾನೆ. ಕೊನೆಗೆ ವಿದ್ಯಾಮಂತ್ರಿಗಳ ಆಪ್ತ ಸಹಾಯಕನನ್ನು ಅದನ್ನು ನಾಯಕನ ಮೇಲೆ ಹೊರಿಸಿ ಆತನನ್ನು ಪಾಲು ಮಾಡುವಲ್ಲಿ ಡಾನ್ ಯಶ ಕಾಣುತ್ತಾನೆ. ಹೋದ ಹೀರೋನನ್ನು ಜೈಲಿನ ಒಳಗೆಯೇ ಸುವ ತಂತ್ರ ರೂಪಿಸುತ್ತಾನೆ. ಆದರೆ ಹೀರೋ ಕರಾಟೆ ರ್ ಜೈಲಿನಲ್ಲಿದ್ದ ಕ್ರಿಮಿನಲ್‌ಗಳು, ರೌಡಿಗಳನ್ನು ಟ್ಟಿ ನಾಯಕನನ್ನು ಮುಗಿಸುವ ಡಾನ್ ಪ್ರಯತ್ನಗಳು ಒಂದಾಗಿ ವಿಫಲಗೊಳ್ಳುತ್ತವೆ. ರಕ್ಕಸ ಕಾಯದ ಬ್ಬನೇ ಕ್ರಿಮಿನಲ್‌ಗಳನ್ನು ತನ್ನ ಚಾಕಚಕ್ಯತೆಯಿಂದಲೇ ಸುವ ಸರ್ಜಾರ ಕರಾಟೆ ಫೈಟಿಂಗಳು ರೋಳಿಸುವಂತಿದೆ. ಕೊನೆಗೆ ಜೈಲಿನ ಅಧಿಕಾರಿಯೇ ನ ಜೊತೆ ಸೇರಿ ನಾಯಕನ ಹತ್ಯೆಗೆ ಯತ್ನಿಸುತ್ತಾನೆ. ನಾಯಕನ ಆದರ್ಶ ಮತ್ತು ಒಳ್ಳೆಯತನಕ್ಕೆ ಮನಸೋತ ಕೈದಿಯೇ ಕೊನೆಗೆ ನಾಯಕನ ಪ್ರಾಣ ಉಳಿಸುತ್ತಾನೆ.

ಅದ್ಭುತ ಕ್ಲೈಮಾಕ್ಸ್

ಹಾಗೆ ಜೈಲಿಂದ ಹೊರಬಿದ್ದ ನಾಯಕನಿಗೆ ತನ್ನನ್ನು ಸಲು ಶಾಲಾ ಧಣಿಗಳೆಲ್ಲ ಸೇರಿ ಭೂಗತ ದೊರೆಗೆ ಕೊಟ್ಟದ್ದು ಗೊತ್ತಾಗಿ ಈ ಬಾರಿ ಬೇರೆಯದೇ ರೂಪಿಸುತ್ತಾನೆ. ಅದು ವಿದೇಶಗಳಲ್ಲಿ ಐಷಾರಾಮೀ ಜುಗಳಲ್ಲಿ ಓದುತ್ತಿರುವ ಶಾಲಾ ಧಣಿಗಳ ಮಕ್ಕಳನ್ನೇ ಪ್ ಮಾಡುವುದು ಮತ್ತು ಅವರನ್ನು ಹಾಗಿಟ್ಟುಕೊಂಡು ಸಮಾನ ಶಿಕ್ಷಣ ಪದ್ಧತಿಯನ್ನು ಗೊಳಿಸುವುದು. ಈ ನಿಟ್ಟಿನಲ್ಲಿ ನಾಯಕ ಯಾಗುತ್ತಾನಾದರೂ ಭೂಗತ ದೊರೆ ತನ್ನ ವ್ಯವಸ್ಥಿತ ಮೂಲಕ ಲಂಡನ್ನಿನ ಅಂಡರ್‌ವರ್ಲ್ಡ್ ದೊರೆಗಳನ್ನೇ ಕಿಡ್ನಾಪಾದ ಶಾಲಾಧಣಿಗಳ ಮಕ್ಕಳನ್ನು ನಾಯಕನಿಂದ ಪರಿಸುತ್ತಾನೆ ಮತ್ತು ಆ ಮಕ್ಕಳನ್ನೇ ಾಗಿಟ್ಟುಕೊಂಡು 300 ಕೋಟಿ ರೂಪಾಯಿಗೆ ಯುಡುತ್ತಾನೆ.

ಂತಿಮವಾಗಿ ಹೀರೋ ತನ್ನ ಧೈರ್ಯ ಮತ್ತು ್ ತಂತ್ರಗಾರಿಕೆಯಿಂದ ಮತ್ತೆ ಅದೇ ಮಕ್ಕಳನ್ನು ಭೂಗತ ದೊರೆಯನ್ನು ಸಂಹರಿಸುತ್ತಾನೆ. ತಮ್ಮ ನ್ನು ಹೀರೋ ಕೊಂದೇ ಹಾಕಿದ್ದಾನೆಂದು ಭಾವಿಸಿದ ಧಣಿಗಳೆಲ್ಲ ಮಕ್ಕಳನ್ನು ರಕ್ಷಿಸಿದ್ದೇ ಆತನೆಂದು ಗೊತ್ತಾದ ಆತನ ಕಾಳಜಿಗೆ ಮಣಿಯುತ್ತಾರೆ. ಶಾಲಾಧಣಿಗಳ ಆ ಹೊತ್ತಿಗೆ ನಾಯಕನ ಅಭಿಮಾನಿಗಳಾಗಿರುತ್ತಾರೆ. ಮಕ್ಕಳನ್ನು ಸುಲಿದು ಆ ಪಾಪದ ದುಡ್ಡಲ್ಲಿ ತಮ್ಮನ್ನು ಗಳಲ್ಲಿ ಓದಿಸುತ್ತಿರುವ ಶಾಲಾ ಧಣಿಗಳನ್ನು ಅವರ ಒಬ್ಬೊಬ್ಬರಾಗಿ ಪ್ರಶ್ನಿಸಲಾರಂಭಿಸುವುದು, ಮಕ್ಕಳ ಉತ್ತರಿಸಲಾಗದೇ ಧಣಿಗಳು ತಲೆತಗ್ಗಿಸುವುದು, ಮೂಲಕ ಬಡವರ ಮಕ್ಕಳಿಗೆ ಹೀರೋ ಪ್ರತಿಷ್ಠಿತ ಲ್ಲಿ ಪ್ರವೇಶಾವಕಾಶ ಕಲ್ಪಿಸುವುದು ಅಭಿಮನ್ಯು ಚಿತ್ರದ ಕ್ಲೈಮಾಕ್ಸ್ ಮತ್ತು ಸುಖಾಂತ್ಯವೂ ಹೌದು.

ಸರ್ಜಾರ ಕಾಳಜಿಯನ್ನು ದಲಿತರೆಲ್ಲ ಬೆಂಬಲಿಸಬೇಕು



ಶೋಷಿತ ವರ್ಗಗಳ ಶಿಕ್ಷಣ ಹಕ್ಕಿನ ಕುರಿತಂತೆ ಅರ್ಜುನ್ ಸರ್ಜಾರ ಕಾಳಜಿಯನ್ನು ಬೆಂಬಲಿಸಲೇಬೇಕು. ಶಿಕ್ಷಣದ ಮೂಲಕವೇ ದಲಿತರು ತಮ್ಮ ಭವಿಷ್ಯ ರೂಪಿಸಿಕೊಳ್ಳಲು ಸಾಧ್ಯ ಎಂಬ ಅಂಬೇಡ್ಕರ್ ಚಿಂತನೆಯನ್ನು ಅರ್ಜುನ್ ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಸಾಮಾಜಿಕ ಅಸಮಾನತೆ ಮತ್ತು ಬಡತನದಿಂದ ದಲಿತರು ಬಿಡುಗಡೆಗೊಳ್ಳುವುದು ಶಿಕ್ಷಣದಿಂದಲೇ. ಕಾನ್ವೆಂಟ್ ಲಾಬಿ, ಕ್ಯಾಪಿಟೇಶನ್ ಲಾಬಿ, ಖಾಸಗಿ ಶಾಲೆಗಳ ಲಾಬಿಗಳೆಲ್ಲ ಸೇರಿಕೊಂಡು ಪ್ರಜ್ಞಾಪೂರ್ವಕವಾಗಿಯೇ ದಲಿತರನ್ನು ಶಿಕ್ಷಣದಿಂದ ದೂರವಿಟ್ಟಿವೆ. ಸರ್ಕಾರಗಳೂ ಈ ಲಾಬಿಯೊಂದಿಗೆ ಕೈಜೋಡಿಸಿರುವುದು ದೊಡ್ಡ ದುರಂತವೇ ಸರಿ. ಬಡವರಿಗೊಂದು ಶಿಕ್ಷಣ, ಮಧ್ಯಮ ವರ್ಗಕ್ಕೊಂದು ರೀತಿಯ ಶಿಕ್ಷಣ, ಶ್ರೀಮಂತರಿಗೆ ಮತ್ತೊಂದು ರೀತಿಯ ಶಿಕ್ಷಣ ಪದ್ಧತಿಯಿಂದಾಗಿ ದೇಶ ಹೇಗೆ ತಾನೇ ಒಂದಾಗಲು ಸಾಧ್ಯ? ಮುಂದುವರಿಯಲು ಸಾಧ್ಯ?



ಈ ನಿಟ್ಟಿನಲ್ಲಿ ಅರ್ಜುನ್ ಸರ್ಜಾರ 'ಅಭಿಮನ್ಯು' ಚಿತ್ರ ವ್ಯವಸ್ಥೆಯ ಮೇಲೆ ಬೆಳಕು ಹರಿಸುವಲ್ಲಿ ಯಶಸ್ವಿಯಾಗಿದೆ. ಅಂಬೇಡ್ಕರ್ ಹೋರಾಟದ ಕುರಿತಂತೆ ವಿಶೇಷ ಗೀತೆಯೊಂದನ್ನು ಅಳವಡಿಸಿರುವುದು ಈ ಚಿತ್ರದ ಪ್ರಾಮಾಣಿಕತೆಯ ಪ್ರತೀಕವಷ್ಟೇ. ವಿಶೇಷವಾಗಿ ದಲಿತ ಸಮೂಹ ಮತ್ತು ಅಹಿಂದ ವರ್ಗಗಳು ಈ ಚಿತ್ರವನ್ನು ಬೆಂಬಲಿಸಬೇಕು.

–ಪ್ರೊ. ಹರಿರಾಮ್, ರಾಜ್ಯ ಸಂಚಾಲಕ, ಬಹುಜನ ವಿದ್ಯಾರ್ಥಿ ಸಂಘ

ಸಿನಿಮಾದಲ್ಲಷ್ಟೇ ಸಾಧ್ಯವಾಗುವ ಈ ಕಲ್ಪನೆ ಕತೆಯಾಗಿ ಬೇರೆಯದೇ ಸಾಧ್ಯತೆಯೊಂದನ್ನು ತೆರೆದಿಡುತ್ತದೆ. ರೋಚಕ ಫೈಟಿಂಗ್‌ಗಳೇ ಇಡೀ ಚಿತ್ರದ ಜೀವಾಳದಂತಿದೆ. ಥೈಲ್ಯಾಂಡ್‌ನ ಹೆಸರಾಂತ ಫೈಟ್ ಮಾಸ್ಟರ್ ಕೆಚ್ಚಾ ಮತ್ತು ಬ್ರಿಟನ್ನಿನ ಸ್ಟಂಟ್ ಮಾಸ್ಟರ್ ಪೋಕರ್ ಬಾಸ್‌ರಂಥ ಹೆಸರಾಂತ ಸಾಹಸ ಸಂಯೋಜಕರನ್ನು ಬಳಸಿದ ಸರ್ಜಾ ಫೈಟಿಂಗ್ ದೃಶ್ಯ ವೈಭವವನ್ನು ಉಣಬಡಿಸುತ್ತಾರೆ. ಮಿಕ್ಕಂತೆ ಸರ್ಜಾರೇ ಅನೇಕ ಸ್ಟಂಟ್‌ಗಳನ್ನು ಸಂಯೋಜಿಸಿರುವುದು ಇಡೀ ಚಿತ್ರದ ಶ್ರೀಮಂತಿಕೆಯನ್ನು ಹೆಚ್ಚಿಸುತ್ತದೆ. ಇಡೀ ಚಿತ್ರ ಒಂದೇ ಒಂದು ಕ್ಷಣಕ್ಕೂ ಬೋರಾಗುವುದಿಲ್ಲ. ಏಕೆಂದರೆ ಈ ಚಿತ್ರದ ಮತ್ತೊಂದು ವೈಶಿಷ್ಟ್ಯವೇ ತಾರಾ ವೇಣು ಛಾಯಾಗ್ರಹಣ. ಅದಕ್ಕೆ ತಕ್ಕಂತೆ ಎಡಿಟರ್ ಕೇಕೆಯ ಪರಿಶ್ರಮ ಎದ್ದು ಕಾಣುತ್ತದೆ. ಸಂಗೀತ, ಡ್ಯಾನ್ಸುಗಳು, ದೃಶ್ಯ ವೈಭವವನ್ನು ಮತ್ತಷ್ಟು ವಿಜೃಂಭಿಸಿವೆ.

20 ಕೋಟಿ...

ಮೇಲುನೋಟಕ್ಕೆ ಅಭಿಮನ್ಯು ಒಂದು ಪಕ್ಕಾ ಕಮರ್ಷಿಯಲ್ ಚಿತ್ರದಂತೆ ಮಸಾಲೆ ಕತೆಯಂತೆ ಕಂಡರೂ ಅಂತಿಮವಾಗಿ ಪ್ರೇಕ್ಷಕನ ಮನತಟ್ಟುವುದು ಶಾಲೆಗೆ ದುಡ್ಡು ಕಟ್ಟಲಾಗದೇ ಮಗು ಸಮೇತ ನೇಣು ಬಿಗಿದುಕೊಂಡ ಬಡದಂಪತಿಗಳ ಚಿತ್ರಣವೇ. ಹೀಗಾಗಿ ಇಡೀ ಚಿತ್ರ ಖಾಸಗಿ ಶಾಲೆಗಳ ಬಲಾಢ್ಯ ಲಾಬಿಯ ವಿರುದ್ಧದ ಅಸ್ತ್ರದಂತಿದೆ. ಈ ಹಿಂದೆ ತಮಿಳಿನಲ್ಲಿ ಇದೇ ಅರ್ಜುನ್ ನಟಿಸಿದ್ದ 'ಜಂಟಲ್‌ಮ್ಯಾನ್' ಕ್ಯಾಪಿಟೇಶನ್ ಪಿಡುಗಿನ ವಿರುದ್ಧ ಜಾಗೃತಿ ಮೂಡಿಸಿತ್ತು. ಆದರೆ ಅದಕ್ಕಿಂತಲೂ ಮಿಗಿಲಾಗಿ ಪ್ರಭುದೇವನ 'ಮಕಾಬಲಾ...' ಡ್ಯಾನ್ಸೇ ಹೆಚ್ಚು ಸುದ್ದಿ ಮಾಡಿತ್ತು. ಇದರ ಯಶಸ್ಸು ಕಂಡೇ ಇರಬೇಕು. ಆನಂತರ ರಜನಿಕಾಂತ್‌ರ ಶಿವಾಜಿ ಚಿತ್ರವೂ ಬಡಮಕ್ಕಳಿಗಾಗಿ ಉನ್ನತ ಶಿಕ್ಷಣದ ಅವತಾರಕ್ಕಾಗಿ 'ಹೀರೋ' ಹೋರಾಡುವ ಕತೆಯನ್ನೇ ಹೊಂದಿತ್ತು. ಆದರೆ ರಜನಿ ಅಬ್ಬರ, ಸ್ಟೈಲ್‌ಗಳ ಮುಂದೆ ಕತೆಯ ವಿಷಯವೇ ಮಂಕಾಗಿತ್ತು.

ಆದರೆ 'ಅಭಿಮನ್ಯು' ಹಾಗಲ್ಲ. ಇದು ಮೆಡಿಕಲ್, ಇಂಜಿನಿಯರಿಂಗ್‌ಗಿಂತಲೂ ಬಡಮಕ್ಕಳ ಪ್ರಾಥಮಿಕ ಶಿಕ್ಷಣದ ದುರ್ಗತಿಯನ್ನು ಅನಾವರಣಗೊಳಿಸುತ್ತದೆ. ತಮಿಳಿನಲ್ಲಿ ಈ ಹಿಂದೆ ಅರ್ಜುನ್ ಪ್ರತಾಪ್, ಜೈಹಿಂದ್, ತಾಯ್ ಮನಿಕೋಡಿ, ವೇದಂ ಮುಂತಾದ ಹಿಟ್ ಸಿನಿಮಾಗಳನ್ನು ನಿರ್ದೇಶಿಸಿ ಸೈ ಎನಿಸಿಕೊಂಡಿದ್ದಕ್ಕೆ ಪೂರಕವಾಗೇ ಅಭಿಮನ್ಯು ನಿರ್ಮಾಣಕ್ಕೆ ಕೈಯಿಟ್ಟರು. ಇದಕ್ಕೆಂದು ಸರ್ಜಾ ಪಟ್ಟ ಪಾಡು ಅಷ್ಟಿಷ್ಟಲ್ಲ. ಚಿತ್ರದ ತಯಾರಿಗೆಂದೇ ಮೂರು ವರ್ಷ ಹಿಡಿಯಿತು. ಚಿತ್ರದ ಬಜೆಟ್ಟೆ 20 ಕೋಟಿಯಾಗಿತ್ತು. ಏಕೆಂದರೆ ಸರ್ಜಾ ಕೇವಲ ಕನ್ನಡದ ಮಾರುಕಟ್ಟೆ ನಂಬಿ ಈ ಪಾಟಿ ದುಡ್ಡು ಸುರಿಯಲಿಲ್ಲ. ಕನ್ನಡದ ಜೊತೆಗೇ ತಮಿಳು ಮತ್ತು ತೆಲುಗು ಅವತರಣಿಕೆಗಳನ್ನೂ ಕೈಗೆತ್ತಿಕೊಂಡರು.



ತಮಿಳು ಮತ್ತು ತೆಲುಗಿನ ಮಟ್ಟಿಗೆ 'ಅಭಿಮನ್ಯು' ಹೆಸರಿಡದೇ ಅದನ್ನು ಈ ಹಿಂದೆ ಅರ್ಜುನ್ ನಟಿಸಿ, ನಿರ್ದೇಶಿಸಿದ್ದ ಜೈಹಿಂದ್ ಚಿತ್ರಕ್ಕೇ ಭಾಗ-2 ಎಂಬ ಹೆಸರಿಟ್ಟಿದ್ದು ಸರ್ಜಾರ ವ್ಯಾಪಾರ ತಂತ್ರವಾಗಿತ್ತು. ಕರ್ನಾಟಕದಲ್ಲಿ ನವೆಂಬರ್ ಏಳರಂದು ಬರೋಬ್ಬರಿ 158 ಥೇಟರುಗಳಲ್ಲಿ ತೆರೆಕಂಡ 'ಅಭಿಮನ್ಯು' ಮೊದಲ ವಾರಕ್ಕೇ ನಾಲ್ಕು ಕೋಟಿ ರೂಪಾಯಿಗಳನ್ನು ಸಂಗ್ರಹಿಸಿತ್ತು. ಎರಡನೇ ವಾರದ ಹೊತ್ತಿಗದು 140 ಥೇಟರುಗಳಿಂದ 2.25 ಕೋಟಿ ಸಂಗ್ರಹಿಸಿದರೆ ಮೂರನೇ ವಾರದ ಹೊತ್ತಿಗದು 100 ಥೇಟರುಗಳಿಂದ ಒಂದೂವರೆ ಕೋಟಿ ಗಳಿಸಿತ್ತು. ಬಜೆಟ್ಟಿಗೆ ಹೋಲಿಸಿದರೆ ಇದು ದೊಡ್ಡ ಮೊತ್ತವೇನಲ್ಲ.

ಅಂಬೇಡ್ಕರ್ ಗೀತೆ

'ನನಗೆ ಹಾಕಿದ ದುಡ್ಡು ಬರದೇ ಹೋದರೂ ಪರವಾಗಿಲ್ಲ. ಇಂಥದೊಂದು ಸಿನಿಮಾ ಮಾಡಿದ ಸಂತೃಪ್ತಿಯೊಂದೇ ಸಾಕು...' ಎಂಬ ಅರ್ಜುನ್ ಸರ್ಜಾರ ಹೇಳಿಕೆಯೇ ಅವರ ಕಾಳಜಿಯನ್ನು ತೋರುತ್ತಿತ್ತು. ಆದರೆ ತಮಿಳುನಾಡಿನ ಜನ ಅರ್ಜುನ್‌ರ ಕೈಬಿಡಲಿಲ್ಲ. ಆಂಧ್ರದಲ್ಲಿ 230 ಥೇಟರುಗಳಲ್ಲಿ ತೆರೆಕಂಡು ಆ ಮಟ್ಟದ ಲಾಭ ಬಾರದೇ ಹೋದರೂ ತಮಿಳುನಾಡಿನಲ್ಲಿ 320 ಥೇಟರುಗಳಲ್ಲಿ ಬಿಡುಗಡೆಯಾಗಿ ಮೊದಲ ವಾರಕ್ಕೇ 7 ಕೋಟಿಯಷ್ಟು ಸಂಗ್ರಹಿಸಿತ್ತು. ಮೂರು ಭಾಷೆಗಳಲ್ಲಿ ಏಕಕಾಲಕ್ಕೆ ನಿರ್ಮಿಸಿದ್ದರಿಂದ ಸರ್ಜಾರ ಪಾಲಿಗೆ ಟೀವಿ ರೈಟ್ಸ್ ಲೆಕ್ಕದಲ್ಲೇ ಹತ್ತು ಕೋಟಿಗೂ ಮೀರಿದ ಆದಾಯ ಬಂದಿತ್ತು. ಜೈಹಿಂದ್-2 ಅಥವಾ ಅಭಿಮನ್ಯು ಆ ಪಾಟಿ ದುಡ್ಡು ಬಾಚದೇ ಹೋದರೂ ಸರ್ಜಾರ ಕೈ ಸುಡಲಿಲ್ಲ. ಆದರೆ ಕರ್ನಾಟಕದ ಮಟ್ಟಿಗೆ ಇಂಥದೊಂದು ಪ್ರಯತ್ನಕ್ಕೆ ಸಿಗಬೇಕಿದ್ದ ಜನಮನ್ನಣೆ ಸಿಗಲಿಲ್ಲವಾದರೂ ನಾಡಿನ ಜನಸಾಮಾನ್ಯರಲ್ಲಿ ಮತ್ತು ದಲಿತರಲ್ಲಿ ಬೇರೆಯದೇ ಸಂಚಲನ ಮೂಡಿಸಿತ್ತು.

ಏಕೆಂದರೆ ಅಭಿಮನ್ಯು ಚಿತ್ರದಲ್ಲಿ ಅಂಬೇಡ್ಕರ್ ಕುರಿತಂತೆ 'ಕತ್ತಲ ಬದುಕಿನಲ್ಲಿ ಜ್ಯೋತಿಯಾಗಿ ಬಂದವನೇ....' ಎಂಬ ಕ್ರಾಂತಿಗೀತೆಯನ್ನು ಸೇರಿಸಲಾಗಿತ್ತು. ಲಕ್ಷಾಂತರ ಬಡಮಕ್ಕಳಿಗೆ ಇವತ್ತಿಗೂ ಊಟ, ವಸತಿ, ಶಿಕ್ಷಣ ನೀಡುತ್ತಿರುವ ಸಿದ್ಧಗಂಗೆಯ ಶಿವಕುಮಾರ ಸ್ವಾಮಿಗಳ ಕೈಯಿಂದಲೇ ಚಿತ್ರದ ಆಡಿಯೋ ಬಿಡುಗಡೆ ಮಾಡಿಸಿದ ಸರ್ಜಾ ಕಾಳಜಿಗೆ ಮತ್ತೊಂದು ನಿದರ್ಶನವಾಗಿತ್ತು. ಖಾಸಗಿ ಶಾಲೆಗಳ ಲಾಬಿಯ ಷಡ್ಯಂತ್ರವೋ ಅಥವಾ ಮೀಡಿಯಾಗಳ ಅಸಡ್ಡೆಯೋ ಗೊತ್ತಿಲ್ಲ. ಸಾಮಾಜಿಕವಾಗಿ ಬಿಸಿ ಮುಟ್ಟಿಸಬೇಕಿದ್ದ 'ಅಭಿಮನ್ಯು' ನಾಡಿನ ಜನಸಾಮಾನ್ಯರ ಮನಸ್ಸನ್ನೇ ತಟ್ಟಲಿಲ್ಲ. ಹಾಗೆಂದು ದಲಿತ ಸಮೂಹ ನಿದ್ರಿಸುತ್ತಿಲ್ಲ. ಬಿಎಸ್‌ಪಿ ಮುಖಂಡರು ಮತ್ತು ಬಹುಜನ ವಿದ್ಯಾರ್ಥಿ ಸಂಘದ ಕಾರ್ಯಕರ್ತರ ಮಟ್ಟಿಗಾದರೂ ಇಂಥದೊಂದು ಚಿತ್ರ ಗಮನ ಸೆಳೆಯುತ್ತಿದೆಯಲ್ಲ-

ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯಗಳ ವಿರುದ್ಧ ಸಿದ್ದು ಸರ್ಕಾರ ಖಾಸಗಿ ಶಾಲೆಗಳ ಧನಾಢ್ಯರ ವಿರುದ್ಧ ಸಮರ ಸಾರಿರುವ ಈ ಸಂದರ್ಭದಲ್ಲೇ ಸರ್ಜಾ, 'ಅಭಿಮನ್ಯು' ಇದೇ ಲಾಬಿಗೆ ಪೆಟ್ಟು ಕೊಟ್ಟಿದೆ. ಸಾಮಾಜಿಕ ಆರೋಗ್ಯದ ದೃಷ್ಟಿಯಿಂದ ಇದೊಂದು ಸುತ್ತ್ಯಾರ್ಹ ಯತ್ನವೆ. ಅಹಿಂದ ವರ್ಗಗಳ ಆಶೋತ್ತರದ ಈ ಕಾಲದಲ್ಲಾದರೂ ಇಂಥದೊಂದು ಚಿತ್ರವನ್ನು ಜನ ಬೆಂಬಲಸಬೇಕಿದೆ. ಕನಿಷ್ಠ ಬಡವರ ಮಕ್ಕಳಿಗಾಗಿ ಮತ್ತು ಖಾಸಗಿ ಶಾಲಾ ಧಣಿಗಳ ಕ್ರೌರ್ಯದ ನಿರ್ನಾಮಕ್ಕಾಗಿ.

● ರಾ. ಸೋಮನಾಥ್

...ಯಿಪ್ರಕಾಶ್: ಬೆಂಗಳೂರಿನಲ್ಲಿ ಹೀಗೊಬ್ಬ ಲೋಕಲ್ ಅಭಿಮನ್ಯು

ಸಮಾನ ಶಿಕ್ಷಣ ಮತ್ತು ಶಿಕ್ಷಣ ಹಕ್ಕು ಕುರಿತಂತೆ ಸಿದ್ದು ನ ಕೈಗೊಂಡ ಕ್ರಾಂತಿಕಾರಿ ಕ್ರಮವೊಂದರ ಬಗ್ಗೆ ಪತ್ರಿಕೆಗ ಟೀವಿಗಳಾಗಲಿ ಅದ್ಯಾವ ಕಾರಣಕ್ಕೆ ಪ್ರಚಾರ ನೀಡಲಿಲ್ಲವೋ ಗುತ್ತಿಲ್ಲ. ಖಾಸಗಿ ಶಾಲಾ ಕುಬೇರರ ತಿಜೋರಿಗೇ ಟ್ಟಂತೆ ಇಲ್ಲಿಗೆ ತಿಂಗಳ ಹಿಂದೆ ಅಂದರೆ 2014 ರ ಬರ್‌ನಲ್ಲಿ ಸಾರ್ವಜನಿಕ ಶಿಕ್ಷಣ ಆಯುಕ್ತ ಮೊಹಮ್ಮದ್ ನ್ ಹೊರಡಿಸಿದ ವಿಶೇಷ ಆದೇಶದ ಪ್ರಕಾರ ಇನ್ನು ದೆ ಖಾಸಗಿ ಶಾಲೆಗಳು ಬೇಕಾಬಿಟ್ಟಿ ಫೀಜು ಕೀಳುವಂತಿಲ್ಲ! ದ ಯಾವುದೇ ಭಾಗದ ಶಿಕ್ಷಣ ಸಂಸ್ಥೆಗಳು ಎಲ್‌ಕೆಜಿಯಿಂದ ಕೆಜಿ ವರ್ಷವೊಂದಕ್ಕೆ 11,500 ಕ್ಕಿಂತಲೂ ಮೇಲ್ಪಟ್ಟು ವಸೂಲಿ ಮಾಡುವಂತಿಲ್ಲ ಎಂಬುದು ಸದರಿ ಆದೇಶದ ತಿರುಳು. 1ರಿಂದ 4ನೇ ತರಗತಿವರೆಗೆ ವರ್ಷಕ್ಕೆ 6,100 ರೂ.ಗಿಂತ ಹೆಚ್ಚು ಸುವಂತಿಲ್ಲ. 5 ರಿಂದ 8ನೇ ತರಗತಿಗೆ ವಿದ್ಯಾರ್ಥಿಯೊಬ್ಬನಿಂದ 6,300 ಹೆಚ್ಚು ಪಡೆಯುವುದು ಕಾನೂನುಬಾಹಿರ. 9ನೇ ತರಗತಿಯಿಂದ 10 12,100 ರೂ. ಮಾತ್ರವೇ ವಾರ್ಷಿಕ ಶುಲ್ಕ ವಿಧಿಸಬಹುದು. ಹೆಚ್ಚಿಗೆ ವಸೂಲಿ ಮಾಡುವ ಯಾವುದೇ ಕಾನ್ವೆಂಟು, ಸೆಂಟ್ರಲ್ ಶಾಲೆಗಳ ಮಾನ್ಯತೆಯನ್ನು ಸರ್ಕಾರ ನಿರ್ದಾಕ್ಷಿಣ್ಯವಾಗಿ ರದ್ದುಗೊಳಿಸುತ್ತದೆ ಇಂಥದೊಂದು ಆದೇಶ ಹೊರಬಿದ್ದಿದ್ದೇ ತಡ, ಕರ್ನಾಟಕ ಖಾಸಗಿ ಮಾಲೀಕರ ಬುಡಕ್ಕೇ ಬೆಂಕಿಯಿಟ್ಟಂತಾಗಿ ಅವರೆಲ್ಲ ಹೈಕೋರ್ಟ್ ಸಿದ್ದಾರೆ. ಆದರೆ ಹೈಕೋರ್ಟ್ ಮಣಿಯಬೇಕಲ್ಲ!


...ಶಿಕ್ಷಣ ಸಚಿವ ಕಿಮ್ಮನೆ ರತ್ನಾಕರ್ ಮತ್ತು ಮುಖ್ಯಮಂತ್ರಿ, [illegible] ಬಹುಕಾಲ ಧೂಳು ಹಿಡಿದಿದ್ದ ಈಗ ಜಾರಿಗೆ ಬಂದ ಈ ಕ್ರಾಂತಿಕಾರಿ



ಆದೇಶಕ್ಕೆ ಇನ್ನೂ ಓರ್ವ ವ್ಯಕ್ತಿ ಕಾರಣರಾಗಿದ್ದರು. ಅದು ಸಿನಿಮಾ ನಟ ಸಾಯಿಪ್ರಕಾಶ್. ವಿಜಯನಗರದ ಸರ್ವೋದಯ ನ್ಯಾಷನಲ್ ಪಬ್ಲಿಕ್ ಸ್ಕೂಲಿನ ಧಣಿ ನಾರಾಯಣಸ್ವಾಮಿ ಎಂಬಾತನ ವಿರುದ್ಧ ಸಣ್ಣಮಟ್ಟದಲ್ಲಿ ಸಾಯಿಪ್ರಕಾಶ್ ಶುರುವಿಟ್ಟ ಹೋರಾಟ ಇವತ್ತು ಇಡೀ ಬೆಂಗಳೂರನ್ನು ವ್ಯಾಪಿಸಿದೆ. ತಮ್ಮ ಮಕ್ಕಳನ್ನು ಸರ್ವೋದಯ ಪಬ್ಲಿಕ್ ಸ್ಕೂಲಿಗೆ ಸೇರಿಸಿದ್ದ ಸಾಯಿಪ್ರಕಾಶ್‌ಗೆ ಅನ್ಯಾಯ ಎನ್ನಿಸಿದ್ದು ಪ್ರತಿವರ್ಷ ಶೇ. 50 ರಷ್ಟು ಹೆಚ್ಚಿಸುತ್ತಿದ್ದ ಶಾಲಾ ಶುಲ್ಕ. ಈ ವರ್ಷ ಮಗುವೊಂದಕ್ಕೆ ವಾರ್ಷಿಕವಾಗಿ 30 ಸಾವಿರ ಕಟ್ಟುತ್ತಿದ್ದರೆ ಮುಂದಿನ ವರ್ಷಕ್ಕೆ 45 ಸಾವಿರ ತಲುಪುತ್ತಿತ್ತು. ಮುಂದಿನ 2 ವರ್ಷಗಳಲ್ಲದು ಲಕ್ಷವಾಗುತ್ತಿತ್ತು.

ಸರ್ಕಾರ ಮತ್ತು ಶಿಕ್ಷಣ ಕಾಯ್ದೆಯನ್ನು ಉಲ್ಲಂಘಿಸಿ ಖಾಸಗಿ ಶಾಲಾ ದೊರೆಗಳು ನಡೆಸುತ್ತಿದ್ದ ಈ ಸುಲಿಗೆಯ ವಿರುದ್ಧ ಮೊದಲು ಪೋಷಕರನ್ನು ಸಂಘಟಿಸಿ ಹೋರಾಟಕ್ಕಿಳಿದ ಸಾಯಿಪ್ರಕಾಶ್ 2012 ರಲ್ಲಿ ಕೋರ್ಟ್ ಮೆಟ್ಟಿಲೇರಿದರು. ಬಸವೇಶ್ವನಗರದ ವಿಎಲ್‌ಎಸ್ ಕಾನ್ವೆಂಟ್, ಆರ್‌ಟಿನಗರದ ಪ್ಯಾರಾಮೆಲ್ ಮಿಲ್ಟಿ ಸ್ಕೂಲ್, ನಾಗವಾರದ ಸೆಂಟ್ ಮಿರಾಸ್ ಕಾನ್ವೆಂಟ್ ಹೀಗೆ ಬೆಂಗಳೂರಿನ ಬೇರೆಬೇರೆ ಕಾನ್ವೆಂಟುಗಳ ವಿರುದ್ಧ ಸಾಯಿಪ್ರಕಾಶ್ ಪ್ರತಿಭಟನೆ ಹಮ್ಮಿಕೊಂಡರು. ಮಕ್ಕಳ ಪೋಷಕರೆಲ್ಲ ಬೀದಿಗಿಳಿದು ಪ್ರತಿಭಟಿಸತೊಡಗಿದರು. ಸಾಯಿಪ್ರಕಾಶ್ ವಿರುದ್ಧ ರೌಡಿಗಳನ್ನು ಛೂಬಿಟ್ಟರು. ಸರ್ವೋದಯ ಕಾನ್ವೆಂಟ್ ಧಣಿ ನಾರಾಯಣಸ್ವಾಮಿ ಮಗ ದೀಪಕ್ ಶಾಲಾ ಆವರಣದಲ್ಲೇ ಸಾಯಿಪ್ರಕಾಶ್ ಹತ್ಯೆಗೆ ಯತ್ನಿಸಿದ. ದೂರು ನೀಡ ಹೋದರೆ ಪೊಲೀಸರು ಇವರ ವಿರುದ್ಧವೇ ಪ್ರತಿದೂರು ದಾಖಲಿಸಿದ್ದರು. ಒಂದಲ್ಲ ಮೂರು ಸುಳ್ಳು ಕೇಸುಗಳು ಸಾಯಿಪ್ರಕಾಶ್ ವಿರುದ್ಧ ದಾಖಲಾದವು. ನ್ಯಾಯ





ಕೇಳಲು ಸಾಯಿಪ್ರಕಾಶ್ ಜೊತೆ ಬಂದ ಮಕ್ಕಳ ಪೋಷಕರ ಮೇಲೂ ಸುಳ್ಳು ಕೇಸು ದಾಖಲಿಸಲಾಯಿತು. ಒಂದೆರಡು ಬಾರಿ ರೌಡಿಗಳಿಂದಲೂ ಬಚಾವಾದ ಸಾಯಿಪ್ರಕಾಶ್ ಪರವಾಗಿ ಹೈಕೋರ್ಟು ತೀರ್ಪು ನೀಡಿತು.

ಹೈಕೋರ್ಟ್ ಆದೇಶದ ಮೇರೆಗೆ ಸರ್ಕಾರ ರಾಜ್ಯಾದ್ಯಂತ ಸಮಾನ ಶುಲ್ಕ ಪದ್ಧತಿಯನ್ನು ಜಾರಿಗೆ ತಂದಿತ್ತು. ಪೋಷಕರನ್ನು ಸಂಘಟಿಸಿ, ಶಾಲೆಗಳ ಎದುರು ಪ್ರತಿಭಟಿಸಿ, ಕೋರ್ಟ್ ಮೊರೆ ಹೊಕ್ಕು ಕೊನೆಗೂ ಸಮಾನ ಶುಲ್ಕ ಪದ್ಧತಿಗೆ ಕಾರಣರಾದ ಸಾಯಿಪ್ರಕಾಶ್ ನಿಜಕ್ಕೂ 'ಅಭಿಮನ್ಯು' ಚಿತ್ರದ ನಾಯಕ ಪಾತ್ರದಂತೆಯೇ ಇದ್ದಾರೆ. "ನಾನು ನಡೆಸಿದ ಹೋರಾಟ ಮತ್ತು ಅನುಭವಿಸಿದ ಹಿಂಸೆಯ ಮುಂದೆ ಸಿನಿಮಾ ಪಾತ್ರ ಯಾವ ಲೆಕ್ಕ ಸಾರ್? ನಾನು ಬದುಕಿ ಉಳಿದಿದ್ದೇ ಹೆಚ್ಚು" ಅನ್ನುವ ಸಾಯಿಪ್ರಕಾಶ್ ಬೆಂಗಳೂರಿನ ಕಾನ್ವೆಂಟ್ ಲಾಬಿಗೆ ಸಿಂಹಸ್ವಪ್ನವಾಗಿದ್ದಾರೆ. ಅಭಿಮನ್ಯು ಪಾತ್ರ ಅವರ ಹೋರಾಟವನ್ನು [illegible]

ಕುವೆಂಪು ಅವರ ನಾಡಗೀತೆ ಮತ್
ನಿರ್ಮತೀಯ ರಾಷ್ಟ್ರೀಯವಾದಿ ನೇ



ಭಾರತದ ರಾಷ್ಟ್ರೀಯತೆಗೆ ಎರಡು ಆಯಾಮಗಳಿವೆ. ಮಹಾಹತುಶಾಹಿ ರಾಜಕೀಯ ವ್ಯವಸ್ಥೆ ಹಾಗೂ ಬಂಡವಾಳ ಶಾಹಿ ಆರ್ಥಿಕ ವ್ಯವಸ್ಥೆಯ ನಿರ್ವಹಣೆಯ ಭಾಗವಾಗಿ ಭಾರತ ಒಂದು ಆಧುನಿಕ ರಾಷ್ಟ್ರವಾಗಿ ರೂಪ ತಾಳಿತು. ಎರಡನೆಯದಾಗಿ ಮಹಾಹತುಶಾಹಿ ಆಡಳಿತ ವ್ಯವಸ್ಥೆಯ ವಿರುದ್ಧದ ಸ್ವಾತಂತ್ರ್ಯ ಹೋರಾಟ ಭಾರತವನ್ನು ಒಂದು ರಾಷ್ಟ್ರವಾಗಿ ರೂಪಿಸಿತು. ವಸಾಹತುಶಾಹಿ ಆಡಳಿತ ಭಾರತದಂಥ ರೂಪಗೊಳ್ಳುತ್ತಿರುವ ರಾಷ್ಟ್ರವನ್ನು ಹಿಡಿತದಲ್ಲಿಟ್ಟುಕೊಳ್ಳಲು ಮತವನ್ನು ಒಂದು ವಿಭಜನಾ ಸಾಧನವಾಗಿ ಬಳಸಿಕೊಂಡಿತು. ಹಾಗೆಯೇ ಭಾರತದ ರಾಷ್ಟ್ರೀಯ ಹೋರಾಟದ ಆರಂಭದ ಸ್ತರದಲ್ಲಿ ಕೂಡ 'ಮತ' ಪ್ರಧಾನ ವೇದಿಕೆಯಾಯಿತು. ಹಿಂದೂ ಕೋಮುವಾದ ಮತ್ತು ಮುಸ್ಲಿಮ್ ಮೂಲಭೂತವಾದಗಳು ರಾಷ್ಟ್ರೀಯತೆಯ ಕಲ್ಪನೆಯನ್ನು ಮತೀಕರಿಸಿದವು. ಹಿಂದೂ-ಮುಸ್ಲಿಂ ದ್ವೇಷ, ಮತೀಯ ರಾಷ್ಟ್ರೀಯತೆಯ ಮುಖ್ಯ ಲಕ್ಷಣವಾಯಿತು. ಮುಸ್ಲಿಂ ಪ್ರಾತಿನಿಧ್ಯದ ಮಾದರಿಯಲ್ಲಿಯೇ ಶೂದ್ರ, ದಲಿತ, ಆದಿವಾಸಿ ಸಮುದಾಯಗಳೂ ಪ್ರಾತಿನಿಧ್ಯಕ್ಕೆ ಹೋರಾಟ ನಡೆಸಿ ರಾಷ್ಟ್ರೀಯತೆಗೆ ಜಾತಿ, ಜನಾಂಗಗಳೂ ವಿಭಜಕ ನೆಲೆಯನ್ನು ಒದಗಿಸಿದವು. ಇವುಗಳಿಗೆ ಪರ್ಯಾಯವಾಗಿ ಹುಟ್ಟಿರುವ ಚಿಂತನೆಗಳನ್ನು ನಿರ್ಮತೀಯ ರಾಷ್ಟ್ರೀಯವಾದಿ ನೆಲೆ ಎಂದು ಗುರುತಿಸಬಹುದಾಗಿದೆ. ಹಿಂದೂ-ಮುಸ್ಲಿಮ-ಶೂದ್ರ-ದಲಿತ ಮೊದಲಾದ ಭೇದಗಳನ್ನು ದೂರೀಕರಿಸಿ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಎಲ್ಲರನ್ನೂ ಒಳಗೊಳ್ಳುವದು ಹಾಗೂ ಆಧುನಿಕ ರಾಷ್ಟ್ರವ್ಯವಸ್ಥೆಯಲ್ಲಿ ಎಲ್ಲರಿಗೂ ಪ್ರಾತಿನಿಧ್ಯಗಳನ್ನು ನೀಡುವುದು ನಿರ್ಮತೀಯ ರಾಷ್ಟ್ರೀಯವಾದದ ಪ್ರಮುಖ ರಾಜಕೀಯ ನಿಲುವಾಗಿದೆ. ಆಂತರಿಕವಾಗಿ ಹಲವು ಸೂಕ್ಷ್ಮ ವ್ಯತ್ಯಾಸಗಳಿದ್ದರೂ ಪರಮಹಂಸ, ವಿವೇಕಾನಂದ, ಮಹಾತ್ಮಗಾಂಧಿ, ಕಮ್ಯುನಿಸ್ಟರು, ಸಮಾಜವಾದಿಗಳು, ಕ್ರಾಂತಿಕಾರಿಗಳು, ನಿರ್ಮತೀಯ ರಾಷ್ಟ್ರೀಯವಾದದ ಹಲವು ಆಯಾಮಗಳನ್ನು ಪ್ರತಿಪಾದಿಸಿದರು. ಇವರೆಲ್ಲರ ಚಿಂತನೆಗಳ ಒಂದು ಕಲಸುಮೇಲೋಗರವಾಗಿ ನಿರ್ಮತೀಯ ರಾಷ್ಟ್ರೀಯವಾದದ ಒಂದು ಸಡಿಲವಾದ ಚೌಕಟ್ಟು ಭಾರತದ ರಾಷ್ಟ್ರೀಯ ಹೋರಾಟದಲ್ಲಿ ರೂಪ ತಾಳಿತ್ತು, ಇದು ಕೋಮುವಾದಿ ಮತ್ತು ಮೂಲಭೂತವಾದಿ ಚಿಂತನೆಗಳಿಗೆ ಪರ್ಯಾಯವಾಗಿತ್ತು. ನವೋದಯ ಕನ್ನಡ ಕವಿಗಳ ಮೇಲೆ ಮತೀಯ ರಾಷ್ಟ್ರೀಯವಾದಿ ಚಿಂತನೆಗಳಂತೆ ನಿರ್ಮತೀಯ ರಾಷ್ಟ್ರೀಯವಾದಿ ಚಿಂತನೆಗಳ ವಿಭಿನ್ನ ಆಯಾಮಗಳು ಪ್ರಭಾವ ಬೀರಿದ್ದವು. ಈ ನೆಲೆಯು ಕಾವ್ಯದಲ್ಲಿ ಮೈದಾಳಿದ ಬಗೆಯನ್ನು ಪ್ರಾತಿನಿಧಿಕವಾಗಿ ಕುವೆಂಪು ಅವರ 'ಜಯ ಹೇ ಕರ್ನಾಟಕ ಮಾತೆ' ನಾಡಗೀತೆಯಲ್ಲಿ ಗುರುತಿಸಬಹುದಾಗಿದೆ.

ಕುವೆಂಪು ಅವರ 'ಹಂಪೆಯ ಭೀಮ' ಮತೀಯ ರಾಷ್ಟ್ರೀಯವಾದಿ ನೆಲೆಯನ್ನು ವಿವರಿಸಿದರೆ ಈ ನಾಡಗೀತೆಯು ಆ ಕಾಲದ ನಿರ್ಮತೀಯ ರಾಷ್ಟ್ರೀಯವಾದದ ಒಂದು ಮಗ್ಗುಲನ್ನು ತಿಳಿಯಪಡಿಸುತ್ತದೆ. ಕವಿಯೊಬ್ಬ ಏಕಕಾಲದಲ್ಲಿ ಎರಡು ವಿರುದ್ಧ ಚಿಂತನೆಗಳಿಂದ ಪ್ರಭಾವಿತವಾಗುವ ಚೋದ್ಯವನ್ನು ಕವಿ ಹಾಗೂ ಕಾಲಗಳ ಮುಖಾಮುಖಿಯ ಪರಿಣಾಮದಲ್ಲಿ ಗ್ರಹಿಸಬಹುದಾಗಿದೆ. ಈ ನಾಡಗೀತೆಯ ಪಠ್ಯದ ಜೊತೆಗೆ ಅದರ ಬರವಣಿಗೆಯ ಆರಂಭದ ಸ್ವರೂಪ ಅದನ್ನು ಕುರಿತಾಗಿ ಕವಿಯ ನಿಲುವು ಹಾಗೂ ನಾಡಗೀತೆಯಾದ ನಂತರ ಹುಟ್ಟಿರುವ ವಿವಾದಗಳೆಲ್ಲ ಮತೀಯ ಮತ್ತು ನಿರ್ಮತೀಯ ಚಿಂತನೆಗಳ ಸಂಘರ್ಷವನ್ನು ಒಳಗೊಂಡಿರುವದರಿಂದ ಪಠ್ಯದೊಂದಿಗೆ ಈ ಎಲ್ಲ ಸಂಗತಿಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಜಯಹೇ ಕರ್ನಾಟಕ ಮಾತೆ

ಕುವೆಂಪು ಅವರ ಜನಪ್ರಿಯ ಪದ್ಯಗಳಲ್ಲಿ 'ಜಯಹೇ ಕರ್ನಾಟಕ ಮಾತೆ' ಕೂಡ ಒಂದು. ಇದರ ಪಿತಾಮಹನನ್ನು ಅವರು 'ಕರ್ನಾಟಕ ರಾಷ್ಟ್ರಗೀತೆ' ಎಂಬ ಹೆಸರಿನಿಂದ 1924-25ರಷ್ಟು ಹಿಂದೆಯೇ ರೂಪಿಸಿದ್ದರು. 1930ರಲ್ಲಿ ಪ್ರಕಟವಾದ ಅವರ ಮೊದಲ ಕವನ ಸಂಕಲನ 'ಕೊಳಲು' ಅದರ ಪರಿಷ್ಕೃತ ಆವೃತ್ತಿಯನ್ನು ಒಳಗೊಂಡಿದೆ. 1970-71ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಈ ಕವಿತೆಯನ್ನು ನಾಡಗೀತೆಯಾಗಿ ಸ್ವೀಕರಿಸಿ ಮೂರು ನಿಮಿಷಗಳಿಗೆ ಹಾಡುವಷ್ಟು ಸಂಗ್ರಹಿಸಿಕೊಂಡಿತು. 2003ರಲ್ಲಿ ಕರ್ನಾಟಕ ಸರಕಾರ ಈ ಗೀತೆಯನ್ನು ನಾಡಗೀತೆಯಾಗಿ ಸ್ವೀಕರಿಸಿತು. ಕುವೆಂಪು ಅವರ ಪರಿಷ್ಕರಣ, ಪರಿಷತ್ತಿನ ಸಂಗ್ರಹ, ಸರಕಾರ ನಾಡಗೀತೆಯಾಗಿ ಸ್ವೀಕರಿಸುವಾಗ ಮಧ್ವರ ಹೆಸರಿನ ಸೇರ್ಪಡೆ.... ಮೊದಲಾದ ಹಂತಗಳಲ್ಲಿ ಈ ಕವಿತೆ ಕೆಲವು ವಿವಾದಗಳನ್ನು ಹುಟ್ಟುಹಾಕಿದೆ.

ಸಾಮರಸ್ಯ ಮತ್ತು ಬಹುಸಾಂಸ್ಕೃತಿಕತೆಯ ನಿಲುವು


ಕುವೆಂಪು 1980ರಲ್ಲಿ ಪ್ರಕಟಿಸಿದ ತಮ್ಮ 'ನೆನಪಿನದೋಣಿ'ಯಲ್ಲಿ ಈ ಗೀತೆಯನ್ನು ಕುರಿತಾಗಿ ಕೆಲವು ಮಹತ್ವದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. 'ಠಾಕೂರರ ಜನಗಣಮನದಂತೆ ನಮ್ಮ ನಾಡಿಗೂ ಒಂದು ರಾಷ್ಟ್ರಗೀತೆಯನ್ನು ನೀಡುವ ಪ್ರಯತ್ನದ ಭ್ರೂಣಸ್ಥಿತಿಯಂತಿದೆ' ಎಂದು ತಮ್ಮ 'ಕರ್ನಾಟಕ ರಾಷ್ಟ್ರಗೀತೆ'ಯನ್ನು ಕುರಿತು ಹೇಳಿಕೊಳ್ಳುತ್ತಾರೆ. ಇಪ್ಪತ್ತನೆಯ ಶತಮಾನದ ಆರಂಭದ ದಶಕಗಳಲ್ಲಿ ಭಾರತದ ರಾಷ್ಟ್ರೀಯ ಹೋರಾಟಗಳ ಮೇಲೆ ಗಾಢವಾದ ಪ್ರಭಾವ ಬೀರಿದ ಗೀತೆಯೆಂದರೆ ಬಂಕಿಂಚಂದ್ರರ 'ವಂದೇಮಾತರಂ'. ಈ ಗೀತೆಯು ಭಾರತದಲ್ಲಿ ಮತೀಯ ರಾಷ್ಟ್ರೀಯವಾದಕ್ಕೆ ದೊಡ್ಡ ಪ್ರಮಾಣದ ಸ್ಫೂರ್ತಿಯನ್ನು ನೀಡಿತು. ಮುಸ್ಲಿಮರನ್ನು ಹೊರತುಪಡಿಸಿದ ಭಾರತ ರಾಷ್ಟ್ರೀಯತೆಯ ಪ್ರತಿಪಾದನೆಗೆ ಬುನಾದಿ ಹಾಕಿತು. ಹಿಂದೂ ದೇವತೆಗಳನ್ನು ಆರಾಧಿಸುವ ಪ್ರತಿಮೆಗಳಿಂದ ತುಂಬಿದ ಈ ಗೀತೆಯನ್ನು ರಾಷ್ಟ್ರಗೀತೆಯೆಂದು ಸ್ವೀಕರಿಸಲು ಜಿನ್ನಾ ಹಾಗೂ ಮುಸ್ಲಿಂ ಲೀಗ್ ವಿರೋಧಿಸಿದವು. 1930 ಆಗಸ್ಟ್ 14ರ ಮಧ್ಯರಾತ್ರಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಠಾಕೂರರ ಜನಗಣಮನವನ್ನು ರಾಷ್ಟ್ರಗೀತೆಯೆಂದೂ ತ್ರಿವರ್ಣ ಧ್ವಜವನ್ನು ರಾಷ್ಟ್ರಧ್ವಜವೆಂದೂ ಒಪ್ಪಿ ನೆಹರೂ ಅವರ ನೇತೃತ್ವದಲ್ಲಿ ಸ್ವಾತಂತ್ರ್ಯವನ್ನು ಘೋಷಿಸಿದರು. ಆಗ ಹಿಂದೂ ಮಹಾಸಭಾ ಹಾಗೂ ಆರೆಸ್ಸೆಸ್ ಸಂಘಟನೆಗಳು ಈ ಎರಡೂ ರಾಷ್ಟ್ರೀಯ ಲಾಂಛನಗಳನ್ನು ತಿರಸ್ಕರಿಸಿ 'ವಂದೇ ಮಾತರಂ' ಹಾಗೂ 'ಭಗವಾಧ್ವಜ'ಗಳನ್ನು ತಮ್ಮ ರಾಷ್ಟ್ರೀಯ ಲಾಂಛನಗಳೆಂದು ಘೋಷಿಸಿದವು. ಅಂದಿನಿಂದ ಇಂದಿನವರೆಗೂ ಆ ವಿವಾದ ಮುಂದುವರೆದಿದೆ. ಈ ಎಲ್ಲ ಚರಿತ್ರೆಯೊಂದಿಗೆ ಬೆಳೆದ ಕುವೆಂಪು ಅವರು 1980ರ ಕಾಲಘಟ್ಟದಲ್ಲಿ ನಿಂತು 1924-25ರ ಕವಿತೆಯೊಂದನ್ನು ಕುರಿತು ತಮಗೆ ಠಾಕೂರರ ಜನಗಣಮನ ಮಾದರಿಯಾಗಿತ್ತು ಎಂದು ಹೇಳಿಕೊಳ್ಳುತ್ತಾರೆ. ತನ್ನದು ಬಂಕಿಂರ 'ವಂದೇ ಮಾತರಂ' ಮಾದರಿ ಅಲ್ಲ ಎನ್ನುವದು ಆ ವಿವರಣೆಯ ಮುಖ್ಯಧ್ವನಿ. ಹಿಂದೂ ಮತ್ತು ಮುಸ್ಲಿಂ ಕೋಮುವಾದಿ ಮತ್ತು ಮೂಲಭೂತವಾದಿ ಸಂಘಟನೆಗಳ ಸಂಘರ್ಷದ ಆರಂಭದ ಕಾಲದಲ್ಲಿ ಕುವೆಂಪು ಅವರಂಥ ಕವಿಯೊಬ್ಬ ಠಾಗೂರರ ಮಾದರಿಯನ್ನು ಆಯ್ಕೆಮಾಡಿಕೊಳ್ಳುವ ವಿಧಾನದಲ್ಲಿಯೇ ಮತೀಯ ರಾಷ್ಟ್ರೀಯತೆಯನ್ನು ತಿರಸ್ಕರಿಸಿ ನಿರ್ಮತೀಯ ರಾಷ್ಟ್ರೀಯತೆಯನ್ನು ಒಪ್ಪಿಕೊಳ್ಳುವ ಅವರ ಸಾಮರಸ್ಯವಾದಿ ನಿಲುವು ಖಚಿತವಾಗಿ ವ್ಯಕ್ತವಾಗುತ್ತದೆ.

ಕುವೆಂಪು ಅವರು 'ಕರ್ನಾಟಕ ರಾಷ್ಟ್ರಗೀತೆ'ಯನ್ನು ಕುರಿತಾಗಿ ಹೇಳಿದ ಇನ್ನೊಂದು ಮಾತು ಗಮನಾರ್ಹ: "ಹೈದರ್ ಟಿಪ್ಪು ಶಿವಾಜಿ, ತುಕಾರಾಂ, ಹಂಪ, ಪುಲಿಕೇಶಿ, ಕೆಂಪೇಗೌಡ, ಅರ್ಥವಾಗದ 'ಮಾರಾಮ' ಈ ಎಲ್ಲ ಹೆಸರುಗಳ ಕಲಬೆರಕೆಯ ವಿಚಿತ್ರ ಪಾಕವಿರುವದನ್ನು ಓದುಗರು ದರಹಸ್ಮಿತರಾಗಿ ಗಮನಿಸಬಹುದು."[1] ಫ್ಯಾಸಿಸಂ ಮತ್ತು ನಾಝಿಜಂಗಳ ಚಿಂತನೆಗಳಿಂದ ಪ್ರೇರಣೆ ಪಡೆದು ಶುದ್ಧ ಆರ್ಯ ಜನಾಂಗದ ಸಾಂಸ್ಕೃತಿಕ ರಾಷ್ಟ್ರೀಯತೆಯನ್ನು ಸಾವರ್ಕರ್ ಹಾಗೂ ಬಳಗ ಪ್ರತಿಪಾದಿಸಲು ಆರಂಭಿಸಿದ ಕಾಲಘಟ್ಟದಲ್ಲಿ ಬರೆದ 'ಕರ್ನಾಟಕ ರಾಷ್ಟ್ರಗೀತೆ'ಯ ಬಗ್ಗೆ 1980ರಲ್ಲಿ ಕುವೆಂಪು ಮೇಲಿನಂತೆ ಅಭಿಪ್ರಾಯ ಪಡುವದು ಆ ಕಾಲದ ಮತ್ತು 80ರ ದಶಕದ ಕೋಮುವಾದಿ ರಾಷ್ಟ್ರೀಯತೆಗೆ ನೀಡಿದ ಸ್ಪಷ್ಟವಾದ ಪ್ರತಿಭಟನಾತ್ಮಕ ಪ್ರತಿಕ್ರಿಯೆಯಂತೆ ಕಾಣಿಸುತ್ತದೆ. ಆದಿಕಾಲದಿಂದಲೂ ಭಾರತದ ಸಂಸ್ಕೃತಿಯ ಬಹುಮುಖ್ಯ ಲಕ್ಷಣವಾದ ಸಂಕರಶೀಲತೆಯನ್ನು ಕುವೆಂಪು ಎತ್ತಿ ಹಿಡಿಯುತ್ತಾರೆ. 'ಕಲಬೆರಕೆಯ ವಿಚಿತ್ರ ಪಾಕ'ವೇ ಭಾರತದ ಸಮ್ಮಿಶ್ರ ಸಂಸ್ಕೃತಿ. ಅವರು ನಾಡಗೀತೆಯಲ್ಲಿ ಬಹುಸಾಂಸ್ಕೃತಿಕತೆಯನ್ನು ಉದ್ದೇಶಪೂರ್ವಕವಾಗಿಯೇ ಪ್ರತಿಪಾದಿಸಿದ್ದಾರೆ.

ಪರಿಷ್ಕರಣದ ಸ್ವರೂಪ ಮತ್ತು ಸಾಮರಸ್ಯ

"ಭಾವ ಮತ್ತು ಭಾಷೆ ಎರಡರ ಸೃಷ್ಟಿಯಿಂದಲೂ ಕವಿಯ ವಿಕಾಸವನ್ನು ಗುರುತಿಸಲು ನೆರವಾಗುತ್ತದೆಂದು ಯಾವುದನ್ನೂ ತಿದ್ದಲು ಹೋಗದೇ ಅದನ್ನು ಎಲ್ಲ ನ್ಯೂನತೆಗಳೊಡನೆ ಇಲ್ಲಿ ಕೊಡುತ್ತೇನೆ"[2] ಎಂದು 'ನೆನಪಿನ ದೋಣಿಯಲ್ಲಿ' 'ಕರ್ನಾಟಕ ರಾಷ್ಟ್ರಗೀತೆ'ಯನ್ನು ಯಥಾವತ್ತಾಗಿ ನೀಡಿದ್ದಾರೆ. ಬಂಜಗೆರೆ ಜಯಪ್ರಕಾಶ ಅವರು "ನಾಡಗೀತೆಯೊಂದನ್ನು ಬರೆಯುವ ಹಂಬಲ ಹಾಗೂ ಅದರೊಳಗೆ ವಿಭಿನ್ನ ಪರಂಪರೆಗಳ ಮಿಳಿತವನ್ನು ಸೂಚಿಸುವಂತೆ ಇರುವ ಹೆಸರುಗಳ ಪಟ್ಟಿ ಈಗ ಮಾನ್ಯಗೊಂಡಿರುವ ನಾಡಗೀತೆಗಿಂತ ಆಗಿನ ಪ್ರಯತ್ನದಲ್ಲೇ ಕುವೆಂಪು ದೃಷ್ಟಿಕೋನಕ್ಕೆ ಹೆಚ್ಚು ಸಮೀಪವಿರುವಂತಿದೆ"[3] ಎಂದು 'ಕರ್ನಾಟಕ ರಾಷ್ಟ್ರಗೀತೆ' ಹಾಗೂ 'ಜಯಹೇ ಕರ್ನಾಟಕ ಮಾತೆ'ಗಳನ್ನು ತುಲನೆ ಮಾಡಿ ಪ್ರತಿಕ್ರಿಯಿಸಿದ್ದಾರೆ. ಇಲ್ಲಿ ಹೈದರ್, ಟಿಪ್ಪು, ಶಿವಾಜಿ, ಪುಲಿಕೇಶಿ, ಕೆಂಪೇಗೌಡ ಮೊದಲಾದ ಅರಸರ ಹೆಸರುಗಳನ್ನು ಕುವೆಂಪು ತೆಗೆದುಹಾಕಿದ್ದಾರೆ. ಭಾರತದ ರಾಜಕೀಯ ಪರಂಪರೆಯ ಸ್ಮೃತಿಕೋಶದಲ್ಲಿ ಒಬ್ಬ ಮುಸ್ಲಿಂ ದೊರೆಯ ಹೆಸರು ಕೂಡ ಪ್ರಸ್ತಾಪಗೊಳ್ಳದೇ ಇರುವದು ಮೇಲ್ನೋಟಕ್ಕೆ ಸಮನ್ವಯತೆಗೆ ಭಂಗಬಂದಂತೆ ಕಾಣಿಸುತ್ತದೆ. ಆಶ್ಚರ್ಯದ ಸಂಗತಿ ಎಂದರೆ ಮೊದಲ ರಾಷ್ಟ್ರಗೀತೆಯಲ್ಲಿ ಕುವೆಂಪು ಅವರು ತಮ್ಮ ಇತರ ಕೃತಿಗಳಲ್ಲಿ ಉಗ್ರವಾಗಿ ಖಂಡಿಸಿದ ಮತ್ತು ಹೊಸಕಾಲಕ್ಕೆ ತಕ್ಕಂತೆ ಪರಿವರ್ತಿಸಿದ ವೈದಿಕ ಲಾಂಛನಗಳನ್ನು ಸೇರಿಸಿದ್ದರು. ಪುರಾಣ, ಆಗಮ, ಸ್ಮೃತಿ, ಶ್ರುತಿ, ಶುಭಕರ ದಿವಿಜರು ಇತ್ಯಾದಿ. 'ಜಯಹೇ ಕರ್ನಾಟಕ ಮಾತೆ'ಯಲ್ಲಿ ಇವುಗಳನ್ನು ತೆಗೆದುಹಾಕಿದ್ದಾರೆ. ಜತೆಗೆ ನಾನಕ, ರಮಾನಂದ, ಕಬೀರ ಚೈತನ್ಯ ಪರಮಹಂಸ ಮತ್ತು ವಿವೇಕಾನಂದರ ಹೆಸರುಗಳನ್ನು ಹೊಸತಾಗಿ ಸೇರಿಸುತ್ತಾರೆ. ಮೊದಲ ಕವಿತೆಯಲ್ಲಿ ಬಿಟ್ಟುಹೋಗಿದ್ದ ಭಾರತದ ಬಹುದೊಡ್ಡ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಸಾಮರಸ್ಯದ ಪರಂಪರೆಯನ್ನು ಸೇರಿಸುವ ಮತ್ತು ಜೀವವಿರೋಧಿ ಬ್ರಾಹ್ಮಣ್ಯದ ಪ್ರತಿಪಾದನೆಯ ಆಕರಗಳನ್ನು ಕೈಬಿಟ್ಟಿರುವ ಕಾರಣಗಳಿಂದ 'ಜಯಹೇ ಕರ್ನಾಟಕ ಮಾತೆ'ಯೇ 'ಕರ್ನಾಟಕ ರಾಷ್ಟ್ರಗೀತೆ' ಗಿಂತ ಹೆಚ್ಚು ಕುವೆಂಪು ದೃಷ್ಟಿಕೋನಕ್ಕೆ ಸಮೀಪವಾಗಿದೆ ಎಂದು ಹೇಳಬಹುದು. ಊಳಿಗಮಾನ್ಯ ವ್ಯವಸ್ಥೆಯು ಬಂಡವಾಳಶಾಹಿ ವ್ಯವಸ್ಥೆಯಾಗಿ ಪರಿವರ್ತನೆಯಾಗುತ್ತ ಆಧುನಿಕ ರಾಷ್ಟ್ರ ವ್ಯವಸ್ಥೆಯು ರೂಪಗೊಳ್ಳುವಾಗ ಮತ, ಜಾತಿ, ಭಾಷೆ, ಲಿಂಗ ಬುಡಕಟ್ಟುಗಳು ತಂತಮ್ಮ ಪ್ರಾತಿನಿಧ್ಯಗಳನ್ನು ಪ್ರತಿಪಾದಿಸುತ್ತ ಹಲವು ಬಗೆಯ ರಾಷ್ಟ್ರೀಯತೆಗಳು ಸಂಘರ್ಷ ನಡೆಸಿರುವಾಗ, ಮಹಾಹತುಶಾಹಿ ವಿರೋಧಿ ಹೋರಾಟವನ್ನು ಬೆಂಬಲಿಸುವ ರಾಷ್ಟ್ರೀಯ ಐಕ್ಯವನ್ನು ಪ್ರತಿಪಾದಿಸಲು ರಾಷ್ಟ್ರಗೀತೆಗಳನ್ನು ಬರೆಯುವ ಆಂತರಿಕ ಒತ್ತಡಕ್ಕೆ ಒಳಗಾದ ಕುವೆಂಪು ಎಲ್ಲವನ್ನೂ ಸಮತೂಗಿಸಿಕೊಂಡು ಹೋಗಲು ಎದುರಿಸಬೇಕಾದ ಬಿಕ್ಕಟ್ಟುಗಳನ್ನು ಎದುರಿಸಿದ್ದಾರೆ. ಮತ್ತು 'ಜಯಹೇ ಕರ್ನಾಟಕ ಮಾತೆ'ಯಲ್ಲಿ ಪರಿಹಾರ ಕಂಡುಕೊಳ್ಳಲು ಯತ್ನಿಸಿದ್ದಾರೆ. ಡಾ. ಎ.ಬಿ.ತಾರಕೇಶ್ವರ ಅವರು ಹೇಳುವಂತೆ "ತಾವು ರೂಪಿಸುತ್ತಿರುವ ಗುರುತು ಸಮುದಾಯ ಮತ್ತು ಅದು ತನ್ನದೆಂದು ದಾವೆ ಹೂಡಿರುವ ಭೌಗೋಳಿಕ ಪ್ರದೇಶದ ಚರಿತ್ರೆಯನ್ನು ಬರೆಯುವಾಗ ಸಾಧ್ಯವಾದಷ್ಟು ಎಲ್ಲರನ್ನೂ ಒಗ್ಗೂಡಿಸುವಂಥ ಹಳೆಯ ಸಮುದಾಯಗಳ ಸಂಕೇತಗಳಿಗೆ ವಿಚಾರಗಳಿಗೆ ಅದರಲ್ಲೂ ಆ ಸಮುದಾಯಗಳು ಸಾಂಸ್ಕೃತಿಕವಾಗಿ ಅಥವಾ ಜನಸಂಖ್ಯಾ ಹಾಗೂ ಆರ್ಥಿಕವಾಗಿ ಪ್ರಬಲವಾಗಿದ್ದರೆ ಪ್ರಾಮುಖ್ಯ ನೀಡದಾಗುತ್ತದೆ. ಹಳೆಯ ಸಮುದಾಯಗಳ ಸಂಕೇತ ಮತ್ತು ವಿಚಾರಗಳನ್ನು ಒಂದು ಭಾಷಿಕ ಸಮುದಾಯವಾಗಿ ಬೆಸೆಯುವ ಕ್ರಿಯೆಯನ್ನು ಇದು ಮಾಡುತ್ತಿರುತ್ತದೆ. ಈ ನಿಟ್ಟಿನಲ್ಲಿ ಕುವೆಂಪು ಅವರ ರಾಷ್ಟ್ರಗೀತೆಯು ತನ್ನ ಉದ್ದೇಶವನ್ನು ಬಹುಮಟ್ಟಿಗೆ ಈಡೇರಿಸಿಕೊಂಡಿದೆ."4

ಠಾಗೂರರ ರಾಷ್ಟ್ರಗೀತೆಯು ಹಲವು ಭಾಷಿಕ ಸಮುದಾಯಗಳನ್ನು ಒಗ್ಗೂಡಿಸುವ ಭೌಗೋಳಿಕ ರಾಷ್ಟ್ರೀಯತೆಗೆ ಮಹತ್ವ ನೀಡುವದರಿಂದ ಅಲ್ಲಿ ಸಂಘರ್ಷಕ್ಕೆ ಅವಕಾಶ ಕಡಿಮೆ. ನಾಡು ಮತ್ತು ದೇಶಗಳಿಗೆ ಸಾಂಸ್ಕೃತಿಕ ಕೋಶಗಳಿರುತ್ತವೆಯೆಂಬ ನಂಬಿಕೆಯ ಹಿನ್ನೆಲೆಯಲ್ಲಿ ರಾಷ್ಟ್ರಗೀತೆ ಬರೆಯುವದರಿಂದ ಕುವೆಂಪು ಅವರು ಹಲವು ಸಂಘರ್ಷ ಮತ್ತು ಬಿಕ್ಕಟ್ಟುಗಳಿಗೆ ಮುಖಾಮುಖಿಯಾಗಬೇಕಾಗುತ್ತದೆ. "ಶ್ರೀ ರಾಮಕೃಷ್ಣ ಪರಮಹಂಸ ಮತ್ತು ಅರವಿಂದರು ಕುವೆಂಪು ಅವರ ಅನುಭಾವ ಹಾಗೂ ಆಧ್ಯಾತ್ಮಿಕ ದೃಷ್ಟಿಯನ್ನು ರೂಪಿಸಿದರೆ ವಿವೇಕಾನಂದ ಮತ್ತು ಗಾಂಧಿಯವರು ಅವರ ವೈಚಾರಿಕತೆ ಹಾಗೂ ರಾಷ್ಟ್ರೀಯತೆಯ



ಕಲ್ಪನೆಗಳನ್ನು ರೂಪಿಸಿದರೆಂದು ಹೇಳಬಹುದು"[5] ... ಕುವೆಂಪು ಅವರ ನಿರ್ಮತೀಯ ರಾಷ್ಟ್ರೀಯವಾದದ ... ಶಕ್ತಿಗಳನ್ನು ಜಿ.ಎಸ್.ಶಿವರುದ್ರಪ್ಪ ಅವರು ಸರಿ... ಗುರುತಿಸಿದ್ದಾರೆ.

ಪಠ್ಯದೊಳಗಿನ ವಿವರಗಳು ಮತ್ತು ಸಾಮರಸ್ಯ

ಕುವೆಂಪು ಅವರ ಕಾವ್ಯದಲ್ಲಿ ಕಂಡುಬರುವ ಮ... ಮುಖ್ಯಸಂಗತಿಗಳೆಂದರೆ-

1) ಸಾಂಸ್ಥಿಕ ಧರ್ಮಗಳ ನಿರಾಕರಣೆ ಮತ್ತು ವಿಶ್ವಮ... ಪ್ರಜ್ಞೆ.

2) ನಿರ್ಮತೀಯ ರಾಷ್ಟ್ರೀಯವಾದದ ಹಿನ್ನೆಲೆಯಲ್ಲಿ ಮ... ಸೌಹಾರ್ದತೆಯ ಪ್ರತಿಪಾದನೆ.

3) ಅಲ್ಲಲ್ಲಿ ಮತೀಯ ರಾಷ್ಟ್ರೀಯವಾದದ ಅಭಿವ್ಯ...

ಕುವೆಂಪು ಅವರ ಮಹಾಪ್ರತಿಭೆ ಈ ಮ... ವೈರುಧ್ಯಗಳನ್ನೊಳಗೊಂಡ, ಪರಸ್ಪರ ಸಂಘರ್ಷ... ಕಾರಣವಾಗಬಹುದಾದ ಸಂಗತಿಗಳಿಂದ ರೂಪತಾ... 'ಜಯಹೇ ಕರ್ನಾಟಕ ಮಾತೆ' ಎಂಬ ನಾಡಗೀ... ಮಟ್ಟಿಗೆ ಅವರು ನಿರ್ಮತೀಯ ರಾಷ್ಟ್ರೀಯವಾ... ಪ್ರತಿಪಾದನೆಗೆ ಮತಗಳ ಸೌಹಾರ್ದತೆಯ... ಪ್ರತಿಪಾದಿಸುತ್ತಾರೆ. ಜಾತಿಮತ ಜನಾಂಗಗಳ ಪ್ರಾತಿನಿಧ್ಯ... ರಾಷ್ಟ್ರವೆಂಬ ಕಲ್ಪಿತ ಸಮುದಾಯಕ್ಕೆ ಗತಕಾಲದ... ಜೋಡಿಸಲು ಯತ್ನಿಸುತ್ತಾರೆ.

ಮೊದಲನೆಯದಾಗಿ ದೇಶ ಮತ್ತು ಭಾಷೆಗಳನ್ನು ... ಸ್ವರೂಪಿಯಾಗಿ ಕಂಡು ಅವುಗಳ ನಡುವೆ ತಾಯಿ ... ಕರುಳಬಳ್ಳಿಯ ಸಂಬಂಧವನ್ನು ಬೆಸೆದು ಎರಡರ ನ... ಅವಿನಾಭಾವ ಸಂಬಂಧವನ್ನು ಕವಿತೆ ಸೃಷ್ಟಿಸುತ್ತದೆ. ಮತ್ತು ಭಾಷೆಗಳನ್ನು ಮಾತೃರೂಪದಲ್ಲಿ ಕಲ್ಪಿಸಿಕೊ... ಮತೀಯ ರಾಷ್ಟ್ರೀಯವಾದಕ್ಕೆ ಪ್ರೇರಣೆ ನೀಡಿದ 'ವ... ಮಾತರಂ' ಮಾದರಿಯಲ್ಲಿ ಈ ಕವಿತೆಯ ಮ... ಪರಿವರ್ತನೆ ಮಾಡುತ್ತದೆ. ದೇಶವನ್ನು ತಾ... ತಾಯಿಯನ್ನು ದೇವರಿಗೆ ಹೋಲಿಸುವ ಮಾದ... ಕವಿತೆಗಳಲ್ಲಿ ಧಾರ್ಮಿಕ ಕಾರಣಕ್ಕೆ ಮುಸ್ಲಿಂ ಸಮುದಾಯ... ಹೊರಗಿಡುವ ತಂತ್ರವಿತ್ತು. ಆದರೆ 'ಜಯಹೇ ಕರ್ನಾ... ಮಾತೆ'ಯಲ್ಲಿ ಎಲ್ಲರನ್ನೂ ಒಳಗೊಳ್ಳುವ ಸಾಮರಸ್ಯ... ಚಿಂತನೆ ಇದೆ. ಎರಡನೆಯದಾಗಿ ರಾಷ್ಟ್ರ ಮತ್ತು ರಾ... ಪ್ರಕೃತಿ ಸಂಪತ್ತನ್ನು ಕುರಿತಾಗಿ ಅಭಿಮಾನ ಪ್ರಕಟವಾಗು... ಇದೂ ಕೂಡ ಮತೀಯತೆಯಿಂದ ಕಳಂಕಿತವಾಗುವು... ಮೂರನೆಯದಾಗಿ, ಭಾರತದ ರಾಜಮನೆತನಗಳ ... ಬರದೇ ಹೋಗಿದ್ದರೂ ಬೇರೆ ಆಯಾಮಗಳಿಂದ ಅ... ತುಂಬಿಕೊಳ್ಳಲಾಗಿದೆ. ನಾಲ್ಕನೆಯದಾಗಿ ಕಾವ್ಯ ಸಂ... ಶಿಲ್ಪಕಲೆಗಳ ಪರಂಪರೆಯನ್ನು ಸ್ಮರಿಸಲಾಗಿದೆ. ಐದನೆಯ... ಧಾರ್ಮಿಕ ದಾರ್ಶನಿಕ ಪಂಥಗಳ ವಿಭಿನ್ನ ಧಾರೆಗ... ಸಂಗಮಿಸಲಾಗಿದೆ. ಈ ಐದೂ ನೆಲೆಯಿಂದ ಪ್ರತಿಯೊ... ಜಾತಿಮತ ಪಂಥ ಜನಾಂಗಗಳ ವಿವರಗಳನ್ನು ದಾಖಲಿ... ಹೋದರೆ ಒಂದು ಮಹಾಕಾವ್ಯವೇ ಆದೀತು. ಅಖಂಡ... ನೋಡಿದಾಗ ಒಂದು ಬಗೆಯ ಆಂತರಿಕ ಸಮನ್ವ... ಕಂಡುಬರುತ್ತದೆ.

ಧಾರ್ಮಿಕ ಸಾಮರಸ್ಯದ ಸ್ವರೂಪ

ಸೆಕ್ಯುಲರ್ ಅಂದರೆ ಧರ್ಮರಹಿತ ಮತರಹಿತ ...ರ್ಮಿಕ ಅಥವಾ ನಾಸ್ತಿಕ ಎಂದೇನೂ ಅಲ್ಲ. ಎಲ್ಲ ...ರ್ಮಗಳೂ ಎಲ್ಲ ದೃಷ್ಟಿಗಳೂ ಎಲ್ಲ ಆಚಾರ, ...ಧರ್ಮಗಳೂ ಪರಸ್ಪರ ಗೌರವದಿಂದ ಪರಸ್ಪರ ವಿಶ್ವಾಸದಿಂದ ...ಗಳು ಬೇರೆಬೇರೆಯಾದರೂ ಸರ್ವರಿಗೂ ಏಕವಾದ ...ಮ್ ತತ್ವದ ಕಡೆಗೆ ಸಾಗುವುದು"[1] ಎಂಬುದು ಕುವೆಂಪು ... ಧರ್ಮನಿರಪೇಕ್ಷತೆಯ ಪರಿಕಲ್ಪನೆ. ಅದನ್ನವರು 'ಧರ್ಮ ...ನ್ವಯ' ಎಂದು ಕರೆಯುತ್ತಾರೆ. ಇಂಥ ಧರ್ಮಸಮನ್ವಯ ...ನಾಡಗೀತೆಯ ಆತ್ಯಂತಿಕ ತಿರುಳಾಗಿದೆ.

...ರ್ವಜನಾಂಗದ ಶಾಂತಿಯ ತೋಟ
...ರುಚಿರ ಕಂಗಳ ಸೆಳೆಯುವ ನೋಟ
...ಹಿಂದೂ ಕ್ರೈಸ್ತ ಮುಸಲ್ಮಾನ
...ಪಾರಸಿಕ ಜೈನರುದ್ಯಾನ

...ಆದರ್ಶಮಯ ಧಾರ್ಮಿಕ ಸಾಮರಸ್ಯದ ಸುಂದರ ...ವನ್ನು ಕವಿತೆ ಬಿಡಿಸುತ್ತದೆ. ಈ ಶಿಷ್ಟ ಧರ್ಮಗಳನ್ನು ... ನೆನೆಯದೇ ಕಪಿಲ, ಪತಂಜಲಿ, ಗೌತಮ, ಜಿನ, ... ರಮಾನಂದ, ಕಬೀರ, ಚೈತನ್ಯ ಪರಮಹಂಸ, ...ಕಾನಂದ ಮೊದಲಾದ ಅವೈದಿಕ ಹಿಂದೂ ಮುಸ್ಲಿಂ ...ತ ಹಾಗೂ ಸೌಹಾರ್ದತಾವಾದಿ ಧಾರ್ಮಿಕ, ದಾರ್ಶನಿಕ ...ಪರೆಗಳನ್ನು ಸೇರಿಸುತ್ತದೆ. ಇಡೀ ಕವಿತೆಯನ್ನು ...ರಸ್ಯದ ನಿಲುವು ಮುನ್ನಡೆಸಿದೆ. "ಕನ್ನಡದಂಥ ...ರೂಪದ ಪ್ರಾಂತೀಯ ಭಾಷೆ ತನ್ನೆಲ್ಲ ಆಯಾಮಗಳಲ್ಲಿ ...ದು ನಿಲ್ಲುವದು ಇತರ ಪ್ರಾಂತೀಯ ಭಾಷೆಗಳೂ ...ತದಲ್ಲಿದ್ದು ತಮ್ಮ ಉನ್ನತಿಯನ್ನು ಸಾಧಿಸಿದಾಗ ಮಾತ್ರ. ...ಹುಮುಖತೆಯು ಭಾರತದಲ್ಲಿ ಆದಿಕಾಲದಿಂದಲೂ ...ಕೊಂಡು ಬಂದ ಪರಿಕಲ್ಪನೆ. ಆದ್ದರಿಂದ ಅವರು ... ದೇಶಕ್ಕೆ ಏಕಭಾಷೆ, ಏಕಮತ, ಏಕದೃಷ್ಟಿಯನ್ನು ...ಯತೆಯ ಹಿನ್ನೆಲೆಯಲ್ಲಿ ತಿರಸ್ಕರಿಸುತ್ತಾರೆ."[7] ಅವರು ...ದಂತೆ 'ಠ್ಯಾಗೂರ ಮಾದರಿ' ಹಾಗೂ 'ಬೆರಕೆ ಸಂಸ್ಕೃತಿ' ... ನಾಡಗೀತೆಯ ಗುಣಗಳಾಗಿವೆ.

...ವೆಂಪು ಪ್ರತಿಪಾದಿಸಿದ 'ಸರ್ವಜನಾಂಗದ ಶಾಂತಿಯ ...ಟ'ದ ಆದರ್ಶ, ಸಾಮರಸ್ಯ ಆ ಕಾಲದಲ್ಲಿಯೂ ಇರಲಿಲ್ಲ, ... ಇಲ್ಲ. ಇಪ್ಪತ್ತನೆಯ ಶತಮಾನದ ಆರಂಭದ ...ಗಳಲ್ಲಿ ಬ್ರಿಟಿಷ್ ಒಡೆದಾಳುವ ನೀತಿ ಹಾಗೂ ...ದೂ-ಮುಸ್ಲಿಂ ಕೋಮುವಾದ ಮೂಲಭೂತವಾದಗಳ ...ಗೆಯಿಂದ ಭಾರತೀಯ ಬದುಕು ಮತೀಯ ದ್ವೇಷ ... ಹಿಂಸೆಗಳಿಂದ ತುಂಬಿ ತುಳುಕುತ್ತಿತ್ತು. ಆ ಕಾಲದ ...ಗೆ ಕವಿ ಪರಿಹಾರರೂಪವಾಗಿ ಸಾಮರಸ್ಯದ ಸುಂದರ ...ವ್ನು ಹೆಣೆದಿದ್ದಾರೆ. ಭವಿಷ್ಯದ ಬದುಕಾದರೂ ...ಯನ್ನು ಪಡೆಯಲಿ ಎಂಬ ಸದಾಶಯ ಇಲ್ಲಿದೆ.

...ವೆಂಪು ಅವರ ನಾಡಗೀತೆಯಲ್ಲಿ ಕೆಲವು ಲೋಕಗಳು ... ಉಳಿದುಕೊಂಡಿವೆ. ದಲಿತರು, ಬುಡಕಟ್ಟು ಜನಾಂಗ ... ಮಹಿಳೆಯರ ಪರಂಪರೆಗಳ ಪ್ರಸ್ತಾಪ ಬರುವುದಿಲ್ಲ. ...ಣ ಲೋಕ ಕಣ್ಮರೆಯಾಗಿದೆ. ಹೆಚ್ಚಿನ ಪ್ರಮಾಣದಲ್ಲಿ ...ವರ್ಗ, ಶಿಷ್ಟವರ್ಗ ಹಾಗೂ ಅದರ ಸುತ್ತಲಿನ ಜಗತ್ತು ...ಳಿದಂತೆ ಭಾಸವಾಗುತ್ತದೆ. ರಾಷ್ಟ್ರದ ಎಲ್ಲ ಸಂಸ್ಕೃತಿಗಳನ್ನು ...ಂಡು ರಾಷ್ಟ್ರಗೀತೆ ಬರೆಯಹೊರಡುವ ಕುವೆಂಪು ...ಗೆ ಈ ಉಳಿದ ಲೋಕಗಳು ಹಕ್ಕೊತ್ತಾಯವನ್ನು ...ಸುತ್ತವೆ.

ಸರಕಾರಿ ನಾಡಗೀತೆ ಮತ್ತು ಮಧ್ವರ ಹೆಸರು

...003ರಲ್ಲಿ ಕರ್ನಾಟಕ ಸರಕಾರವು ಕುವೆಂಪು ಅವರ ...ತೆ'ಯನ್ನು ಅಧಿಕೃತವಾಗಿ 'ನಾಡಗೀತೆ' ಎಂದು ...ಂಡಾಗ ಅದರಲ್ಲಿ ಮಧ್ವಾಚಾರ್ಯರ ಹೆಸರನ್ನು ...ವ ಪ್ರಯತ್ನ ನಡೆಯಿತು. "ನಾಡಗೀತೆಯಲ್ಲಿ ಮಧ್ವರ ... ಸೇರಿಸಬೇಕೆಂದು ಕುವೆಂಪುರವರ ಹತ್ತಿರ ...ವರೇನೂ ಬ್ರಾಹ್ಮಣರಾಗಲೀ, ಮಧ್ವ ...ಮತಾಯಿಗಳಾಗಲೀ ಅಲ್ಲ, ಅವರ ಚಿತಾವಣೆಯಿಂದ ...ತೊಂಡು ಹಲವು ಮತಮೂಢ ಶೂದ್ರರೇ ...ಗಿದ್ದು, ತಾವು ಯಾರ ಪರವಾಗಿ ದನಿಎತ್ತಿದರೋ ... ಈ ರೀತಿ ವರ್ತಿಸುವುದನ್ನು ಕಂಡು ಕುವೆಂಪು ...ರೂ ಮಾಡಿಕೊಳ್ಳಿ ಎಂದು ಹೇಳಿಕಳಿಸಿದರೇ ...ಶು. ಆದರ ತಿದ್ದುಪಡಿಗಳನ್ನು ತಾವೇ ...ಕೊಟ್ಟಿರೆಂಬುದು ಅದಕ್ಕೆ ಅವರ ಸಮ್ಮತಿ ಇತ್ತೆಂಬುದೂ ...ಳ್ಳು"[8] ಎಂಬ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ ... ಇಡೀ ಘಟನೆಯ ಸುತ್ತಲಿನ ಮತೀಯ ಚಿಂತನೆ ...ಕ್ತಪಡಿಸುತ್ತದೆ. ಎಂ. ಚಿದಾನಂದಮೂರ್ತಿಯಂಥ ...ಧರು ಮಧ್ವರ ಹೆಸರನ್ನೊಳಗೊಂಡ ಆವೃತ್ತಿಯನ್ನೇ ...ತ ಆವೃತ್ತಿ ಎಂದು ಹೇಳಿದ್ದು ಅವರು ...ಕೊಂಡಿರುವ ಚಿಂತನಾಕ್ರಮಕ್ಕೆ ತಕ್ಕ ಹಾಗೇ ಇದೆ.

...ವೆಂಪು ಅವರು ತಮ್ಮದೊಂದು ಗೀತೆ ...ವಾಗುವದಾದರೆ ಪರಿಷತ್ತು ಬೇಕಾದಂತೆ ...ಸ್ನು ಸಂಗ್ರಹಿಸಲು ಅನುಮತಿ ನೀಡುವದು ಹಾಗೂ

ತಾವು ಕಠೋರವಾಗಿ ವಿರೋಧಿಸಿದ ಮಧ್ವಾಚಾರ್ಯರು ನಾಡಗೀತೆಯಲ್ಲಿ ಅವತರಿಸಿದರೂ ಒಪ್ಪಿಕೊಳ್ಳುವದು ಅವರ ನಿರಂಕುಶಮತಿ ಕವಿತ್ವಕ್ಕೆ ಹೊಂದಿಕೆಯಾಗುವಂಥದ್ದಲ್ಲ. ಇಂಥ ಸಣ್ಣಪುಟ್ಟ ವೈರುಧ್ಯಗಳ ಮಧ್ಯದಲ್ಲಿಯೇ ದೊಡ್ಡ ಕವಿಗಳು ಬೆಳೆಯುತ್ತಾರೆ. ವಿವಾದಗಳು, ಮಿತಿಗಳು ಏನೇ ಇದ್ದರೂ, ಕರ್ನಾಟಕದ ಮಟ್ಟಿಗೆ ಕುವೆಂಪುರವರ 'ಜಯಹೇ ಕರ್ನಾಟಕ ಮಾತೆ'ಯಂಥ ಸಾಮರಸ್ಯವಾದಿ ರಾಷ್ಟ್ರೀಯತೆ ಹಾಗೂ ಕನ್ನಡತ್ವಗಳನ್ನು ಪ್ರತಿಪಾದಿಸುವ ಕವಿತೆ ಇನ್ನೊಂದಿಲ್ಲ.

ಉದ್ದೇಶಪೂರ್ವಕ ರಚನೆ ಮತ್ತು ಕಾವ್ಯಾತ್ಮಕತೆ

ಕುವೆಂಪು ಅವರ 'ಜಯಹೇ ಕರ್ನಾಟಕ ಮಾತೆ' ಒಂದು ಉದ್ದೇಶಪೂರ್ವಕ ರಚನೆ. ನಿರ್ಮತೀಯ ರಾಷ್ಟ್ರೀಯತೆಯನ್ನೊಳಗೊಂಡ, ಸಾಮರಸ್ಯವನ್ನು ಪ್ರತಿಪಾದಿಸುವ ರಾಷ್ಟ್ರಗೀತೆಯೊಂದನ್ನು ಠ್ಯಾಗೂರ್ ಅವರ ಮಾದರಿಯಲ್ಲಿ ರಚಿಸಿದ್ದಾರೆ. ಕೆಲವು ವಿಚಾರಗಳನ್ನು ಪ್ರತಿಪಾದಿಸಲು ಹುಟ್ಟುವ ಉದ್ದೇಶಪೂರ್ವಕ ರಚನೆಗಳು ಕವಿಯೊಬ್ಬನ ಗಾಢವಾದ ಧ್ಯಾನದಲ್ಲಿ ಸಂವೇದನೆಗಳಾಗಿ ಪರಿವರ್ತನೆ ಹೊಂದದಿದ್ದರೆ ಕವಿತೆಯಾಗದೇ ಪ್ರಣಾಳಿಕೆ ಸ್ವರೂಪದ ಬರಹಗಳಾಗುವ ಅಪಾಯ ಇದ್ದೇ ಇರುತ್ತದೆ. ವಿಚಾರ ಪ್ರತಿಪಾದಕ ಕವಿ, ಆಗ ಹಲವು ಮಾರ್ಗಗಳನ್ನು ಶೋಧಿಸಿಕೊಳ್ಳಬೇಕಾಗುತ್ತದೆ. ಕುವೆಂಪು ಅವರು ಇಲ್ಲಿ ಲಯಗಾರಿಕೆಯನ್ನು ಕಲ್ಪನಾಶೀಲತೆಯನ್ನು ಸಾಂಸ್ಕೃತಿಕ ಸಾಂಕೇತಿಕತೆಯನ್ನು ಮಾರ್ಗವಾಗಿ ಕಂಡುಕೊಂಡಿದ್ದಾರೆ. ಯಾವ ವಿಚಾರಗಳನ್ನು ಕಾವ್ಯದಲ್ಲಿ ಪ್ರತಿಪಾದನೆ ಮಾಡಬೇಕೆಂದು ಕವಿ ಬಯಸುತ್ತಾನೋ ಅವುಗಳನ್ನು ಗಾಢವಾಗಿ ಅನುಭವಿಸುವದರಿಂದ ಧ್ಯಾನಸ್ಥ ಸ್ಥಿತಿಯಲ್ಲಿ ಸಂವೇದನೆಗಳನ್ನಾಗಿ ಪರಿವರ್ತಿಸುವದರಿಂದ ಅವುಗಳಿಗೊಂದು ಕಾವ್ಯಾತ್ಮಕತೆಯನ್ನು ಧಾರೆ ಎರೆಯಬಹುದೆಂಬುದಕ್ಕೆ 'ಜಯಹೇ ಕರ್ನಾಟಕ ಮಾತೆ' ಒಂದು ಉದಾಹರಣೆಯಾಗಿದೆ.

ಸೌಹಾರ್ದತೆಯ ಆಶಯ ಹಾಗೂ ಕವಿತೆಯ ಅಭಿವ್ಯಕ್ತಿ

ಕಾವ್ಯದ ಶಕ್ತಿಯೇ ಅಂಥದ್ದು, ಒಮ್ಮೆ ಪದ ಒಂದು ಕವಿತೆಯ ಆವರಣದೊಳಗೆ ಹೆಜ್ಜೆ ಇಟ್ಟರೆ ತನ್ನ ಮೂಲರೂಪವನ್ನು ಕಳೆದುಕೊಂಡು ಅಥವಾ ಅದನ್ನೂ ಉಳಿಸಿಕೊಂಡು ಮತ್ತೆ ಹಲವು ಹೊಸ ಅರ್ಥ, ಧ್ವನಿ, ಸಂಕೇತಗಳನ್ನು ಧಾರಣಮಾಡಿಕೊಳ್ಳುತ್ತದೆ. ಈ ಧಾರಣ ಕ್ರಿಯೆ ಮೂಲಭೂತವಾಗಿ ಭಾಷೆಗೆ, ಕಾವ್ಯಕ್ಕೆ ಸ್ವತಂತ್ರವಾಗಿ ಸಂಬಂಧಿಸಿದ್ದಲ್ಲ. ಅದು ಕವಿಯ ಕಾಲಮಾನದ ಮೌಲ್ಯಗಳು, ಆದರ್ಶಗಳು, ವಾಸ್ತವಗಳು, ಸಂಘರ್ಷಗಳು, ವೈರುಧ್ಯಗಳನ್ನು ಹಾಗೂ ಕವಿಯ ವೈಯಕ್ತಿಕ ಸಂವೇದನಾಶೀಲತೆಯ ವಿಧಾನ, ವೈಚಾರಿಕ ದೃಷ್ಟಿಕೋನ, ಪ್ರತಿಭಾಸಾಮರ್ಥ್ಯಗಳನ್ನು ಅವಲಂಬಿಸಿರುತ್ತದೆ. ಕವಿ-ಸಮಾಜ-ಭಾಷೆ ಹಾಗೂ ಕವಿಯ ರೂಪದ ಏಕೀಕರಣವೇ ಕಾವ್ಯ. ಈ ಏಕೀಕರಣದಲ್ಲಿ ಪ್ರತಿಯೊಂದು ಘಟಕಕ್ಕೂ ತನ್ನದೇ ಆದ ಪಾತ್ರವಿರುತ್ತದೆ. ಕವಿಯ ದೃಷ್ಟಿಕೋನ ಮತ್ತು ಸಾಮಾಜಿಕ ವಾಸ್ತವಗಳು ಕಾವ್ಯದ ಅಭಿವ್ಯಕ್ತಿಯಾದ ಭಾಷೆ ಲಯ ಮತ್ತು ರೂಪಗಳನ್ನು ತೀರ್ಮಾನಿಸುತ್ತವೆ. 'ಜಯಹೇ ಕರ್ನಾಟಕ ಮಾತೆ'ಯ ರಚನೆಗೆ ಅದರ ಅಭಿವ್ಯಕ್ತಿಗೆ ಕಾರಣವಾಗಿರುವದು ಮತೀಯತೆಯಿಂದ ಕಲುಷಿತಗೊಂಡ 1920ರ ದಶಕದ ಭಾರತದ ಬದುಕು. ಸೌಹಾರ್ದತೆ ಕವಿಯ ದೃಷ್ಟಿಕೋನ. ಈ ಎರಡೂ ಒತ್ತಡದಲ್ಲಿ ರೂಪತಾಳುವಾಗ ಕವಿತೆ ಸಹಜವಾಗಿಯೇ ಮತೀಯ ನೆಲೆಗಳ ನಿರಾಕರಣೆಯೊಂದಿಗೆ ಸೌಹಾರ್ದತೆಯ ನೆಲೆಗಳನ್ನು ಶೋಧಿಸುತ್ತ ಒಳಗೊಳ್ಳುತ್ತ ಹೋಗುತ್ತದೆ. ಸಮಾನತೆಯ ಮೌಲ್ಯ ಸೌಹಾರ್ದತೆಗೆ ಅಡಿಪಾಯವಾಗಿ ಬಹು ಸಂಸ್ಕೃತಿ ಬಹು ಜನಾಂಗ ಬಹು ಹಿತಾಸಕ್ತಿಗಳನ್ನು ಒಳಗೊಳ್ಳಲು ಸಾಧ್ಯವಾಗುತ್ತದೆ.

ಹಲವು ಸಾಂಸ್ಕೃತಿಕ ಧಾರೆಗಳ ಸಂಕೇತ ಮತ್ತು ರೂಪಕಗಳು

ಕುವೆಂಪು ಅವರ ನಾಡಗೀತೆಯನ್ನು ಕುರಿತಾಗಿ ಆಗಾಗ ಚರ್ಚೆಗಳು ನಡೆಯುತ್ತಿರುತ್ತವೆ. ಇತ್ತೀಚೆಗೆ ಡಾ. ಎಂ.ಎಂ. ಕಲಬುರ್ಗಿಯವರು ವಿಚಾರಸಂಕಿರಣ ಒಂದರಲ್ಲಿ ಈ ನಾಡಗೀತೆಯಲ್ಲಿ ಬರಿ ಹೆಸರಿನ ಪಟ್ಟಿ ಇದೆ ಎಂದು ಹೇಳಿಕೆ ನೀಡಿದ್ದು ವರದಿಯಾಗಿತ್ತು. ಕಾವ್ಯವನ್ನು ಕೇವಲ ರಸಾನುಭವದ ಸಾಂಪ್ರದಾಯಿಕ ನೆಲೆಯಿಂದ ಗ್ರಹಿಸುವ ಮನಸ್ಥಿತಿಗೆ ಅದು ಹಾಗೇ ಕಾಣಿಸಬಹುದು. ಕವಿಯ ಕಾಲದ ಸಾಂಸ್ಕೃತಿಕ ರಾಜಕಾರಣದಿಂದ ಕವಿತೆಯನ್ನು ಹೊರಗಿಟ್ಟು ನೋಡಿದರೆ ಅದು ಹೆಸರಿನ ಪಟ್ಟಿಯಾಗಿಯೂ, ಸರಳ ಮಕ್ಕಳ ಹಾಡಾಗಿಯೂ ಕಂಡೀತು. ಆಧುನಿಕ ರಾಷ್ಟ್ರವೊಂದು ರೂಪಗೊಳ್ಳುತ್ತಿರುವಾಗ, ಅಸಂಖ್ಯ ಪ್ರಾತಿನಿಧ್ಯಗಳ ನಡುವೆ ರಾಷ್ಟ್ರದ ಒಳಸೇರುವ ವಿಷಯದಲ್ಲಿ ಸಂಘರ್ಷಗಳು ನಡೆಯುತ್ತಿರುವಾಗ, ಆ ಸಂಘರ್ಷಗಳನ್ನೆಲ್ಲ ಒಟ್ಟಾಗಿಸಿ ವಸಾಹತುಶಾಹಿ ವಿರುದ್ಧದ ಹೋರಾಟವಾಗಿ ರೂಪಿಸುವ ಗಂಭೀರ ಸಾಂಸ್ಕೃತಿಕ ರಾಜಕಾರಣದ ಭಾಗವಾಗಿ ಕುವೆಂಪು ಅವರ ಕವಿತೆ ರಚನೆಗೊಂಡಂತಿದೆ. ಈ ಸಾಂಸ್ಕೃತಿಕ ರಾಜಕಾರಣದ ನೆಲೆಯಿಂದ ನೋಡಿದರೆ ಕವಿತೆಯಲ್ಲಿ ವ್ಯಕ್ತವಾದ ಪ್ರತಿಯೊಂದು ಪದವೂ ಭಾರತದಲ್ಲಿ ನಡೆದುಬಂದ ಅಸಂಖ್ಯ ರಾಜಕೀಯ, ಸಾಂಸ್ಕೃತಿಕ, ಕಲಾತ್ಮಕ, ಸಾಮಾಜಿಕ, ಧಾರ್ಮಿಕ, ದಾರ್ಶನಿಕ ಪರಂಪರೆಗಳನ್ನು ಧ್ವನಿಸುತ್ತವೆ. ಹಲವು ಹಳ್ಳಗಳು ಸೇರಿ ನದಿಯಾದಂತೆ ಈ ನಾಡಗೀತೆಯಲ್ಲಿ ಹಲವು ಧಾರೆಗಳು ಸೇರಿ ರಾಷ್ಟ್ರೀಯತೆಯನ್ನು ನಿರ್ವಚಿಸುತ್ತವೆ. ಶಂಕರ, ರಾಮಾನುಜ, ವಿದ್ಯಾರಣ್ಯ, ಬಸವೇಶ್ವರ, ರನ್ನ, ಷಡಕ್ಷರಿ, ಪಂಪ, ಲಕುಮಿಪತಿ, ತೈಲಪ, ಹೊಯ್ಸಳ, ಡಂಕಣ, ಜಕಣ, ನಾನಕ, ರಮಾನಂದ, ಕಬೀರ, ಕಪಿಲ, ಪತಂಜಲಿ, ಗೌತಮ, ಜಿನ, ಪರಮಹಂಸ, ವಿವೇಕಾನಂದ, ಚೈತನ್ಯ, ಕೃಷ್ಣೆ, ಶರಾವತಿ, ತುಂಗೆ, ಕಾವೇರಿ, ಇತ್ಯಾದಿಗಳು ನಾಡಗೀತೆಯ ಸಂದರ್ಭದಲ್ಲಿ ಕೇವಲ ಹೆಸರುಗಳೆಂದು ಭಾವಿಸುವದಾದರೆ ಅದು ಕಾವ್ಯಾನುಸಂಧಾನದ ಸಮಸ್ಯೆ ಎಂದೇ ಪರಿಗಣಿಸಬೇಕಾಗುತ್ತದೆ. ಒಂದೊಂದು ಹೆಸರೂ ಒಂದೊಂದು ಪರಂಪರೆಯ ಸಂಕೇತವಾಗಿದೆ.

ಸೌಹಾರ್ದತೆಯ ಸುಂದರ ಚಿತ್ರ

ಕವಿತೆಯ ಒಟ್ಟು ರಚನೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಇಲ್ಲಿ ಹಲವಾರು ಸಾಂಸ್ಕೃತಿಕ ಧಾರೆಗಳ ಸಮಾಗಮವಿದೆಯೆಂದು ತೋರುವದರೊಂದಿಗೆ ಇಡೀ ಕವಿತೆಯನ್ನು ಮತೀಯ ಸೌಹಾರ್ದತಾ ಚಿಂತನೆಯೇ ಮುನ್ನಡೆಸಿದಂತೆ ತೋರುತ್ತದೆ.

'ರಾಘವ ಮಧುಸೂಧನರವತರಿಸಿದ', 'ಕಪಿಲ ಪತಂಜಲ ಗೌತಮ ಜಿನನುತ', 'ನಾನಕ ರಮಾನಂದ ಕಬೀರರ', 'ಚೈತನ್ಯ ಪರಮಹಂಸ ವಿವೇಕರ', ಹೀಗೆ ಪ್ರತಿಯೊಂದು ಪ್ಯಾರಾದ ಕೊನೆಗೆ ಕವಿ ಹಲವು ಧಾರ್ಮಿಕ, ದಾರ್ಶನಿಕ ಪರಂಪರೆಗಳ ಸಮ್ಮಿಳನಗೊಂಡಿರುವ ಭಾರತಾಂಬೆಯ ತನುಜೆಗೆ ಜಯವಾಗಲಿ ಎಂದು ಹಾರೈಸುತ್ತಾರೆ. ಉಳಿದೆಲ್ಲ ಸಂಗತಿಗಳು ಈ ಅಂತ್ಯದಲ್ಲಿ ಮಿಲನಗೊಳ್ಳುತ್ತವೆ. ಕವಿತೆಯನ್ನು ಅಂತ್ಯಗೊಳಿಸುವಲ್ಲಿ ಕೂಡ ಕವಿ 'ಸರ್ವಮತ ಸರ್ವಜನಾಂಗಗಳ ಶಾಂತಿಯ ತೋಟ' ಎಂಬ ಸುಂದರ ಸೌಹಾರ್ದತೆಯ ಚಿತ್ರದಲ್ಲಿ ಹಿಂದಿನ ಎಲ್ಲ ಧಾರೆಗಳನ್ನೂ ಮಿಳಿತಗೊಳಿಸುತ್ತಾರೆ. ಕವಿತೆಯ ಆತ್ಯಂತಿಕ ಆಶಯ ರಾಷ್ಟ್ರದ ಆತ್ಯಂತಿಕ ಆಶಯವಾದ ಮತೀಯ ಸೌಹಾರ್ದತೆಯೇ ಆಗಿದೆ. ಹೀಗೆ ಕವಿಯ ಸಾಂಸ್ಕೃತಿಕ ರಾಜಕಾರಣ ಕೇವಲ ಅವನ ಆಶಯಗಳಲ್ಲಿ ಮಾತ್ರ ವ್ಯಕ್ತವಾಗದೇ ಕವಿತೆಯ ರಚನಾ ವಿನ್ಯಾಸದಲ್ಲಿಯೂ ಅಡಕವಾಗಿರುತ್ತದೆ.

ಆವೇಶವಿಲ್ಲದ ತೀವ್ರ ಭಾವುಕತೆ

ಕುವೆಂಪು ಅವರ 'ಪಾಂಚಜನ್ಯ', 'ಕ್ರಾಂತಿಕಾಳಿ', 'ವಿಪ್ಲವಮೂರ್ತಿ' ಮೊದಲಾದ ಕವಿತೆಗಳ ಲಯಗಾರಿಕೆಗೂ 'ಜಯಹೇ ಕರ್ನಾಟಕ ಮಾತೆ' ಕವಿತೆಯ ಲಯಗಾರಿಕೆಗೂ ವ್ಯತ್ಯಾಸವಿದೆ. ಅವುಗಳಲ್ಲಿ ಕಂಡುಬರುವ ಆವೇಶ, ರೊಚ್ಚುಗಳು ಇಲ್ಲಿಲ್ಲ. ಅವು ವಸಾಹತುಶಾಹಿ ವಿರೋಧಿ ಹೋರಾಟಕ್ಕೆ ಕರೆಕೊಡುವ ಗೀತೆಗಳು. ಆದರೆ ಈ ಕವಿತೆ ರಾಷ್ಟ್ರದ ಸಮಸ್ತರನ್ನೂ ಒಳಗೊಳ್ಳುವ ಸಮಸ್ತ ಭಾವವಾಹಿನಿಯಾಗುವ ಆಶಯವನ್ನು ಹೊಂದಿದೆ. ಮೇಲಾಗಿ ಜಾತಿಮತ ಪಂಥಗಳ ಸಂಘರ್ಷವನ್ನು ಒಳಗೊಂಡಿಲ್ಲ. ಮತೀಯ ಆವರಣ ಪ್ರಾಪ್ತವಾದ ಕವಿತೆ ಆವೇಶಕ್ಕೊಳಗಾಗುತ್ತದೆ. ನಿರ್ಮತೀಯ ಸಾಮರಸ್ಯದ ಆವರಣದಲ್ಲಿ ಆವೇಶಕ್ಕಿಂತ ತೀವ್ರತೆ ಮುಖ್ಯವಾಗುತ್ತದೆ. ಸರ್ವಜನಾಂಗವೂ ಒಂದಾಗುವ ತೀವ್ರತೆ, ಜತೆಗೆ ಒಂದಾಗಿ ಐಕ್ಯತೆಯ ಭಾವವನ್ನು ಅನುಭವಿಸುವ ತೀವ್ರತೆ 'ವಂದೇಮಾತರಂ'ನಿಂದ ಪ್ರಭಾವಿತ ಕನ್ನಡ ಕಾವ್ಯದ ಆವೇಶ ಹಾಗೂ ಮತೀಯತೆ ಹಾಗೂ 'ಜನಗಣಮನ'ದಿಂದ ಪ್ರಭಾವಿತವಾದ ಕನ್ನಡ ಕಾವ್ಯದ ಸಮಾಧಾನ ಚಿತ್ತ ಮತ್ತು ಭಾವ ತೀವ್ರತೆಗಳ ನಡುವಿನ ವ್ಯತ್ಯಾಸಗಳನ್ನು ಅಧ್ಯಯನ ಮಾಡಲು ಕುವೆಂಪು ಅವರ ಕಾವ್ಯವೇ ಒಂದು ದೊಡ್ಡ ಆಕರವಾಗುತ್ತದೆ. 'ಜಯಹೇ ಕರ್ನಾಟಕ ಮಾತೆ' ಕವಿತೆಯಲ್ಲಿ ದೇಶ, ನಾಡು, ನುಡಿ, ಸಂಸತಿಗಳನ್ನು ಕುರಿತಾಗಿ ಅಪ್ರತಿಮ ಪ್ರೀತಿ ಭಕ್ತಿಗಳಿದ್ದರೂ ಹುಚ್ಚು ಆವೇಶಕ್ಕೆ ಅವಕಾಶವಿಲ್ಲ.

● ಡಾ. ಎಂ. ಡಿ. ಒಕ್ಕುಂದ

ಟಿಪ್ಪಣಿಗಳು

1. ಕುವೆಂಪು, ನೆನಪಿನ ದೋಣಿಯಲಿ, ಪು. 532
2. ಅದೇ
3. ಬಂಜಗೆರೆ ಜಯಪ್ರಕಾಶ, ನವಕನ್ನಡತ್ವದ ನಿರ್ಮಾಣದ ಆಚಾರ್ಯ ಕುವೆಂಪು, ಕುವೆಂಪು ಒಂದು ಪುನರಾನ್ವೇಷಣೆ, ಪು. 76.
4. ಪಿ.ಬಿ.ತಾರಕೇಶ್ವರ, ಕನ್ನಡ-ಕರ್ನಾಟಕ ಕುವೆಂಪು ಮೀಮಾಂಸೆ, ಕುವೆಂಪು ಒಂದು ಪುನರಾನ್ವೇಷಣೆ, ಪು. 223
5. ಜಿ.ಎಸ್.ಶಿವರುದ್ರಪ್ಪ, ಮುನ್ನುಡಿ, ಕುವೆಂಪು ಸಮಗ್ರ ಕಾವ್ಯ ಸಂಪುಟ-1
6. ಕುವೆಂಪು, ಸಮಗ್ರ ಗದ್ಯ, ಸಂಪ್ರುಟ-2, ಪು. 150
7. ಕಿಕ್ಕೇರಿ ನಾರಾಯಣ, ಕುವೆಂಪು ವೈಚಾರಿಕತೆ ಕೆಲವು ಟಿಪ್ಪಣಿಗಳು, ಕುವೆಂಪು ಒಂದು ಪುನರಾನ್ವೇಷಣೆ, ಪು. 223
8. ಕೆ.ಪಿ.ಪೂರ್ಣಚಂದ್ರ ತೇಜಸ್ವಿ, ನಾಡಗೀತೆಗೆ ಮಧ್ವರ ಸೇರ್ಪಡೆ; ಚಿತಾವಣೆಗೆ ಬಲಿಯಾದ ಮತಮೂಢಶೂದ್ರರು, ಕುವೆಂಪು ಶತಮಾನದ ಶಿಖರ, ಪು. 5.
9. ಡಿ.ಆರ್.ನಾಗರಾಜ, ಮಣ್ಣಿನ ಪವಿತ್ರೀಕರಣ, ಸಂಸತಿಕಥನ, ಪು. 278

ಪುಸ್ತಕ ವಿಮರ್ಶೆ

ಜಾಡಮಾಲಿ ಜಗತ್ತು

ಕಸದಲ್ಲಿ ಕಸವಾದವರ ಬದುಕ ಅನಾವರಣ



ಇತ್ತೀಚೆಗೆ ಭಾರತದಲ್ಲಿ ಒಂದು ಮಹತ್ವದ ವ್ಯಂಗ್ಯ ನಡೆಯಿತು. ಈ ದೇಶದಲ್ಲಿ ಆಳುವವರ ಆದಿಯಾಗಿ ಹಲವು ಅಧಿಕಾರಿ ವರ್ಗ ದಿನದ ಕೆಲವೊಂದು ನಿಮಿಷಗಳ ಕಾಲ ಪೊರಕೆ ಹಿಡಿದು ಸ್ವಚ್ಛತೆಗೆ ಕರೆ ನೀಡಿತ್ತು. ಆ ಮೂಲಕ ಸ್ವಚ್ಛ ಭಾರತವನ್ನು ನಿರ್ಮಾಣ ಮಾಡುವ ಕನಸು ಇವರದೆಂದು ಬಿಂಬಿಸಲಾಗಿತ್ತು. ಈ ಕನಸಿಗಾಗಿ ದಿನನಿತ್ಯ ಸ್ವಚ್ಛ ಮಾಡುವ ಪೌರಕಾರ್ಮಿಕರ ಕೆಲಸವನ್ನು ಕೆಲ ನಿಮಿಷಗಳವರೆಗೆ ತನ್ನ ಸುಪರ್ದಿಗೆ ತೆಗೆದುಕೊಂಡಿತ್ತು. ಪೌರಕಾರ್ಮಿಕರ ಬದುಕನ್ನು ಕುರಿತು ಈ ವರ್ಗ ಎಷ್ಟು ಯೋಚಿಸಿತ್ತೋ ಇಲ್ಲವೋ ಗೊತ್ತಿಲ್ಲ. ಆದರೆ ಒಂದು ದಿನದ ಮಟ್ಟಿಗೆ ಪೊರಕೆಯಂತೂ ಹಿಡಿಯಿತು. ಈ ಗುಮಾನಿ ಏಕೆಂದರೆ ಇವರು ಇಷ್ಟು ದಿನ ಪೌರಕಾರ್ಮಿಕರ ಬಗ್ಗೆ ಗಂಭೀರವಾಗಿ ಯೋಚಿಸಿದ್ದರೆ ಇಷ್ಟು ಹೊತ್ತಿಗೆ ಜಗದ ಹೊಲಸು ತೊಳೆದು ಇವರ ಬದುಕು ಹಸನಾಗುತ್ತಿತ್ತೋ ಏನೋ! ಇಂತಹ ಸಂದರ್ಭದಲ್ಲಿ ಈ ಆಳುವ ವರ್ಗದ ಆಲೋಚನೆಯನ್ನು ಅಣಕಿಸುವಂತೆ ಹೆತ್ತೂರು ನಾಗರಾಜ್ ಅವರ 'ಜಾಡಮಾಲಿ ಜಗತ್ತು' ಪುಸ್ತಕ ಹೊರಬಂದಿದೆ. ಹೆಸರೇ ಸೂಚಿಸುವ ಹಾಗೆ ಈ ಪುಸ್ತಕದ ಉದ್ದಕ್ಕೂ ಕೊಳಕು ತೊಳೆವವರ ಬದುಕು ಹರಡಿಕೊಂಡಿದೆ.

ದೇಶದ ಕೊಳೆ ತೊಳೆವವರ ಬದುಕು ಈ ದೇಶದಲ್ಲಿ ಎಂದೂ ಹಸನಾಗುವುದಿಲ್ಲ. ಈ ದೇಶದ ಆಳುವ ವರ್ಗ ಇವರನ್ನು ಎಂದಿಗೂ ಗಂಭೀರವಾಗಿ ಪರಿಗಣಿಸಲಾರರು. ಆಳುವ ವರ್ಗಕ್ಕೆ ಸ್ವಚ್ಛತೆ ಮುಖ್ಯವೇ ಹೊರತು ಸ್ವಚ್ಛತೆ ಮಾಡುವವರ ಬದುಕಲ್ಲ. ಇದು ಕೇವಲ ಆಳುವ ವರ್ಗಕ್ಕಷ್ಟೇ ಸೀಮಿತವಲ್ಲ, ಇಲ್ಲಿನ ಸಮಾಜಕ್ಕೂ ಇದು ಅನ್ವಯಿಸುತ್ತದೆ. ಕಸಗುಡಿಸುವವರನ್ನು ಕನಿಷ್ಟ ಮಾತನಾಡಿಸಲು ಮುಜುಗರ ಪಡುವ ಇಲ್ಲಿನ ನಾಗರಿಕರೆನಿಸಿಕೊಂಡವರಿಂದ ಇದನ್ನು ನಿರೀಕ್ಷಿಸಲು ಕೂಡ ಸಾಧ್ಯವಿಲ್ಲ. ಹಾಗಾದರೆ ಏನು ಮಾಡಬೇಕು? ಪರ್ಯಾಯ ಆಲೋಚನೆ ಈ ಪುಸ್ತಕದಿಂದಲೂ ಸಮರ್ಪಕವಾಗಿ ಸಿಗಲಾರದು. ಆದರೆ ಇವರ ಬದುಕನ್ನು ಕಟ್ಟಿಕೊಡುವುದರ ಮೂಲಕ ಏನಾದರು ಮಾಡಲೇಬೇಕೆಂಬ ಆಲೋಚನೆಯನ್ನು ಓದುಗರ ಮನದಾಳದಲ್ಲಿ ಮೂಡಿಸುವಲ್ಲಿ ಈ ಪುಸ್ತಕ ಯಶಸ್ವಿಯಾಗುತ್ತದೆ. ಇದೂ ಕೂಡ ಮಹತ್ವದ ಬೆಳವಣಿಗೆಯೇ ಸರಿ. ಏಕೆಂದರೆ ಈ ಕೃತಿ ದೇಶಕ್ಕೆ ರಕ್ಷಣೆ ಕೊಡುವ ಸೈನಿಕರು ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಈ ಜಗದ ಹೊಲಸು ತೊಳೆಯುವ ಜಾಡಮಾಲಿಗಳು ಎಂದು ನಿರೂಪಿಸುತ್ತದೆ.

ಒಂದು ವ್ಯವಸ್ಥೆ ತನ್ನ ವಿರುದ್ಧ ಪಿತೂರಿ ನಡೆಸುವವರನ್ನು ಎಷ್ಟು ಚೆನ್ನಾಗಿ ಹೈಜಾಕ್ ಮಾಡುತ್ತದೆ ಎಂಬುದಕ್ಕೆ ಪುಸ್ತಕದ ಹಲವು ನಿದರ್ಶನಗಳು ಸಾಕ್ಷಿ ನುಡಿಯುತ್ತವೆ. ಈ ದೇಶದ ಬಂಡವಾಳಶಾಹಿಗಳು ಮತ್ತು ಆಳುವವರ್ಗ ನಿರಂತರ ಲೂಟಿಯಲ್ಲಿ ತೊಡಗಿ ಈ ದೇಶದ ದುಡಿಯುವವರನ್ನು ತನ್ನ ಹಿತಾಸಕ್ತಿಗೆ ನಿರಂತರವಾಗಿ ಬಳಸಿಕೊಳ್ಳುತ್ತಿದೆ. ಇದು ಹಳ್ಳಿಯಿಂದ ದಿಲ್ಲಿಯವರೆಗೂ ಸಾಗಿದೆ. ಹೆತ್ತೂರು ತಮ್ಮ ಪುಸ್ತಕದಲ್ಲಿ ದಾಖಲಿಸಿರುವಂತೆ ತಮ್ಮ ಜೀವಿತವನ್ನೇ ಹಲವರು ಗೌಡನ ಮನೆಯಲ್ಲಿ ಕಳೆದಿದ್ದಾರೆ. ಆದರೆ ಇವರ್‍ಯಾರಿಗೂ ಗೌಡನ ಬಗ್ಗೆ ದ್ವೇಷವಿಲ್ಲ. ಬದಲಾಗಿ ನಮ್ಮ ಪಾಲಿನ ದೇವರೇ ಸರಿ ಎಂಬ ಅಭಿಪ್ರಾಯವನ್ನು ಉಳಿಸಿಕೊಂಡಿದ್ದಾರೆ. ಇಲ್ಲಿನ ಧರ್ಮ ಇವರನ್ನು ಗುಲಾಮಗಿರಿಯಲ್ಲಿ ಕಳೆಯುವಂತೆ ಮಾಡಿದೆ. ಆದರೂ ಈ ಧರ್ಮವೇ ಅವರಿಗೆ ಸರ್ವಶ್ರೇಷ್ಠ. ಇದನ್ನು ಅತ್ಯಂತ ನಾಜೂಕಿನಿಂದ ಶತಮಾನಗಳುದ್ದಕ್ಕೂ ಹೆಣೆಯಲಾಗಿದೆ. ಈ ಬಂಧನದಲ್ಲಿ ಶೋಷಣೆಯ ಮುಖವನ್ನೇ ಅಪ್ಪಿಕೊಂಡು ದಲಿತರು ಬದುಕಿದ್ದಾರೆ. ಇವರು ಇವುಗಳ ವಿರುದ್ಧ ನಿಲ್ಲದ ಹೊರತು ಗುಲಾಮತನ ಕೊನೆಯಾಗುವುದಿಲ್ಲ. ಈ ಧ್ವನಿ ಈ ಪುಸ್ತಕದಲ್ಲಿ ನೆಲೆನಿಂತಿದೆ.

ಈ ಪುಸ್ತಕ ಓದುತ್ತಾ ಹೋದಂತೆಲ್ಲಾ ಇತ್ತೀಚಿಗಿನ ಎರಡು ಘಟನೆಗಳು ಯಾಕೋ ತಲೆಯಲ್ಲಿ ನಿಂತಿವೆ. ಒಂದು ಟಿವಿಯಲ್ಲಿ ಸಿನಿಮಾ ನೋಡಿದ ಸಂದರ್ಭ. ಅದರಲ್ಲಿ ಕಾಡಿನ ನಡುವೆ ನಡೆಯುವಾಗ ನಾಯಕಿಗೆ ಮುಳ್ಳು ಚುಚ್ಚಿಕೊಳ್ಳುತ್ತದೆ. ಇದರಿಂದ ಬೇಸರಗೊಂಡ ನಾಯಕ ಅವಳ ಸುಂದರ ಕಾಲು ನೋಯದಿರಲೆಂದು ತೆಂಗು ಅಥವಾ ಅಡಿಕೆಯ ಮರಕ್ಕೆ ಸಂಬಂಧಿಸಿದ ವಸ್ತುವಿನಿಂದ ಚಪ್ಪಲಿಯನ್ನು ಮಾಡಿಕೊಡುತ್ತಾನೆ. ಇದನ್ನು ಆಶ್ಚರ್ಯಚಕಿತಳಾಗಿ ನೋಡುವ ನಾಯಕಿ ಮುಗುಳ್ನಗೆ ಸೂಚಿಸಿ ಹಾಕಿಕೊಂಡು ಮುನ್ನಡೆಯುತ್ತಾಳೆ. ಇದು ನಾಯಕನಿಗೆ ಧನ್ಯಭಾವ, ನೋಡುಗರಿಗೆ ಒಂದು ರೀತಿಯ ಮನರಂಜನೆ. ಆದರೆ ಈ ಕೃತಿಯ ಮುಖಪುಟದಲ್ಲಿ ಪ್ಲಾಸ್ಟಿಕ್ ಬಾಟಲ್‌ಗಳಿಂದ ಮಾಡಿದ ಚಪ್ಪಲಿಯನ್ನು ಹಾಕಿಕೊಂಡಿರುವ ಪೌರಕಾರ್ಮಿಕನ ಪಾದಗಳಿವೆ. ಇದು ಪೌರಕಾರ್ಮಿಕರ ಬದುಕಿನ ವಸ್ತುಸ್ಥಿತಿ. ಇಲ್ಲಿ ನೋವಿದೆ, ಕಾಲು ತುಂಬಾ ದುಡಿಮೆಯಲ್ಲಿ ಬದುಕು ಕಳೆದುಹೋದ ಕಲೆಗಳಿವೆ. ಆದರೆ ಇದರೆಡೆಗಿನ ದೃಷ್ಟಿ ಹರಿಸುವ ಜನಗಳಿಲ್ಲ, ಕರಗುವ, ಮರುಗುವ ಮನಸ್ಸುಗಳು ಇವುಗಳೆಡೆಗೆ ಕಣ್ಣೆತ್ತಿ ನೋಡುವುದೂ ಇಲ್ಲ. ಆದರೆ ಇದನ್ನು ಕಂಡು ಅಸಹ್ಯ ಪಡುವ ಮನಸ್ಸುಗಳು ಮಾತ್ರ ಇಲ್ಲೇ ಸುತ್ತ ಹರಿದಾಡುತ್ತವೆ. ಇದೇ ಇವತ್ತಿನ ವ್ಯಂಗ್ಯ. ದುಡಿಯುವ ಜಗತ್ತನ್ನು ಕಣ್ಣೆತ್ತಿಯೂ ನೋಡದ ಜಗತ್ತೊಂದು ಸಿನಿಮಾದ ಮಾಯಾಲೋಕದಲ್ಲಿ ಕಳೆದುಹೋಗುತ್ತದೆ.

ಇನ್ನೊಂದು ಇತ್ತೀಚೆಗೆ ಮಹಾರಾಷ್ಟ್ರದಲ್ಲಿ ಮೂವರು ದಲಿತರ ಕಗ್ಗೊಲೆ ನಡೆದಿದೆ. ಹೋರಾಟವನ್ನೇ ಮೈಗೂಡಿಸಿಕೊಂಡ ಮನಸ್ಸುಗಳು ಇದರ ಬಗ್ಗೆ ಚಕಾರವೆತ್ತದೆ ಸುಮ್ಮನಾಗಿವೆ. ಗೌರಿ ಲಂಕೇಶ್ ಪತ್ರಿಕೆ ಬಿಟ್ಟರೆ ಬೇರೆ ಯಾವ ಪತ್ರಿಕೆಗಳೂ ಇದನ್ನು ಗಂಭೀರವಾಗಿ ಪ್ರಶ್ನಿಸಲಿಲ್ಲ,



ಯಾವ ಮಾಧ್ಯಮಗಳೂ ಕೂಡ ಚರ್ಚೆ ಏರ್ಪಡಿಸಿ ಇದರ ವಿರುದ್ಧವಾಗಿ ಏನಾದರೂ ಮಾಡಬೇಕೆಂಬ ಕೆಚ್ಚು ತೋರಲಿಲ್ಲ. ಇಂತಹ ಹೊತ್ತಿನಲ್ಲಿ ಬಂದಿರುವ ಈ ಕೃತಿ ನೊಂದವರ ಧ್ವನಿಯಾಗಿ ನಿಂತಿರುವುದು ಮಹತ್ವದ ಅಂಶಗಳಲ್ಲಿ ಒಂದು.

ಮೇಲಿನ ಘಟನೆಗಳಷ್ಟೇ ಅಲ್ಲ, ಇನ್ನು ನೂರಾರು ಘಟನೆಗಳು ನಡೆದು ಅಸಹಾಯಕರ ಬದುಕನ್ನು ಮೂರಾಬಟ್ಟೆ ಮಾಡಿವೆ. ಇವೆಲ್ಲ ಈ ದೇಶದ ಕೋಟ್ಯಾನುಕೋಟಿ ನವನಾಗರಿಕರೆನಿಸಿಕೊಂಡವರಿಗೆ ಕಾಣಿಸುವುದೇ ಇಲ್ಲ. ಆದರೆ ಹೆತ್ತೂರರಂತವರಿಗೆ ಇವೆಲ್ಲ ಕಣ್ಣಿಗೆ ಕಾಣುತ್ತವೆ. ಏಕೆಂದರೆ ಅವರ ದೃಷ್ಟಿ ದುಡಿಯುವವರನ್ನು ಸದಾ ಗಮನಿಸುತ್ತಲೇ ಇರುತ್ತದೆ. ಈ ಹಿನ್ನೆಲೆಯಲ್ಲಿ ಈ ಕೃತಿಗೊಂದು ಮಹತ್ವ ಪ್ರಾಪ್ತವಾಗಿದೆ. ಈ ದೃಷ್ಟಿ ಇರುವ ಕಾರಣದಿಂದಲೇ ಹೆತ್ತೂರ್ ಅವರು ಕಸಗುಡಿಸುವವರ, ಹೇಲೆತ್ತುವವರ, ಜೀತದಲ್ಲಿರುವವರ, ಮಹಿಳಾ ಕಾರ್ಮಿಕರ, ಅತ್ಯಾಚಾರಕ್ಕೆ ಒಳಗಾದವರ, ಹಳ್ಳಿಯ ಬದುಕಿನ ಭಾಗವಾದ ದಲಿತರ, ಅವಮಾನಿತಳಾದ ದಲಿತ ಮಹಿಳೆಯರ, ಪೊಲೀಸರ ಕೈಯಲ್ಲಿ ನರಳಿದ ಅಸಹಾಯಕರ, ಅಲೆಮಾರಿಗಳ ಬವಣೆಗಳನ್ನು ಅವರ ಮಾತುಗಳಲ್ಲೇ ಹಿಡಿದಿಡಲು ಸಾಧ್ಯವಾಗಿದೆ.


ದಲಿತರು ಜೀತದ ನೆಲೆಯಲ್ಲಿ ಬದುಕುವಂತೆ ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಭಾವನಾತ್ಮಕವಾಗಿ ವ್ಯೂಹಗಳನ್ನು ಹೆಣೆಯಲಾಗಿದೆ. ಇವನ್ನೆಲ್ಲ ಛಿದ್ರಗೊಳಿಸದ ಹೊರತು ಜೀತಮುಕ್ತಿ ಸಾಧ್ಯವಿಲ್ಲ. 21ನೇ ಶತಮಾನ ಏನೆಲ್ಲ ಆವಿಷ್ಕಾರಗಳಿಂದ ಮುನ್ನಡೆಯನ್ನು ಸಾಧಿಸುತ್ತಾ ಬರುತ್ತಿದೆ. ಇಂತಹ ಅಧುನಿಕ ಯುಗದಲ್ಲೂ ಅಸ್ಪೃಶ್ಯತೆ ಮತ್ತು ಜೀತಪದ್ಧತಿ ಜೀವಂತವಾಗಿದೆಯೆಂದರೆ ದಲಿತರಿಗೆ ಈ ದೇಶ ವರವೋ ಶಾಪವೋ ತಿಳಿಯದಾಗಿದೆ. 75 ವರ್ಷದ ಕೋಡಗಯ್ಯ, ಗಂಗೂರು ಗ್ರಾಮದ ವೆಂಕಟಯ್ಯ, ಕಸ ಗುಡಿಸುವುದನ್ನೇ ಕಾಯಕ ಮಾಡಿಕೊಂಡ ಜಯಮ್ಮ, ಊರಿಂದ ಬಹಿಷ್ಕಾರಕ್ಕೆ ಒಳಗಾದ ಹಲವು ದಲಿತರು, ಸೀರೆಗೆ ಕೈಯಿಟ್ಟಾಗ ಬೊಬ್ಬಿರದ ಅಕ್ಕತಂಗಿಯರು ಇವರೆಲ್ಲ ಇಂದಿಗೂ ಶೋಷಣೆಯ ಮಗ್ಗುಲಲ್ಲೇ ಬದುಕುವಂತಾಗಿದೆ. ಈ ದೇಶದ ಭೂಮಿ ಮತ್ತು ಸಂಪತ್ತು ರಾಷ್ಟ್ರೀಕರಣವಾಗದ ಹೊರತು ಇದರ ನೆಲೆಗಳು ಬದಲಾಗಲು ಸಾಧ್ಯವಿಲ್ಲವೇನೋ....!

ಈ ದೇಶದ ಹಲವರಿಗೆ ಸ್ವಚ್ಛತೆ ಬಹಳ ಮುಖ್ಯ. ಆದರೆ ಸ್ವಚ್ಛ ಮಾಡುವವರು ಮಾತ್ರ ಕನಿಷ್ಟ. ನಿರಂತರ ಕೊಳಕಿನಲ್ಲಿ ಕಾಲ ಕಳೆಯುವ ಇವರಿಗೆ ಅಸ್ಪೃಶ್ಯತೆಯ ಪಟ್ಟ ಬೇರೆ. ಇವರನ್ನು ಕಂಡರೆ ಕೆಲವರಿಗೆ ನೋಡಲು ಅಸಹ್ಯ, ಮಾತನಾಡಿಸಲು ಅಸಹ್ಯ, ಮುಟ್ಟುವುದಂತೂ ಇನ್ನೂ ಅಸಹ್ಯ. ಸದಾ ಅವಮಾನದ ನೆರಳಿನಲ್ಲೇ ಬದುಕುವ ಇವರು ನಿತ್ಯ ಸಂಕಷ್ಟದಲ್ಲೇ ಬೇಯುತ್ತಾರೆ. ಇದಕ್ಕೆ ನಿದರ್ಶನವೆಂಬಂತೆ 'ನನ್ನ ಮಕ್ಕಳು ಓದುವ ಸ್ಕೂಲಿನ ಎದುರೇ ನಾವು ಕಸ ಗುಡಿಸುತ್ತಿದ್ದೆವು. ನಮ್ಮ ಮಕ್ಕಳು ನಮ್ಮ ಕಣ್ಣ ಮುಂದೆ ಇದ್ದರೂ ಮಾತನಾಡಿಸುತ್ತಿರಲಿಲ್ಲ' ಎನ್ನುವ ಕಸಗುಡಿಸುವ ಜಯಕ್ಕ "ಸ್ವಾಮಿ, ನಾವು 5 ಗಂಟೆಗೆ ಹೋದರೆ 6.30 ರ ಒಳಗೆ ನಮ್ಮ ಕೆಲಸ ಮುಗಿಸಬೇಕು. ಕಾರಣ ಜನ ಎದ್ದು ನಮ್ಮ ಮುಖ ನೋಡಲು ಹೆದರುತ್ತಾರೆ. 'ಬೋಳಿಮಕ್ಳ ಬೆಳಗ್ಗೆ ಬೆಳಗ್ಗೆ ನಿಮ್ಮ ಮುಖ ನೋಡಬೇಕಾ...? ಬೇಗ ಗುಡಿಸಿ ಸಾಯೋಕೆ ಏನು?' ಎನ್ನುತ್ತಾರೆ.. ನೋಡಿ ಸ್ವಾಮಿ ಇದು ನಮ್ಮ ಸ್ಥಿತಿ" ಎನ್ನುತ್ತಲೇ ಹೊಲಸು ತೊಳೆಯುವ ಮಾಣಿಕ್ಯ ಇವರ ಪಾಡು ಯಾರಿಗೆ ತಾನೆ ಅರ್ಥವಾಗಬೇಕು.

ಇವರು ತಮ್ಮ ಬೇಡಿಕೆ ಈಡೇರಿಕೆಗೆ ಮೈಮೇಲೆ ಮಲ ಸುರಿದುಕೊಳ್ಳುತ್ತೇವೆ ಎನ್ನಬೇಕು. ಇಂತಹ ಬೆದರಿಕೆ ಬಂದ ಮೇಲೆ ಆಳುವವರ್ಗದಿಂದ ಆಶ್ವಾಸನೆ ಸಿಗುತ್ತದೆ. ಈ ರೀತಿ ಬೆದರಿಕೆ ಒಡ್ಡಬೇಕಾದರೆ ಈ ದೇಶದ ದಲಿತರ ಬದುಕು ಇನ್ನೆಷ್ಟು ಅಸಹನೀಯವಾಗಿದೆ? ಮತ್ತು ಈ ದೇಶದ ಆಳುವ ವರ್ಗಕ್ಕೆ ಇನ್ನೆಂತ ಕಿವಿಗಳು ಸೃಷ್ಟಿಗೊಂಡಿವೆ ಎಂಬುದು ಮನದಟ್ಟಾಗುತ್ತದೆ. ತಿಂಗಳಿಗೆ ಸರಿಯಾಗಿ ಸಂಬಳ ಸಿಗದ, ಹುಷಾರಿಲ್ಲದಿದ್ದರೆ ಸರಿಯಾಗಿ ಚಿಕಿತ್ಸೆ ಸಿಗದ, ಇಪ್ಪತ್ತು ಮೂವತ್ತು ವರ್ಷಗಳಿಂದ ನಿವೇಶನಕ್ಕಾಗಿ ಅರ್ಜಿ ಬರೆದು ಸುತ್ತಾಡಿ ಸುತ್ತಾಡಿ ಅಧಿಕಾರಿಗಳ ಕಾಲು ಕೈ ಹಿಡಿದರೂ ನಿವೇಶನ ಸಿಗದವರು ಇಲ್ಲಿದ್ದಾರೆ. ಇವರ ಬದುಕು ಶೋಚನೀಯವಾಗಿದ್ದರೂ ಅದೇ ಕೊಳಕಿನಲ್ಲಿ ದಿನವಿಡೀ ದುಡಿಯುವಂತೆ ಇಲ್ಲಿನ ಆಳುವ ವರ್ಗ ಮಾಡುತ್ತದೆ. ತಾವು ಮಾತ್ರ ಸುಖದ ಸುಪ್ಪತ್ತಿಗೆಯಲ್ಲಿ ತೇಲುತ್ತಾರೆ. ಇದೆಲ್ಲದರ ಹಿನ್ನೆಲೆಯಲ್ಲಿ ಇಲ್ಲಿನ ಆಳುವ ವರ್ಗದ ಹುನ್ನಾರವನ್ನು ಕೃತಿ ಬಹು ಸೂಕ್ಷ್ಮವಾಗಿ ನಿರೂಪಿಸುತ್ತಾ ಸಾಗಿದೆ.

ದಲಿತರೆಂದರೆ ಬೇರೆಯವರಿಗೆ ಸುಖ ಸಿಕ್ಕಾಗ ಸಂಭ್ರಮಿಸುವವರು. ಅವರ ಏಳಿಗೆಯನ್ನೇ ತಮ್ಮ ಏಳಿಗೆ ಎಂದುಕೊಂಡಿರುವವರು: ತಮ್ಮಿಡೀ ಜೀವ ಊರ ಗೌಡನಿಗಾಗಿಯೇ ತೇದು ಅವನೇ ದೇವರೆಂದುಕೊಂಡವರು. ಆದರೆ ಅವರಿಂದ ಇವರಿಗೆ ಸಿಗುವ ಬಹುಮಾನ ಬರೀ ಗುಲಾಮಗಿರಿತನ ಮಾತ್ರ. 75 ವರ್ಷದ ಕೋಡುಗಯ್ಯ ತನಗೆ 8 ವರ್ಷ ಆದಾಗಿನಿಂದಲೂ ಗೌಡನ ಮನೆಯಲ್ಲಿ ಜೀತಕ್ಕಿದ್ದಾನೆ. ಸಂಬಳ ಪಡೆಯದೆ "ನನ್ನ ಕಷ್ಟ ಸುಖ ಎಲ್ಲಾ ಅವರಿಗೇ ಬಿಟ್ಟಿದ್ದೀನಿ" ಎನ್ನುತ್ತಾನೆ. ಹೆಚ್ಚು ಕೇಳಿದರೆ "ಸ್ವಾಮಿ ಏನಾರೂ ನಮ್ ಗೌಡ್ರಿಗೆ ಹೆಚ್ಚು ಕಡ್ಮೆ ಆಗಲ್ಲ ತಾನೆ" ಎನ್ನುತ್ತಾ ಅಳುಕುತ್ತಾನೆ. ಇಂತಹ ಪ್ರಾಮಾಣಿಕತೆಗೆ ಸಿಕ್ಕ ಪ್ರತಿಫಲ ಅದೇ ಜೀತದ ಮುಂದುವರಿಕೆ. ಇನ್ನು ನಮ್ಮ ರಾಜಕಾರಣಿಗಳೋ ಗೆಲ್ಲುವವರೆಗೆ ದಲಿತರು ಬೇಕು. ಗೆದ್ದ ಮೇಲೆ ಅವರ ಕಡೆ ಅವರ ಅಪ್ಪಿತಪ್ಪಿಯೂ ನೋಡಲಾರರು. "ಅವರು ಗೆದ್ದಾಗಲೆಲ್ಲಾ ನಾವು ತಮಟೆ ಹೊಡೆದಿದ್ದೇವೆ. ಕುಣಿದು ಕುಪ್ಪಳಿಸಿದ್ದೇವೆ. ಆದರೆ ಒಂದೇ ಒಂದು ದಿನ ನಾವು ಬದುಕಿದ್ದೇವಾ... ಸತ್ತಿದ್ದೇವಾ? ಎಂದು ನೋಡಲಿಲ್ಲ, ನಮ್ಮ ಸ್ಥಿತಿ ಎಂತಹವರಿಗೂ ಬೇಡ" ಎನ್ನುವ ಜನ ಮಾಜಿ ಪ್ರಧಾನಿ ತವರಿನೊಳಗೆ ಇನ್ನೂ ಇದ್ದಾರೆ. ಇದು ದಲಿತರ ಕತೆ.

ದಲಿತರ ಮೇಲೆ ಹಲ್ಲೆ ಸಾಮಾನ್ಯವೆಂಬಂತೆ ಎಲ್ಲಾ ಕಡೆ ನಡೆಯುತ್ತಿದೆ. ಕೆಲವರು ದಲಿತರ ಮೇಲೆ ಹಲ್ಲೆ ನಡೆಸುವುದನ್ನು ತಮ್ಮ ಆಜನ್ಮಸಿದ್ಧ ಹಕ್ಕು ಎಂದು ಭಾವಿಸಿದಂತಿದೆ. ಇನ್ನು ಬಹಿಷ್ಕಾರವಂತೂ ಸರ್ವೇಸಾಮಾನ್ಯವಾಗಿ



ಹೋಗಿದೆ. ತಮಟೆ ಹೊಡೆಯದ್ದಕ್ಕೆ, ಕೂಲಿ ಕೇ
ದೇವಸ್ಥಾನ ಪ್ರವೇಶ ಮಾಡಿದ್ದಕ್ಕೆ, ಅಂಬೇಡ್ಕರ್ ಜ
ಮಾಡಿದ್ದಕ್ಕೆ, ಊರಿನ ಪ್ರಮುಖರನ್ನು ಪ್ರಶ್ನಿಸಿದ್ದಕ್ಕೆ,
ಬರೆದು ಪಾಸಾದ್ದಕ್ಕೆ, ಮೇಲ್ಜಾತಿಯವನ ಕಾಲನ್ನು
ತುಳಿದಿದ್ದಕ್ಕೆ, ಪಂಚಾಯತಿ ಚುನಾವಣೆಯಲ್ಲಿ ಗೆ
ಮೇಲ್ಜಾತಿ ಯುವತಿಯನ್ನು ಪ್ರೀತಿಸಿದ್ದಕ್ಕೆ ಇಂತಹ ನೂ
ಕ್ಷುಲ್ಲಕ ಕಾರಣಗಳಿಗೆ ಈಗಾಗಲೇ ಸಾವಿರಾರು
ಭೀಕರತೆಗಳು ನಡೆದುಹೋಗಿವೆ ಮತ್ತು ನಡೆಯು
ಇವೆ. ಪ್ರಸ್ತುತ ಕೃತಿಯಲ್ಲೇ ಉದಾಹರಣೆ ನೋಡುವು
ಗಣೇಶನ ಹಬ್ಬದಲ್ಲಿ ಚಪ್ಪರ ಹಾಕದ್ದಕ್ಕೆ ಅರಕಲಗ
ಸಿದ್ದಾಪುರದಲ್ಲಿ ಸಾಮೂಹಿಕ ಬಹಿಷ್ಕಾರ ಹಾಕಲ
ಗಂಗೂರಿನಲ್ಲಿ ಮತ್ತು ಇನ್ನಿತರ ಹಳ್ಳಿಗಳಲ್ಲಿ ದೇ
ಪ್ರವೇಶಿಸಿದ್ದಕ್ಕೆ ಹೊಡೆಯಲಾಗಿದೆ. ತಮಟೆ ಹೊಡೆ
ಎಂಬ ಕಾರಣಕ್ಕಾಗಿ ರಂಗಪ್ಪ ಎಂಬ ದಲಿತ
ಬೆತ್ತಲೆಗೊಳಿಸಿ ಊರ ಮಧ್ಯದಲ್ಲಿ ಹೊಡೆದು,
ಹೆಂಡತಿಯ ನೈಟಿಯನ್ನು ಎಳೆಯಲಾಗಿದೆ. ಇನ್ನೂ
ಕಡೆ ಅತ್ಯಾಚಾರ ನಡೆಸಿದ್ದಾರೆ. ಬೆತ್ತಲೆಗೊಳಿಸಿ
ಉದ್ದಕ್ಕೂ ಮೆರವಣಿಗೆ ಮಾಡಿದ್ದಾರೆ. ಇನ್ನು ಶಾ
ದೂರಿತ್ತರೆ ಶಾಸಕರ ಕೆಂಡದ ಕೋಪಕ್ಕೆ ತುತ್ತಾಗಬೇಕಾ
ಇದು ದಲಿತರ ವಸ್ತುಸ್ಥಿತಿ. ಮೀಸಲಾತಿ ವಿರುದ್ಧ
ನಡೆಸುವ ಕಿಡಿಗೇಡಿಗಳು ಇದನ್ನು ಮೊ
ಅರ್ಥಮಾಡಿಕೊಳ್ಳಬೇಕು.

ರಾಖಿ ಸಂಸ್ಕೃತಿ ಬಗ್ಗೆ ಮಾತನಾಡುವ, ನಾವು ನಿವ
ಎನ್ನುವ, ಗೋವು ನಮ್ಮೆಲ್ಲರ ತಾಯಿ ಎನ್ನುವ,
ನಮ್ಮ ಧರ್ಮದಲ್ಲೇ ಇರಿ ಎನ್ನುವ, ನಿಮ್ಮ
ನಮ್ಮ ಕೈಲಿದೆ ಎನ್ನುವ ಮಹಾನುಭಾವರಿಗೆ ಈ
ಹಲವು ಪ್ರಶ್ನೆಗಳ ಸುರಿಮಳೆಯನ್ನೇ ಸುರಿಸ
ವಿದ್ಯಾವಂತರನ್ನು, ರಾಜಕಾರಣಿಗಳನ್ನು,
ಮುಖಂಡರೆನಿಸಿಕೊಂಡವರನ್ನು, ದಲ್ಲಾಳಿಗಳನ್ನು, ಮಹಿ
ಪರ ಹೋರಾಡುತ್ತೇವೆ ಎನ್ನುತ್ತಲೇ ದಲಿತ ಮ
ಅನ್ಯಾಯವಾದಾಗ ಧ್ವನಿ ಎತ್ತದವರನ್ನು ತೀವ್ರ ತ
ತೆಗೆದುಕೊಳ್ಳುವ ಈ ಕೃತಿ ಮನುಷ್ಯ ಪರ ಆಲೋ
ಹಲವು ನೆಲೆಗಳನ್ನು ಒದಗಿಸುತ್ತದೆ. ಆ ಮೂಲಕ ಸ
ಸಮಾನವಾಗಿ ಬದುಕಬೇಕಾದ ಅನಿವಾರ್ಯತೆಯನ
ಹಿಡಿಯುತ್ತದೆ. ದನ ಸತ್ತರೆ ಎತ್ತಲಿಕ್ಕೆ ದಲಿತರು
ತಿನ್ನಲು ಮಾತ್ರ ಅರ್ಹರಲ್ಲ. ಇದು ಯಾವ ನ
ಎನ್ನುವ ಮಾರ್ಮಿಕ ಪ್ರಶ್ನೆಗಳನ್ನು ಈ ಕೃತಿ ತನ್ನೊ
ಹುದುಗಿರಿಸಿಕೊಂಡಿದೆ. ಇವೆಲ್ಲ ಇಲ್ಲಿನ ಸಂಸತಿ ರ
ಕೇಳಿದ ಪ್ರಶ್ನೆಗಳಿರಬೇಕು ಎನಿಸುತ್ತದೆ. ದುರಂತ
ಇದಾವುದೂ ಅವರ ಕಣ್ಣಿಗೆ ಕಾಣಿಸುವುದೇ ಇಲ್ಲ

ಈ ಕೃತಿಯ ಮೂಲಕ ಹೆತ್ತೂರು ದುಡಿ
ವಲಯದ ನಾಡಿಮಿಡಿತಗಳನ್ನು ಹಿಡಿದಿಟ್ಟಿದ್ದಾರೆ.
ನಿರೂಪಿಸುತ್ತಲೇ ಆಕ್ರೋಶದ ನೆಲೆಗೆ ಹೆತ್ತೂರು ತಲುಪ
ದಲಿತರು ಬಂಡೇಳದಿದ್ದರೆ ಜಗತ್ತು ದಲಿತರನ್ನು
ನೀರು ಕುಡಿಯುತ್ತದೆ ಎಂಬ ಅಂಶವನ್ನು ಹೆಕ್ಕಿ ತೋರಿ
ತೀವ್ರತರವಾಗಿ ಮನಕ್ಕೆ ತಟ್ಟುವ ಹಾಗೆ ಅವರ ನಿರೂ
ಸಾಗಿದೆ. ಹಾಸನದ ಉದ್ದಗಲಕ್ಕೂ ನಡೆಯುವ ಕ್ರೌರ್ಯ
ಕಲ್ಪನೆಯ ನೆಲೆಯಲ್ಲಿ ಹಿಡಿದಿಡದೆ ವಾಸ್ತವದ ನೆಲೆಗ
ಕಟ್ಟಿನಿಲ್ಲಿಸಿದ್ದಾರೆ. ಈ ಕಾರಣದಿಂದಾಗಿಯೇ ಈ ಕೃತಿ
ಓದುತ್ತಾ ಹೋದಂತೆಲ್ಲ ಹಾಸನದ ಸಮಸ್ಯೆ ಬಿಟ್ಟು
ದಲಿತರ ಸಮಸ್ಯೆ ಎಂಬಂತೆ ಮನಕ್ಕೆ ಪ್ರವೇಶಿ
ಸಾಮಾಜಿಕ ಮತ್ತು ಸಮುದಾಯದ ಕಳಕಳಿ
ವ್ಯಕ್ತಿಯಿಂದ ಮಾತ್ರ ಇಂತಹ ಕೃತಿಗಳು ಹೊರ
ಸಾಧ್ಯ. ಆದರೆ ಸ್ವಲ್ಪ ತಾಳ್ಮೆ ವಹಿಸಿದ್ದರೆ ಇನ್ನಷ್ಟು ತೀ
ಬರೆಯಬಹುದಿತ್ತು ಹಾಗೂ ಪ್ರಕಾಶಕರು ಇನ್ನಷ್ಟು
ವಹಿಸಿದ್ದರೆ ಇನ್ನೂ ಅಚ್ಚುಕಟ್ಟಾಗಿ ಪುಸ್ತಕ ಹೊರ
ಹುದಿತ್ತು. ಇದರ ಹೊರತಾಗಿ ಶೋಷಣೆಯ
ನಿಲ್ಲುವ ಮನಸ್ಸುಗಳು ಇದನ್ನು ಒಮ್ಮೆ ಓದಲೇ

● ಡಾ. ಉಮಾಶಂಕರ್ ಹೆಬ

ಮತಾಂತರ: ದಲಿತರಿಗೆ ಬಿಡುಗಡೆಯ ಅಸ್ತ್ರ

...ತ್ತೀಚೆಗೆ ತುಮಕೂರಿನ ಸಿದ್ದಗಂಗಾ ಮಠದಲ್ಲಿ ...ಸಂತರ ಸಮ್ಮೇಳನದಲ್ಲಿ ಸ್ವಾಮೀಜಿಗಳೆಲ್ಲರೂ ...ತರಕ್ಕೆ ಒಕ್ಕೊರಲಿನ ವಿರೋಧ ಒಡ್ಡಿದರು. ...ತರವನ್ನು ಹಿಮ್ಮೆಟ್ಟಿಸಬೇಕೆಂದರೆ ಜಾತಿ ಭೇದ, ... ಅಸಮಾನತೆಗಳನ್ನು ಹೋಗಲಾಡಿಸಬೇಕೆಂದೂ ...ರು. ಆದರೆ ಕೆಲವು ತಿಂಗಳುಗಳ ಹಿಂದೆ ಪ್ರಗತಿಪರ ...ಜಿಗಳು ವೀರಭದ್ರ ಚನ್ನಮಲ್ಲ ಸ್ವಾಮೀಜಿಗಳ ...ಲ್ಲಿ ಅಸ್ಪೃಶ್ಯತೆಯ ವಿರುದ್ಧ ಒಂದು ದಿನ ಸಾಂಕೇತಿಕ ...ಹ ಸತ್ಯಾಗ್ರಹ ಮಾಡಿದಾಗ ಈ ಸಂತರೆಲ್ಲರೂ ...ೋಗಿದ್ದರು? ಕಳೆದ ವರ್ಷ ಹಿರಿಯೂರು ಸಮೀಪದ ...ುಂದರಲ್ಲಿ ದಲಿತರಿಗೆ ವರ್ಷಗಟ್ಟಲೆ ಬಹಿಷ್ಕಾರ ...ಗ ಎಲ್ಲಿ ಅಡಗಿದ್ದರು? ಗಂಗಾವತಿಯ ಮರಕುಂಬಿ ...ಲ್ಲಿ ದಲಿತರನ್ನು ಬಹಿಷ್ಕರಿಸಿ ಮನೆಗಳಿಗೆ ಬೆಂಕಿ ... ಎಲ್ಲಿ ಕುಳಿತಿದ್ದರು? ಮಡೆಸ್ನಾನ ಬೇಡವೆಂದು ...ವರೆಲ್ಲಾ ಕೂಗುತ್ತಿರಲು ತಾವು ತಮ್ಮ ಗಂಟಲುಗಳನ್ನು ...ಮಂತ್ರಗಳಿಗೆ ಮೀಸಲಿಟ್ಟಿದ್ದರು? ಸ್ವಂತ ರಾಜ್ಯದಲ್ಲಿಯೇ ... ಇಷ್ಟು ನೀಚತನ ತೋರಿಸುತ್ತಿರುವ ಮೇಲ್ಜಾತಿ ...ಗಳನ್ನು ಬದಲಾಯಿಸಲು ಇವರು ಮಾಡಿರುವ ...ವಾದರೂ ಏನು? ಪಾದಪೂಜೆ ಮಾಡಿಸಿ ...ದೆ?

...ಯನ್ನು ಮುಂದಿಟ್ಟುಕೊಂಡು ಮೈಸೂರಿನಲ್ಲಿ ...ಲ್ಲಿ ದೇಶದ ನಾನಾ ಭಾಗಗಳಲ್ಲಿ ಪಿಶಾಚಿಗಳಂತೆ ... ತಂದೆತಾಯಂದಿರು ತಮ್ಮ ಕುಡಿಗಳನ್ನೇ ಕೊಂದು ...ಲ್ಲಾ ಆಗ ಈ ಸಂತರೆಲ್ಲರೂ ಎಲ್ಲಿ ಜಪ ಮಾಡು... ಜಾತಿಗಳಿಗೊಂದು ಮಠ ಕಟ್ಟಿಕೊಂಡು ಸಮಾಜದ ...ಖ ಮಾಡದೆ ಸ್ಥಾವರದ ಒಳಗೆ ಸ್ಥಾವರವಾಗಿ ...ವ ಸಂತರೇ... ನೀವು ಜಾತಿ ಭೇದವನ್ನು ನಾಶ ...ರಾ? ನಿಮಗೆ ಜಾತಿ ಪದ್ಧತಿ ನಾಶವಾಗಬೇಕೆಂದಿದ್ದರೆ ... ನಿಮ್ಮ ಜುಟ್ಟು, ಜನಿವಾರ, ವಿವಿಧ ಲಾಂಛನ ...ತ್ತು ಹಾಕಿ, ಎಲ್ಲಾ ಹಿಂದೂಗಳಿಗೂ ಒಂದೇ ...ನ್ನು ನೀಡುವಿರಾ? ಬೇರೆಲ್ಲೂ ಬೇಡ ವೇದಿಕೆ ...ಆಸೀನರಾಗಿದ್ದ ನಿಮ್ಮ ಸಂತರ ಸಮುದಾಯ ...ಗೆ ಪರಸ್ಪರ ಅಂತರ್ಜಾತಿ ವಿವಾಹಗಳನ್ನು ...ವಿರಾ?

... ಸಮಾನತೆ ಬಗ್ಗೆ ಮಾತನಾಡಿದ್ದೀರಿ. ದಲಿತರ ...ಹಿಳೆಯರ ಬಗ್ಗೆ, ಮುಸ್ಲಿಮರ ಬಗ್ಗೆ ಕೆಂಡ ...ದು ಸಮಾನತೆಯೇ? ಸಂತರೇ... ಹಳ್ಳಿಗಳಲ್ಲಿ ... ಇನ್ನೂ ನಿಮ್ಮ ದೇವಸ್ಥಾನಗಳಲ್ಲಿ ಪ್ರವೇಶವಿಲ್ಲ. ...ಲ್ಲ ಅದನ್ನು ನೀವೇ ಇಟ್ಟುಕೊಳ್ಳಿ. ಆದರೆ ...ಟ್ಟಿಗಳಿಗೆ, ಕಟಿಂಗ್ ಶಾಪುಗಳಿಗೆ, ನಲ್ಲಿಗಳ ಬಳಿಗೆ ...ಲ್ಲವಲ್ಲ? ಅದಕ್ಕೇನು ಕ್ರಮ ಕೈಗೊಂಡಿದ್ದೀರಿ? ...ವರ ಮನಸ್ಸುಗಳಿಗಿರಲಿ ಮನೆಗಳಿಗೇ ಪ್ರವೇಶ ... ಅದಕ್ಕೇನು ಮಾಡಿದ್ದೀರಿ? ಮಠಗಳ ಉತ್ತರಾಧಿ... ...ದೇ ಪದೇ ಕೋರ್ಟು ಮೆಟ್ಟಿಲು ಹತ್ತುವ ... ದಲಿತರ ಹಕ್ಕುಗಳನ್ನು ರಕ್ಷಣೆ ಮಾಡಲು ಯಾವ ... ಸ್ಟೇಷನ್ನು ಮೆಟ್ಟಿಲು ಹತ್ತಿದ್ದೀರಿ? ಯಾವಾಗ ...ಕ ಹಿತಾಸಕ್ತಿ ಅರ್ಜಿ ಹಾಕಿದ್ದೀರಿ? ನಿಮ್ಮ ನಿಮ್ಮ ...ಕ್ಷಣ ಸಂಸ್ಥೆ, ಆಸ್ಪತ್ರೆಗಳಲ್ಲಿ ಅದೆಷ್ಟು ಜನ ...ದಾಯದ ಜನಗಳಿಗೆ ನೌಕರಿಗಳನ್ನು ನೀಡಿದ್ದೀರಿ? ...ಮ್ಮ ಸಂಸ್ಥೆಗಳಲ್ಲಿ ಕೇವಲ ಮೇಲ್ಜಾತಿ ಮತ್ತು ...ತಿಯ ನೌಕರರೇ ಹೆಚ್ಚು ತುಂಬಿಕೊಂಡಿದ್ದಾರೆ?



ನಿಮ್ಮ ವಿವಿಧ ಮಠಗಳಲ್ಲಿ ಏಕೆ ನಿಮ್ಮ ಸಮುದಾಯಕ್ಕೆ ಸೇರಿದ ಸ್ವಾಮೀಜಿಗಳೇ ಇರುತ್ತಾರೆ? ಬೇರೆ ಜಾತಿಯವರೇಕಿಲ್ಲ?

ಈ ಮೇಲಿನ ಪ್ರಶ್ನೆಗಳಿಗೆ ನೀವೆಲ್ಲ ಉತ್ತರಿಸುತ್ತೀರಿ ಎಂಬ ಭ್ರಮೆ ನನಗಿಲ್ಲ. ಈ ಮೇಲಿನ ಪ್ರಶ್ನೆಗಳು ದಲಿತರ, ಹಿಂದುಳಿದ ಜಾತಿಗಳ ಗುಲಾಮರನ್ನು ಎಚ್ಚರಿಸಲಿ ಎಂದು ಕೇಳಿದ್ದೇನೆ ಅಷ್ಟೆ. ಶತಶತಮಾನಗಳಿಂದ ಕೀಳಾಗಿ ಇರಿಸಿದರೂ ಬುದ್ಧಿ ಬರದ ಈ ಆತ್ಮಘಾತುಕರಿಗೆ ತಾವು ಗುಲಾಮರೆಂದು ತಿಳಿಸುವುದಕ್ಕೋಸ್ಕರ.

ಸಂಘ ಪರಿವಾರದ ಮೋಹನ್ ಭಾಗವತ್ "ನಮ್ಮದೇ ಧರ್ಮದ ಬಂಧುಗಳನ್ನು ಕಸಿದುಕೊಂಡಿರುವ ಅನ್ಯ ಧರ್ಮಗಳಿಂದ ವಾಪಸ್ ಕರೆತರಬೇಕು" ಎಂದು ಹೇಳಿದ್ದಾರೆ. ಅವರ್‍ಯಾವ ಜಾತಿಗೆ ಕರೆತರುತ್ತಾರೋ ತಿಳಿಯದು. ಮತ್ತೆ ಜಾತಿಯ ಕೂಪಕ್ಕೆ ತರುವ ಇವರು ಜಾತಿ ಪದ್ಧತಿ ನಾಶ ಮಾಡುತ್ತಾರಾ? ಬೆಲ್ಚಿಯ ಘಟನೆಯನ್ನು ದಲಿತರು ಮರೆಯುತ್ತಾರಾ ಮೋಹನ್ ಭಾಗವತ್‌ರವರೇ. ನೀವೇ ಕಲಿಸಿದ ಕಾಯಕ; ಸತ್ತ ದನದ ಚರ್ಮ ಸುಲಿಯುತ್ತಿದ್ದ 5 ಜನ ದಲಿತರನ್ನು ಪೊಲೀಸು ಸ್ಟೇಷನ್ ಹೊಕ್ಕಿದರೂ ಬಿಡದೆ ಹೊರ ಎಳೆತಂದು ಜೀವಂತ ಸುಟ್ಟು ಹಾಕಿದರಲ್ಲಾ.. ನೆನಪಿದೆಯಾ? ನಿಮ್ಮ ವಿಶ್ವ ಹಿಂದೂ ಪರಿಷತ್ತಿನ ಹಿರಿಯ ಮುಖಂಡ ಗಿರಿರಾಜ ಕಿಶೋರ್ "ನೂರಾರು ಜೀವಕ್ಕಿಂತಲೂ ಒಂದು ಗೋವಿನ ಜೀವಕ್ಕೆ ಹೆಚ್ಚಿನ ಮಹತ್ವವಿದೆ" ಎಂದಿದ್ದನು. ದಲಿತರ ಜೀವ ನಿಮಗೆ ಲೆಕ್ಕಕ್ಕಿಲ್ಲದ ಮೇಲೆ ಮತಾಂತರವಾದರೆ ಯಾಕೆ ಹೆದರಿತ್ತಿದ್ದೀರಿ? "ಹಿಂದೂ ಧರ್ಮದಿಂದ ಹೊರಹೋಗಲಿರುವ ಅಸ್ಪೃಶ್ಯರು ನಮಗೆ ಲಾಭದಾಯಕವಾಗಿ ಉಳಿಯಲಾರರು. ಅಷ್ಟೇ ಅಲ್ಲದೆ ನಮ್ಮ ಮನೆಯ ವಿಘಟನೆಗೆ ಸರಳ ಸಾಧನಗಳಾಗಿ ಮಾರ್ಪಟ್ಟು ನಮಗೆ ಅಗಾಧ ನಷ್ಟವಾಗುತ್ತದೆ" ಎಂಬ ಸಾವರ್ಕರ್ ಮಾತು ಗುಯ್ ಗುಡುತ್ತಿದೆಯಾ? ಇಲ್ಲ ಮುಸಲ್ಮಾನರ ವಿರುದ್ಧ ದಲಿತರನ್ನು, ಹಿಂದುಳಿದ ಜಾತಿಯವರನ್ನು ಕಟ್ಟಾಡಲು ಬಿಟ್ಟು ಒಂದೇ ಕಲ್ಲಿನಲ್ಲಿ ಮೂರು ಹಕ್ಕಿ ಹೊಡೆಯಬಹುದು ಎಂಬ ಕುತಂತ್ರವೇ? ಇದು ಕರ್ನಾಟಕ. ಬಸವಣ್ಣ, ಕಾಳಿದಾಸ, ಕನಕದಾಸ, ಕುವೆಂಪುರಂತಹವರು ಹುಟ್ಟಿದ ನಾಡು. ಗುಜರಾತಲ್ಲ ಸ್ವಾಮಿ.

ಬಂಟ ಸಮುದಾಯದ ಹೆಣ್ಣುಮಗಳನ್ನು, ಅದೂ ಉಪನ್ಯಾಸಕಿಯನ್ನು ಪಂಕ್ತಿಯಿಂದ ಎದ್ದೋಡಿಸಿದಿರಲ್ಲ ಇದು ಆಧ್ಯಾತ್ಮವಾ? ಇದು ಮೋಕ್ಷಕ್ಕೆ ದಾರಿ ತೋರುವ ಕೆಲಸವೇ ಸಂತರೇ? ಜಾತಿಯಲ್ಲಿ ಮೇಲಿರುವ ಬಂಟ ಸಮುದಾಯದವರಿಗೇ ಹೀಗಾದರೆ ಇನ್ನು ದಲಿತರ ಪಾಡು?

ಸ್ವಾಮಿ ಮಾದಾರ ಚನ್ನಯ್ಯನವರೇ.. "ಆಗ ಅನೇಕ ತಪ್ಪುಗಳಾಗಿವೆ. ಈಗ ಅಂಥ ತಪ್ಪುಗಳಾಗುತ್ತಿಲ್ಲ" ಎಂದು ತೀರ್ಪು ನೀಡಿಬಿಟ್ಟಿದ್ದೀರಿ. ನಿಮ್ಮ ಕಣ್ಣಿಗೆ ದಲಿತರ ಯಾತನೆಗಳು ಕಾಣುತ್ತಿಲ್ಲವೆ? ನೆಲಮಂಗಲದ ದೇವಸ್ಥಾನವೊಂದರ ಗರ್ಭ ಗುಡಿಗೆ ಪ್ರವೇಶಿಸಿದ ಪುಟ್ಟ ದಲಿತ ಬಾಲಕನ ತಲೆ ಹೊಡೆದರು. ಮರಕುಂಬಿ, ಹಿರಿಯೂರು, ಗುಲ್ಬರ್ಗ, ದಾರವಾಡಗಳಲ್ಲಿ ದಲಿತರನ್ನು ಬಹಿಷ್ಕರಿಸಿದರು. ಜಾತಿಯ ಹೆಸರಿನಲ್ಲಿ ಮರ್ಯಾದಾ ಹೀನಹತ್ಯೆಗಳು ನಡೆದವು. ಮಡೆಸ್ನಾನ ಎಡೆಸ್ನಾನವಾಯಿತು, ಬೆತ್ತಲೆ ಸೇವೆ, ಹನುಮನ ಹೆಂಡಿರು, ದೇವದಾಸಿ ಪದ್ಧತಿ ಇನ್ನೂ ಜಾರಿಯಲ್ಲಿವೆ. ದಲಿತರು ಹಬ್ಬಹರಿದಿನಗಳಲ್ಲಿ ಹಲಗೆ ಬಡಿಯದಿದ್ದರೆ, ಕೋಣ ಕಡಿಯದಿದ್ದರೆ ಸಾಯುವ ಹಾಗೆ ಹೊಡೆಯುತ್ತಾರೆ. ಕಂಬಾಲಪಲ್ಲಿ, ನಾಗಲಾಪಲ್ಲಿ ಕೇಸುಗಳು ದಲಿತರನ್ನು ಕೊಂದವರ್‍ಯಾರು ಎಂಬುದನ್ನೇ ಪತ್ತೆ ಹಚ್ಚಲಾಗಿಲ್ಲ. ಇವೆಲ್ಲ ಓಬಿರಾಯನ ಕಾಲದ ಘಟನೆಗಳೇ? ನೀವು ದಲಿತರಿಗೆ ಸ್ವಾಭಿಮಾನದ ಪಾಠ ಹೇಳಿಕೊಡದಿದ್ದರೂ ಪರವಾಗಿಲ್ಲ ಆದರೆ ಮತ್ತೆ ಅವರನ್ನು ಗುಲಾಮರನ್ನಾಗಿ ಮಾಡದಿದ್ದರೆ ಸಾಕು. ಅಂಬೇಡ್ಕರರು ದಲಿತರಿಗೆ ಬುದ್ಧನನ್ನು ತೋರಿಸಿದ್ದು ಆಟಕ್ಕೆಂದುಕೊಂಡಿರೇನು? ಸ್ವಾತಂತ್ರ, ಸಮಾನತೆ, ಭ್ರಾತೃತ್ವವನ್ನು ಸಾಧಿಸಲು ತೆಗೆದುಕೊಂಡ ತೀರ್ಮಾನವದು. ಈ ದೇಶದ ಜಾತಿಪದ್ಧತಿ, ಅಸ್ಪೃಶ್ಯತೆ, ಅಸಮಾನತೆಗೆ ಬಾಬಾಸಾಹೇಬರು ಕಂಡುಕೊಂಡ ಔಷಧ. ಆದರೆ ನೀವು ದಲಿತರಿಗೆ ವಿಷ ಉಣಿಸುತ್ತಿದ್ದೀರಿ. ದಲಿತರಲ್ಲದವರೂ ಬೌದ್ಧ ಧಮ್ಮದ ಕಡೆ ಮುಖ ಮಾಡುತ್ತಿರುವ ಸಮಯದಲ್ಲಿ ನಿಮ್ಮ ತಳಬುಡವಿಲ್ಲದ ನಡೆಗಳಿಗೆ ನಗಬೇಕೋ ಅಳಬೇಕೋ ತಿಳಿಯುತ್ತಿಲ್ಲ. ನಿಮಗೆ ನಿಮ್ಮ ಸಂತರ ಮೇಲೆ ಅಷ್ಟು ನಂಬಿಕೆಯಿದ್ದರೆ ಆ ಸಂತರ ಮಠಗಳಲ್ಲಿ ಹೊಲೆ ಮಾದಿಗರಿಗೊಂದೊಂದು ಪೀಠ ಸ್ಥಾಪಿಸಲು ತಿಳಿಸಿ. ಉಡುಪಿ ಅಷ್ಟ ಮಠಗಳಲ್ಲಿ ಒಂದಕ್ಕೆ ನಿಮ್ಮನ್ನೇ ಪೀಠಾಧಿಪತಿ ಮಾಡಲು ತಿಳಿಸಿ. ಆಗ ಬೇಕಾದರೆ ನಿಮ್ಮನ್ನು ಅವರೊಟ್ಟಿಗೆ ನಿರುಮ್ಮಳವಾಗಿ ಇರಲು ಬಿಡುತ್ತೇವೆ.

ಸಂತರೇ.. ನೀವು ನಮ್ಮ ಕಿವಿಗಳಲ್ಲಿ ಹೂವಿಟ್ಟಿರುವಾಗಲೇ ಅಂಬೇಡ್ಕರರು ನಮ್ಮನ್ನು ಎಚ್ಚರಿಸಿದರು. ಇನ್ನು ಈಗ ಲಾಲ್‌ಬಾಗನ್ನೇ ಇಡಲು ಹೊರಟಿದ್ದೀರಿ ನಾವದಕ್ಕೆ ಬಗ್ಗುತ್ತೇವೆಯೆ? ಇಷ್ಟಕ್ಕೂ ತಾವುಗಳು ಮತ್ತದೇ ನಾಟಕಗಳನ್ನಾಡಿದರೆ ಅಂಬೇಡ್ಕರರು 78 ವರ್ಷಗಳ ಹಿಂದೆ ನಿಮ್ಮಂತವರಿಗೆ ಹೇಳಿದ ಮಾತುಗಳನ್ನೇ ಮತ್ತೆ ಹೇಳುತ್ತೇನೆ ಕಿವಿಗೊಟ್ಟು ಕೇಳಿಸಿಕೊಳ್ಳಿ:

"ಜಾತಿ ಪಾಲನೆ ಜನರ ತಪ್ಪಲ್ಲ, ನಿಜವಾಗಿ ತಪ್ಪಿರುವುದು ಜಾತಿಯ ಬಗೆಗೆ ಧರ್ಮವುಂಟು ಮಾಡಿದ ಕಲ್ಪನೆಯಲ್ಲಿ, ಈ ಮಾತು ಸರಿಯಾದರೆ, ನೀವು ಎದುರಿಸಬೇಕಾದ ವೈರಿ ಜಾತಿನಿಷ್ಠ ಜನರಲ್ಲ, ಅವರಿಗೆ ಈ ಧರ್ಮವನ್ನು ಬೋಧಿಸಿದ ಶಾಸ್ತ್ರಗಳೇ ಶತ್ರು. ಅಂತರ್ಜಾತೀಯ ಭೋಜನ ವಿವಾಹಗಳನ್ನೇಕೆ ಮಾಡುವುದಿಲ್ಲವೆಂದು ಜನರನ್ನು ಟೀಕಿಸುವುದರಿಂದ ಅಥವಾ ಆಗೀಗ ಅಂತರ್ಜಾತಿ ಭೋಜನ-ವಿವಾಹಗಳನ್ನು (ಕನಿಷ್ಟ ಈ ಕೆಲಸವನ್ನೂ ನೀವು ಮಾಡಿಲ್ಲ) ಏರ್ಪಡಿಸುವುದರಿಂದ ನಿಮ್ಮ ಉದ್ದೇಶ ಈಡೇರಲಾರದು. ಶಾಸ್ತ್ರಗಳಲ್ಲಿ ಜನರಿಗಿರುವ ನಿಷ್ಠೆಯನ್ನು ನಾಶಪಡಿಸುವುದೇ ನಿಜವಾದ ಮಾರ್ಗ."

ಸಂತರೇ.. ಈ ಕೆಲಸವನ್ನು ನೀವು ಮಾಡುವಿರೆಂದು ನಾವು ನಂಬಬೇಕೆ? ಸಂಪ್ರದಾಯದ ನೆಪದಲ್ಲಿ ಎಲ್ಲಾ ರೀತಿಯ ಶೋಷಣೆಯನ್ನು ಮುಂದುವರೆಸಿಕೊಂಡು ಹೋಗಬೇಕೆಂದು ಪ್ರತಿಪಾದಿಸುವ ತಮ್ಮಂತಹವರು ಜಾತಿ ಭೇದ, ಅಸ್ಪೃಶ್ಯತೆ ನಾಶ ಮಾಡಿಬಿಡುತ್ತೀರಿ ಎಂದು ನಾವು ನಿಮ್ಮ ಪಾದಗಳಿಗೆ ಶರಣು ಹೋಗಬೇಕೆ? ಹಿಂದೂ ಸಮಾಜದಲ್ಲಿ ಎಲ್ಲರೂ ಜಾತಿಪದ್ಧತಿಯ ಗುಲಾಮರೇ, ಆದರೆ ಈ ಗುಲಾಮರ ಸ್ಥಾನಮಾನ ಒಂದೇ ಆಗಿಲ್ಲವಲ್ಲ. ಒಬ್ಬರ ಹೆಗಲ ಮೇಲೆ ಮತ್ತೊಬ್ಬ ಗುಲಾಮ ಕುಳಿತಿರುವಾಗ ಮೇಲಿನ ಗುಲಾಮ ಕೆಳಗಿನ ಗುಲಾಮನಿಗೆ ಸ್ವತಂತ್ರ ನೀಡುವನೇ?

ಅಷ್ಟೇ ಏಕೆ ನಿಮಗೆ ಪೀಠದಿಂದ ಸಿಗುವ ಸವಲತ್ತುಗಳನ್ನು ನಿಮ್ಮ ಸಮುದಾಯದ ಬಡವನಿಗೆ ಬಿಟ್ಟು ಕೊಡುವಿರೇ? ಪುರೋಹಿತ ಅಥವಾ ಧರ್ಮಾಧಿಕಾರಿಯಾಗಲು ಪ್ರತಿಯೊಬ್ಬ ಹಿಂದೂವಿಗೂ ಸಮಾನ ಹಕ್ಕು ನೀಡುವಿರೇ? ಸಂತರೆನಿಸಿಕೊಂಡ ನಿಮ್ಮಲ್ಲಿಯೇ ಸಮಾನತೆ ಇಲ್ಲದ ಮೇಲೆ ಮಿಕ್ಕವರಿಗೆಲ್ಲಿ ಸಮಾನತೆ ಪಾಠ ಮಾಡುವಿರಿ ಸ್ವಾಮಿ?

ಅದಕ್ಕೆ ದಲಿತನಾಗಿ ನಿಮಗೊಂದು ಮಾತು ಹೇಳುತ್ತಿದ್ದೇನೆ ಕೇಳಿ. ನಿಮ್ಮ ಭರವಸೆ ಆಶ್ವಾಸನೆಗಳು ನನ್ನ ಜನರ ಕಿವಿಗಳಿಗೆ ಬೇಗ ಬಿದ್ದುಬಿಡುತ್ತವೆ. ಜೊತೆಗೆ ನಿಧಾನವಾದರೂ ಅಂಬೇಡ್ಕರರ ಮಾತುಗಳೂ ಸಹ ಒಂದಲ್ಲ ಒಂದು ದಿನ ನನ್ನ ಜನರ ಮನಸ್ಸಿಗೆ ಬೀಳುತ್ತದೆ. ಆಗ ನಿಮ್ಮ ಮಾತುಗಳು ನಾಶವಾಗಿ ಅಂಬೇಡ್ಕರರ ಮಾತುಗಳು ಶಾಶ್ವತವಾಗಿ ನೆಲೆಸುತ್ತವೆ. ಆ ಮಾತುಗಳು ನನ್ನ ಜನರನ್ನು ಬುದ್ಧನ ಮಡಿಲಿಗೆ ಕರೆದೊಯ್ಯುತ್ತವೆ. ಬುದ್ಧನ, ಕರುಣೆ, ಮೈತ್ರಿ, ಸಮಾನತೆ ತತ್ವಗಳು ಮುಸಲ್ಮಾನ, ಕ್ರೈಸ್ತ ಸಿಖ್ ಎಂಬ ಭೇದ ತೋರಿಸದೆ ಎಲ್ಲರಲ್ಲೂ ತನ್ನ ಬಂಧುವನ್ನು ಕಾಣುವಂತೆ ಮಾಡುತ್ತದೆ. ಆ ಬಂಧುಗಳಲ್ಲಿ ಹಿಂದೂ ಕೂಡ ಇರುತ್ತಾನೆ. ಜಾತಿಯವನಾಗಲ್ಲ, ಕೇವಲ ಮನುಷ್ಯನಾಗಿ.

● ವಿಕಾಸ ಆರ್ ಮೌರ್ಯ, ಬೆಂಗಳೂರು


ಭವಸಾಗರ ದಾಟಿಸುವ ಅಂಬಿ

ತನ್ನ ಮಾತು ನಿಷ್ಠುರ ಎಂದು ಹೇಳುವುದಕ್ಕೆ ಪಂಪ ಭಾರತದ ಭೀಮ 'ಎನ್ನ ಮಾತು ಟಾಠದರ್ಥಣ' ಎನ್ನುತ್ತಾನೆ. ಈ ಮಾತು ಶರಣ ಸಂಕುಲದಲ್ಲಿ ನಿಜ ಶರಣ ಎಂದು ಕರೆಸಿಕೊಂಡ ಅಂಬಿಗರ ಚೌಡಯ್ಯನವರಿಗೂ ಅನ್ವಯವಾಗುತ್ತದೆ. ನಿರಂಕುಶಮತಿ ಅಂಬಿಗರ ಚೌಡಯ್ಯನವರು ಕೆಳವರ್ಗದ ಜನರ ಕಷ್ಟನಷ್ಟಗಳನ್ನು ಅನುಭವಿಸಿದ ಅನುಭಾವಿಗಳು. ಇಹಪರಗಳ ಮಧ್ಯೆ ವೈಚಾರಿಕತೆ ತುಂಬಿದವರು. ಏಕದೇವೋಪಾಸನೆಯಲ್ಲಿ ಪರಮನಿಷ್ಠರು. ಆಚಾರ ಹೇಳುತ್ತ ದ್ವಂದ್ವ ಬದುಕನ್ನು ಸಾಗಿಸುವವರ ವಿರುದ್ಧ ಧ್ವನಿ ಎತ್ತಿದವರು. 'ಭವಸಾಗರವನ್ನು ದಾಟಿಸುವ ಅಂಬಿಗ' ಎಂಬ ಹೆಗ್ಗಳಿಕೆಯುಳ್ಳವರು.

ಅವರ ನಿಷ್ಠುರ ವಚನಗಳು ನಮ್ಮನ್ನು ನೇರವಾಗಿ ಸತ್ಯದ ದಾರಿಗೆ ತಂದು ನಿಲ್ಲಿಸುತ್ತವೆ. ಸತ್ಯವನ್ನು ಪ್ರಿಯವಾಗಿ ಹೇಳುವುದನ್ನು ಅವರು ಇಷ್ಟಪಡುವುದಿಲ್ಲ. ಅಂಬಿಗರ ಚೌಡಯ್ಯನವರ ಸತ್ಯದ ಪ್ರತಿಪಾದನೆಯು ವಜ್ರದ ಹಾಗೆ ಕಠೋರವಾಗಿರುತ್ತದೆ. ಆದರೆ ಅಂತರ್ಯದಲ್ಲಿ ಹೂವಿನ ಹಾಗೆ ಮೃದುವಾಗಿರುತ್ತದೆ. ಮನುಷ್ಯನ ಮೇಲಿನ ಕಳಕಳಿಯಿಂದಾಗಿಯೇ ಅವರು ಕಠೋರವಾದ ನಿಲುವನ್ನು ತಾಳುತ್ತಾರೆ. ಕಾಯಕ ಜೀವಿಗಳ ಗುಣಲಕ್ಷಣಗಳಲ್ಲಿ ಇದು ಮಹತ್ವದ ಪಾತ್ರವನ್ನು ವಹಿಸುವುದು. ಅವರು 'ಕಾಂತಾ ಸಮ್ಮಿತ' ರೀತಿಯಲ್ಲಿ ಮಾತನಾಡಲು ಬಯಸುವುದಿಲ್ಲ. ಏನಿದ್ದರೂ ಅವರ ಮಾತುಗಳು ಹಸಿಗೋಡೆಗೆ ಹರಳು ಎಸೆದಂತೆ ಮನಸ್ಸಿನಲ್ಲಿ ಅಚ್ಚಳಿಯದೆ ಕೂಡುತ್ತವೆ. ಈ ಶೈಲಿ ಅಂಬಿಗರ ಚೌಡಯ್ಯನವರ ವೈಶಿಷ್ಟ್ಯವಾಗಿದೆ.

ಅಂಬಿಗರ ಚೌಡಯ್ಯನವರ 300 ವಚನಗಳು ಸಿಕ್ಕಿದ್ದರೂ ಅವುಗಳಲ್ಲಿ ಅವರ ಜನ್ಮಸ್ಥಳ, ತಂದೆತಾಯಿ ಮುಂತಾದ ವಿವರಗಳು ಸಿಗುವುದಿಲ್ಲ. ಹೆಸರಿಗೆ ತಕ್ಕಂತೆ ಅವರ ಕಾಯಕ ದೋಣಿ ನಡೆಸುವುದಾಗಿತ್ತು. ಹಾವೇರಿ ಬಳಿಯ ಚೌಡದಾನಪುರದ ಮಲಪ್ರಭಾ ನದಿಯಲ್ಲಿ ದೋಣಿ ನಡೆಸುವ ಕಾಯಕದಲ್ಲಿದ್ದ ಚೌಡಯ್ಯನವರು ನಂತರ ಕಲ್ಯಾಣಕ್ಕೆ ಬಂದಿರಬಹುದು ಎಂಬುದು ಕೆಲ ವಿದ್ವಾಂಸರ ಅಂಬೋಣ.

'ಅಂಬಿಗ, ಅಂಬಿಗ ಎಂದು ಕುಂದ ನುಡಿಯದಿರು; ನಂಬಿದರೆ ಒಂದೇ ಹುಟ್ಟಿನಲಿ ಕಡೆಗೆ ಹಾಯಿಸುವ ಅಂಬಿಗ ಚೌಡಯ್ಯ' ಎಂದು ಅವರು ವಚನ ಬರೆಯುವ ಮೂಲಕ ಜಾತಿಯತೆಗೆ ಆತ್ಮವಿಶ್ವಾಸದೊಂದಿಗೆ ಸವಾಲು ಎಸೆದಿದ್ದಾರೆ. ಹೀಗೆ ಅವರು ಆತ್ಮಗೌರವದ ಸಾಕಾರಮೂರ್ತಿಯಾಗಿದ್ದಾರೆ. ನ್ಯಾಯನಿಷ್ಠುರಿಯಾಗಿದ್ದ ಅವರ ಧೈರ್ಯವು ವಚನ ಚಳವಳಿಗೆ ರಕ್ಷಾಕವಚದಂತಿದೆ. ಅವರು ಬೂಟಾಟಿಕೆಯ ಧಾರ್ಮಿಕತೆಯನ್ನು ಕಟುವಾಗಿ ವಿರೋಧಿಸಿದರು. ಬಸವಣ್ಣನವರ ಲಿಂಗತತ್ತ್ವವನ್ನು ಅತ್ಯಂತ ಶ್ರದ್ಧೆಯಿಂದ ಪಾಲಿಸಿದರು. ವೈಚಾರಿಕ ಭಿನ್ನಾಭಿಪ್ರಾಯವನ್ನು ನಿರ್ಭಿಡೆಯಿಂದ ವ್ಯಕ್ತಪಡಿಸಿದರು. ಧರ್ಮಬಾಹಿರ ಕೃತ್ಯಗಳಿಂದ



ಕೂಡಿದ ಶ್ರೀಮಂತರ ಮತ್ತು ಧನಮದದಿಂದ ಕೊಬ್ಬಿದ ಸ್ವಾಮಿಗಳನ್ನು ನಿರ್ಭಿಡೆಯಿಂದ ಟೀಕಿಸಿದರು. ಅವರ ಉದ್ದೇಶ ದ್ವೇಷ ಕಾರುವುದಾಗಿದ್ದಿಲ್ಲ, ಬದಲಿಗೆ ಹೊಸದಾಗಿ ರೂಪುಗೊಳ್ಳುತ್ತಿರುವ ಲಿಂಗವಂತ ಧರ್ಮವನ್ನು ಇಂಥವರಿಂದ ರಕ್ಷಿಸುವ ಕಳಕಳಿಯ ಉದ್ದೇಶ ಅದರ ಹಿಂದೆ ಇತ್ತು.

ಚೌಡಯ್ಯನವರಿಗೆ ಸಾಮಾಜಿಕ ಪ್ರಜ್ಞೆಯಷ್ಟೇ ಶಿವಯೋಗದ ಅರಿವೂ ಪೂರ್ಣವಾಗಿತ್ತು. ಅವರು ಲಿಂಗತತ್ವವನ್ನು ಆಳವಾಗಿ ಅರಿತುಕೊಂಡಿದ್ದರಿಂದಲೇ ಅರೆಭಕ್ತರ ಬಗ್ಗೆ ಸಾತ್ವಿಕ ಕೋಪ ವ್ಯಕ್ತಪಡಿಸಿ ಅವರನ್ನು ನಿಜದ ನೆಲೆಗೆ ತಂದು ನಿಲ್ಲಿಸುತ್ತಿದ್ದರು.

"ಅಡವಿಯೊಳಗರಸುವೊಡೆ ಗಿಡಗಂಟಿ ತಾನಲ್ಲ. ಮಡುವಿನೊಳಗರಸುವೊಡೆ ಮತ್ಸ್ಯ ಮಂಡೂಕನಲ್ಲ. ಒಡಲ ದಂಡಿಸುವಡೆ ಕೊಡುವ ಸಾಲಿಗನಲ್ಲ. ಅಷ್ಟತನುವಿನೊಳಗೆ ಹುದುಗಿರ್ಪ ಲಿಂಗವ ನಿಲುಕಿ ನೋಡಿಯೇ ಕಂಡ ಅಂಬಿಗರ ಚೌಡಯ್ಯ" ಎಂದು ಹೇಳುವಲ್ಲಿ ಅವರ ಶಿವಯೋಗ ಸೂಕ್ಷ್ಮತೆಯ ಅರಿವಾಗುವುದು.

"ದೇಹಾರವ ಮಾಡುವಣ್ಣಗಳಿರಾ, ಒಂದು ತುತ್ತು ಆಹಾರವನಿಕ್ಕಿರೆ. ದೇಹಾರಕ್ಕೆ ಆಹಾರವೆ ನಿಚ್ಚಣಿಗೆ. ದೇಹಾರವ ಮಾಡುತ್ತ ಆಹಾರವನಿಕ್ಕದಿರ್ದಡೆ, ಆ ಹರನಿಲ್ಲೆಂದನಂಬಿಗ ಚೌಡಯ್ಯ" ಎಂಬ ವಚನ ಅವರ ಜೀವಕಾರುಣ್ಯದ ಪ್ರತೀಕವಾಗಿದೆ. ದಯೆ ಇಲ್ಲದೆ ಬದುಕುವವರಿಗೆ ದೇವರ ಸಂಬಂಧವಿರಲಾರದು ಎಂದು ಅಂಬಿಗರ ಚೌಡಯ್ಯನವರು ಈ ವಚನದಲ್ಲಿ ತಿಳಿಸಿದ್ದಾರೆ. ಬಡಜನರ ಬಗ್ಗೆ ಕಾಳಜಿ ಇಲ್ಲದವರ ದೇವಪೂಜೆ ಡಂಭಾಚಾರದಿಂದ ಕೂಡಿರುತ್ತದೆ. ಅಂತಃಕರಣದಿಂದ ಕೂಡಿದ ಪೂಜೆಯೇ ನಿಜವಾದ ಪೂಜೆ. ಕಷ್ಟದಲ್ಲಿದ್ದವರಿಗೆ ಸಹಾಯ ಮಾಡುವುದೇ ನಿಜವಾದ ಪೂಜೆ. ಅಂತೆಯೆ ಬಡವರಿಗೆ ಸಹಾಯ ಮಾಡಿರಿ ಎಂದು ದೇಹಾರ ಮಾಡುವವರಿಗೆ ಚೌಡಯ್ಯನವರು ಕಳಕಳಿಯಿಂದ ಕೇಳುತ್ತಾರೆ.

ಈ ವಚನದಲ್ಲಿ ಮನಸವೊಲಿಸುವ ರೀತಿ ಹೃದಯಸ್ಪರ್ಶಿಯಾಗಿದೆ. 'ದೇಹಾರ ಮಾಡುವ ಅಣ್ಣಗಳಿರಾ ಒಂದು ತುತ್ತು ಆಹಾರವನಿಕ್ಕಿರೆ' ಎನ್ನುವಲ್ಲಿ ಭಕ್ತರ ಮೇಲಿರುವ ನೈತಿಕ ಜವಾಬ್ದಾರಿಯನ್ನು ಸೂಚಿಸಲಾಗಿದೆ. 'ಅಣ್ಣಗಳಿರಾ' ಮತ್ತು 'ಒಂದುತುತ್ತು' ಪದಗಳು ಇಲ್ಲಿ ಬಡವರ ಮೇಲಿರುವ ಕಾಳಜಿಯ ದ್ಯೋತಕವಾಗಿವೆ. ಹಸಿದವರಿಗೆ ಸಹಾಯ ಮಾಡುವುದರ ಮೂಲಕವೇ ಪೂಜೆಯ ತೃಪ್ತಿಯನ್ನು ಪಡೆಯಲು ಸಾಧ್ಯ. ಪರೋಪಕಾರಕ್ಕಾಗಿ ಹಂಬಲಿಸದೆ ಕೇವಲ ಪೂಜೆ ಮಾಡುವವರಿಗೆ ದೇವರೇ ಇಲ್ಲ ಎಂದು ಹೇಳುತ್ತ ಅಂಬಿಗರ ಚೌಡಯ್ಯನವರು ಬಡವರ ಪಕ್ಷಪಾತಿಯಾಗುತ್ತಾರೆ. ವಜ್ರದಷ್ಟು ಕಠಿಣ ನಿಲುವಿನ ಅಂಬಿಗರ ಚೌಡಯ್ಯನವರ ಮನಸ್ಸು ಹೂವಿನಷ್ಟು ಮೃದುವಾಗಿತ್ತು ಎಂಬುದಕ್ಕೆ ಈ ವಚನ ಸಾಕ್ಷಿಯಾಗಿದೆ.

ದೀನದಲಿತರ ಬಗ್ಗೆ ಕರಗದ ಮನಸ್ಸುಗಳ ವಿರುದ್ಧ ಚೌಡಯ್ಯನವರು ದನಿ ಎತ್ತಿದ್ದಾರೆ. ದ್ವಿಮುಖ ನೀತಿಯನ್ನು ವಿರೋಧಿಸಿದ್ದಾರೆ. 'ಲಿಂಗವೆಂಬೆನೆ ಕಲ್ಲುಕುಟಿಕನ ಮಗ... ತನ್ನೊಳಗ ನೋಡೆಂದನಂಬಿಗ ಚೌಡಯ್ಯ' ಎಂದು ಅವರು ಇನ್ನೊಂದು ವಚನದಲ್ಲಿ ತಿಳಿಸಿದ್ದಾರೆ. ತಮ್ಮೊಳಗಿನ ದೇವರನ್ನು ಕಾಣುವ ಶರಣರು ಸಕಲ ಜೀವಾತ್ಮರಲ್ಲಿ ದೇವರನ್ನು ಕಾಣುತ್ತಾರೆ. ಯಾವುದೇ ಜೀವಿ ಹಸಿವಿನಿಂದ ಬಳಲಬಾರದು ಎಂದು ಆಶಿಸುತ್ತಾರೆ.

'ದೇಹಾರ' ಎಂದರೆ ಇಷ್ಟಲಿಂಗ ಪೂಜೆ. ಇಷ್ಟಲಿಂಗವು ನಮ್ಮೊಳಗಿನ ದೇವರ ಪ್ರತೀಕವಾಗಿದೆ. ಈ ತತ್ತ್ವವನ್ನು ಬಲವಾಗಿ ನಂಬಿದ್ದರಿಂದಲೇ ಚೌಡಯ್ಯನವರು ತಮ್ಮೊಳಗಿನ ದೇವರ ಬಗ್ಗೆ ಅಚಲವಾದ ನಂಬಿಕೆಯುಳ್ಳವರಾಗಿದ್ದಾರೆ. ಹಾಗೆಯೆ ಕಷ್ಟಕ್ಕೊಳಗಾಗುವ ಕಾಯಕಜೀವಿಗಳಲ್ಲಿಯೂ ನಂಬಿಕೆಯುಳ್ಳವರಾಗಿದ್ದಾರೆ.

ಬಸವಧರ್ಮದಲ್ಲಿ ಎರಡು ಪ್ರಕಾರದ ಲಿಂಗಗಳಿವೆ. ಒಂದು ಇಷ್ಟಲಿಂಗ, ಇನ್ನೊಂದು ಜಂಗಮಲಿಂಗ. ಭಕ್ತನಾದವನು ಇಷ್ಟಲಿಂಗ ಪೂಜೆಯಲ್ಲಿ ತನ್ನೊಳಗಿನ ದೇವರ ಜೊತೆ ಒಂದಾಗುತ್ತಾನೆ. ಇಷ್ಟಲಿಂಗ ಪೂಜೆ ಎಂಬುದು ಅರಿವಿನ ಪೂಜೆ. ನಮ್ಮೊಳಗಿನ ಅರಿವೇ ಗುರು, ಆ ಗುರುವೇ ದೇವರು. ಇಷ್ಟಲಿಂಗವೆಂಬುದು ಆ ಅರಿವಿನ ಕುರುಹು ಮಾತ್ರ. ಇಷ್ಟಲಿಂಗ ಪೂಜಕ ಆ ಕುರುಹನ್ನು ಹಿಡಿದು ತಮ್ಮೊಳಗಿನ ಘನದ ಪೂಜೆಯನ್ನು ಮಾಡಬೇಕಾಗುತ್ತದೆ. ಆ ಘನವೇ ಅರಿವಿನ ರೂಪದಲ್ಲಿ ಇರುತ್ತದೆ. ಅರಿವೆಂದರೆ ಕಣ್ಣಿಗೆ ಕಾಣದ ಪರವಸ್ತು (ದೇವರು) ಮತ್ತು ಆ ಪರವಸ್ತುವನ್ನು ಅನುಭಾವಿಸುವ ಮೂಲಕ ಅದೇ ಆಗಿರುವಂಥ ಸ್ಥಿತಿ. ಇಂಥ ಸ್ಥಿತಿಯಲ್ಲಿ ಮಾನವನ ಒಳಗೆ ಇಡೀ ಜಗತ್ತು ಬಂದು ಸೇರುತ್ತದೆ. ನಂತರ ಆತ ಇಡೀ ಜಗತ್ತಿನಲ್ಲಿ ಒಂದಾಗಿ ಹೋಗುತ್ತಾ ಜೀವಾತ್ಮರಲ್ಲಿ ತನ್ನನ್ನೇ ಕಾಣುತ್ತಾನೆ. ಈ ನಂಬಿಕೆಯೊಂದಿಗೆ ಸಕಲಜೀವಾತ್ಮರಿಗೆ ಬಯಸುತ್ತಾನೆ. ಆಗ ಸಹಜವಾಗಿಯೇ ಜೀವಕ ಧರ್ಮದ ಮೂಲವಾಗುತ್ತದೆ.

ಒಳನೋಟದ ಅರಿವಿನಿಂದ ಸೃಷ್ಟಿಕ ಹೊರನೋಟದ ಪ್ರಜ್ಞೆಯಿಂದ ಸೃಷ್ಟಿಯನ್ನೂ ಕ್ರಮವನ್ನು ಬಸವಾದಿ ಶರಣರು ಅರುಹಿದ್ದಾರೆ. ಸ ಸೃಷ್ಟಿಯಲ್ಲಿ ಎಲ್ಲ ತೆರನಾದ ಸಮಾನತೆಯನ್ನು ಸಾಧಿ ಶರಣರ ಗುರಿಯಾಗಿತ್ತು. ವರ್ಗ, ವರ್ಣ, ಜಾ ಲಿಂಗಭೇದಗಳಿಲ್ಲದ ಹಾಗೂ ಘನತೆವೆತ್ತ ರೂಪಿಸುವಲ್ಲಿ ಶರಣರು ತಲ್ಲೀನರಾಗಿದ್ದರು. ಶರಣಧರ್ಮೀಯರು ಬರಿ ಇಷ್ಟಲಿಂಗ ಪೂಜೆ ಮಾ ಸಾಲದು. ಅವರು ಜಂಗಮಲಿಂಗ ಪೂಜೆ ಮಾಡಬೇಕಾಗುತ್ತದೆ. ತನ್ನೊಳಗಿನ ದೇವರ ಜೊತೆ ಆ ದೇವರೇ ವಿಶ್ವ ಹಾಗೂ ಸಮಾಜದ ರೂಪದಲ್ಲಿ ಜಂಗಮಲಿಂಗ ಸ್ವರೂಪಿಯಾಗಿದ್ದಾನೆ ಎಂಬುದನ್ನು ಪೂಜೆಯ ಮೂಲಕ ಭಕ್ತನಾದವನು ಅರಿತುಕೊ

ಈ ವಚನದಲ್ಲಿ ಅಂಬಿಗರ ಚೌಡಯ್ಯನವರು ಆಹಾರ ಕೊಡಬೇಕು' ಎಂಬುದನ್ನು ಹೇಳಿ ಆಹಾರವು 'ಸಾಮಾಜಿಕ ಕಾಳಜಿ' ಎಂಬ ಸ್ಫುರಿಸುತ್ತದೆ. 'ಆಹಾರವನಿಕ್ಕಿರೆ' ಎಂದರೆ ಸಾ ಕಾಳಜಿಯಿಂದ ಕಷ್ಟದಲ್ಲಿದ್ದವರಿಗೆ ಸಹಾಯ ಮಾಡಿ ಮನವಿ. ಹೀಗೆ ಕಷ್ಟದಲ್ಲಿದ್ದವರಿಗೆ ಸಹಾಯ ಮಾ ಜಂಗಮಲಿಂಗ ಪೂಜೆ. ಸಮಾಜ ಎಂಬ ದೇವ ಅದುವೇ ಸಮಾಜಸೇವೆ. 'ದೇಹಾರಕ್ಕೆ ಆಹಾರವೇ ಎಂದರೆ ದೇವಪೂಜೆಗೆ ಸಮಾಜಸೇವೆಯೇ ಸಮಾಜಸೇವೆಯೇ ನಮ್ಮನ್ನು ದೇವರ ಎತ್ತರಕ್ಕೆ ದೇವರ ಬಳಿ ತಲುಪಿಸುವ ಏಣಿ. ಇಂಥ ಸಮ ಭಾವಕ್ಕೆ ದಾಸೋಹಂಭಾವ ಎನ್ನುತ್ತಾರೆ. ಸಮ ಜಂಗಮಲಿಂಗದ ಪೂಜೆ ಮಾಡಬೇಕಾದರೆ, ಕಾಯಕದಲ್ಲಿ ನಿರತರಾಗಬೇಕು. ಕಾಯಕದಿಂದ ಬಂ ಒಂದು ಭಾಗವನ್ನು ದಾಸೋಹಕ್ಕಾಗಿ ಸಮಾಜಸೇವೆಗಾಗಿ ಬಳಸಬೇಕು. ಹೀಗೆ ಸಮಾಜ ಜಂಗಮಲಿಂಗ ಪೂಜೆ ಆಗುತ್ತದೆ.



ಬರಿ ಇಷ್ಟಲಿಂಗ ಪೂಜೆ ಮಾಡುತ್ತ ಸಮಾಜಸೇವೆ ಎಂಬ ಜಂಗಮಲಿಂಗ ಪೂಜೆ ಮಾಡದಿದ್ದರೆ ಆ ದೇವರು ಒಲಿಯುವುದಿಲ್ಲ ಎಂದ ಅಂಬಿಗರ ಚೌಡಯ್ಯನವರು ತಿಳಿಸುತ್ತಾರೆ.


● ರಂಜಾನ್ ದರ್ಗಾ

ರಸ್ತೆ ಸಾರಿಗೆ ಖಾಸಗೀಕರಣಕ್ಕೆ ಮುನ್ನುಡಿ

ಶ್ರೀಮಂತರ ಹಾಗೂ ಕಾರ್ಪೊರೇಟುಗಳ ಅಭಿವೃದ್ಧಿಯನ್ನೇ ತನ್ನ ಗುರಿಯಾಗಿಸಿರುವ ಮೋದಿ ಸರ್ಕಾರ ಈಗಾಗಲೇ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ರೆಕ್ಕೆಗಳನ್ನು ಕತ್ತರಿಸಿದೆ. ವನ್ಯಜೀವಿ ಅಭಯಾರಣ್ಯಗಳ ವಿಸ್ತೀರ್ಣವನ್ನು ಕಡಿಮೆ ಮಾಡಲು ಉಪಕ್ರಮಿಸಿದೆ. ಅರಣ್ಯ ಹಕ್ಕುಗಳ ಕಾಯ್ದೆಗೆ ತಿದ್ದುಪಡಿ ತರುತ್ತಿದೆ. ಈ ಮೂಲಕ ಕಾರ್ಪೊರೇಟು ಕಂಪನಿಗಳಿಂದ ಸಂಪನ್ಮೂಲ ಲೂಟಿಗೆ ಹಾದಿ ಸುಗಮ ಮಾಡಿಕೊಟ್ಟಿದೆ. ಇದೀಗ ಸರ್ಕಾರದ ಕಾಕದೃಷ್ಟಿ ಸುಮಾರು 50,000 ಕೋಟಿಯಷ್ಟು ವಾರ್ಷಿಕ ವಹಿವಾಟುಗಳಿರುವ ರಾಜ್ಯ ಸಾರಿಗೆ ಸಂಸ್ಥೆಗಳ ಮೇಲೆ ಬಿದ್ದಿದೆ. ಅದೀಗ ಇವುಗಳ ಖಾಸಗೀಕರಣಕ್ಕೆ ವೇದಿಕೆ ಸಿದ್ಧಪಡಿಸುತ್ತಿದೆ. ಆ ನಿಟ್ಟಿನಲ್ಲಿ 'ರಸ್ತೆ ಸಾರಿಗೆ ಮತ್ತು ಸುರಕ್ಷತಾ ನಿಯಮಗಳು 2014' ಎಂಬ ಹೆಸರಿನ ಕರಡು ವಿಧೇಯಕವೊಂದನ್ನು ತಯಾರಿಸಲಾಗಿದೆ. ರಾಜ್ಯ ಸಾರಿಗೆ ಸಂಸ್ಥೆಗಳ ಸಕಲ ಹಕ್ಕುಗಳು ಆಯಾ ರಾಜ್ಯ ಸರ್ಕಾರದ ಬಳಿ ಇರುವಾಗ ಇಲ್ಲಿ ಕೇಂದ್ರದ ಮಧ್ಯಪ್ರವೇಶ ಎಷ್ಟರ ಮಟ್ಟಿಗೆ ಸರಿಯೆಂದು ಪ್ರಶ್ನಿಸುವ ಕಾರ್ಮಿಕ ಯೂನಿಯನ್‌ಗಳು ಇನ್ನೂ ಹಲವಾರು ಅಪಾಯಗಳ ಬಗ್ಗೆ ಗಮನ ಸೆಳೆದಿವೆ.


ಈ ವಿಧೇಯಕ 1988ರ ಮೋಟಾರ್ ವಾಹನ ಕಾಯ್ದೆಗೆ ವಿರುದ್ಧವಾಗಿದೆ. ಅದರಲ್ಲಿ ಸ್ಪಷ್ಟವಾಗಿ ಹೇಳಿರುವಂತೆ ವಾಹನಗಳ ರೂಟು ಮತ್ತು ಪ್ರದೇಶಗಳ ಎಲ್ಲಾ ಹಕ್ಕುಗಳಿರುವುದು ರಾಜ್ಯ ಸಾರಿಗೆ ಸಂಸ್ಥೆಗಳಿಗೆ. ಅಷ್ಟು ಮಾತ್ರವಲ್ಲದೆ ಪರ್ಮಿಟ್ ಪಡೆದುಕೊಳ್ಳುವಲ್ಲಿಯೂ ಅವುಗಳಿಗೆ ಆದ್ಯತೆ ನೀಡಲಾಗಿದೆ. ನೂತನ ವಿಧೇಯಕ ಜಾರಿಗೊಂಡರೆ ಮೊದಲು ಟೆಂಡರ್ ಕರೆದು ಅತಿಹೆಚ್ಚು ಬಿಡ್ ಮಾಡುವವರಿಗೆ ರೂಟುಗಳನ್ನು ಗುತ್ತಿಗೆಗೆ ನೀಡುವ ಪ್ರಕ್ರಿಯೆ ಆರಂಭವಾಗಲಿದೆ. ಹೀಗೆ ಮಾಡುವುದರಿಂದ ಟಿಕೆಟು ದರಗಳು ಏರಲಿವೆ. ನೂತನ ವಿಧೇಯಕದಲ್ಲಿರುವ ಮತ್ತೊಂದು ಪ್ರಸ್ತಾಪವೆಂದರೆ ಆರು ಮತ್ತು ಅದಕ್ಕಿಂತ ಹೆಚ್ಚು ಪ್ರಯಾಣಿಕರನ್ನು ಸಾಗಿಸಬಲ್ಲ ಯಾವುದೇ ವಾಹನವನ್ನು ಸಾರ್ವಜನಿಕ ಸೇವಾ ವಾಹನವಾಗಿ ಗುರುತಿಸುವುದು. ಈ ಕ್ರಮ ಅನಾರೋಗ್ಯಕರ ಪೈಪೋಟಿಯನ್ನು ಹುಟ್ಟುಹಾಕಿ ದರ ಸಮರಕ್ಕೆ ಕಾರಣವಾಗಲಿದೆ. ಇದರೊಂದಿಗೆ ಈಗಾಗಲೆ ದೊಡ್ಡ ತಲೆನೋವಾಗಿ ಪರಿಣಮಿಸಿರುವ ವಾಹನ ದಟ್ಟಣೆಯ ಸಮಸ್ಯೆ ಇನ್ನಷ್ಟು ಬಿಗಡಾಯಿಸಲಿದೆ. ರಾಜ್ಯ ಸಾರಿಗೆ ಸಂಸ್ಥೆಗಳಿಗೆ ಸಾಮಾಜಿಕ ಜವಾಬ್ದಾರಿ ಇರುವುದರಿಂದ ಅವು ನಷ್ಟದ ರೂಟುಗಳಲ್ಲಿಯೂ ವಾಹನಗಳನ್ನು ಓಡಿಸುತ್ತಿವೆ; ವಿದ್ಯಾರ್ಥಿಗಳಿಗೆ, ಹಿರಿಯ ನಾಗರಿಕರಿಗೆ ರಿಯಾಯಿತಿ ನೀಡುತ್ತಿವೆ. ಆದರೆ ಕೇವಲ ಲಾಭದ ಲೆಕ್ಕಾಚಾರ ಮಾಡುವ ಖಾಸಗಿಯವರಿಗೆ ಪ್ರಯಾಣಿಕರ ಬಗ್ಗೆ ಯಾವುದೇ ಸಾಮಾಜಿಕ ಕಾಳಜಿ ಇರುವುದಿಲ್ಲ. ಅವರಿಗೆ ಲಾಭವೇ ಮುಖ್ಯ ಹೊರತು ಪ್ರಯಾಣಿಕರ ಸೌಲಭ್ಯವಲ್ಲ. ಹಾಗಾಗಿ ಪ್ರಯಾಣಿಕರ ಹಕ್ಕುಗಳಿಗೆ ಬಾಧೆಯಾಗಲಿದೆ.


ದೇಶದಲ್ಲಿಂದು ಒಟ್ಟು 53 ರಾಜ್ಯ ಸಾರಿಗೆ ಸಂಸ್ಥೆಗಳಿದ್ದು ಅವು ಸುಮಾರು 7.5 ಲಕ್ಷದಷ್ಟು ಜನರಿಗೆ ಉದ್ಯೋಗ ಒದಗಿಸುತ್ತಿವೆ. ಆದರೆ ಖಾಸಗೀಕರಣಕ್ಕೆ ಒತ್ತು ನೀಡುವ ನೂತನ ವಿಧೇಯಕದಿಂದಾಗಿ ನೌಕರಿಗಳ ಸಂಖ್ಯೆ ಇಳಿಮುಖವಾಗಲಿರುವುದರಲ್ಲಿ ಸಂಶಯವಿಲ್ಲ. ಸಾಲದ್ದಕ್ಕೆ ಗುತ್ತಿಗೆ ಆಧಾರದಲ್ಲಿ ನೌಕರರನ್ನು ನೇಮಿಸಿಕೊಳ್ಳುವ ಖಾಸಗಿ ಸಂಸ್ಥೆಗಳು ಯಾವುದೇ ರೀತಿಯ ಉದ್ಯೋಗ ಭದ್ರತೆ ಮತ್ತು ಸಾಮಾಜಿಕ ಭದ್ರತೆಗಳನ್ನು ಒದಗಿಸುವುದಿಲ್ಲವಾದ್ದರಿಂದ ಕಾರ್ಮಿಕರ ಬದುಕು ಇನ್ನಷ್ಟು ಅತಂತ್ರವಾಗಲಿದೆ.



ಇದ್ಯಾವ ಮಾದರಿ?

ಚುನಾವಣಾ ಅಫಿಡವಿತ್‌ಗಳೇ ಸ್ಪಷ್ಟಪಡಿಸುತ್ತಿರುವಂತೆ ಮೋದಿ ಸರ್ಕಾರದ ನೂತನ ಮಂತ್ರಿಮಂಡಲದ ಶೇಕಡಾ





30ರಷ್ಟು ಮಂತ್ರಿಗಳು ಕ್ರಿಮಿನಲ್ ಎದುರಿಸುತ್ತಿರುವವರು! ಇವರಲ್ಲೊಬ್ಬನಾದ ಆರ್.ಎಸ್.ಕಥೇರಿಯಾ ಎಂಬಾತ ಮಾನವ ಸಂ ಅಭಿವೃದ್ಧಿ ಖಾತೆಯಲ್ಲಿ ಸಹಾಯಕ ಸ ಸೇರ್ಪಡೆಗೊಂಡಿದ್ದಾನೆ. ಈತನ ವಿರುದ್ಧ ಬರೋ ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ. ಇವುಗಳ ಸದ್ಯದಲ್ಲೇ ವಿಚಾರಣೆಗೆ ಬರಲಿದ್ದು ಅದು ವಿಶ್ವವಿದ್ಯಾನಿಲಯದಲ್ಲಿ ನೌಕರಿ ಗಿಟ್ಟಿಸುವ ಸಲುವ ಮತ್ತು ಎಂಎ ಪರೀಕ್ಷೆಗಳ ಸುಳ್ಳು ಅಂಕಪಟ್ಟಿ ಸಂಬಂಧಿಸಿದ ಫೋರ್ಜರಿ ಕೇಸು! ಅದಾ ಫಾರಿನ್ ಯೂನಿವರ್ಸಿಟಿಯ ಅದೆಂಥದೋ ಸರ್ಟಿ ಪದವಿಪತ್ರವೆಂದು ಕರೆಯುವ ಹಿರಿಯ ಒಪ್ಪುವಂಥಾ ಜೂನಿಯರ್ ಅಂದರೆ ಇವನೇ

ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಮೃತ್ಯುಂಜಯ ಮಾರ್ಕಂಡೇಯ

ದೇಹದಲ್ಲಿ ಮನಸ್ಸಿನ ಸ್ಥಾನವನ್ನು ಭೌತಿಕವಾಗಿ ...ಸಲು ಸಾಧ್ಯವಿಲ್ಲ. ಆದರೂ ಡಾ.ಸಿ.ಎಸ್.ಹನು...ಪ್ಪನವರ "ಮಿದುಳತ್ವ" ಅಥವಾ ಬ್ರೈನಿಸಂ ಪ್ರಕಾರ ... ಭಾವನೆ, ಆಲೋಚನೆ ಎಲ್ಲವನ್ನೂ ಮಾಡುವ ...ಳಿನ ಕಾರ್ಯಾಂಗವೇ ಮನಸ್ಸು. ಹಾಗೆಯೇ ...ಮಂತಪ್ಪನವರು ತಮ್ಮ ವಿದ್ವತ್ಪೂರ್ಣವಾದ ಮಿದುಳತ್ವ ... ಗ್ರಂಥದಲ್ಲಿ ಮಾನವಶಾಸ್ತ್ರ ಮತ್ತು ಧಾರ್ಮಿಕ ...ನೆಗಳ ಇತಿಹಾಸವನ್ನು ಮಿದುಳಿನ ಕ್ರಿಯೆ ನೀಡಿದ ...ಂಶವಾಗಿ ಗುರುತಿಸುತ್ತಾರೆ. ಮಿದುಳತ್ವ ಎಂಬ ...ನಿಕ ಮತ್ತು ವೈಚಾರಿಕ ಚಿಂತನೆಯ ಆಯಾಮವನ್ನು ...ಟ್ಟಿರುವ ಹನುಮಂತಪ್ಪನವರ ದೃಷ್ಟಿಯಂತೆ ಮಿದುಳಿನ ...ತ್ಮಕ ಸಾಮರ್ಥ್ಯಗಳನ್ನು ತರಬೇತುಗೊಳಿಸುವುದರಿಂದ ...ಲ್ಲಿ ವಿಕಾಸಮುಖವಾಗಿ ವ್ಯಕ್ತಿಗತವಾದ ಪ್ರಗತಿಯನ್ನೂ ... ಸಮೂಹಕ್ಕೆ ಕಾಣ್ಕೆಗಳನ್ನೂ ನೀಡಬಲ್ಲದಾಗಿರುತ್ತದೆ.

...ರ್ಮ, ಸಂಪ್ರದಾಯ, ಪವಾಡ ಸದೃಶ ಪೌರಾಣಿಕ ...ಗಳು, ದೇವಮಾನವತ್ವ ಅಥವಾ ಪ್ರವಾದಿತ್ವ ...ಗಳನ್ನು ಬಿಗುವಾಗಿ ನಂಬಿರುವವರಾಗಲಿ ಅಥವಾ ...ಳ ಬಗ್ಗೆ ಪ್ರಶ್ನೆಗಳನ್ನು ಹೊಂದಿರುವಂತಹ ಪ್ರಗತಿಪರ ...ರಿಗಾಗಲಿ ಸಾಕಷ್ಟು ಗ್ರಾಸ ಒದಗಿಸಬಹುದಾದ ಗ್ರಂಥ ...ಳತ್ವ". ಎಲ್ಲಾ ಧರ್ಮದ ಚಿಂತನೆಗಳ ಮೂಲವನ್ನೂ ...ಮಾನವ ಶಾಸ್ತ್ರೀಯ ವಿಚಾರಗಳ ಮೂಲವನ್ನೂ ...ನ ಮೂಲಕ ಪರಿಶೀಲಿಸುವ ಲೇಖಕರು ...ದ್ದಿಯ ಪೌರಾಣಿಕ ದೃಷ್ಟಿಗಳಿಗೆ ಹೊಸತೆಂಬಂತೆ ...ವಾಗುತ್ತಾರೆ.

...ರಲಿ, ನಮ್ಮ ಅರ್ಥವಂತಿಕೆಯ ಅನುಕೂಲಕ್ಕಾಗಿ ...ಳತ್ವದ ಚಿಂತನೆಗಳು ಎನ್ನುವ ಬದಲು ...ಯಲ್ಲಿರುವ ಮನಸ್ಸು ಎಂಬ ಪದವನ್ನೇ ...ಣ.

...ನಸ್ಸು ಎನ್ನುವುದು ಶೂನ್ಯರೂಪದಲ್ಲಿರುವ ...ೂ ಸದಾ ಕ್ರಿಯಾತ್ಮಕವಾಗಿರುವ ಅದರ ಮನೆ ...ಷ್ಯನ ಭೌತಿಕ ಶರೀರ. ಶರೀರಕ್ಕೆ ಏನೇ ...ತೆಯಾದರೂ ಮನಸ್ಸು ಹೌಹಾರುತ್ತದೆ. ಇನ್ನು ...ರೀರವು ತನ್ನ ಸಂಪೂರ್ಣ ಅಂಗಾಂಗಗಳ ...ನ್ನು ನಿಲ್ಲಿಸುತ್ತದೆ, ಅದರಿಂದಾಗಿ ಸ್ತಬ್ಧವಾಗುತ್ತದೆ ... ಅದು ಸಾವು ಎಂದು ರೂಢಿಗತವಾಗಿ ...ತ್ತೇವೆ. ಈ ಸಾವು ಎಂಬುದು ಮನಸ್ಸಿಗೆ ... ಹೆದರಿಸುವಂತಹ ಅವಸ್ಥೆ. ಮನುಕುಲದ ...ಗೆ ಈ ದೀರ್ಘಕಾಲದಲ್ಲಿ ಸಾವು ಎಂಬ ...ಉಂಟುಮಾಡಿರುವಷ್ಟು ತಲ್ಲಣಗಳು ಬಹುಶಃ ...ದೂ ಮಾಡಿಲ್ಲ.

...ವೆಂಬುದು ಬೇಕಾಗಿರಲಿ ಬೇಡದೇ ಇರಲಿ ... ತಪ್ಪಿಸುವಂತಿಲ್ಲ. ಅದು ಪ್ರಕೃತಿ. ಪ್ರಕೃತಿಯಲ್ಲಿ ...ಮತ್ತು ನಾಶ ಅಥವಾ ಜನನ ಮತ್ತು ಮರಣ ...ದೇ ಪೂರ್ವಾಗ್ರಹಗಳಿಲ್ಲದೇ, ನಿಷ್ಪಕ್ಷಪಾತವಾಗಿ ...ಕೊಂಡು ಹೋಗುತ್ತಿರುತ್ತದೆ. ಸಾವಿನ ಜೊತೆಗೆ ... ಸಂಪೂರ್ಣ ನಿಷ್ಕ್ರಿಯವಾಗುವುದು ಹಾಗೂ ...ಸ್ಸು ಸಂಪೂರ್ಣವಾಗಿ ಸ್ತಬ್ಧವಾಗುವುದು. ...ಯೇ ಸಾವಿನ ಸ್ಥಿತಿಯನ್ನು ಕತ್ತಲೆಗೆ ಸಂಕೇತಿಸುತ್ತಾ ...ಎಂದರೆ ಕಪ್ಪು ಅಥವಾ ಕತ್ತಲೆ ಎಂದೇ ಕರೆಯುತ್ತಾರೆ. ...ದ ಅಂದರೆ ಇದೇ.

...ತ್ತಲೆಯ ಭಯವಿರುವವರಿಗೆ ಈ ಸಾವೂ ...ಕವೇ! ಸಾಮಾನ್ಯ ಜನರಿಗೆಲ್ಲಾ ಈ ಸಾವೆಂಬುದು ...ಳ್ಳಬೇಕಾಗಿರುವಂತಹ ಅವಸ್ಥೆಯೇ. ಎಂದೋ ... ದಿನ ಬಂದೇ ಬರುವ ಸಾವೆಂಬುದನ್ನು ಪ್ರಜ್ಞಾ...ಕವಾಗಿ ಸ್ವೀಕರಿಸುವ ಸ್ಥಿತಿಯು ಸಾಮಾನ್ಯದ್ದೇನಲ್ಲ. ...ಪ್ರಕೃತಿಯಲ್ಲಿ, ಪ್ರಕೃತಿಯ ಭಾಗವಾಗಿರುವ ಎಲ್ಲರಿಗೂ ... ಸಾವಿನ ಕತ್ತಲಲ್ಲಿ ಕಣ್ಣು ಬಿಡುವ ಅಥವಾ ಸಾವನ್ನು ...ವ ಹಾಗೂ ಸಾವನ್ನು ರೂಪಾಂತರಗೊಳಿಸುವ ತಂತ್ರವು ...ದ್ಧಾಂತದಲ್ಲಿದೆ.

...ಮೃತ್ಯುಂಜಯಾ ರುದ್ರಾಯ ನೀಲಕಂಠಾಯ ಶಂಭವೇ, ...ಶಾಯ ಶರ್ವಾಯ ಮಹಾದೇವಾಯ" ಎಂದು ... ಪೂಜಿಸುವರು. ಮೃತ್ಯುಂಜಯ ಎಂದರೆ ಮೃತ್ಯುವನ್ನು ...ಪ. ಅಂದರೆ ಸಾವನ್ನು ಗೆದ್ದು ಎಂದಿಗೂ ಸಾಯದೇ ...ಯೇ ಇರುವಂತಹ ಚಿರಂಜೀವಿಯೇ?

...ರಾಣಗಳಲ್ಲಿನ ರೂಪಕಗಳು ಹಾಗೆಯೇ ತಿಳಿಸಿ...ವೆ. ಸಹಸ್ರಾರು ವರ್ಷಗಳ ಕೋಲಾಹಲವನ್ನು ...ಸುತ್ತವೆ. ಆದರೆ ಸಾವಿನ ಭಯವನ್ನು ಗೆದ್ದವನ್ಯಾರಾ... ಅವನು ಮೃತ್ಯುಂಜಯ. ಮೃತ್ಯುವೆಂಬುದು ...ಲ್ಲಿಕ ಸಮಾನವಷ್ಟೆ ಆದರೆ ಆ ಅವಸ್ಥೆಯ ಭಯವನ್ನೇ ...ಗೆದ್ದವನು ಅದನ್ನು ದಾಟಿದಂತೆ. ಪಕ್ವವಾದ

ಮನಸ್ಥಿತಿಗಳು ಸಾವಿನ ಭಯವನ್ನು ಹೊಂದುವುದಿಲ್ಲ. ಜೀವನ ಸಾರವನ್ನು ಅರಿತು ಆಸ್ವಾದಿಸಿರುವ ಜೀವಗಳು ಸಾವನ್ನು ದೂಷಿಸುವುದಿಲ್ಲ. ಅಸ್ತಿತ್ವದೊಳಗಿನ ಘಾರ್ಮಿಕ ಗಂಧವನ್ನು ಆಘ್ರಾಣಿಸುತ್ತಿರುವವರಿಗೆ ಮೃತ್ಯುವೊಂದು ಎರಗಿ ಬರುತ್ತಿರುವ ಶತ್ರುವಿನಂತೆ ಕಾಣುವುದಿಲ್ಲ.

"ತ್ರ್ಯಂಬಕಂ ಯಜಾಮಹೇ ಸುಗಂಧಿಂ ಪುಷ್ಟಿವರ್ಧನಂ ಉರ್ವಾರುಕಮಿವ ಬಂಧನಾತ್ ಮೃತ್ಯೋರ್ ಮುಕ್ಷೀಯಮಾಮೃತಾತ್"

ಇದು ಮಹಾಮೃತ್ಯುಂಜಯ ಮಂತ್ರ.

ಮೂರು ಕಣ್ಣುಗಳುಳ್ಳವನ ಆರಾಧಿಸುತ್ತೇನೆ. ಅವನು ಸುಗಂಧನೂ ಪುಷ್ಟಿಯನ್ನು ವೃದ್ಧಿಸುವವನೂ ಆಗಿದ್ದು, ಸೌತೇಕಾಯಿಯು ತನ್ನ ಬಳ್ಳಿಯಿಂದ ಬಂಧನ ಕಳಚಿಕೊಳ್ಳುವಂತೆ ಅಮೃತತ್ವದಿಂದಲ್ಲದೇ ಮೃತ್ಯುವಿನಿಂದ ನನ್ನನ್ನು ಬಿಡಿಸಲಿ.

ಈ ಮಂತ್ರದ ದೃಷ್ಟಾರನೆಂದರೆ ಋಷಿ ಮಾರ್ಕಂಡೇಯ.

ಪ್ರಜಾಪತಿ ದಕ್ಷನಿಂದ ಶಾಪಕ್ಕೆ ಒಳಗಾಗಿದ್ದ ಚಂದ್ರ. ಯಾರಿಗೂ ತಿಳಿಯದಿದ್ದ ಈ ಮಹಾಮೃತ್ಯುಂಜಯ ಮಂತ್ರದ ರಹಸ್ಯವನ್ನು ಮಾರ್ಕಂಡೇಯ ಮುನಿಯು ದಕ್ಷನ ಮಗಳಾದ ಸತಿಗೆ ಹೇಳಿಕೊಟ್ಟ. ದಕ್ಷಬ್ರಹ್ಮನ ಶಾಪಕ್ಕೆ ಒಳಗಾಗಿ ಕ್ಷೀಣವಾಗುತ್ತಾ ಮರಣಿಸಲಿದ್ದ ಚಂದ್ರನ ತನ್ನ ಶಿರದ ಮೇಲೆ ಧರಿಸಿಕೊಂಡ ಶಿವ ಅವನನ್ನು ಉಳಿಸಿದ ಎನ್ನುತ್ತದೆ



ಶಿವಪುರಾಣ ಮತ್ತು ಇತರೆ ಪುರಾಣಗಳು. ಇದನ್ನು ರುದ್ರಮಂತ್ರವೆಂದೂ, ಮೃತ ಸಂಜೀವಿನಿ ಮಂತ್ರವೆಂದೂ ಕರೆಯುತ್ತಾರೆ. ಅಸುರರ ಗುರುವಾದ ಶುಕ್ರಾಚಾರ್ಯನು ತನ್ನ ತಪಸ್ಸಿನ ನಂತರ ಶಿವನಿಂದಲೇ ಈ ಮಂತ್ರವನ್ನು ಪಡೆದು, ಅದನ್ನು ಋಷಿ ಕೋಹಲನೆಂಬುವನಿಗೆ ಬೋಧಿಸುತ್ತಾನೆ. ತದನಂತರ ಅದು ಋಷಿ ದಧೀಚಿಗೆ ಕೂಡ ಬೋಧನೆಯಾಗುತ್ತದೆ. ಪುರಾಣಗಳಲ್ಲಿ ಈ ಮಂತ್ರದ ಸುತ್ತ ಜರುಗುವ ಕಥೆಗಳಿದ್ದರೆ, ಮಂತ್ರದ ಉಲ್ಲೇಖವನ್ನು ಋಗ್ವೇದ (7/59.12), ಯಜುರ್ವೇದ (3.60) ಮತ್ತು ಅಥರ್ವವೇದ (14.1.17)ಗಳಲ್ಲಿ ಕಾಣಬಹುದಾಗಿದೆ.

ಚಾರಿತ್ರಿಕವಾಗಿ ಅಥವಾ ಸಾಂಸ್ಕೃತಿಕವಾಗಿ ಶಿವನನ್ನು ತಿಳಿದುಕೊಳ್ಳುವುದಕ್ಕಿಂತ, ಶೈವ ಸಿದ್ಧಾಂತವನ್ನು ಅರಿತುಕೊಳ್ಳುವ ಮಾರ್ಗದಲ್ಲಿ ಈ ಮಂತ್ರದ ಅರ್ಥವಾಗಲಿ ಅಥವಾ ಈ ಮಂತ್ರಮಾರ್ಗದಲ್ಲಿ ನಡೆಯುವಾಗ ದೊರಕುವಂತಹ ಒಳನೋಟಗಳಾಗಲಿ ಬಹಳ ಮುಖ್ಯವೆನಿಸುತ್ತದೆ. ಸಾವಿನ ಭಯವನ್ನು ಜೀವನದರ್ಶನದಂತೆ ರೂಪಾಂತರಗೊಳಿಸು ವುದನ್ನು ಅಮರತ್ವವನ್ನಾಗಿ ಕಾಣುವ ತತ್ವವಿಲ್ಲಿ ಲಭ್ಯವಾಗುತ್ತದೆ.

ಭಕ್ತ ಮಾರ್ಕಂಡೇಯ

ಕಾಲಾಂತಕ ಅಥವಾ ಯಮಾಂತಕನೆಂದು ಕರೆಯಲ್ಪಡುವ ಶಿವನ ಅಮರಪದದ ಸೈದ್ಧಾಂತಿಕ ಸಾರವನ್ನು ತಿಳಿದುಕೊಳ್ಳಲು ಮಾರ್ಕಂಡೇಯನ ಕಥೆಯು ನೆರವಾಗುತ್ತದೆ. ನೇಕಾರ ಕಸುಬಿನ ಪದ್ಮಶಾಲಿಗಳು ಮಾರ್ಕಂಡೇಯನ ಸ್ಥಾನವನ್ನು ತಮ್ಮ ಕುಲಾವಳಿಯಲ್ಲಿ ಗುರುತಿಸಿಕೊಳ್ಳುತ್ತಾರೆ.

ಈಗಿನ ಹಿಮಾಚಲ್ ಪ್ರದೇಶ್‌ನ ಬಿಲಾಸ್‌ಪುರ್ ಮಾರ್ಕಂಡೇಯನ ಜನ್ಮಸ್ಥಳವೆಂದು ಹೇಳಲಾಗುತ್ತದೆ. ಭೃಗು ಮಹರ್ಷಿಯ ಗೋತ್ರದವನಾದ ಮೃಕಂಡು ಋಷಿ ಮತ್ತು ಮರುದ್ವತಿಯರಿಗೆ ಮಕ್ಕಳಿಲ್ಲದೇ ಶಿವನನ್ನು ಕುರಿತು ತಪಸ್ಸು ಮಾಡಿದಾಗ ಶಿವನು ಅವರಿಗೆ ಗೋಚರನಾಗಿ ಬಹುಕಾಲ ಬದುಕುವ ಆದರೆ ಮೂರ್ಖರಾದ ನೂರು ಮಕ್ಕಳು ಬೇಕೋ ಅಥವಾ ಕುಶಾಗ್ರಮತಿಯಾದ, ಬುದ್ಧಿವಂತನಾದ ಆದರೆ ಹದಿನಾರು ವರ್ಷಗಳಷ್ಟೇ ಅಲ್ಪಾಯುವಾದ ಮಗ ಬೇಕೋ ಎಂದು ಕೇಳಿದಾಗ, ಮೃಕಂಡು ಮುನಿಯು ಅಲ್ಪಾಯುವಾದರೂ ಬುದ್ಧಿವಂತ ಮಗನನ್ನೇ ಕೇಳಿ ಪಡೆಯುತ್ತಾನೆ. ಹಾಗೆ ಹುಟ್ಟಿದ ಮಗುವಾದ ಮಾರ್ಕಂಡೇಯ ವೇದಶಾಸ್ತ್ರಗಳನ್ನು ಕಲಿತು ಪಾರಂಗತನಾಗುತ್ತಾನೆ. ಆತ ಹದಿನಾರನೇ ವಯಸ್ಸಿಗೆ ಬರುವಾಗ ದಿನೇದಿನೇ ತನ್ನ ತಂದೆಯು ದುಃಖದಿಂದ ಕುಗ್ಗುತ್ತಿರುವುದನ್ನು ಗಮನಿಸಿ ಕಾರಣ ಕೇಳುತ್ತಾನೆ. ಆಗ ಮೃಕಂಡು ಅವನ ಆಯಸ್ಸು ಹದಿನಾರೆಂದೂ ಈ ವರ್ಷವೇ ಆತ ಮರಣಿಸುವನೆಂದೂ ತಿಳಿಸುತ್ತಾನೆ. ಪುರಾಣಗಳಲ್ಲಿ ತಿಳಿದಿರುವ ಹಾಗೆ ಶಿವನನ್ನು ಒಲಿಸುವೆನೆಂದು ಸಂಕಲ್ಪಿಸಿಕೊಳ್ಳುವ ಮಾರ್ಕಂಡೇಯ ಶಿವಾರಾಧನೆಯಲ್ಲಿ ತೊಡಗುತ್ತಾನೆ. ಅವನ ಆಯಸ್ಸು ತೀರಿದಾಗ ತನ್ನ ವಾಹನ ಕೋಣ ಮತ್ತು ಪಾಶದ ಸಮೇತ ಸ್ಥಳಕ್ಕೆ ಬರುವ ಯಮರಾಯನು ಹುಡುಗನ ಪ್ರಾಣವನ್ನು ತನ್ನ ವಶಕ್ಕೆ ತೆಗೆದುಕೊಳ್ಳಲು ಯತ್ನಿಸುತ್ತಾನೆ. ಆದರೆ ಮಾರ್ಕಂಡೇಯ ಶಿವಲಿಂಗವನ್ನು ಮಗುವು ತಾಯಿಯನ್ನು ತಬ್ಬಿ ಹಿಡಿಯುವಂತೆ ಹಿಡಿಯುತ್ತಾನೆ. ಆಗ ಧಾವಿಸಿ ಬರುವ ಶಿವನು ತನ್ನ ಬಾಲ ಭಕ್ತ ಮಾರ್ಕಂಡೇಯನ ಜೀವವನ್ನು ತೆಗೆಯಲು ನಿಂತಿರುವ ಯಮನ ಜೀವವನ್ನೇ ತೆಗೆದು ಬಿಡುತ್ತಾನೆ. ಮೃತ್ಯುದೇವತೆಯಾದ ಯಮನ ಎದೆಗೆ ತನ್ನ ತ್ರಿಶೂಲವನ್ನು ಇಟ್ಟು ತಿವಿದು ಕೊಂದು, ಯಮನಿಂದ ಮಗುವನ್ನು ರಕ್ಷಿಸಿ ಚಿರಂಜೀವಿಯಾಗುವಂತೆ ವರ ನೀಡಿ ಮನೆಗೆ ಕಳುಹಿಸುತ್ತಾನೆ.

ಮೃತ್ಯುದೇವತೆಯಾದ ಯಮನೇ ಮೃತ್ಯುವಶನಾದ ಮೇಲೆ ಲೋಕದಲ್ಲಿ ಹಾಹಾಕಾರವೇಳುತ್ತದೆ. ಇಂದ್ರ ಮೊದಲಾದ ದೇವತೆಗಳು ಬಂದು, ಹುಟ್ಟಿನ ಪ್ರಾರಬ್ಧದ ನಂತರ ಸಾವಿಲ್ಲದೇ ಹೋದರೆ ಜೀವನ ಚಕ್ರ ಅಸಮತೋಲನ ಹೊಂದುತ್ತದೆ ಎಂದು ಬೇಡಿಕೊಂಡಾಗ ಶಿವನು ಯಮನಿಗೆ ಜೀವದಾನ ಮಾಡುತ್ತಾನೆ. ಮೃಕಂಡು ಮುನಿ ಮತ್ತು ಮರುದ್ವತಿಯರು ಆನಂದಿಸುತ್ತಾರೆ. ಎಲ್ಲಾ ಸರಿಹೋಗುತ್ತದೆ. ಅವನು ಚಿರಂಜೀವಿಯಾಗಿ ಗ್ರಂಥಗಳನ್ನು ರಚಿಸುತ್ತಾ ಅಮರನಾಗುತ್ತಾನೆ. ಅಲ್ಲಿಗೆ ಶುಭಂ!!

ಮಾರ್ಕಂಡೇಯ ಪುರಾಣ ಉತ್ತರಕಾಶಿ ಜಿಲ್ಲೆಯ ಉತ್ತರಾಖಾಂಡ್‌ನ ಯಮುನೋತ್ರಿ ದೇವಾಲಯದ ಬಳಿ ರಚಿಸಿದನೆಂದು ಹೇಳಲಾಗುತ್ತದೆ. ಹಿಮಾಚಲ್ ಪ್ರದೇಶ್‌ನ ಬಿಲಾಸ್‌ಪುರ್ (ಭಗುಸ್ ಮತ್ತು ಬ್ರಹ್ಮಪುಕರ್ ಮಾರ್ಗ)ನಲ್ಲಿ



ಮಾರ್ಕಂಡೇಯ್ ಎಂಬ ಸ್ಥಳವೇ ಇದೆ. ಇದೇ ಆತನ ಜನ್ಮಸ್ಥಾನವೆಂದು ಗುರುತಿಸಲ್ಪಟ್ಟಿದ್ದು, ಆತ ಸಾವನ್ನು ಗೆದ್ದ ದಿನವನ್ನು ಬೈಸಾಖಿ ಎಂದು ಆಚರಿಸುತ್ತಾರೆ. ಶಿವನನ್ನು ಸ್ತುತಿಸಿ, ಮೆಚ್ಚಿಸಿ ಸಾವನ್ನು ಗೆದ್ದ ಇದೇ ಮಾರ್ಕಂಡೇಯ ಭಾಗವತ ಪುರಾಣದಲ್ಲಿ ನಾರಾಯಣನನ್ನು ಸ್ತುತಿಸಿ 'ಮಾಯೆ'ಯ ಲೀಲೆಯನ್ನು ಕಾಣುವ ಇಚ್ಛೆಯನ್ನು ವ್ಯಕ್ತಪಡಿಸುತ್ತಾನೆ. ಆಗ ನಾರಾಯಣ ನೀರಿನ ಮೇಲೆ ತೇಲುವ ಎಲೆಯ ಮೇಲೆ ಮಗುವಿನಂತೆ ಆತನಿಗೆ ದರ್ಶನ ಕೊಡುತ್ತಾನೆ. ಅದೇ ರೀತಿಯಲ್ಲಿ ಶಾಕ್ತ ಪಂಗಡಕ್ಕೆ ಸೇರುವಂತಹ ದೇವಿ ಮಹಾತ್ಮೆಯನ್ನೂ ಆತ ರಚಿಸುತ್ತಾನೆ. ಹೀಗೆ ಮಾರ್ಕಂಡೇಯ ಶೈವ, ವೈಷ್ಣವ ಮತ್ತು ಶಾಕ್ತ ಮೂರರಲ್ಲಿಯೂ ತನ್ನ ಸೈದ್ಧಾಂತಿಕ ಭಕ್ತಿಯನ್ನು ಪ್ರದರ್ಶಿಸುತ್ತಾನೆ.

ಇರಲಿ, ಮೃಕಂಡು ದಂಪತಿಗಳಿಗೆ ದಡ್ಡ ಮಕ್ಕಳು ಬೇಕೋ, ಬುದ್ಧಿವಂತನಾದ ಅಲ್ಪಾಯು ಬೇಕೋ ಎಂದು ಕೇಳುವ ಶಿವನು ದಡ್ಡನೋ ಬುದ್ಧಿವಂತನೋ, ತಾನೇ ಅಲ್ಪಾಯುವಿನ ಮಗನನ್ನು ನೀಡಿ ಯಮನೆಂಬ ಮೃತ್ಯು ದೇವತೆಯು ಬಂದಾಗ ಅವನನ್ನೇ ಕೊಲ್ಲುವ ಶಿವನು ಎಂಥಾ ಮನಸ್ಥಿತಿಯವನು ಎಂದೆಲ್ಲಾ ಯೋಚಿಸುವ ಅಗತ್ಯವಿಲ್ಲ.

ಏಕೆಂದರೆ ಸಂಕೇತ ಮತ್ತು ರೂಪಕಗಳಲ್ಲಿ ಕಥೆಗಳು ಅನಾವರಣಗೊಳ್ಳುವಾಗ ಶಿವ ತತ್ವವು ಇಲ್ಲಿ ಶಿವನೆಂಬ ಪ್ರತಿಮೆಯಾಗಿ ನಿಲ್ಲುತ್ತಾನೆ. ಎಲ್ಲರೂ ಹೋಗುವ ದಾರಿಯಲ್ಲಿ ಹೋಗುವ ಮಂದಮತಿಗಳು ಅತ್ಯಂತ ಸುರಕ್ಷಿತವಲಯದಲ್ಲಿದ್ದು ಎಲ್ಲರಂತೆ ಚೆನ್ನಾಗಿ ಬದುಕುತ್ತಾರೆ, ಬುದ್ಧಿವಂತರಾಗಿ ಭಿನ್ನ ಮಾರ್ಗ ಹಿಡಿಯುವ ಚಿಂತಕರು ಮತ್ತು ಸಾಧಕರು ಅಲ್ಪಾಯುಗಳಾಗುತ್ತಾರೆ. ಏಕೆಂದರೆ ಲೋಕವು ಅವರಂತೆ ವರ್ತಿಸದ ಆ ಬುದ್ಧಿವಂತರನ್ನು ಬಾಳಗೊಡುವುದಿಲ್ಲ. ಬಸವನಂತೆ, ಯೇಸುವಂತೆ ಸಾಯಬೇಕಾಗುತ್ತದೆ. ಹೀಗೆ ನಾನಾರೀತಿಗಳಲ್ಲಿ ಈ ಪುರಾಣದ ಕಥೆಗಳ ಒಗಟುಗಳನ್ನು ಬಿಡಿಸಲು ಯತ್ನಿಸಬಹುದು.

ಸಾವನ್ನು ಭಯವಿಲ್ಲದೇ ನೋಡುವವನು ಅಥವಾ ಸಾವಿನ ಭಯವನ್ನು ಗೆದ್ದವನು ಸಾವನ್ನು ದಾಟಿದಂತೆ. ಏಕೆಂದರೆ ಅವನು ಅದಕ್ಕೆ ಹೆದರಿ ಶರಣಾಗುವುದೂ ಇಲ್ಲ, ಭಯದಿಂದ ಅಥವಾ ಧೈರ್ಯದಿಂದ ಅದರ ವಿರುದ್ಧ ಹೋರಾಡುತ್ತಾ ಅದಕ್ಕೆ ಬಲಿಯಾಗುವುದೂ ಇಲ್ಲ. ತನ್ನ ಜೀವಿತವನ್ನು ಸಹಜವಾಗಿಯೇ ಸಾವಿನ ಮೂಲಕವೂ ಮುಂದುವರಿಸುವಂತೆ ದೃಷ್ಟಿಸುತ್ತಾನೆ. ಇಂತಹ ದೃಷ್ಟಿಯನ್ನು ಹೊಂದಿರುವವನೇ ಚಿರಂಜೀವಿಯಾಗುತ್ತಾನೆ. ಶಿಲುಬೆಯ ಮೇಲೆ ಸಾವನ್ನು ಧೈರ್ಯದಿಂದ ಎದುರಿಸಿದ ಯೇಸುವೂ ಮೃತ್ಯುಂಜಯನೆನಿಸುತ್ತಾನೆ. ಅದನ್ನೇ ಹಿಂದೂ ಪುರಾಣದ ಅಶ್ವತ್ಥಾಮ, ಹನುಮಂತ, ಮಾರ್ಕಂಡೇಯರ ಚಿರಂಜೀವಿ ಕಥೆಗಳಂತೆ ಯೇಸುವಿನ ಪುನರುತ್ಥಾನದ ಕಥೆಯನ್ನಾಗಿಸಿದ್ದಾರೆ ಎಂದೂ ಅರ್ಥೈಸಬಹುದು.

ಪ್ರಕೃತಿ ಸಹಜವಾದ ಸಾವನ್ನು ಮೀರುವ ಶಿವತತ್ವವು ಶಿವನೆಂಬ ಪ್ರತಿಮೆಯನ್ನು ಅಥವಾ ಚೈತನ್ಯವನ್ನು ಪುರುಷನೆಂದು ಕರೆದರೆ, ಆ ಪುರುಷ ಪ್ರಕೃತಿಯ ನಿಯಮವಾದ ಮೃತ್ಯುವನ್ನು ಮೀರಿ, ಅದರ ಆವರಣದಿಂದ ತಪ್ಪಿಸಿಕೊಂಡು ಹೋಗಲು ಯತ್ನಿಸುತ್ತದೆ.

ಆದರೆ ಶಿವನ ದಾರಿ ಮಿಲನದ ದಾರಿ. ಸೇರುವ ದಾರಿ. ಅದಕ್ಕೇ ಯೋಗದ ದಾರಿಯೆಂದೂ ಹೇಳುವುದು. ಅದೇರೀತಿ ಬ್ರಹ್ಮನೂ ಕೂಡ ಪ್ರಕೃತಿಯನ್ನು ತನ್ನ ಅಧೀನದಲ್ಲಿಟ್ಟುಕೊಳ್ಳಲು ಯತ್ನಿಸಿದ. ಆದರೆ ಅದು ಭೋಗದ ದಾರಿಯಾಗಿತ್ತು. ಈ ಬ್ರಹ್ಮಮಾರ್ಗ ಮತ್ತು ಶೈವಮಾರ್ಗಗಳೆರಡೂ ಭಿನ್ನ. ಬಹಳ ಕುತೂಹಲಕರ ವಾದದ್ದೂ ಕೂಡ. ಮುಂದೆ ನೋಡೋಣ.

ಡಿರೈಲ್ ಆದ ಡಿವಿ ಎಕ್ಸ್‌ಪ್ರೆ

ಹೊಗಳಿಕೆ ತೆಗಳಿಕೆ

ಮಾಜಿ ಮುಖ್ಯಮಂತ್ರಿ ಡಿವಿಯವರಿಗೆ ಯಾಕೋ ಇದೀಗ ಶಾಕ್ ಮೇಲೆ ಶಾಕ್. ಮೈತ್ರಿಯಾ ಪ್ರಕರಣದಿಂದ ಹಿಡಿದು ಆಸ್ತಿ ಹೆಚ್ಚಳ ವಿವಾದದವರೆಗೆ ಹಲವಾರು ವಿಚಾರಗಳು ಅವರನ್ನು ಕಾಡಿದ್ದವು. ಅದರ ಮುಂದುವರಿಕೆಯೋ ಎಂಬಂತೆ ಇದೀಗ ಮಹತ್ವದ ರೈಲ್ವೇ ಖಾತೆಯನ್ನು ಅವರಿಂದ ಕಿತ್ತುಕೊಳ್ಳಲಾಗಿದೆ.

ಈ ವಿಚಾರವನ್ನು ಅನೇಕರು ಅನೇಕ ರೀತಿಯಲ್ಲಿ ವಿಶ್ಲೇಷಿಸುತ್ತಿದ್ದಾರೆ. ಮೋದಿಯವರ ಅಭಿವೃದ್ಧಿ ವೇಗಕ್ಕೆ ಗೌಡರು ಸ್ಪಂದಿಸಿಲ್ಲ ಎನ್ನುವುದು ಅದರಲ್ಲಿ ಪ್ರಮುಖವಾದುದು. ಇದು ಮೇಲ್ನೋಟಕ್ಕೆ ಹೌದೇನೋ ಅನ್ನಿಸಿದರೂ ಕೇವಲ ಐದು ತಿಂಗಳಲ್ಲಿ ಕಡಿದು ಕಟ್ಟೆಹಾಕಿ ತೋರಿಸುವಂಥಾದ್ದು ಯಾರಿಗೇ ಆಗಲಿ ಅಸಾಧ್ಯದ ಮಾತು. (ಡಿವಿಯಲ್ಲ, ಯಾವ ಸಚಿವನೂ ತನ್ನ ಸಾಧನೆಯನ್ನು ಈ ತನಕ ತೋರ್ಪಡಿಸಲಾಗಲಿಲ್ಲ) ಹಾಗಾಗಿ ಈ ಹಿಂಬಡ್ತಿಯ ಹಿಂದೆ ಬೇರೆಯದೇ ತರನಾದ ಹಿನ್ನೆಲೆಯಿರುವ ಸಾಧ್ಯತೆಯೇ ಹೆಚ್ಚು.

ಬಿಜೆಪಿಯ ಒಟ್ಟಾರೆ ವಿಚಾರದಲ್ಲಿ ಕರ್ನಾಟಕಕ್ಕೆ ಒಂದು ಮಹತ್ವದ ಸ್ಥಾನವಿದೆ. ಅದೆಂದರೆ, ದಕ್ಷಿಣ ಭಾರತದಲ್ಲಿ ಮೊದಲು ಅಧಿಕಾರದ ಅವಕಾಶವನ್ನು ಒದಗಿಸಿಕೊಂಡ ರಾಜ್ಯ ಎಂದು. ಹಾಗಾಗಿ ಇಲ್ಲಿನ ರಾಜಕಾರಣಗಳ ಯಾವುದೋ ಬಿಡಲಾಗದ ಹಂಗಲ್ಲಿ ಬಿಜೆಪಿಯ ವರಿಷ್ಠರು ಇದ್ದೇ ಇದ್ದಾರೆ. ಈ ಕಾರಣಕ್ಕೆ ಮೋದಿ ಸರಕಾರ ಅಧಿಕಾರಕ್ಕೇರಿದಾಗ ಕರ್ನಾಟಕದಿಂದ ಹಲವು ದೊಡ್ಡ ತಲೆಗಳು ಸಚಿವ ಸ್ಥಾನದ ಆಕಾಂಕ್ಷಿಗಳಾಗಿ ತುದಿಗಾಲಲ್ಲಿ ನಿಂತಿದ್ದರು. ಕೊನೆಗೆ ಅಳಿದೂ ತೂಗಿ ಮೂವರಿಗೆ ಸ್ಥಾನ ಸಿಕ್ಕಿಸಾದರೂ ಬಂಪರ್ ಲಾಟರಿ ಹೊಡೆದದ್ದು 'ಕ್ಲೀನ್ ಇಮೇಜ್' ಖ್ಯಾತಿಯ ಸದಾನಂದ ಗೌಡರು ಮಾತ್ರ. ಇದು ಅನೇಕರನ್ನು ಒಳಗೊಳಗೇ ಕುದಿಯುವಂತೆ ಮಾಡಿತ್ತು.

ಒಂದು ಮೂಲದ ಪ್ರಕಾರ ಇಂತಹ ಕೆಲ ಅತೃಪ್ತರು ಗೌಡರ ಕ್ಲೀನ್ ಇಮೇಜಿಗೆ ಧಕ್ಕೆ ತರುವಂತಹ ಮಾಹಿತಿಗಳನ್ನು ಪರೋಕ್ಷವಾಗಿ ಮೋದಿ ಕಿವಿಗೆ ಆಗಾಗ ತಲುಪಿಸುತ್ತಲಿದ್ದು ಇದರ ಸತ್ಯಾಸತ್ಯತೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಮೋದಿ ಪಡೆ ಈ ಕ್ರಮವನ್ನು ಕೈಗೊಂಡಿದೆ ಎನ್ನಲಾಗುತ್ತಿದೆ. ಖಾತೆ ಬದಲಾವಣೆಯ ಸಂಭವನೀಯತೆಯ ವಾಸನೆ ಹಿಡಿದಿದ್ದ ಅನಂತ್‌ಕುಮಾರ್ ಕೆಲ ದಿವಸಗಳ ಹಿಂದೆ ಬೆಂಗಳೂರಿನಲ್ಲಿ ವಿಶಾಖಿ ಗೌಡರ ರೈಲ್ವೆ ಕೊಡುಗೆಯನ್ನು ಇನ್ನಿಲ್ಲದಂತೆ ಕೊಂಡಾಡಿದ್ದರು. ರಾಜಕಾರಣಿಗಳು ಯಾವತ್ತಿಗೂ ಮನಸ್ಸಿನಿಂದ ಮಾತನಾಡಲಾರರು. ಅವರ ಹೊಗಳಿಕೆಯ ಹಿಂದೆ ವಿಶೇಷಾರ್ಥ (ಹಿತೈಷಿ ಎಂಬ ತೋರಿಕೆ ಇತ್ಯಾದಿ) ಗಳಿರುತ್ತವೆ. ಇಲ್ಲೂ ಇದೇ ಸಾಧ್ಯತೆಯ ವಾಸನೆಯನ್ನು ಕೆಲವರು ಗ್ರಹಿಸಿದ್ದುಂಟು. ಯಡಿಯೂರಪ್ಪ ಅನಂತ್‌ಕುಮಾರರಂತವರು ಗೌಡರ ಖಾತೆ ಬದಲಾವಣೆಯ ಕುರಿತು ಈವರೆಗೆ ಎಲ್ಲೂ ಮಾತಾಡಹೋಗಿಲ್ಲ, ಮಾತನಾಡಿದರೂ ಅದು ಮನಸಿನ ಮಾತಂತೂ ಖಂಡಿತ ಆಗಿರಲಾರದು.

- ಶಶಿ ಪುತ್ತೂರು, ದಕ

ಬಾಯಿ ಬಡುಕಿ ಶೋಭಕ್ಕನಿಗೆ ಹರಕುಬಾಯಿ ಈಸುರಪ್ಪ ಸಾತ್

ತೀರ್ಥಹಳ್ಳಿಯ ಯುವತಿ ನಂದಿತಾಳ ಸಾವು ಯಾವ ರೀತಿಯಲ್ಲೇ ಘಟಿಸಿರಲಿ ಸಾವೆನ್ನುವುದು ಅದು ಹೇಗಿದ್ದರೂ ಬೇಸರದ್ದೇ. ಅದೊಂದು ಅನ್ಯಾಯದ ಸಾವೆಂಬುದು ಸ್ಪಷ್ಟವಿದ್ದರೆ ಆ ಕುರಿತ ಹೋರಾಟ ಖಂಡಿತವಾಗಿಯೂ ಸ್ವಾಗತಾರ್ಹವೇ. ಆದರೆ, ಈ ಸಾವಿನ ಹಿಂದಿರುವ ಅಸಲಿ ಕಥೆ ಯಾರಿಗೂ ಗೊತ್ತಿಲ್ಲ, ಇದನ್ನೇ ನೆಪವನ್ನಾಗಿಟ್ಟುಕೊಂಡು ಭಜರಂಗಿಗಳಂತಹ ಕೆಲ ಕೆಟ್ಟ ಹುಳುಗಳು ರಾಜಕೀಯ ಬೇಳೆಬೇಯಿಸಿಕೊಳ್ಳಲು ಹೊಂಚುತ್ತಿರುವುದನ್ನು ನೋಡಿದಾಗ ಮೈಯೆಲ್ಲ ಉರಿಯುತ್ತದೆ. ಯಾಕೆಂದರೆ ಸಾವಿನ ಮನೆಯಲ್ಲೂ ಲಾಭನಷ್ಟಗಳ ರಾಜಕೀಯದ ಲೆಕ್ಕಾಚಾರ ಇವರುಗಳಿಗೆ.

ಕೆಲ ವರ್ಷಗಳ ಹಿಂದೆ ರಾಜ್ಯದಲ್ಲಿ ಬಿಜೆಪಿ ಸರ್ಕಾರವಿದ್ದಾಗ ಧರ್ಮಸ್ಥಳದಲ್ಲಿ ಸೌಜನ್ಯಾ ಅತ್ಯಾಚಾರ ಕೊಲೆ ಪ್ರಕರಣ ನಡೆಯಿತು. ನಂದಿತಾಳಂತೆ ಸೌಜನ್ಯಾ ಸತ್ತಿದ್ದು ಮನೆಯಲ್ಲಲ್ಲ, ಸಾವಿನ ಮುನ್ನ ನಂದಿತಾ ಮಾತಾಡುವ ಸ್ಥಿತಿಯಲ್ಲಿ ಮನೆಯವರೊಂದಿಗೆ ದಿನವನ್ನು ಕಳೆದಿದ್ದಳು. ಹಾಗಾಗಿ ಈ ಪ್ರಕರಣದಲ್ಲಿ ಅಂಥಾ ನಿಗೂಢತೆಗಳೇನೂ ಇರಲಿಲ್ಲ. ಹೀಗಿದ್ದೂ ಕೂಡ ಸಾವಿನ ಮನೆಯಲ್ಲಿ ಸಾಸಿವೆ ಕಾಳಿನಷ್ಟಾದರೂ ಅನುಕಂಪ ತೋರೋ ಬದಲು ಇದೇ ನೆಪದಲ್ಲಿ ಕೋಮುವಿಷ ಹಬ್ಬಿಸಿ ಬೇಳೆ ಬೇಯಿಸಿಕೊಳ್ಳುತ್ತಿರುವ ಮಂದಿಗೆ ಏನೆನ್ನಬೇಕು? ತನ್ನ ಊರಲ್ಲಿ ತನ್ನದೇ ಜಾತಿಯ ಹೆಣ್ಣೊಬ್ಬಳು ಅಮಾನವೀಯವಾಗಿ ಸತ್ತು ಬಿದ್ದಾಗ ತುಟಿಪಿಟಿಕ್ ಎನ್ನದೇ ಅಡಗಿ ಕೂತಿದ್ದ ಬಾಯಿ ಬಡುಕಿ ಸೋಬಕ್ಕ ಈಗ ಮಾತ್ರ ನಿದ್ದೆಯಿಂದ ಎಚ್ಚೆತ್ತವಳಂತೆ ಕೋಮು ಸೋಬಾನೆಯನ್ನು ಹಾಡುತ್ತಾ ತಿರುಗುತ್ತಿರುವುದು ತಮಾಷೆಯಾಗಿದೆ. ಸರಕಾರದ ಏಕೈಕ ಪ್ರಭಾವಿ ಮಹಿಳಾ ಸಚಿವೆಯೆನಿಸಿ ತನ್ನದೇ ಸರಕಾರ ಆಡಳಿತದಲ್ಲಿದ್ದಾಗ ಈಕೆ ಕೇವಲ ಸಣ್ಣ ಮಟ್ಟದ ಸೊಲ್ಲನ್ನು ಸೌಜನ್ಯಾ ಕೇಸಿನ ಕುರಿತು ಆವತ್ತು ಎತ್ತಿದ್ದಿದ್ದರೆ ಆರೋಪಿಗಳು ಸಿಕ್ಕಿಬಿದ್ದು ಕೇಸು (ವ್ಯರ್ಥ ಆರಂಭಿಕ ಸಮಯಹರಣದ ಕಾರಣ) ಈಗಿನಂತೆ ಹಳ್ಳಹಿಡಿಯುವುದು ಖಂಡಿತಾ ತಪ್ಪುತ್ತಿತ್ತು. ಆಗತ್ಯ ಸಮಯದಲ್ಲಿ ಬಾಯಿಗೆ ಫೆವಿಸ್ಟಿಕ್ ಗಮ್ ಹಾಕಿ ಕೂತಿದ್ದ ಈಕೆ ಈಗ ಇನ್ನಿಲ್ಲದಂತೆ ಬೊಬ್ಬಿಡುತ್ತಿರುವುದು ಮಾತ್ರ ಅಸಹ್ಯವಾಗಿದೆ. ಇನ್ನು ಹರಕಲು ಬಾಯಿಯ ಈಸುರಪ್ಪ ಈ ಹಿನ್ನೆಲೆಯಿಂದ ಆಡಳಿತ ಪಕ್ಷದ ಕುರಿತು ಮಾತಾಡುತ್ತಾ ಇಂಥಾ ಅನ್ ಫಿಟ್ ಗೃಹಸಚಿವನನ್ನು ನನ್ನ ಜೀವಮಾನದಲ್ಲೇ ನೋಡಿಲ್ಲ ಎಂದು ಮತ್ತೇನೇನನ್ನೋ ಹೇಳಿ ಉಗಿಸಿಕೊಂಡಿದ್ದಾನೆ. ಹೌದಪ್ಪ ಈಸುರಯ್ಯ, ನಿನ್ನ ಸರಕಾರವಿದ್ದಾಗ ಉಡುಪಿಯ ಆಚಾರ್ಯನೆಂಬ ಮಹಾನುಭಾವ ಗೃಹಚಾರ ಸಚಿವನಾಗಿದ್ದ. ತನ್ನ ನೆರೆಮನೆಯವಳಂತಿದ್ದ ಅಮಾಯಕಿ ಪದ್ಮಪ್ರಿಯಾಳ ಕೇಸನ್ನು ಮೂಟೆಕಟ್ಟಿ ಹಳ್ಳಕ್ಕೆ ತಳ್ಳಿ ಆ ಹೆಣ್ಣಿನ ದಾರುಣ ಸಾವಿಗೆ ಭರ್ಜರಿ ನ್ಯಾಯ ಕೊಡಿಸಿದಂತಹ ಕೀರ್ತಿವಂತನಾತ ಎಂಬುದು ನೆನಪಿರಲಿ.

ಅಂದಹಾಗೆ, ಇಂತಹ ವಿಷಮ ಸನ್ನಿವೇಶದಲ್ಲೂ 'ನನ್ನದೆಲ್ಲಿಹಲಿ?' ಎಂದು ಸಮಯಸಾಧಕಿಯಂತೆ ಹೊಂಚುತ್ತಿದ್ದ ಎಲ್ಲೂ ಸಲ್ಲದ ಕೂಗುಮಾರಿಯೊಂದು ಈಸುರಪ್ಪನ ಈ ಮಾತುಗಳ ಬಗ್ಗೆ ವಕಾಲತ್ತು ವಹಿಸುತ್ತಲೇ ತನಗೆ ಅನ್ಯಾಯವಾಗಿದೆ ಎಂದು ಸಾರಿ ಕೂಗುತ್ತಿರುವುದು ಇನ್ನಷ್ಟು ತಮಾಷೆಯಾಗಿದೆ. ಈ ಎಡಬಿಡಂಗಿ ಯಕ್ಷಗಾನದಲ್ಲಿ ಬರುವ ಹಾಸ್ಯಗಾರನಂತೆ ದಿಢೀರ್ ಕಾಣಿಸಿಕೊಂಡು ಈಗ ತನ್ನ ಹೋ ಕೊಡ ಹತ್ತಿದ್ದಾಳೆ. ಕಮ್ಯುನಿಸ್ಟ್ ಸಿದ್ಧಾಂತದ ಹಿನ್ನೆಲೆಯಲ್ಲಿ ಹೆಸರು ಮಾಡಿ ಕಾರ್ಯ ಸಾಧನೆಗಾಗಿ ಡಿಕೆ -ರಾಹುಲ್ ಗಾಂಧಿಯಂತ ಕಾಂಗ್ರೆಸಿಗರ ಸೆರಗು ಹಿಡಿದು ಅಲ್ಲಿ ವರ್ಕೌಟ್ ಆಗದೇ ಈಗ ಚೆಡ್ಡಿಪಾಳಯಕ್ಕೆ ಹಾರಿದ ಯಾವ ತತ್ವ ಸಿದ್ಧಾಂತಗಳ ನೆಲೆಯನ್ನೂ ಹೊಂದಿರದ ಈ ಅಂತರ್‌ಪಿಶಾಚಿಯದೊಂದು ಪಾಡು. ಇವರೆಲ್ಲ ತಮ್ಮ ಬೇಳೆ ಬೇಯಲು ಹೊಂಚಿ ನಿಂತವರೇ ವಿನಃ ನಂದಿತಾ ಸಾವಿನ ಕುರಿತು ನಿಜ ಅನುಕಂಪವುಳ್ಳವರಂತೂ ಖಂಡಿತಾ ಅಲ್ಲ.

ಕರ್ನಾಟಕ ಹಾಗು ದೇಶದ ಸಮಾಜವಾದಿ ಇತಿಹಾಸದಲ್ಲಿ ಈ ತೀರ್ಥಹಳ್ಳಿಗೊಂದು ಆದರದ್ದೇ ಆದ ಸ್ಥಾನವಿದೆ. ಕುವೆಂಪು, ಗೋಪಾಲಗೌಡರಂತಹ ಧುರೀಣರ ಕಾರ್ಯಕ್ಷೇತ್ರವಿದು. ಇಂತಹ ಸರ್ವಜನಾಂಗಕ್ಕೆ ಶಾಂತಿ ಸಾಮರಸ್ಯ ಬಯಸಿದ ಈ ಪುಣ್ಯ ನೆಲದಲ್ಲಿದೀಗ ಕೋಮುವಾದಿ ಕಳೆಗಳು ವಿಜೃಂಭಿಸುತ್ತಿರುವುದು ವಿಷಾದಕರ. ಹೆಣ್ಣಿನ ಬಗ್ಗೆ ಮೊಸಳೆ ಕಣ್ಣೀರು ಸುರಿಸುವ ಈ ಮಂದಿ ಇಲ್ಲಿಗೆ ಸಮೀಪದ ಹೊಸನಗರದ ಸ್ವಾಮಿಯೊಬ್ಬನಿಂದ ಲೈಂಗಿಕ ಶೋಷಣೆಗೊಳಗಾದೆ ಎಂದು ಮಹಿಳೆಯೊಬ್ಬಳು ಏಕಾಂಗಿಯಾಗಿ ಹೋರಾಟಕ್ಕಿಳಿದಾಗ ಬೆಂಬಲಿಸುವ ಬದಲು ಬಲಾಢ್ಯನಾದ ಕಳ್ಳ ಸ್ವಾಮಿಯ ಹಿಂದೆಯೇ ನಿಂತು ಕುಮ್ಮಕ್ಕು ಕೊಟ್ಟಂತವರು. ಇಂತವರೀಗ ಸ್ತ್ರೀ ನ್ಯಾಯದ ಕುರಿತು ಮಾತಾಡುತ್ತಿದ್ದಾರೆ. ಈ ನಿಮ್ಮಗಳ ದರಿದ್ರ ಮುಖಕ್ಕಿಷ್ಟು!

- ಅವಿನಾಶ್ ಎಮ್.ಎಸ್. ನೆಲ್ಲಿಕಾರ್

ಭಾರತೀಯ ಪುರಾಣಗಳನ್ನು ವಿಮರ್ಶಿಸುವ ಬಹಳಷ್ಟು ಲೇಖನಗಳು ತಮ್ಮ ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವುದನ್ನು ಕಂಡು ಕೆಲವರು ಸುಂದರ ಕಥನ ಕಾವ್ಯಗಳಾದ ಮಹಾಭಾರತ ರಾಮಾಯಣಗಳನ್ನು ಕೇವಲ ಸಾಹಿತ್ಯಿಕ ಕುತೂಹಲದಿಂದ ಓದಬೇಕೇ ಹೊರತು ಅವುಗಳಲ್ಲಿ ಬರುವ ಪಾತ್ರಗಳನ್ನು ಮತ್ತು ಘಟನೆಗಳನ್ನು ವಿಮರ್ಶಿಸುವುದು ಸರಿಯಲ್ಲ ಎಂದು ವಾದಿಸುತ್ತಿದ್ದಾರೆ. ಆದರೆ ಈ ಧಾರ್ಮಿಕ ಗ್ರಂಥಗಳು ಕೇವಲ ಸಾಹಿತ್ಯಿಕ ಮೌಲ್ಯ ಮಾತ್ರ ಹೊಂದಿದ್ದರೆ ಪರವಾಗಿರಲಿಲ್ಲ. ನಿಜವಾಗಿ ಈ ಪುರಾಣಗಳು ಸಮಾಜವನ್ನು ಹಿಂದಕ್ಕೆ ನೂಕುತ್ತಿವೆ ಮತ್ತು ಜಾತಿ ಅಥವಾ ಲಿಂಗದ ಆಧಾರದಲ್ಲಿ ಸಮಾಜದ ಶೋಷಣೆಗೆ ಅನುವು ಮಾಡಿಕೊಡುತ್ತಿವೆ.

ಈ ಪುರಾಣ ಕಥೆಗಳನ್ನು ನಮ್ಮ ದೇಶದ 90% ಜನರು ನಿಜವಾಗಿ ನಡೆದ ಇತಿಹಾಸ ಎಂದು ಪರಿಗಣಿಸಿ ಅವುಗಳಲ್ಲಿ ಬರುವ ಕಾಲ್ಪನಿಕ ಪಾತ್ರಗಳು ನಿಜವಾದ ದೇವರು ಎಂದು ತಿಳಿದಿರುವುದೇ ದೊಡ್ಡ ಸಮಸ್ಯೆ. ಅಷ್ಟೇ ಅಲ್ಲ, ಈ ಕಾಲ್ಪನಿಕ ಪಾತ್ರಗಳ ಹೆಸರಲ್ಲಿ ದೇವಸ್ಥಾನಗಳನ್ನು ಸ್ಥಾಪಿಸಿ ಅವುಗಳನ್ನು ಸಾಮಾಜಿಕ ಮತ್ತು ರಾಜಕೀಯ ಅಧಿಕಾರದ ಕೇಂದ್ರವನ್ನಾಗಿ ಮಾಡಲಾಗಿದೆ. ಈ ದೇವರ ಹೆಸರಲ್ಲಿ ನೀತಿಗೆಟ್ಟ ಆಸೆಬುರುಕ ಜನರು ಸ್ವಾಮಿ ಅಥವಾ ಧರ್ಮದರ್ಶಿಗಳಾಗಿ ವೇಷ ಧರಿಸಿ ಅಥವಾ ಪುರೋಹಿತ ವೃತ್ತಿಯಲ್ಲಿ ತೊಡಗಿ ನಂತರ ಎಷ್ಟೇ ದೊಡ್ಡ ತಪ್ಪು ಮಾಡಿದರೂ ಕಾನೂನಿನ ಕೈಯಿಂದ ಸುಲಭವಾಗಿ ತಪ್ಪಿಸಿಕೊಳ್ಳಲು ಈ ಕಾಲ್ಪನಿಕ ದೇವರ ನಂಬಿಕೆಗಳು ಅನುವು ಮಾಡಿ ಕೊಡುತ್ತಿವೆ.

ಇದಕ್ಕೆ ಇತ್ತೀಚಿನ ಉದಾಹರಣೆಯೆಂದರೆ ಗಾಯಕಿಯ ಅತ್ಯಾಚಾರ ಕೇಸಿನಲ್ಲಿ ಸಿಗಣಿ ಸ್ವಾಮೀಜಿ ಮತ್ತು ಉಜಿರೆ ಸೌಜನ್ಯ ಕೊಲೆ ಕೇಸಿನಲ್ಲಿ ಅಲ್ಲಿಯ ಒಂದು ದೇವಸ್ಥಾನಕ್ಕೆ ಸಂಬಂಧಪಟ್ಟ ಕುಟುಂಬದ ಕೆಲವು ನೀಚ ರೇಪಿಷ್ಟ ಹುಡುಗರು ಸುಲಭವಾಗಿ ಕಾನೂನಿನ ಕೈಯಿಂದ ನುಣುಚಿಕೊಳ್ಳುತ್ತಿರುವುದು ಹಾಗೂ ಭಕ್ತರೆನಿಸಿಕೊಂಡಿರುವ ಲಕ್ಷಾಂತರ ಮೂಢ ಜನರು ಇವರನ್ನು ಕುರುಡಾಗಿ ನಿರಪರಾಧಿ ಎಂದು ತಿಳಿದಿರುವುದು ಈ ಪುರಾಣಗಳು ನಿರ್ಮಿಸಿರುವ ಭ್ರಮಾಧೀನ ಮನಸ್ಥಿತಿಯಿಂದಾಗಿಯೇ.

ಮಹಿಳೆಯರನ್ನು ಮೂಢನಂಬಿಕೆಯಲ್ಲಿ ಆಳವಾಗಿ ಮುಳುಗಿಸಲು ಇವೇ ಪುರಾಣಗಳು ಕಾರಣ. ಸಮಾಜವನ್ನು ಶೋಷಿಸಲು ಅನುವು ಮಾಡಿಕೊಡುವ ಇಂತಹ ಸಾಹಿತ್ಯಗಳು ಎಷ್ಟೇ ಸುಂದರವಾಗಿದ್ದರೂ ಅವು ಈಗಿನ ಕಾಲದಲ್ಲಿ ಬೇಕಿಲ್ಲ.

- ವೀರಪ್ಪ ಟಿ.ಎನ್. ಮಡಿಕೇರಿ

ಪತ್ರಿಕೆಯ ನವೆಂಬರ್ 5, 2014ರ ಸಂಚಿಕೆಯ ಸಂಪಾದಕೀಯದಲ್ಲಿ ದುರ್ಗಾ ದೇವಿಯು ಮಹಿಷಾಸುರನನ್ನು ಮೋಡಿ ಮಾಡಿ ತನ್ನೊಂದಿಗೆ ದೈಹಿಕ ಸಂಪರ್ಕ ಹೊಂದುವಂತೆ ಪುಸಲಾಯಿಸಿ ಆವನು ಕಾಮತೃಷೆ ತೀರಿಸಿಕೊಳ್ಳುತ್ತಿದ್ದಾಗ ಅವನನ್ನು ಇರಿದು ಕೊಂದಳು ಎಂಬ ವಿಷಯ ಓದಿದಾಗ, ನಮ್ಮ ದೀಪಾವಳಿಯ ನರಕ ಚತುರ್ದಶಿ ಅಭ್ಯಂಜನ ಸ್ನಾನಕ್ಕೂ ಇಂತಹದ್ದೇ ಆರ್ಯ ಹೆಣ್ಣುಗಳ ಲೈಂಗಿಕ-ಗಾಳದ ನಂಟಿದೆ ಎಂಬುದು ನೆನಪಾಯಿತು.

ನರಕಾಸುರನನ್ನು ನೇರ ಯುದ್ಧದಲ್ಲಿ ಸೋಲಿಸಲು ಸಾಧ್ಯ ಇಲ್ಲ ಎಂದು ಅರಿತ ಕೃಷ್ಣನು ತನ್ನ ಸುರಸುಂದರ ಹೆಂಡತಿಯಾದ ಸತ್ಯಭಾಮೆಯನ್ನು ನರಕಾಸುರನ ಬಳಿಗೆ ಕಳುಹಿಸಿದನು. ಸತ್ಯಭಾಮೆ ನರಕಾಸುರನಿಗೆ ಮೋ[...] ಅವನು ನಿರಾಯುಧನಾಗಿ ಪೂರ್ಣ ನಗ್ನನಾಗಿ[...] ಯೊಂದಿಗೆ ಲೈಂಗಿಕ ಕ್ರಿಯೆಯಲ್ಲಿ ಮೈಮರೆತಿದ್ದಾ[...] ಗೃಹದಲ್ಲಿ ಅಡಗಿಕೊಂಡಿದ್ದ ಕೃಷ್ಣನು ಮುಗಿಬಿದ[...] ಸುರನನ್ನು ಕೊಂದನು. ನಂತರ ಈ ಅಪವಿತ್ರ ಕ್ರಿ[...] ಮಲೀನವಾದ ತಮ್ಮಿಬ್ಬರ ಮೈ ಹಾಗೂ [...] (ಶೀಲವನ್ನು) ಶುದ್ಧ ಗೊಳಿಸಲು ಕೃಷ್ಣ ಮತ್ತು[...] ಇಬ್ಬರೂ ಅಭ್ಯಂಜನ ಸ್ನಾನ ಮಾಡಿದರು [...] ಬುಡಕಟ್ಟು ಜನರ ನಂಬಿಕೆ. ಇದುವೇ ಅಭ್ಯಂಜನ[...] ಅಂದರೆ ಅನಾರ್ಯ ವೈರಿಯನ್ನು ಕೊಲ್ಲಲು [...] ತಮ್ಮ ಹೆಂಡತಿಯರದ್ದೇ ತಲೆಹಿಡುಕರಾಗುತ್ತಿದ್ದರು [...] ದೊಡ್ಡ ವಿಡಂಬನೆ.

- ಕೆ.ಸಿ. ಗದಿಯಾರ್, [...]

ರಾಜ್ಯದ ಕೆಲವು ನಗರಗಳಿಗೆ ಮರುನಾ[...] ಮಾಡಿದ್ದು ಮತ್ತು ಪ್ರತ್ಯೇಕ ರಾಜ್ಯದ ಬೇಡಿಕೆ ಇ[...] ವಾರದ ಸುದ್ದಿಗಳು. ನನ್ನ ಪ್ರಕಾರ ಇವೆರಡು [...] ಕ್ರಿಯೆಗಳು. ಹೆಸರು ಬದಲಾವಣೆ ಆದ ಮಾ[...] ನಗರದ ಬವಣೆಗಳು ಕಡಿಮೆ ಆಗಲ್ಲ, ಪ್ರತ್ಯೇಕ ರಾ[...] ಆದೇನು ರಾಮ ರಾಜ್ಯವಾಗಲ್ಲ. ಇವೆಲ್ಲ ನ[...] "ಕೆಲಸವಿಲ್ಲದ ಬಡಿಗ ಆದೇನೋ ಕೆತ್ತಿದನಂತೆ"[...] ಗಾದೆ ನೆನಪಾಗುತ್ತದೆ.

ನಗರಗಳ ಮರುನಾಮಕರಣ ಇತಿಹಾ[...] ಸರಿಪಡಿಸುವ ಪ್ರಯತ್ನದಂತೆ ಕಾಣಿಸುತ್ತದೆ. ಇತಿ[...] ನಮ್ಮ ಪೂರ್ವಜರ ಸೋಲು-ಗೆಲುವುಗಳ ಮಿಶ್ರ[...] ನಗರಗಳ ಮರುನಾಮಕರಣವನ್ನು ಸ್ವಾಗತಿಸು[...] ಚೆಡ್ಡಿಗಳು ಬಾಬ್ರಿ ಮಸೀದಿಯನ್ನು ಬೀಳಿಸಿದ್ದನ್ನು[...] ಒಪ್ಪಬೇಕಾಗುತ್ತದಲ್ಲವೆ?

ಅಷ್ಟಕ್ಕೂ ವಿದೇಶಿಯರ ಆಗಮನದಿಂದ ನಮ[...] ಲಾಭಗಳಾಗಿದ್ದು ಸುಳ್ಳೆ? ಮೊಘಲರು ಸಾವಿರಾ[...] ಸಂಸ್ಥಾನಗಳನ್ನು ಒಗ್ಗೂಡಿಸಿ ಅಖಂಡ ಭಾರತವನ್ನಾಗಿ[...] ಈ ದೇಶಕ್ಕೆ ಒಂದು ಆಡಳಿತ ಸಂಹಿತೆಯನ್ನು[...] ತರಲಿಲ್ಲವೆ? ಇಂಗ್ಲಿಷರು ನಮ್ಮ ಅನೇಕ ಸ[...] ಪಿಡುಗುಗಳನ್ನು ನಿವಾರಿಸಿ ಸರ್ವರಿಗೂ ಶಿಕ್ಷಣ[...] ಆರೋಗ್ಯದ ಸೌಲಭ್ಯವನ್ನು ಕೊಟ್ಟರು.

ಆದರೆ ಇಂಗ್ಲಿಷರು ಹೋದಮೇಲೆ ಏನಾಯ್ತು[...] ಜಾತಿಗಳ ದಬ್ಬಾಳಿಕೆ ಮತ್ತು ಪುರೋಹಿತ[...] ಶೋಷಣೆಗಳು ಜಾಸ್ತಿ ಆಗುತ್ತಿವೆ. ದಿನೇದಿನೆ[...] ಪ್ರಜಾಪ್ರಭುತ್ವ ಅರ್ಥ ಕಳೆದುಕೊಳ್ಳುತ್ತಿದೆ.

ಪ್ರತ್ಯೇಕ ಉತ್ತರ ಕನ್ನಡ ಅಥವಾ ಹೈ[...] ಕರ್ನಾಟಕ ಕೇಳುವ ಮಹನೀಯರು ಆತ್ಮ[...] ಮಾಡಿಕೊಳ್ಳಲಿ. ಇತ್ತೀಚಿಗೆ ನಾನು ಈ ಪ್ರದ[...] ಹೋಗಿದ್ದೆ, ಅಲ್ಲಿನ ರಸ್ತೆ ಮೂಲಸೌಕರ್ಯಗಳನ್ನು[...] ಪಿಚ್ಚೆನಿಸಿತು. ಅದರಲ್ಲೂ ಗೋಕಾಕ್ ತಾಲ್ಲೂಕಿನ[...] ಜಾರಕಿಹೊಳಿಗಳಿಗೆ ಪ್ರೀತಿ. ಅವರ ಮನೆಯಲ್ಲಿ[...] ಜನ ಶಾಸಕರು, ಅಲ್ಲಿನ ಎಲ್ಲ ಸರ್ಕಾರಿ ಮತ್ತು[...] ಎಲ್ಲ ಸಂಸ್ಥೆಗಳು ಇವರ ಕೈಯಲ್ಲಿಯೇ ಇವೆ. [...] ನೆಟ್ಟಗೆ ಒಂದು ರಸ್ತೆ ಮಾಡುವ ಯೋಗ್ಯತೆ [...] ಈ ಭಾಗವನ್ನು ಬಹುಕಾಲ ಆಳಿದ್ದ ಬಿ.ಶಂ[...] ವಿ.ಎಲ್.ಪಾಟೀಲ ಮತ್ತು ವಿ.ಎಲ್.ಕೌಜಲಗಿ. [...] 30-40 ವರ್ಷ ಚುನಾಯಿತರಾದರೂ ತಮ್ಮ ಸ್ಥಾ[...] ಋಣ ತೀರಿಸಲಿಲ್ಲ. ಸಿದ್ದುವಾದರೂ ಇತ[...] ಭಿನ್ನರೆಂದರೆ ಅವರೂ ಕೂಡಾ playing [...] gallery.

-ಪ್ರಕಾಶ ಬಿಸ್ನಾಗರ, ಬೆಂ[...]



ಚಿತ್ರ ಕೃಪೆ: ಇಂಟರ್‌ನೆಟ್ (ಸತೀಶ್ ಆಚಾರ್)



ವಿ.ಸೂ.: ನಿಮ್ಮ ಅನಿಸಿಕೆಗಳನ್ನು lankesh70@rediffmail.com ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹು[...] ಪ್ರತಿಕ್ರಿಯೆಗಳನ್ನು 9980331427 ನಂ[...] ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಿ[...]

ಜೆಸ್ಸಿಕಾ ಆಲ್ಬಾ: ಎ ಬೋಲ್ಡ್ ಹೀರೋಯಿನ್

'ಸಿನ್ ಸಿಟಿ', 'ಇನ್ ಟು ದಿ ಬ್ಲೂ', 'ದಿ ಕಿಲ್ಲರ್ ...ನ್‌ಸೈಡ್ ಮಿ', 'ಫೆಂಟಾಸ್ಟಿಕ್ ಫೋರ್', 'ಸ್ಪೈ ಕಿಡ್ಸ್: ...ಲ್ ದಿ ಟೈಮ್ ಇನ್ ದಿ ವರ್ಲ್ಡ್', 'ದಿ ಸ್ಲೀಪಿಂಗ್ ...ಕ್ಷನರಿ', 'ದಿ ಐ', 'ಅವೇಕ್', 'ವ್ಯಾಲೆಂಟೈನ್ಸ್ ಡೇ', ...ವರ್ ಬೀನ್ ಕಿಸ್ಡ್' ಮುಂತಾದ ಚಿತ್ರಗಳಲ್ಲಿ ನಟಿಸಿ ...ಯುವಜನಾಂಗವನ್ನು ಸೂಜಿಗಲ್ಲಿನಂತೆ ಸೆಳೆದ ಮೂವತ್ಮೂರು ...ರ್ಷದ ಜೆಸ್ಸಿಕಾ ಆಲ್ಬಾ ಎಂಬ ಮಾದಕ ನಟಿ ತನ್ನ ...ಲ್ಯ, ಯೌವನ, ಪ್ರೀತಿ, ಮದುವೆ, ತಾಯ್ತನದ ಬಗ್ಗೆ ...ಮಾತಾಡಿರುವುದನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ...

ಪ್ರಶ್ನೆ: ನಿಮ್ಮ ಸೆಕ್ಸಿ ಬಾಡಿ ನಿಜಕ್ಕೂ ಪ್ರೇಕ್ಷಕರ ಕಣ್ಮನ ...ಯುವುದರಲ್ಲಿ ಯಶಸ್ವಿಯಾಗಿದೆ. 'ಹನಿ' ಚಿತ್ರದಲ್ಲಿನ ...ಮ್ಮ ಮಾದಕ ಡಾನ್ಸ್ ಇರಬಹುದು, 'ಸಿನ್ ಸಿಟಿ' ...ತ್ರದಲ್ಲಿ ನೀವು ನಿರ್ವಹಿಸಿದ ಕ್ಯಾಬರೆ ನರ್ತಕಿಯಂತಹ ...ಹಸಿ ಪಾತ್ರವಿರಬಹುದು, ಹಾಗೆಯೇ 'ಇನ್ ಟು ದಿ ...ಲ್ಲೂ' ಚಿತ್ರದುದ್ದಕ್ಕೂ ಟು ಪೀಸ್ ಧರಿಸಿಯೇ ಯುವಕರ ...ನ ಮನಸು ಬೆಚ್ಚಗಾಗುವಂತೆ ಮಾಡಿದ ...ತ್ರವಿರಬಹುದು... ಎಲ್ಲವೂ ಇಲ್ಲಿ ನೆನಪಾಗುತ್ತವೆ. ಈ ...ತಿಯ ಪಾತ್ರಗಳನ್ನು ನಿಭಾಯಿಸುವಾಗ ನಿಮಗೆ ...ಮುಜುಗರವೆನ್ನಿಸುವುದಿಲ್ಲವೇ?

ಜೆಸ್ಸಿಕಾ: 'ನಾನು ಕೇವಲ ಒಳ ಉಡುಪು ಧರಿಸಿ ನನ್ನ ...ಹೋಟೆಲಿನ ರೂಮಿನಲ್ಲಿದ್ದೇನೆ' ಎಂದು ಚಿತ್ರೀಕರಣದ ...ಳೆ ಭಾವಿಸಿಕೊಂಡಾಗಲಷ್ಟೇ 'ಸಿನ್ ಸಿಟಿ'ಯಂತಹ ...ತ್ರಗಳಲ್ಲಿ ಚಳಿ ಬಿಟ್ಟು ಕಂಫರ್ಟಬಲ್ ಆಗಿ ನಟಿಸಲು ...ಸಾಧ್ಯವಾಗುತ್ತದೆ. ಎಂಟಿವಿಯಲ್ಲಿ 'ಬೇಬಿ ಬೇಬಿ' ...ಬುದೊಂದು ವಿಡಿಯೋ ಪ್ರಸಾರವಾಗುತ್ತಿತ್ತು, ನೀವೂ ...ದನ್ನು ನೋಡಿರಬಹುದು. ಆ ಹಾಡಿಗೆ ಹೆಜ್ಜೆ ಹಾಕುತ್ತಿದ್ದ ...ಹೆಂಗಸಿನ ಮೈ ಸೊಗಸಾಗಿತ್ತು, ಆಕೆ ತನ್ನ ಅಂಗಸೌಷ್ಠವದಿಂದ ...ಹುಡುಗರನ್ನು ರಂಜಿಸುತ್ತಿದ್ದಳು. ಆಕೆಯೇ ಹಾಗೆಲ್ಲಾ ತನ್ನ ...ದೇಹವನ್ನು ಪ್ರದರ್ಶಿಸುವಾಗ ನಾನು ನನ್ನ ದೇಹವನ್ನು ...ಪ್ರದರ್ಶಿಸಿದರೆ ತಪ್ಪೇನು? ಹಾಗಂತ ನನ್ನನ್ನು ಗ್ವೆನೆತ್ ...ಪಾಲ್ಟ್ರೋವ್ ಅಥವಾ ಜೆನ್ನಿಫರ್ ಅನಿಸ್ಟನ್ ಮುಂತಾದವ ...ರೊಂದಿಗೆ ಹೋಲಿಸಿಕೊಳ್ಳಲು ಇಷ್ಟಪಡುವುದಿಲ್ಲ, ಅವರ ...ದೇಹ ಬಳುಕುವ ಬಳ್ಳಿಯಂತಿದ್ದವು, ಐ ಹ್ಯಾವ್ ಬಾಡಿ ...ಟ್!

ಪ್ರಶ್ನೆ: ನಿಮ್ಮ ಬಾಡಿ ಯಾವಾಗಲೂ ಕರ್ವಿ ಫಿಗರ್ ...ಹೊಂದಿದೆ. ಆಮ್ ಐ ರೈಟ್?

ಜೆಸ್ಸಿಕಾ: ಯಾವಾಗ ನನ್ನ ಬಾಡಿ ಹುಡುಗಿ ಬಾಡಿಯಿಂದ ...ಹೆಂಗಸಿನ ಬಾಡಿಗೆ ಹೊರಳತೊಡಗಿತೋ ಇದ್ದಕ್ಕಿದ್ದಂತೆ ...ಸೊಂಟದ ಭಾಗ, ಸೊಂಟದ ಸುತ್ತು, ಬೆನ್ನಿನ ಕೆಳಭಾಗ ...ಮುಂತಾದ ಕಡೆಗಳಲ್ಲಿ ಸಹಜವಾಗಿ ಕೊಬ್ಬು ಆವರಿಸ ...ತೊಡಗಿತು. ನಾನು ವಿಲಕ್ಷಣವಾಗಿ ಕಾಣತೊಡಗಿದೆ. ನಾನು ...ಬೇಗನೇ ಅಂದರೆ ನನಗೆ ಬರೀ ಹನ್ನೊಂದು ...ವರ್ಷವಿದ್ದಾಗಲೇ ಪ್ರೌಢಾವಸ್ಥೆಗೆ ಬಂದೆ. ಅದೊಂಥರ ...ವಿಲಕ್ಷಣ ಸ್ಥಿತಿ ಗೊತ್ತಾ? ಹೀಗಾದಾಗ ನಾವು ಬೇಗ ...ಮುದುಕಿಯರಾಗಿಬಿಡುತ್ತೇವೆ. ಅದಕ್ಕಾಗಿ ನಾನು ಇಪ್ಪತ್ತು ...ಪೌಂಡಿನಷ್ಟು ತೂಕ ಇಳಿಸಲು ಹೆಣಗಾಡಿದೆ. ಎಷ್ಟೋ ... ನನ್ನ ತೊಡೆಗಳು ಮತ್ತು ಹೊಟ್ಟೆ ನನಗೇ ...ಇಷ್ಟವಾಗುತ್ತಿರಲಿಲ್ಲ, ಇಷ್ಟಕ್ಕೂ ಬಾಲ್ಯದಲ್ಲೇ ನನಗೆ ಒಂದಿಷ್ಟು ...ಆರೋಗ್ಯದ ಸಮಸ್ಯೆ ಇತ್ತು, ನಾನು ಚಿಕ್ಕವಳಿದ್ದಾಗ ಸುಮಾರು ...ಸಮಯವನ್ನು ಆಸ್ಪತ್ರೆಯಲ್ಲೇ ಕಳೆದಿದ್ದುಂಟು.

ಪ್ರಶ್ನೆ: ಆರೋಗ್ಯ ಸಮಸ್ಯೆನಾ? ಏನದು?


ಜೆಸ್ಸಿಕಾ: ನಾನು ಆಸ್ತಮಾ, ಕಿಡ್ನಿ ಸಮಸ್ಯೆಗಳಿಂದ ಬಳಲಿದ್ದೆ ...5 ಡಿಗ್ರಿ ಜ್ವರಕ್ಕೂ ಗುರಿಯಾಗಿದ್ದೆ. ನ್ಯೂಮೋನಿಯಾ ...ಸಹ ನನ್ನನ್ನು ಕಾಡಿತ್ತು.. ಹೀಗಾಗಿ ನನ್ನ ಬಾಲ್ಯದ ಬಹುತೇಕ ...ಸಮಯವನ್ನು ಆಸ್ಪತ್ರೆಯ ಬೆಡ್‌ಗಳಲ್ಲೇ ಕಳೆಯಬೇಕಾಯಿತು.

ಪ್ರಶ್ನೆ: ಇಷ್ಟಕ್ಕೂ ನಿಮ್ಮ ಬಾಲ್ಯ ಹೇಗಿತ್ತು ಅಂತ ...ಳುವಿರಾ?

ಜೆಸ್ಸಿಕಾ: ನಾನು ಬಾಲ್ಯದಲ್ಲಿ ಎಲ್ಲರಂತೆ ಇತರ ...ಕ್ಕಳೊಡಗೂಡಿ ಆಡಲಿಲ್ಲ, ಕುಣಿಯಲಿಲ್ಲ, ಹೊರಗೆ ...ಸುತ್ತಲಿಲ್ಲ, ಯಾವಾಗಲೂ ನನ್ನ ಅಮ್ಮನ ಜೊತೆಯಲ್ಲೇ ...ಇರಲು ಇಷ್ಟಪಡುತ್ತಿದ್ದೆ, ನನಗೆ ಹದಿಮೂರು ವರ್ಷವಿ ...ದ್ದಾಗಲೇ ಒಂದು ಟಿವಿ ಶೋನಲ್ಲಿ ಪಾಲ್ಗೊಳ್ಳಬೇಕಾಯಿತು. ...ಶಾಲೆಗೆ ಸರಿಯಾಗಿ ಹೋಗಲಾಗುತ್ತಿರಲಿಲ್ಲ, ಮನೆಗೇ ಬಂದು ...ಪಾಠ ಮಾಡುವ ಒಬ್ಬ ಮಾಸ್ತರಿದ್ದರೂ ಕೂಡ "ನೀನು ...ಸ್ಕೂಲ್ ಅನುಭವಗಳನ್ನು ಮಿಸ್ ...ಮಾಡಿಕೊಳ್ಳುತ್ತಿದ್ದೀಯ..." ಅನ್ನುತ್ತಿದ್ದರೆಲ್ಲರೂ. ನನ್ನ ಕಸಿನ್ಸ್ ...ಜೊತೆಗೆ ಒಂದಿಷ್ಟು ಪಾರ್ಟಿಗಳಿಗೂ ಹೋಗುತ್ತಿದ್ದೆ, ಅಲ್ಲಿ ...ಹುಡುಗಿಯರು ಕುಡಿಯುವುದು, ಸಿಗರೇಟು ಸೇದುವುದು, ಎದೆ ...ತೋರಿಸುವುದು, ಹೊಕ್ಕಳು ಪ್ರದರ್ಶಿಸುವುದು ಮುಂತಾದವನ್ನು ...ಮಾಡುತ್ತಿದ್ದರು.

ಪ್ರಶ್ನೆ: ನಿಮಗೆ ಅನೇಕ ಬಾಯ್ ಫ್ರೆಂಡ್ಸ್ ಇದ್ದರೆಂದು ...ಕೇಳಲ್ಪಟ್ಟಿದ್ದೇನೆ, ನಿಜಾನ?

ಜೆಸ್ಸಿಕಾ: ಹೊರಗೆ ಸುತ್ತಲು ಹೋಗೋಣವೆಂದು ...ನ್ನ, ಹೀಗಾ ಯಾರು ಕಾಡಿಸುತ್ತಿದ್ದರೋ ಅಂತಹ



ಹುಡುಗನೊಟ್ಟಿಗೆ ಹೊರಗೆ ಸುತ್ತಲು ಹೋಗುತ್ತಿದ್ದೆ. ನನ್ನನ್ನು ಬಹಳವಾಗಿ ಇಷ್ಟಪಡುತ್ತಿದ್ದ ಒಬ್ಬ ಹುಡುಗನಿದ್ದ, ಆತ ನಿಜಕ್ಕೂ ನನಗೆ ಬೋರು ಹೊಡೆಸಿದ್ದ. ಎಷ್ಟು ಬೋರು ಹೊಡೆಸಿದ್ದ ಎಂದರೆ ಆತನಿಗೆ ಅಂತ ಒಂದು ಬರ್ಗರ್ ಆರ್ಡರ್ ಮಾಡಿದ್ದೆ. ನಾನು ಕಣ್ಣುಮುಚ್ಚಿ ಬಿಡುವುದರೊಳಗೆ ಅದನ್ನು ಗಬಗಬನೆ ಹೆಚ್ಚೂಕಡಿಮೆ ಹಂದಿಯಂತೆ ತಿಂದು ಮುಗಿಸಿದ್ದ. ಅದನ್ನು ನೆನೆದರೆ ಈಗಲೂ ನಾಚಿಕೆಯಾಗುತ್ತದೆ. ಅವನಿಗೆ ಮತ್ತೇನನ್ನೂ ತಿನ್ನಲು ಕೊಡಿಸದೆ ಸೀದಾ ಮನೆಗೆ ಬಂದುಬಿಟ್ಟಿದ್ದೆ. ಆದರೆ ಆ ಹುಡುಗ ನನ್ನನ್ನು ತುಂಬಾ ಇಷ್ಟಪಡುತ್ತಿದ್ದ. ಅವನನ್ನು ಸಹಿಸಿಕೊಳ್ಳುವುದು ಮಾತ್ರ ಕಷ್ಟವಾಗಿತ್ತು, ಆಮೇಲೆ ಡೇಟಿಂಗ್ ಸಹವಾಸವೇ ಬೇಡವೆಂದು ನಿರ್ಧರಿಸಿ ಬಿಟ್ಟೆ. ಎಲ್ಲಿಯವರೆಗೆ ಅಂತೀರಾ? ನನಗೆ ಹದಿನೆಂಟು ತುಂಬಿ ಸಿಕ್ಕುವವರೆಗೆ!

ಪ್ರಶ್ನೆ: ನಿಮ್ಮ ಮತ್ತು ಮೈಖೆಲ್ ವೆಥರ್ಲಿ ನಡುವಿನ ಸಂಬಂಧದ ಬಗ್ಗೆ ಹೇಳಿ...

ಜೆಸ್ಸಿಕಾ: ಅದೂ ಹೆಚ್ಚು ಕಾಲ ಉಳಿಯಲಿಲ್ಲ. ಆತನೊಂದಿಗೆ ಡೇಟಿಂಗ್ ಆರಂಭಿಸಿದಾಗ ನಾನು ತುಂಬಿದ ಹದಿನೆಂಟರ ತರುಣಿ, ಆಗಿನ್ನೂ ವರ್ಜಿನ್ ಆಗಿದ್ದೆ. ನಾನು ಯಾರೊಂದಿಗೆ ದೇಹ ಹಂಚಿಕೊಳ್ಳಲು ಬಯಸುತ್ತೇನೋ ಅಂತಹ ಹುಡುಗನನ್ನು ಮೊದಲು ಲವ್ ಮಾಡಬೇಕು ಎಂದು ನಿರ್ಧರಿಸಿದ್ದೆ. ಎಷ್ಟೋ ಸಲ ಮೊದಲ ಸೆಕ್ಸ್ ಅನುಭವ ಅನೇಕರಿಗೆ ಇರಿಸುಮುರಿಸು ಉಂಟುಮಾಡಿದ್ದರ ಬಗ್ಗೆ, ತೀವ್ರ ಅಸಮಾಧಾನ, ಅತೃಪ್ತಿಯಿಂದ ಕೂಡಿದ್ದರ ಬಗ್ಗೆ ನಾನು ಕೇಳಿಪಟ್ಟಿದ್ದೆ. ಆದ್ದರಿಂದ ನನ್ನ ಮೊದಲ ಸೆಕ್ಸ್ ನಾನು ಪ್ರೀತಿಸುವ, ನನ್ನನ್ನೂ ಪ್ರೀತಿಸುವ ಹುಡುಗನೊಟ್ಟಿಗೆ ಆಹ್ಲಾದಕರವಾಗಿ ನಡೆಯಬೇಕೆಂದು ಬಯಸಿದ್ದೆ. ಈ ಬಯಕೆ ಅಷ್ಟು ಸುಲಭದ ಮಾತಲ್ಲ. ಯಾವತ್ತೂ ನಟರೊಟ್ಟಿಗೆ ಡೇಟಿಂಗ್ ಮಾಡಬಾರದೆಂದು ಮೈಖೆಲ್ ವೆಥರ್ಲಿ ಮೂಲಕ ಕಲಿತೆ. ಆತ ನನ್ನನ್ನು ಮರುಳು ಮಾಡಲು ನಿಜಜೀವನದಲ್ಲಿ ಅನೇಕ ರೀತಿಯಲ್ಲಿ ನಟಿಸಿದ್ದ!

ಪ್ರಶ್ನೆ: ಮಾರ್ಕ್ ವಾಹ್ಲಬರ್ಗ್ ಮತ್ತು ಡೆರೆಕ್ ಜೆಟೆರ್ ಜೊತೆ ಕೂಡ ಡೇಟಿಂಗ್ ನಡೆಸಿದ್ದಿರೆಂಬ ರೂಮರ್‌ಗಳಿವೆ, ಇದು ಎಷ್ಟು ಸತ್ಯ?

ಜೆಸ್ಸಿಕಾ: ಪತ್ರಿಕೆಗಳು ತಮಗೆ ಬೇಕಾದುದನ್ನು ಬರೆದುಕೊಳ್ಳುತ್ತವೆ. ಯಾಕೆಂದರೆ ಅವು ಉಳಿಯಬೇಕಲ್ಲಾ...



ಇಂತಹುದರ ಬಗ್ಗೆ ನಾನು ಏನನ್ನೂ ಹೇಳಲು ಬಯಸುವುದಿಲ್ಲ, ಅವರಿಬ್ಬರೂ ಒಳ್ಳೆಯ ವ್ಯಕ್ತಿಗಳು ಎಂದಷ್ಟೇ ಹೇಳಬಲ್ಲೆ.

ಪ್ರಶ್ನೆ: ಹಾಗಾದರೆ ನಿಮಗೆ ಯಾವ ಸೆಲೆಬ್ರಿಟಿಗಳ ಮೇಲೆಯೂ ಕ್ರಷ್ ಆಗಲೇ ಇಲ್ವಾ?

ಜೆಸ್ಸಿಕಾ: ಜಾನಿ ಡೆಪ್, ಮೋರ್ಗನ್ ಫ್ರೀಮನ್, ಮೈಕೆಲ್ ಕೇನ್, ಸ್ಟೀವ್ ಮಕ್ವೀನ್ ಮತ್ತು ಜೇಕ್ ಗ್ಲೆನ್‌ಹಾಲ್ ಮೇಲೆ ನನಗೆ ಕ್ರಷ್ ಆಗಿದ್ದುಂಟು.

ಪ್ರಶ್ನೆ: ನೀವು ಎಂತಹ ಹುಡುಗರನ್ನು ಇಷ್ಟಪಡುತ್ತೀರಿ?

ಜೆಸ್ಸಿಕಾ: ಓಲ್ಡರ್ ಬ್ರಿಟಿಷ್ ಹುಡುಗರು ನನಗಿಷ್ಟವಾಗುತ್ತಿದ್ದರು. ಅವರು ಯಾವತ್ತೂ ಹುಡುಗಿಯರ ಮುಂದೆ ಅಳುವುದಾಗಲಿ, 'ಐ ಲವ್ ಯೂ' ಅಥವಾ 'ಯೂ ಹರ್ಟ್ ಮಿ' ಮುಂತಾದ ಕ್ಲೀಷೆಗಳನ್ನು ಹೇಳುವುದನ್ನಾಗಲಿ ಅಥವಾ ತೀರಾ ಭಾವನಾತ್ಮಕವಾಗಿ ಬರೆಯುವುದಾಗಲೀ ನನಗೆ ಊಹಿಸಿಕೊಳ್ಳಲೂ ಸಾಧ್ಯವಿಲ್ಲ, ಹಾಗೆಯೇ ಬುದ್ಧಿವಂತ, ಪ್ರತಿಭಾವಂತ ಹುಡುಗರೂ ನನಗಿಷ್ಟವಾಗುತ್ತಿದ್ದರು. ನನ್ನ ತಾರುಣ್ಯದ ದಿನಗಳಲ್ಲಿ ಕಪ್ಪು ಹುಡುಗರೂ ನನ್ನನ್ನು ಆಕರ್ಷಿಸಿದ್ದರು. ನನ್ನ ಎಲ್ಲಾ ಹಳೆಯ ಫ್ರೆಂಡ್ಸ್ ಬ್ಲ್ಯಾಕ್. ಇಷ್ಟಕ್ಕೂ ನಾನು ಮೆಕ್ಸಿಕನ್ ಅಲ್ಲ, ನಾನು ಬಿಳಿಯಳೂ ಅಲ್ಲ, ಕರಿಯಳೂ ಅಲ್ಲ, ನಾನು ಏಷಿಯನ್ ಕೂಡ ಅಲ್ಲ... ನಾನು ಯಾವ ಗುಂಪಿಗೆ ಸೇರಿದವಳೂ ಅಲ್ಲ, ನನ್ನ ತಂದೆ ಮೆಕ್ಸಿಕನ್, ತಾಯಿ ಫ್ರೆಂಚ್ ಮತ್ತು ಡೇನಿಶ್.

ಪ್ರಶ್ನೆ: ಬಿಡುವಿದ್ದಾಗ ಏನು ಮಾಡ್ತೀರಿ?

ಜೆಸ್ಸಿಕಾ: ಐ ಲೈಕ್ ಟು ಕುಕ್. ಬಿಡುವಾದಾಗಲೆಲ್ಲಾ ಪಾಕಶಾಲೆಗಳಿಗೆ ಹೋಗುತ್ತೇನೆ. ನಿಮಗೆ ನನ್ನ ಬಗ್ಗೆ ಗೊತ್ತಿಲ್ಲದ ಇನ್ನೊಂದು ಅಚ್ಚರಿಯ ವಿಷಯ ಹೇಳುತ್ತೇನೆ ಕೇಳಿ, ಅದೆಂದರೆ... ಒಂದು ಡಿನ್ನರ್ ಸಿದ್ಧಪಡಿಸಲು ಬರೋಬ್ಬರಿ ಐದು ಗಂಟೆ ಬೇಕಾದರೂ ಸೀರಿಯಸ್ಸಾಗಿ ತೊಡಗುತ್ತೇನೆ ಎಂಬುದು. ಎನ್‌ಕಿಲಾಡಾ ಮತ್ತು ಲಸಾನ್ಯ ತರಹದ ಅಡುಗೆ ಪದಾರ್ಥಗಳನ್ನು ಸಿದ್ಧಪಡಿಸುವುದರಲ್ಲಿ ನನಗೆ ಎಲ್ಲಿಲ್ಲದ ಆಸಕ್ತಿ.

ಪ್ರಶ್ನೆ: ನಿಮಗೀಗ ಮೂವತ್ಮೂರು ವರ್ಷ. ಕ್ಯಾಶ್ ವಾರನ್ ಎಂಬ ಪ್ರೀತಿಯ ಗಂಡನನ್ನು ಹೊಂದಿದ್ದೀರಿ. ಜೊತೆಗೆರಡು ಮುದ್ದಾದ ಮಕ್ಕಳು... ಇದರ ಬಗ್ಗೆ ಹೇಳ್ತೀರಾ?

ಜೆಸ್ಸಿಕಾ: ನಾನೀಗ ನೋಡಲು ಚೆನ್ನಾಗಿ ಕಾಣಿಸುತ್ತಿದ್ದೇನೆ ಎಂಬ ಭಾವ. ವ್ಯತ್ಯಾಸವೆಂದರೆ ನಾನು ಮುಂಚೆಗಿಂತಲೂ ತುಸು ಸ್ಲಿಮ್ಮಾಗಿ ಕಾಣುತ್ತಿದ್ದೇನಲ್ಲದೆ ನನ್ನ ಮುಖದಲ್ಲಿ ಹುಡುಗಿಯ ಕಳೆ ಹೋಗಿ ಹೆಂಗಸಿನ ಕಳೆ ಬಂದಿದೆ. ಐ ಹ್ಯಾಡ್ ಸಚ್ ಚಬ್ಬಿ ಚೀಕ್ಸ್... ಇನ್ನು ಕ್ಯಾಶ್ ವಾರನ್ ಬಗ್ಗೆ ಹೇಳುವುದಾದರೆ ನಾವಿಬ್ಬರೂ ಸಡನ್ನಾಗಿ ಫ್ರೆಂಡ್ಸ್ ಆದವರು. ನನ್ನ ಬದುಕಿನ ಉಳಿದ ಭಾಗವನ್ನು ಈ ವ್ಯಕ್ತಿಯೊಂದಿಗೆ ಹಂಚಿಕೊಳ್ಳಬೇಕು ಎನ್ನುವಷ್ಟರಮಟ್ಟಿಗೆ ಆತನ ವ್ಯಕ್ತಿತ್ವ, ನನ್ನ ಬಗ್ಗೆ ಆತ ವಹಿಸುತ್ತಿದ್ದ ಕಾಳಜಿ ಇಷ್ಟವಾದವು. ಯಾವಾಗ ಈ ಬಗೆಯ ಭಾವನೆಗಳು ಮನಸಿನಲ್ಲಿ ಮೂಡ ತೊಡಗಿದವೋ ನಮ್ಮಿಬ್ಬರ ಡೇಟಿಂಗ್ ಶುರುವಾಯಿತು... ಮದುವೆಯಾಯಿತು... ಮಕ್ಕಳಾದವು!

ಪ್ರಶ್ನೆ: ನೀವು ನಿಮ್ಮ ಮೊದಲ ಮಗುವಿಗೆ ತಾಯಿಯಾಗುವ ಮುನ್ನ ಅಂದರೆ ನೀವು ಗರ್ಭಿಣಿಯಾಗಿದ್ದ ಸಂದರ್ಭದಲ್ಲಿ ಮುಂದೊಮ್ಮೆ ಜನಿಸಲಿರುವ ಮಗುವಿನ ಬಗ್ಗೆ ಏನೇನೆಲ್ಲ ಕನಸು ಕಂಡಿದ್ದಿರಿ?

ಜೆಸ್ಸಿಕಾ: ನಾನು ಸೇವಿಸುವ ಆಹಾರದ ಬಗ್ಗೆ ಹೆಚ್ಚು ಕಾಳಜಿ ವಹಿಸಿದ್ದೆ, ಯಾಕೆಂದರೆ ನಾನು ಸೇವಿಸುವ ಆಹಾರ ನನ್ನ ಹೊಟ್ಟೆಯಲ್ಲಿರುವ ಮಗುವಿನ ಆರೋಗ್ಯದ ಮೇಲೆ ಗಾಢವಾದ ಪರಿಣಾಮ ಬೀರುವಂಥದ್ದಾಗಿತ್ತು, ಕಿತ್ತಳೆ, ಲಿಂಬೆ ಸೇರಿದಂತೆ ಒಂದಿಷ್ಟು ಹಣ್ಣುಗಳ ಜ್ಯೂಸ್ ಸೇವಿಸುತ್ತಿದ್ದೆ, ಜೊತೆಗೆ ಬೆಳ್ಳುಳ್ಳಿಯಿಂದ ತಯಾರಿಸಿದ ಆಹಾರ, ಗೆಣಸು, ಅಣಬೆಗಳಿಂದ ಮಾಡಿದಂತಹ ಖಾದ್ಯ, ದೊಡ್ಡ ದೊಡ್ಡ ಸ್ಟೀಕ್ಸ್ ಮುಂತಾದವುಗಳನ್ನು ನಿಯಮಿತವಾಗಿ ಸೇವಿಸುತ್ತಿದ್ದೆ, ಆಗ ನನಗೆ ಇಪ್ಪತ್ತೇಳು ವರ್ಷವಾಗಿತ್ತು, ತಾಯ್ತನದ ಸವಿ ಅನುಭವಿಸಲು ಅದು ಸಕಾಲ. ಮತ್ತೊಂದು ಕುತೂಹಲಕಾರಿ ಅಂಶವೆಂದರೆ ನಾನು ಹುಟ್ಟಿದಾಗ ನನ್ನ ತಾಯಿಗೆ ಕೇವಲ ಹತ್ತೊಂಬತ್ತು ವರ್ಷ. ಇಷ್ಟಕ್ಕೂ ಹುಟ್ಟಲಿರುವ ನನ್ನ ಮಗುವಿನ ಜೊತೆ ಫ್ರೆಂಡ್ ರೀತಿಯಲ್ಲಿ ವರ್ತಿಸಲು ಬಯಸದೆ ನಾನೊಬ್ಬ ತಾಯಿಯಂತಷ್ಟೇ ಇರಲು ನಿರ್ಧರಿಸಿದ್ದೆ, ಮಗುವಿನ ಮೇಲೆ ಹೆಚ್ಚು ಒತ್ತಡ, ಶಿಸ್ತು ಹೇರದೆ ತನ್ನ ಪಾಡಿಗೆ ತಾನು ಆರಾಮಾಗಿ ಆಡಿಕೊಂಡಿರುವಂತೆ, ಖುಷಿಖುಷಿಯಾಗಿ ಬೆಳೆಯುವಂತೆ ನೋಡಿಕೊಳ್ಳಬೇಕು, ಮನೆಯಲ್ಲಿ ಅಂತಹ ವಾತಾವರಣ ನಿರ್ಮಿಸಬೇಕು ಎಂದು ತೀರ್ಮಾನಿಸಿದ್ದೆ. ಈ ವಿಷಯದಲ್ಲಿ ನನ್ನ ಗಂಡನದು ಕೂಡ ನನ್ನ ತರಹದ್ದೇ ಅಭಿರುಚಿ. ಯಾಕೆಂದರೆ ಮಗುವಿನ ಪೋಷಣೆಯ ವಿಷಯದಲ್ಲಿ ನಮ್ಮಿಬ್ಬರ ನಿಲುವುಗಳೂ ಒಂದೇ ಆಗಿದ್ದವು. ಆದರೆ ಸಣ್ಣ ವ್ಯತ್ಯಾಸವೆಂದರೆ ನನ್ನ ಮಗು ಮ್ಯಾಕ್ ಡೊನಾಲ್ಡ್ ತಿನಿಸುಗಳನ್ನು ತಿನ್ನಬಾರದು ಎಂಬುದು ನನ್ನ ತೀರ್ಮಾನವಾದರೆ, ಕದ್ದು ಮುಚ್ಚಿ ಮ್ಯಾಕ್ ಡೊನಾಲ್ಡ್ ತಿನಿಸುಗಳನ್ನು ತಂದು ಮಗುವಿಗೆ ತಿನ್ನಿಸಿ 'ಮಾಮ್‌ಗೆ ಹೇಳಬೇಡ' ಅನ್ನುವುದು ಕ್ಯಾಶ್ ವಾರನ್‌ನ ಸ್ವಭಾವ ಎಂದು ಊಹಿಸಿದ್ದೆ!!

ಪ್ರಶ್ನೆ: ತಾಯಿಯಾದ ನಂತರ ನಿಮ್ಮ ದಿನಗಳು ಹೇಗಿದ್ದವು?

ಜೆಸ್ಸಿಕಾ: ನಾನು ಬೆಳಗ್ಗೆ ಎದ್ದ ಕೂಡಲೇ ನನ್ನ ಮಗುವಿನ ಮುಖವನ್ನು ನೋಡುತ್ತಿದ್ದೆ. ಅವಳ ಆತ್ಮೀಯತೆಯಿಂದ ಕೂಡಿದ್ದ 'ಮಮ್ಮಾ...' ಮತ್ತು ದೊಡ್ಡ ಮುತ್ತಿನ ಮೂಲಕ ನನ್ನ ದಿನ ಆರಂಭವಾಗುತ್ತಿತ್ತು- ಇಟ್ಸ್ ದ ಬೆಸ್ಟ್!

ಪ್ರಶ್ನೆ: ತಾಯಿಯಾಗಿ ನೀವು ಮರೆಯಲಾಗದ ದಿನಗಳು ಯಾವುವು?

ಜೆಸ್ಸಿಕಾ: ನನ್ನ ಮಗಳು ಹುಟ್ಟಿದ ಆರಂಭದ ದಿನಗಳಲ್ಲಿ ಆಕೆಯನ್ನು ಮೊದಲ ಸಲ ತೊಟ್ಟಿಲಿಗೆ ಹಾಕಿದೆವಲ್ಲಾ ಆ ದಿನಗಳು ಸದಾ ನನ್ನನ್ನು ಕಾಡುತ್ತಿರುತ್ತವೆ. ಆ ದಿನಗಳು ನಿಜಕ್ಕೂ ನನ್ನ ಪಾಲಿಗೆ ಕ್ರೂರವಾಗಿದ್ದವು... ಯೂ ಡೋಂಟ್ ವಾಂಟ್ ಯುವರ್ ಬೇಬಿ ಟು ಕ್ರೈ?; ನೀವು ಹೇಗಾದರೂ ಆ ಅಳುವನ್ನು ತಡೆಯಬೇಕು. ನಾನು ಮತ್ತು ನನ್ನ ಗಂಡ ರಾತ್ರಿಯಿಡೀ ತೊಟ್ಟಿಲ ಪಕ್ಕದಲ್ಲೇ ಕುಳಿತಿರುತ್ತಿದ್ದೆವು; ಮಗುವಿನ ಕೈ ಹಿಡಿದು ನಾನೂ ಕೂಡ ಅಳುತ್ತಿದ್ದೆ, ಉಫ್! ಕ್ರಮೇಣ ದಿನದ ಹದಿನಾಲ್ಕು ಗಂಟೆಗೂ ಹೆಚ್ಚು ಕಾಲ ನನ್ನ ಮಗಳು ನಿದ್ರಿಸಲಾರಂಭಿಸಿದ್ದು ನನ್ನ ಪಾಲಿಗೆ ನೆಮ್ಮದಿ ತಂದಿತು.

ಪ್ರಶ್ನೆ: ನಿಮಗೆ ಮಗಳು ಹುಟ್ಟಿದ್ದರ ಬಗ್ಗೆ ಹೆಮ್ಮೆ ಇದೆಯಾ?

ಜೆಸ್ಸಿಕಾ: ನಿಜವಾಗಿಯೂ ಇದೆ. ಅವಳಿಗೆ ಅವಳ ಗೊಂಬೆಗಳೆಂದರೆ ಇಷ್ಟ. ನಾನೂ ಕೂಡ ಮಗುವಾಗಿದ್ದಾಗ ನನ್ನ ಗೊಂಬೆಗಳನ್ನು ತುಂಬಾ ಪ್ರೀತಿಸುತ್ತಿದ್ದೆ ಅವುಗಳೊಂದಿಗೆ ಆಟವಾಡುತ್ತಿದ್ದೆ, ಮಲಗುವ ಮುನ್ನ ಅವುಗಳೊಟ್ಟಿಗೆ ಪ್ರಾರ್ಥನೆ ಮಾಡುತ್ತಿದ್ದೆ, ಯಾಕೆಂದರೆ ಅವುಗಳ ಭಾವನೆಗಳನ್ನು ಹರ್ಟ್ ಮಾಡಬಾರದು ಅಂತ ತೀರ್ಮಾನಿಸಿದ್ದೆ... ನನ್ನ ಮಗಳೂ ಕೂಡ ಹಾಗೇನೆ: ಅವುಗಳನ್ನು ಅಪ್ಪಿಕೊಳ್ಳುವುದು, ಅವಕ್ಕೆ ಮುತ್ತಿಕ್ಕುವುದು, ಎಲ್ಲೇ ಹೋದರೂ ಅವನ್ನು ಜೊತೆಯಲ್ಲೇ ಕೊಂಡೊಯ್ಯುವುದು... ಇತ್ಯಾದಿಗಳನ್ನು ಮಾಡುತ್ತಿರುತ್ತಾಳೆ- ಇವೆಲ್ಲ ನನ್ನ ಬದುಕಿನ ಅಂದವನ್ನು ಹೆಚ್ಚಿಸಿದ್ದರಲ್ಲಿ ಸಂದೇಹವಿಲ್ಲ.

ಪ್ರಶ್ನೆ: ನಿಮ್ಮ ಗಂಡನೊಟ್ಟಿಗೆ ಹೊರಗೆ ಸುತ್ತಾಡುವುದು ಈಗಲೂ ಉಂಟಾ?

ಜೆಸ್ಸಿಕಾ: ಹ್ಹಹ್ಹಹ್ಹಾ... ಅಪರೂಪ... ಯಾವಾಗಲಾದರೊಮ್ಮೆ ಮನೆಯ ಹತ್ತಿರದಲ್ಲೇ ಇರುವ ಯಾವುದಾದರೊಂದು ರೆಸ್ಟೋರೆಂಟಿಗೆ ಹೋಗಿ ರಾತ್ರಿಯೂಟ ಮಾಡಿ ವಾಪಸಾಗುತ್ತೇವಷ್ಟೇ.

ಪ್ರಶ್ನೆ: ಗೃಹಿಣಿಯರ ನೈಟ್ ಔಟ್ ಬಗ್ಗೆ ಏನು ಹೇಳ್ತೀರಿ?

ಜೆಸ್ಸಿಕಾ: ಡೇಟಿಂಗ್ ರಾತ್ರಿ ಹಗಲಿಗೆ ಸಂಬಂಧಿಸಿದ್ದಲ್ಲ, ಅಗತ್ಯವಿದ್ದರೆ ಯಾವಾಗ ಬೇಕಾದರೂ ಆಗಬಹುದು. ಗಂಡನೊಂದಿಗೆ ಹಂಚಿಕೊಳ್ಳಲಾಗದ ವಿಷಯಗಳನ್ನು ಅತ್ಯಂತ ಆತ್ಮೀಯರೊಂದಿಗೆ ಹಂಚಿಕೊಳ್ಳಲು ಇಂತಹ ಡೇಟಿಂಗ್ ಉಪಯುಕ್ತ. ಇಂತಹ ಕಡೆ ನಿಮ್ಮ ರಿಲೇಶನ್‌ಶಿಪ್ ಬಗ್ಗೆ, ಫ್ಯಾಶನ್ ಬಗ್ಗೆ, ಮೇಕಪ್ ಬಗ್ಗೆಯೂ ಪರಸ್ಪರ ಮಾತಾಡಿಕೊಳ್ಳಬಹುದು...

ಪ್ರಶ್ನೆ: ರಾತ್ರಿ ಮಲಗುವಾಗ ನಿಮ್ಮೊಟ್ಟಿಗೆ ಏನೇನು ಇಟ್ಟುಕೊಳ್ಳುತ್ತೀರಿ?

ಜೆಸ್ಸಿಕಾ: ನಾನು ಪುಟ್ಟ ಮಗುವಾಗಿದ್ದಾಗ ತೆಗೆದಿಟ್ಟುಕೊಂಡ ನನ್ನ ಮಗಳ ಪುಟ್ಟ ಪಾದದ ಫೋಟೋ, ನನ್ನ ಐಪಾಡ್, ನನ್ನ ಮೊಬೈಲ್ ಫೋನ್ ಹಾಗೂ ದೊಡ್ಡದೊಂದು ಬಾಟಲಿ ತುಂಬ ನೀರು.

● ಹೃದಯಶಿವ

Registered No.RNP/KA/BGS/2036/2014-16 Posted at : GPO, Bangalore-01. Friday R B P LANKESH, Kannada Weekly Price Rs. 15/- 03-12-2014 RNI No. KARKAN2005/14

ರೂಪದರ್ಶಿಯ ಕಣ್ಣಲ್ಲಿ ರವಿ ಮೂಡಿದಾಗ



ಒಂದಷ್ಟು ಸಿನಿಮಾಗಳು ಸುಮಾರಾಗಿ ಓಡುತ್ತಿದ್ದಂತೆಯೇ
ಡೈರೆಕ್ಟರ್‌ಗಳು ಮುಖಕ್ಕೆ ಬಣ್ಣ ಹಾಕಿಕೊಂಡು
ಹೀರೋಗಳಾಗಲು ಪ್ರಯತ್ನಿಸುವ ಉದಾಹರಣೆಗಳು ನಮ್ಮಲ್ಲಿ
ಸಾಕಷ್ಟು ಸಿಗುತ್ತವೆ. ಫೈಟ್ ಮಾಸ್ಟರ್‌ಗಳು ಹೀರೋಗಳಾದ
ಉದಾಹರಣೆಗಳು ತೀರಾ ಕಡಿಮೆ. ಥ್ರಿಲ್ಲರ್ ಮಂಜು ಅವರನ್ನು
ಹೀರೋ ಅಂತ ಒಪ್ಪಿಕೊಳ್ಳುವವರು ಈ ಮಾತನ್ನು ಒಪ್ಪದೇ
ಇರಬಹುದು, ಆ ಮಾತು ಹಾಗಿರಲಿ. ಈಗ ಒಬ್ಬ ಫೈಟ್
ಮಾಸ್ಟರ್ ಹೀರೋ ಆಗ್ತಿದ್ದಾರೆ. ಈವರೆಗೆ ಹೀರೋಗಳಿಂದ ಫೈಟ್ ಮಾಡಿಸುತ್ತಿದ್ದ
ಸ್ಟಂಟ್ ಮಾಸ್ಟರ್ ರವಿವರ್ಮ ಇದೀಗ ಹೀರೋ ಆಗುವ ಹಾದಿಯಲ್ಲಿದ್ದಾರೆ.
ಈ ಚಿತ್ರವನ್ನು ನಿರ್ದೇಶಿಸಲು ಹೊರಟಿರುವುದು ರೂಪಾ ಅಯ್ಯರ್ ಎಂಬ
ಅತ್ತ ನಟಿಯೂ ಅಲ್ಲದ, ಇತ್ತ ನಿರ್ದೇಶಕಿಯೂ ಅಲ್ಲದ, ಅತ್ತ ಬಿಸಿನೆಸ್
ಎಕ್ಸಿಕ್ಯೂಟಿವ್ ಅಲ್ಲದ, ಇತ್ತ ನೃತ್ಯ ನಿರ್ದೇಶಕಿಯೂ ಅಲ್ಲದ ಹೆಂಗಸು. ಈಕೆ
ಒಂದು ಕತೆ ಮಾಡಿಕೊಂಡಿದ್ದು ಆ ಕತೆಗೆ ರವಿವರ್ಮ ಪಕ್ಕಾ ಫಿಟ್ ಆಗುತ್ತಾರಂತೆ.




ಇಲ್ಲಿಯತನಕ ಆರಾಮಾಗಿ ಆಕ್ಷನ್ ಡೈರೆಕ್ಷನ್ ಮಾಡಿಕೊಂಡಿದ್ದ
ಇತ್ತೀಚೆಗೆ ಬಾಲಿವುಡ್ಡಿಗೂ ಹೋಗಿ ಬಂದಿರುವ
ರವಿವರ್ಮರನ್ನು ಹೀರೋ ಮಾಡುವ ಇರಾದೆ ರೂಪಾ
ಅವರದ್ದು. ಇಲ್ಲಿ ಹೇಳಬೇಕಾದ ಮಾತಿಷ್ಟೇ: ತಮ್ಮ ಸ್ಟಂಟ್
ಡೈರೆಕ್ಷನ್ ಕೆಲಸದಲ್ಲಿ ಸಾಕಷ್ಟು ಬ್ಯುಸಿ ಇರುವ ರವಿವರ್ಮ
ಒಂದೇ ಒಂದು ಹಿಟ್ ಕೊಡಲಾಗದ ರೂಪಾ ಅಯ್ಯರ್
ನಂಬಿಕೊಂಡು ಹೀರೋ ಆಗಲು ಹೋಗಿ ತಮಗಿರುವ ಚೂರುಪಾರು
ಇಮೇಜನ್ನೂ ಕಳೆದುಕೊಳ್ಳದೆ ಇದ್ದರೆ ಅಷ್ಟೇ ಸಾಕು. ಒಂದು ವೇಳೆ ಈ
ಸಿನಿಮಾ ಆಗಿ ರೂಪಾ ಅಯ್ಯರ್ ಯಶಸ್ವೀ ಆಕ್ಷನ್ ಡೈರೆಕ್ಟರ್ ಅನ್ನಿಸಿಕೊಂಡರೆ
ನಾವು ನೀವೆಲ್ಲ ಚಪ್ಪಾಳೆ ಹೊಡೆಯೋಣ ಅಲ್ಲವೇ?

ಕೆ.ಜಿ.ರೋಡ್ ಟು ಮಾಗಡಿ ರೋಡ್

"ಹೇಗೋ ಕಷ್ಟಪಟ್ಟು ಸಿನಿಮಾ ಮಾಡಿಬಿಡಬಹುದು. ಪಬ್ಲಿಸಿಟಿಯನ್ನೂ
ಪಡೆಯಬಹುದು... ಆದರೆ ರಿಲೀಸ್ ಮಾಡೋದೇ ಸಮಸ್ಯೆ ಸ್ವಾಮಿ!" ಎಂಬ
ಮಾತು ಗಾಂಧಿನಗರದಲ್ಲಿ ಮೊದಲಿನಿಂದಲೂ ಚಾಲ್ತಿಯಲ್ಲಿದೆ. ಅದರಲ್ಲೂ ಹೊಸಬರ
ಚಿತ್ರಗಳಾದರಂತೂ ಮುಗಿದೇಹೋಯಿತು... ಸಾಲಸೋಲ ಮಾಡಿ ಸಿನಿಮಾ ಕಂಪ್ಲೀಟ್
ಮಾಡಿದರೂ ಥಿಯೇಟರ್ ಸಿಗದೇ, ಚಿತ್ರ ಬಿಡುಗಡೆಯಾಗದೇ ಸಾಲ ಕೊಟ್ಟವರಿಗೆ
ಬಡ್ಡಿ ಕಟ್ಟುವುದರಲ್ಲೇ ನಿರ್ಮಾಪಕರು ಹೈರಾಣಾಗಿ ಬಿಡುತ್ತಾರೆ.

ಇಷ್ಟಕ್ಕೂ ಈ ಬಗೆಯ ಥಿಯೇಟರ್ ಸಮಸ್ಯೆಗೆ ಹಲವು ಕಾರಣಗಳಿವೆ.
ಒಂದೆಡೆ ಸುಖಾಸುಮ್ಮನೆ ನಿರ್ಮಾಣವಾಗುತ್ತಿರುವ ಚಿತ್ರಗಳ ಸಂಖ್ಯೆ
ದೊಡ್ಡದಾಗಿದ್ದರೆ ಇನ್ನೊಂದುಕಡೆ ಒಂದಿಷ್ಟು ಚಿತ್ರಗಳು ಚೆನ್ನಾಗಿ ಓಡುತ್ತಿದ್ದಾಗ
ಅವನ್ನು ಥಿಯೇಟರ್‌ನಿಂದ ಎತ್ತಂಗಡಿ ಮಾಡಲು ಆ ಚಿತ್ರದ ನಿರ್ಮಾಪಕರು,
ವಿತರಕರು ಒಪ್ಪುವುದಿಲ್ಲ. ಜೊತೆಗೆ ಕೆಲವೊಬ್ಬ ಫೇಮಸ್ ಸ್ಟಾರ್‌ಗಳ
ಚಿತ್ರಗಳ ಕಲೆಕ್ಷನ್ ಎಷ್ಟೋ ಸಲ ಸಾಧಾರಣವಾಗಿದ್ದರೂ ಅವು ಎಷ್ಟು ಇಲ್ಲವೇ
ಎಂಬತ್ತು ದಿನಗಳ ಗಡಿಯನ್ನು ದಾಟುವ ತನಕ ಹೇಗಾದರೂ ಮಾಡಿ ದೂಡುವ
ಅನಿವಾರ್ಯತೆ ಆ ಚಿತ್ರದ ಹೀರೋ, ಡೈರೆಕ್ಟರ್, ಪ್ರೊಡ್ಯೂಸರ್ ಎಲ್ಲರಿಗೂ
ಇರುತ್ತೆ. ಈ ಎಲ್ಲಾ ಸಮಸ್ಯೆಗಳಿಂದ ಅದೆಷ್ಟೋ ಸಿನಿಮಾಗಳು ಬಿಡುಗಡೆಯ
ಭಾಗ್ಯ ಕಾಣದೆ ಡಬ್ಬದಲ್ಲೇ ಕೊಳೆಯಬೇಕಾಗುತ್ತದೆ. ಅಂದಹಾಗೆ ಇಷ್ಟೆಲ್ಲಾ
ಪುರಾಣವನ್ನು ಇಲ್ಲಿ ಯಾಕೆ ಹೇಳಬೇಕಾಯಿತು ಅಂದರೆ ಈ ಬಾರಿ ಥಿಯೇಟರ್
ಸಮಸ್ಯೆಗೆ ಗುರಿಯಾಗಿರೋದು ಸಣ್ಣಪುಟ್ಟ ನಟರ ಸಿನಿಮಾವಂತೂ ಅಲ್ಲ,
ಸದ್ಯಕ್ಕೆ ಗಾಂಧಿನಗರದಲ್ಲಿ ಓಡುವ ಕುದುರೆಯಂತಿರುವ ಸಾಕ್ಷಾತ್ ದರ್ಶನ್
ಅಭಿನಯದ 'ಅಂಬರೀಷ' ಚಿತ್ರ ಈ ಬಾರಿ ಈ ಸಮಸ್ಯೆಗೆ ಗುರಿಯಾಗಿದೆ
ಅಂದರೆ ನಿಮಗೆ ಅಚ್ಚರಿಯಾಗಬಹುದು. ಹೌದು, 'ಅಂಬರೀಷ' ಚಿತ್ರದ
ಬಿಡುಗಡೆಗೆ ಕೆಂಪೇಗೌಡ ರಸ್ತೆಯ ಪ್ರಮುಖ ಥಿಯೇಟರ್‌ಗಳ ಪೈಕಿ ಯಾವೊಂದು
ಥಿಯೇಟರ್ ಕೂಡ ಸಿಗಲಿಲ್ಲ.

ಆ ಕಾರಣದಿಂದ 'ಅಂಬರೀಷ' ಚಿತ್ರಕ್ಕೆ ಮಾಗಡಿ ರಸ್ತೆಯ 'ಪ್ರಸನ್ನ'
ಥಿಯೇಟರೇ ಪ್ರಮುಖ ಥಿಯೇಟರ್ ಆಗಿದೆ! ಈ ಮೊದಲು 'ಪ್ರಸನ್ನ'ದಲ್ಲಿ
ಅನೇಕ ಚಿತ್ರಗಳು ಬಿಡುಗಡೆಯಾಗಿದ್ದರೂ ಮೇನ್ ಥಿಯೇಟರ್ ಅನ್ನಿಸಿ
ಕೊಂಡಿರಲಿಲ್ಲ. ಇಷ್ಟಕ್ಕೂ ಕೆಂಪೇಗೌಡ ರಸ್ತೆಯ ಥಿಯೇಟರ್‌ಗಳಲ್ಲಿ ಬಿಡುಗಡೆ
ಯಾದರೆ ಮಾತ್ರ ತಮ್ಮ ಚಿತ್ರಗಳಿಗೆ ಒಳ್ಳೆಯ ಓಪನಿಂಗ್, ಪ್ರತಿಷ್ಠೆ ಎಂದು
ನಂಬಿರುವ ಗಾಂಧಿನಗರದ ಮಂದಿ ಈ ಬೆಳವಣಿಗೆಯಿಂದ ತಮ್ಮ ನಂಬಿಕೆಯನ್ನು
ಕೈಬಿಟ್ಟು ಬೆಂಗಳೂರಿನಲ್ಲಿರುವ ಇನ್ನಿತರ ಥಿಯೇಟರುಗಳಲ್ಲಿ ಚಿತ್ರಗಳನ್ನು ಬಿಡುಗಡೆ
ಮಾಡಲು ಮುಂದಾಗುತ್ತಾರಾ ಅನ್ನೋದೆ ಈಗಿನ ಪ್ರಶ್ನೆ.



ಸೌಂದರ್ಯ ಕೊಲೆ ಕೇಸ್

ಮೋಹನ್‌ಲಾಲ್ ಅಭಿನಯದ 'ದೃಶ್ಯಂ' ಚಿತ್ರದ ಕನ್ನಡ ವರ್ಷನ್
'ದೃಶ್ಯ'ದಲ್ಲಿ ನಟಿಸಿ ಗೆದ್ದ ನಂತರ ರವಿಚಂದ್ರನ್ ಕಡೆ ಮತ್ತೊಂದಿಷ್ಟು ರಿಮೇಕ್
ಚಿತ್ರಗಳ ಆಫರ್ ಬರತೊಡಗಿವೆ. ಆ ಪೈಕಿ ದಯಾಳ್ ಪದ್ಮನಾಭನ್
ಕೈಗೆತ್ತಿಕೊಳ್ಳಲಿರುವ ಚಿತ್ರವೂ ಒಂದು. ಮಲಯಾಳಂನಲ್ಲಿ ಹಿಟ್ ಆಗಿದ್ದ
ಸಸ್ಪೆನ್ಸ್ ಥ್ರಿಲ್ಲರ್ 'ಚಿಂತಾಮಣಿ ಕೊಲೆ ಕೇಸ್' ಎಂಬ ಚಿತ್ರವನ್ನು ರವಿಚಂದ್ರನ್
ನಾಯಕತ್ವದಲ್ಲಿ ಕನ್ನಡಕ್ಕೆ ತರುವ ಯೋಜನೆ ದಯಾಳ್ ಅವರದ್ದು. ಷಾಜಿ
ಕೈಲಾಶ್ ಎಂಬ ನಿರ್ದೇಶಕ ಮಲೆಯಾಳಂನಲ್ಲಿ ಈ ಚಿತ್ರವನ್ನು ನಿರ್ದೇಶಿಸಿದ್ದು
ಸುರೇಶ್ ಗೋಪಿ ನಟಿಸಿದ್ದರು. ಈ ಚಿತ್ರಕ್ಕೆ ಕೇವಲ ಎರಡು ಕೋಟಿ
ಬಂಡವಾಳ ಹಾಕಿದ್ದು ಕೇರಳದಲ್ಲಿ ಬರೋಬ್ಬರಿ ಹದಿನಾಲ್ಕು ಕೋಟಿ ದುಡಿದಿತ್ತು.
ಕೇರಳದಲ್ಲಿ ಹಿಟ್ ಆದನಂತರ ಇದೇ ಚಿತ್ರವು ತಮಿಳು ಮತ್ತು ತೆಲುಗಿನಲ್ಲೂ
ನಿರ್ಮಾಣವಾಗಿ ಅಲ್ಲೂ ಒಂದು ರೇಂಜಿಗೆ ಗೆದ್ದಿತ್ತು. ಈಗ ಕನ್ನಡದ ಸರದಿ.
ಈ ಚಿತ್ರಕ್ಕೆ ಸಂಬಂಧಿಸಿದ ಹಾಗೆ ಈಗಾಗಲೇ ಮಾತುಕತೆ ನಡೆದಿದ್ದು ಈ
ಚಿತ್ರದಲ್ಲಿ ನಟಿಸಲು ರವಿಚಂದ್ರನ್ ಆಸಕ್ತಿ ತೋರಿದ್ದಾರೆ ಎನ್ನಲಾಗಿದೆ. ಅಂದಹಾಗೆ
ಈ ಚಿತ್ರ ಕನ್ನಡದಲ್ಲಿ ಬಂದರೆ ಅದರ ಟೈಟಲ್ ಏನು ಗೊತ್ತಾ... 'ಸೌಂದರ್ಯ
ಕೊ



ರಣತಂತ್ರ ಚಿತ್ರದಲ್ಲಿ ವಿಜಯರಾಘವೇಂದ್ರ ಹರಿಪ್ರಿಯಾ

ಜೈ ರವಿ! ಜೈ ಹರಿ

ಗಿಟಾರ್ ನುಡಿಸೋರು ಬೇಕಾದರೆ, ತಬಲಾ ನುಡಿಸೋರು
ಕೊಳಲು ವಾದಿಸೋರು ಬೇಕಾದರೆ ತಕ್ಷಣಕ್ಕೆ ನೆನಪಾಗುತ್ತಿದ್ದದ್ದು ರವಿ
ರವಿವರ್ಮ ಅಲಿಯಾಸ್ ರವಿವರ್ಮ ಗುಬ್ಬಿ ಎಂಬ ಐದಡಿ ಎತ್ತರ
ಮೈಕಟ್ಟಿನ, ಗೋಧಿ ಬಣ್ಣದ ವ್ಯಕ್ತಿ. ವಿ.ಮನೋಹರ್ ಜೊತೆ ಒಂದಿ
ಇದ್ದು ಕ್ರಮೇಣ ಗುರುಕಿರಣ್, ವಿ.ಹರಿಕೃಷ್ಣ, ಆರ್.ಪಿ.ಪಟ್ನಾಯಕ್




ಅನೇಕ ಸಂಗೀತ ನಿರ್ದೇಶಕರ ಬಳಿ ಅರೇಂಜರ್
ಆಗಿ ಕೆಲಸ ಮಾಡಿದ್ದ ರವಿ ಸುಮಾರು
ನಾನೂರಕ್ಕೂ ಹೆಚ್ಚು ಚಿತ್ರಗಳಿಗೆ ಮ್ಯೂಸಿಕ್
ಕೋ-ಆರ್ಡಿನೇಟರ್ ಆಗಿದ್ದಾರೆ. ಇಷ್ಟೆಲ್ಲಾ
ಆದ ನಂತರ ನಡೆದ ವಿದ್ಯಮಾನವೆಂದರೆ
ಇವರಿಗೂ ಒಂದು ಸಿನಿಮಾ ಮಾಡುವ
ಯೋಚನೆ ಥಟ್ಟನೆ ಬಂದಿತಂತೆ. ಅವರೇ
ಹೇಳುವಂತೆ 'ಆಕಾಶ ನೋಡೋಕೆ ನೂಕಾಟ



ಯಾಕೆ?' ಅಂತ ಎಸ್.ವಿ.ಬಾಬು ಅವರನ್ನು
ಹಾಕಿ ಅವತ್ತಿಗೆ ಪೀಕ್‌ನಲ್ಲಿದ್ದ ಆದರೆ ಇವತ್ತಿ
ನೋಡುವವರೂ ಇಲ್ಲದ ಗಣೇಶ್ ಹಾ
'ಸಂಗಮ' ಎಂಬುದೊಂದು ಫ್ಲಾಪ್
ನಿರ್ದೇಶಿಸಿಬಿಟ್ಟರು. ಆ ಚಿತ್ರಕ್ಕೆ ಬಂಡವಾ
ಬಾಬು ಪಾಲಿಗೆ ಸಿಕ್ಕಿದ್ದು 'ನಷ್ಟ' ಮಾತ್ರ
ಮೇಲೆ ಸದ್ದಿಲ್ಲದೇ ಕಾಣೆಯಾಗಿದ್ದ
ಮತ್ತೆ ಪ್ರತ್ಯಕ್ಷರಾಗಿದ್ದಾರೆ. ಹೇಗೆ
'ಜೈ ಭಜರಂಗಬಲಿ' ಚಿತ್ರ
ಅಂತ ನಿರ್ದೇಶಿಸುವ ಮೂಲ
ಮತ್ತೆ ಆಕ್ಷನ್ ಕಟ್ ಹೇ
ಭಯಾನಕ ಐಡಿಯಾ ಕೊಟ್ಟ
ರವಿಯ ಪುರಾನ ದೋಸ್ತ್ ಎಕ್ಸ್ ಕೀ
ಪ್ಲೇಯರ್ ಹಾಲಿ ಮರೆದು ಮರೆಯ
ಮ್ಯೂಸಿಕ್ ಡೈರೆಕ್ಟರ್ ವಿ.ಹರಿಕೃಷ್ಣ
ಕೊಟ್ಟಿದ್ದಲ್ಲದೇ ಹರಿ ಮ್ಯೂಸಿಕ
ಮಾಡಿಕೊಟ್ಟಿದ್ದಾರೆ. ಅಂದಂಗೆ
ಹಿಟ್ ಆದ 'ತಾಜ್ ಮಹಲ್'
ಮತ್ತೆ ಚಿಗುರಿಕೊಂಡ ಅಜಯ್ ರಾವ್ ಈ ಚಿತ್ರದ ಹೀರೋ ಆ

ಆಡು ಆಟ ಆಡು

ದ್ವಾರಕೀಶ್ ನಿರ್ಮಾಣದ ನಲವತ್ತೊಂಬತ್ತನೇ ಚಿತ್ರ 'ಆ
ಅನಂತ್ ನಾಗ್ ಕೂಡ ಹೊಸದಾಗಿ



ಸೇರ್ಪಡೆಯಾಗಿದ್ದಾರೆ. 'ಆ
ದಿನಗಳು' ಎಂಬ ಸಿನಿಮಾ
ಮಾಡಿದ್ದ ಕೆ.ಎಂ.ಚೈತನ್ಯ
ನಿರ್ದೇಶಿಸುತ್ತಿರುವ ಈ ಚಿತ್ರದಲ್ಲಿ
ಚಿರಂಜೀವಿ ಸರ್ಜಾ ಮತ್ತು
ಮೇಘನ ರಾಜ್ ನಾಯಕ-
ನಾಯಕಿಯಾಗಿದ್ದು ರವಿಶಂಕರ್,
ಅನು ಪ್ರಭಾಕರ್, ಸಾಧು
ಕೋಕಿಲ, ಶರತ್ ಲೋಹಿತಾಶ್ವ,
ಪ್ರಕಾಶ್ ಬೆಳವಾಡಿ, ಪಾರುಲ್
ಯಾದವ್ ಕೂಡ ನಟಿಸು
ತ್ತಿದ್ದಾರೆ. ಇದು ಕುತೂಹಲಕಾರಿ ಚಿತ್ರಕತೆ ಹೊಂದಿದ
ಮುಗಿಯುವವರೆಗೂ ನಿಜವಾದ ಆಟಗಾರ ಯಾರು
ಅನ್ನೋದೇ ತಿಳಿಯಲ್ಲ ಅನ್ನೋದು ಚಿತ್ರತಂಡದ
ಅಂದಹಾಗೆ ಈ ಚಿತ್ರಕ್ಕೆ ಕಣ್ಣನ್ ಎನ್ನುವವರು ಕಥೆ
ಚಿತ್ರದ ಮೊದಲ ಶೆಡ್ಯೂಲ್ ಯಾವುದೋ ಒಂದು
ಚಿತ್ರೀಕರಣವಾಗುತ್ತದಂತೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com